₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶನಿವಾರ 28.12.2024 ಸಂಪುಟ: 67 ಸಂಚಿಕೆ: 232 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಫಾಲೋಆನ್ ಭೀತಿಗೆ ಸಿಲುಕಿದ ಭಾರತ

- ಬಾಕ್ಸಿಂಗ್ ಡೇ ಟೆಸ್ಟ್‌ನಲ್ಲೂ ಬ್ಯಾಟಿಂಗ್ ವೈಫಲ್ಯ
- ಶತಕ ಸಿಡಿಸಿ ಭಾರತದ ಎದುರು ದಾಖಲೆ ಬರೆದ ಸ್ಟೀವನ್ ಸ್ಮಿತ್
- 474 ರನ್ ಪೇರಿಸಿದ ಆಸ್ಟ್ರೇಲಿಯಾ, ಭಾರತ 164ಕ್ಕೆ 5 ವಿಕೆಟ್

ಪುಟ ತೆರೆದಂತೆ...

ಅಮೆರಿಕದಲ್ಲಿ ಯಹೂದಿಗಳ ಜಾಗಕ್ಕೆ ಭಾರತೀಯರು!
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
ಸಂ.ಪುಟ | 6

ಬಾಗಲಕೋಟೆ ಕಬ್ಬಿನ ಗದ್ದೆಯವರೆಗೆ ಸಿ.ಟಿ ರವಿ ಯಾತ್ರೆ
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
ಸಂ.ಗಮ | 7

ದಾರಿದೀಪೋಕ್ತಿ

ನಿಮಗೆ ಯಾವುದು ಸುಲಭವೋ ಆ ಕೆಲಸದಿಂದಲೇ ಆರಂಭಿಸಿ. ಅದರಲ್ಲಿ ಯಶಸ್ಸು ಗಳಿಸಿದ ಬಳಿಕ ಅದಕ್ಕಿಂತ ದೊಡ್ಡ ಸಾಹಸಕ್ಕೆ ನಿಮಗೇ ಪ್ರೇರಣೆ ಸಿಗುತ್ತದೆ. ಯಾವತ್ತೂ ಮನೆ ಗೆದ್ದು ಮಾರು ಗೆಲ್ಲಬೇಕು. ಒಂದೇ ಸಲ ಇಡೀ ಜಗತ್ತನ್ನು ಗೆಲ್ಲುವ ಉಸಾಬರಿಗೆ ಹೋಗಬಾರದು.

ವಕ್ರತುಂಡೋಕ್ತಿ

ಕೆಲವರು ನಮ್ಮನ್ನು ಅವಮಾನಿಸಬೇಕಿಲ್ಲ. ವೇದಿಕೆಯಲ್ಲಿ ಅತಿಶಯೋಕ್ತಿಯಿಂದ ಬಣ್ಣಿಸಿದರೂ ಸಾಕು.

ಅಣ್ಣಾಮಲೈ ಪ್ರತಿಭಟನೆ

ಚೆನ್ನೈ: ಕ್ರಿಸ್ಮಸ್ ಹಬ್ಬದ ಮುನ್ನಾದಿನ ಚೆನ್ನೈ ಕಾಲೇಜು ವಿದ್ಯಾರ್ಥಿನಿ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ನಿಭಾಯಿಸುವಲ್ಲಿ ಆಡಳಿತಾರೂಢ ಡಿಎಂಕೆ ಮತ್ತು ಪೊಲೀಸ್ ಸಂಪೂರ್ಣ ವೈಫಲ್ಯ ಕಂಡಿದೆ ಎಂದು ಆರೋಪಿಸಿರುವ ತಮಿಳುನಾಡು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಅವರು ಕೊಯಮತ್ತೂರಿನ ತಮ್ಮ ನಿವಾಸದ ಮುಂದೆ ತಮಗೆ ತಾವೇ ಚಾಟಿಯಲ್ಲಿ ದಂಡಿಸುವ ಮೂಲಕ ವಿನೂತನ ರೀತಿಯಲ್ಲಿ ಪ್ರತಿಭಟಿಸಿದ್ದಾರೆ.

ಸಿಲಿಂಡರ್ ಸ್ಫೋಟ: ಇನ್ನಿಬ್ಬರು ಅಯ್ಯಪ್ಪ ಮಾಲಾಧಾರಿಗಳು ಸಾವು

ಹುಬ್ಬಳ್ಳಿ: ಗ್ಯಾಸ್ ಸಿಲಿಂಡರ್ ಸ್ಫೋಟದಿಂದ ತೀವ್ರ ಗಾಯಗೊಂಡು ಕೆಎಂಸಿ-ಆರ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಒಂಬತ್ತು ಅಯ್ಯಪ್ಪ ಮಾಲಾಧಾರಿಗಳಲ್ಲಿ ಶುಕ್ರವಾರ ಇನ್ನಿಬ್ಬರು ಮೃತಪಟ್ಟಿದ್ದು, ಸಾವಿನ ಸಂಖ್ಯೆ ನಾಲ್ಕಕ್ಕೇರಿದೆ. ಸುಭಾನಿನಗರದ ರಾಜು ಮುಗೇರಿ (16) ಮತ್ತು ಸಾಯಿನಗರದ ಲಿಂಗರಾಜ ಬಿನನೂರ(19) ಮೃತರು. ಆಸ್ಪತ್ರೆಯಲ್ಲಿ ಸದ್ಯಕ್ಕೆ ವಿನಾಯಕ (12) ಚೇತರಿಸಿಕೊಳ್ಳುತ್ತಿದ್ದು, ಇನ್ನೂ ನಾಲ್ವರ ಸ್ಥಿತಿ ಚಿಂತಾಜನಕವಾಗಿದೆ. ಎಲ್ಲರಿಗೂ ಅಗತ್ಯ ಚಿಕಿತ್ಸೆ ಮುಂದುವರಿದಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

'ಮೊಟ್ಟೆಯಲ್ಲಿ ಆಸಿಡ್'
ಶಾಸಕರ ಮೇಲಿನ ಮೊಟ್ಟೆ ಎಸೆತ ಪ್ರಕರಣ
ಸುದ್ದಿ

ವಿಶ್ವ ಹವ್ಯಕ ಸಮ್ಮೇಳನ: ದಿವ್ಯ ಭವ್ಯ ಹವ್ಯ ಲೋಕ ಅನಾವರಣ

ಬೆಂಗಳೂರು: ವಿಶಿಷ್ಟ ಸಂಸ್ಕೃತಿಯನ್ನು ವಿಶ್ವಮಟ್ಟದಲ್ಲಿ ಅನಾವರಣಗೊಳಿಸುವ ಐತಿಹಾಸಿಕ ತೃತೀಯ ವಿಶ್ವ ಹವ್ಯಕ ಸಮ್ಮೇಳನಕ್ಕೆ ಚಾಲನೆ ನೀಡಲಾಗಿದೆ. ಹವ್ಯಕ ಸಮಾಜದ ಸಾಂಸ್ಕೃತಿಕ ಹಾಗೂ ಧಾರ್ಮಿಕ ಲೋಕವೇ ಅರಮನೆ ಮೈದಾನವನ್ನು ಅವರಿಸಿತ್ತು.

ಹವ್ಯಕ ಸಮಾಜ ತನ್ನದೇ ಆದ ವಿಶಿಷ್ಟ ಸಂಸ್ಕೃತಿ ಹಾಗೂ ಸಂಸ್ಕಾರಗಳೊಂದಿಗೆ ನಾಡಿಗೆ ವೈಶಿಷ್ಟ್ಯ ಪೂರ್ಣ ಕೊಡುಗೆಗಳನ್ನು ನೀಡುತ್ತಾ ಬಂದಿದ್ದು, ತೃತೀಯ ವಿಶ್ವ ಹವ್ಯಕ ಸಮ್ಮೇಳನವನ್ನು ಅರ್ಥ ಪೂರ್ಣವಾಗಿ ಹಾಗೂ ಹವ್ಯಕ ಸಮಾಜವನ್ನು ವಿಶ್ವಮಟ್ಟದಲ್ಲಿ ಪರಿಚಯಿಸುವ ದಿಶೆಯಲ್ಲಿ, ಇಡೀ ಸಮಾಜ ಒಂದು ಕುಟುಂಬವಾಗಿ ತನ್ನ ಶಕ್ತಿ, ಸಾಮರ್ಥ್ಯ ಹಾಗೂ ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿ ಸುವ ಸ್ಮರಣೀಯ ಕಾರ್ಯಕ್ರಮವಾಗಿಸುವ ಪ್ರಯತ್ನಗಳಲ್ಲಿ ಒಂದಾಗಿದೆ. ಮೂರು ದಿನಗಳ ಕಾಲ ನಡೆಯಲಿರುವ ಸಮಾವೇಶ ದಲ್ಲಿ ಎಂಟಕ್ಕೂ ಹೆಚ್ಚು ವಿಚಾರಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿದೆ. ಇದರೊಂದಿಗೆ ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ ಹಮ್ಮಿಕೊಳ್ಳಲಾಗಿದೆ.

ಶುಕ್ರವಾರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ಸೌಮ್ಯನಾಥ ಮಹಾ ಸ್ವಾಮೀಜಿ, ವಿಶ್ವವಾಣಿ ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಮಹೇಶ್ ಜೋಶಿ, ಬ್ರಾಹ್ಮಣ ಅಭಿವೃದ್ಧಿ ನಿಗಮದ ಅಧ್ಯಕ್ಷ ಅಸಗೋಡು ಜಯಸಿಂಹ, ತೃತೀಯ ವಿಶ್ವ ಹವ್ಯಕ ಸಮ್ಮೇಳನದ ಗೌರವಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾಜಿ ಡಿಸಿಎಂ ಹಾಗೂ ಶಾಸಕ ಡಾ.ಅಶ್ವತ್ಥ ನಾರಾಯಣ, ಅಖಿಲ ಹವ್ಯಕ ಮಹಾಸಭಾದ ಅಧ್ಯಕ್ಷ ಡಾ.ಗಿರಿಧರ ಕಜೆ ಸೇರಿದಂತೆ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

→ 4



ಶುಕ್ರವಾರ ಚಾಲನೆ ಪಡೆದ ತೃತೀಯ ವಿಶ್ವ ಹವ್ಯಕ ಸಮ್ಮೇಳನದಲ್ಲಿ ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತೀ ಸ್ವಾಮೀಜಿ, ಮಂತ್ರಾಲಯ ರಾಯರಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು, ಆದಿಚುಂಚನಗಿರಿ ಮಠದ ಸೌಮ್ಯನಾಥ ಮಹಾ ಸ್ವಾಮೀಜಿ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮಾಜಿ ಸಿಎಂ ಸದಾನಂದಗೌಡ, ಸಂಸದ ಕಾಗೇರಿ, ಬಿಜೆಪಿ ರಾಜ್ಯಾಧ್ಯಕ್ಷ ಬಿವೈವಿ, ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಹಾಗೂ ಮಹಾಸಭಾದ ಅಧ್ಯಕ್ಷ ಗಿರಿಧರ್ ಕಜೆ, ಪದಾಧಿಕಾರಿಗಳು ಉಪಸ್ಥಿತರಿದ್ದರು.

ಶುಕ್ರವಾರ ನಡೆದ ಸಮಾವೇಶದ ಪ್ರಮುಖಾಂಶ

- ರಮೇಶ್ ಅರವಿಂದ ಅವರಿಂದ ಹವ್ಯಕ ಸಾಧಕರಿಗೆ ಸಾಧಕರತ್ನ ಪ್ರಶಸ್ತಿ
- ಚಕ್ರವರ್ತಿ ಸೂಲಿಬೆಲೆ ಅವರಿಂದ ಕೃಷಿರತ್ನ ಪ್ರಶಸ್ತಿ ಪ್ರದಾನ
- ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಸಮ್ಮಿಲನ
- ಕನ್ನಡದ ಪ್ರಥಮ ನಾಟಕವಾಗಿರುವ ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ ನಾಟಕ ಪ್ರದರ್ಶನ

ನಮ್ಮ ಸಮಾಜದ ಎದುರು ಇರುವ ಅತ್ಯಂತ ಗಂಭೀರ ವಿಚಾರ ಹವ್ಯಕರು ಅಳಿದು ಹೋಗುತ್ತಿರುವುದು. ಹವ್ಯಕರ ಸಂಖ್ಯೆ ನೋಡಿದರೆ ಗುರುತು ಅಳಿದು ಹೋಗುವ ಕಾಲ ಬಹಳ ದೂರವಿಲ್ಲ. ಹವ್ಯಕರು ಕುಟುಂಬ ಕಲ್ಯಾಣ ಎಂಬ ಯೋಜನೆಯನ್ನು ತುಂಬಾ ಗಂಭೀರವಾಗಿ ಅಳವಡಿಸಿಕೊಂಡಿದ್ದಾರೆ. ಬ್ರಾಹ್ಮಣ ಸಮುದಾಯದಲ್ಲಿ ಹವ್ಯಕ ಪಂಗಡದವರ ಸಂಖ್ಯೆ ಕ್ಷೀಣಿಸುತ್ತಿದೆ. ಪೀಠಕ್ಕೆ ಬಂದ 30 ವರ್ಷಗಳ ಹಿಂದೆ ಇದ್ದ ಹವ್ಯಕ ಸಮುದಾಯದವರ ಸಂಖ್ಯೆ ಈಗ ಅರ್ಧಕ್ಕಿಂತ ಕಡಿಮೆಯಾಗಿದೆ.

- ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ
ಪೀಠಾಧಿಪತಿ, ರಾಮಚಂದ್ರಾಪುರ ಮಠ

ರಾಷ್ಟ್ರಪತಿ, ಪ್ರಧಾನಿ, ಕಾಂಗ್ರೆಸ್ ನಾಯಕರಿಂದ ಅಂತಿಮ ದರ್ಶನ | ಇಂದು ಅಂತ್ಯಸಂಸ್ಕಾರ

ಮನಮೋಹನ ನಿಧನಕ್ಕೆ ಕಂಬನಿ ಮಿಡಿದ ದೇಶ

ದೆಹಲಿ: ಮಾಜಿ ಪ್ರಧಾನಿ ಮನಮೋಹನ ಸಿಂಗ್ ನಿಧನಕ್ಕೆ ಇಡೀ ದೇಶವೇ ಕಂಬನಿ ಮಿಡಿದಿದೆ. ಶುಕ್ರವಾರ ದೆಹಲಿ ಸಂಸತ್ ಭವನ, ಎಲ್ಲ ರಾಜ್ಯದ ವಿಧಾನಸೌಧಗಳು ಸೇರಿದಂತೆ ಸರಕಾರಿ ಕಚೇರಿಗಳಲ್ಲಿ ತ್ರಿವರ್ಣ ಧ್ವಜವನ್ನು ಅರ್ಧ ಧ್ವಜಸ್ತಂಭದವರೆಗೆ ಮಾತ್ರ ಏರಿಸಿ ಧ್ವಜಾರೋಹಣ ಮಾಡುವ ಮೂಲಕ ಶೋಕಾಚರಣೆ ಆಚರಿಸಲಾಯಿತು.

ಮನಮೋಹನ ಸಿಂಗ್ ಅವರ ಪಾರ್ಥೀವ ಶರೀರವನ್ನು ಏಮ್ಸ್‌ನಿಂದ ಗುರುವಾರ ತಡರಾತ್ರಿ ಮೋತಿಲಾಲ್ ನೆಹರು ಮಾರ್ಗದಲ್ಲಿರುವ ಅವರ ನಿವಾಸಕ್ಕೆ ತರಲಾಗಿದ್ದು, ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇಡಲಾಗಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ, ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ಬಿಜೆಪಿ ಮತ್ತು ಕಾಂಗ್ರೆಸ್‌ನ ಹಿರಿಯ ನಾಯಕರು ಅಂತಿಮ ದರ್ಶನ ಪಡೆದಿದ್ದಾರೆ. ಮನಮೋಹನ ಸಿಂಗ್ ಅವರ ಪಾರ್ಥೀವ ಶರೀರದ ದರ್ಶನಕ್ಕಾಗಿ ದೆಹಲಿಯ ಎಐಸಿಸಿ ಕಚೇರಿಯಲ್ಲಿ ವ್ಯವಸ್ಥೆ ಮಾಡಲಾಗಿದೆ.

ಬೆಂಗಳೂರು ವಿವಿಯಲ್ಲಿ ಸಂಶೋಧನಾ ಕೇಂದ್ರ: ಮನಮೋಹನ ಸಿಂಗ್ ಅವರ ಪರಿವರ್ತನಾತ್ಮಕ ಆರ್ಥಿಕ ಸುಧಾರಣೆಗಳ ಮೂಲಕ ಅವರ ಪರಂಪರೆ ಜೀವಂತ ವಾಗಿದೆ. ಅವರ ಕೊಡುಗೆ ಗಳನ್ನು ಗೌರವಿಸಲು, ಅವರ ದೂರ ದೃಷ್ಟಿಯ ನೀತಿಗಳನ್ನು ಅಧ್ಯಯನ ಮಾಡಲು, ಭಾರತದ ಭವಿಷ್ಯವನ್ನು ರೂಪಿಸಲು ಹಾಗೂ ವಿದ್ಯಾರ್ಥಿಗಳನ್ನು ಪ್ರೇರೇಪಿಸಲು ಬೆಂಗಳೂರು ವಿವಿಯಲ್ಲಿ ಸಂಶೋಧನಾ ಕೇಂದ್ರ ತೆರೆಯಲಿದ್ದೇವೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ವಿದೇಶಿ ನಾಯಕರಿಂದ ಸಂತಾಪ: ಅಮೆರಿಕದ ರಕ್ಷಣಾ ಇಲಾಖೆ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್, ಕೆನಡಾದ ಮಾಜಿ ಪ್ರಧಾನ ಮಂತ್ರಿ ಸ್ಟೀಫನ್ ಹಾರ್ಪರ್, ಅಫ್ಘಾನಿಸ್ತಾನದ ಮಾಜಿ ಅಧ್ಯಕ್ಷ ಹಮೀದ್ ಕರ್ಜಾಯಿ, ಮಾಲ್ಡೀವ್ಸ್ ಮಾಜಿ ಅಧ್ಯಕ್ಷ ಮೊಹ ಮದ್ ನಶೀದ್, ರಷ್ಯಾ ಮಾಜಿ ಪ್ರಧಾನ ಮಂತ್ರಿ ಡೆನೀಸ್ ಅಲಿ ಪೋವ್ ಸೇರಿ ವಿದೇಶಿ ಗಣ್ಯರು ಮನಮೋಹನ ಸಿಂಗ್ ನಿಧನಕ್ಕೆ ಸಾಮಾಜಿಕ ಮಾಧ್ಯಮಗಳ ಮೂಲಕ ಸಂತಾಪ ಸೂಚಿಸಿದ್ದಾರೆ.



ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ದೆಹಲಿಯ ನಿವಾಸದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಅಂತಿಮ ನಮನ ಸಲ್ಲಿಸಿದರು.

ಸಿಂಗ್ ಅವರಿಗೆ ಅಂತಿಮ ನಮನ ಸಲ್ಲಿಸಿದ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ, ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ.

ಗಾಂಧಿ ಭಾರತ ವೇದಿಕೆಯಲ್ಲೇ ಶ್ರದ್ಧಾಂಜಲಿ

ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವಕ್ಕಾಗಿ ಬೆಳಗಾವಿಯ ಸಿ.ಪಿ.ಇಡಿ ಮೈದಾನದಲ್ಲಿ ಹಾಕಿದ್ದ 'ಗಾಂಧಿ ಭಾರತ' ವೇದಿಕೆಯಲ್ಲೇ ಶುಕ್ರವಾರ ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರಿಗೆ ಶ್ರದ್ಧಾಂಜಲಿ ಸಭೆ ಹಮ್ಮಿಕೊಳ್ಳಲಾಗಿತ್ತು. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಹಲವು ಸಚಿವರು, ಶಾಸಕರು, ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರು ನಮನ ಸಲ್ಲಿಸಿದರು.

ಇಂದು ಅಂತ್ಯಕ್ರಿಯೆ

ಮನಮೋಹನ ಸಿಂಗ್ ಅವರ ಅಂತ್ಯಸಂಸ್ಕಾರ ಶನಿವಾರ ಬೆಳಗ್ಗೆ 11.45ಕ್ಕೆ ಸರಕಾರಿ ಗೌರವಗಳೊಂದಿಗೆ ನಿಗಮಬೋಧ್ ಘಾಟ್ ಸ್ಮಶಾನದಲ್ಲಿ ನೆರವೇರಲಿದೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.

ಸ್ನೇಹಿತ, ಮಾರ್ಗದರ್ಶಿ ತತ್ವಜ್ಞಾನಿ: ಸೋನಿಯಾ

ಮಾಜಿ ಪ್ರಧಾನಿ ಮನಮೋಹನ ಸಿಂಗ್ ನಿಧನಕ್ಕೆ ಶ್ರದ್ಧಾಂಜಲಿ ಅರ್ಪಿಸಿರುವ ಕಾಂಗ್ರೆಸ್ ಸಂಸದೀಯ ಪಕ್ಷದ (ಸಿಪಿಪಿ) ಅಧ್ಯಕ್ಷೆ ಸೋನಿಯಾ ಗಾಂಧಿ, ನನ್ನ ಪಾಲಿಗಿದು ವೈಯಕ್ತಿಕ ನಷ್ಟ ಎಂದು ಹೇಳಿದ್ದಾರೆ. ಮನಮೋಹನ ಸಿಂಗ್ ಅವರು ನನ್ನ ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕರಾಗಿದ್ದರು. ಅವರ ನಿಧನದಿಂದ ಕಾಂಗ್ರೆಸ್ ಪಕ್ಷಕ್ಕೆ ಅಪಾರ ನಷ್ಟವಾಗಿದೆ ಎಂದು ಹೇಳಿದ್ದಾರೆ. ದೇಶದ ಪ್ರಗತಿ ಮತ್ತು ಅಭಿವೃದ್ಧಿಗೆ ಮನಮೋಹನ ಸಿಂಗ್ ಸಲ್ಲಿಸಿರುವ ಅಪಾರವಾದ ಕೊಡುಗೆಯನ್ನು ಅಳೆಯಲಾಗದು. ಅವರಂತಹ ನಾಯಕರನ್ನು ಹೊಂದಿದ್ದಕ್ಕಾಗಿ ಇಡೀ ದೇಶ ಮತ್ತು ನಮ್ಮ ಪಕ್ಷ ಹೆಮ್ಮೆಪಟ್ಟುಕೊಳ್ಳುತ್ತಿದ್ದು, ಕೃತಜ್ಞರಾಗಿದ್ದೇವೆ. ಸಾಮಾಜಿಕ ನ್ಯಾಯ, ಜಾತ್ಯತೀತತೆ, ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಅವರ ಬದ್ಧತೆಯು ಅಚಲವಾಗಿತ್ತು ಎಂದು ಬಣ್ಣಿಸಿದ್ದಾರೆ.

ಡಾ.ಮನಮೋಹನ ಸಿಂಗ್ ಶಹಬಾಸ್‌ಗಿರಿಯೇ ಜನಪರ ಯೋಜನೆಗಳಿಗೆ ಸ್ಫೂರ್ತಿ

ಸಿದ್ದರಾಮಯ್ಯ
ಮುಖ್ಯಮಂತ್ರಿಗಳು, ಕರ್ನಾಟಕ ಸರಕಾರ

'ಶರಣರ ಗುಣ ಮರಣದಲ್ಲಿ ನೋಡು' ಎನ್ನುವ ಹಿರಿಯರ ಮಾತಿದೆ. ಮಾಜಿ ಪ್ರಧಾನಿ ಡಾ.ಮನಮೋಹನ ಸಿಂಗ್ ನಿಧನದ ನಂತರ ವ್ಯಕ್ತವಾಗುವ ಪ್ರತಿಕ್ರಿಯೆಗಳನ್ನು ನೋಡಿದರೆ ಇದು ನಿಜ ಅನಿಸುತ್ತಿದೆ. ಅವರು ಪ್ರಧಾನಿಯಾಗಿದ್ದಾಗ ಅವರನ್ನು ವಿರೋಧಿಸಿ ದವರು, ಟೀಕಿಸಿದವರು ಮತ್ತು ಮಾಜಿ ಪ್ರಧಾನಿಯಾದ ನಂತರ ಅವರ ಸಾಧನೆಗಳನ್ನು ಮರೆತುಬಿಟ್ಟವರು ಇಂದು ಅವರನ್ನು ಕೊಂಡಾಡುತ್ತಿದ್ದಾರೆ.

'ವರ್ತಮಾನದ ಮಾಧ್ಯಮಗಳು ಮತ್ತು ವಿರೋಧ ಪಕ್ಷಗಳಿಗಿಂತ ಇತಿಹಾಸ ನನ್ನ ಬಗ್ಗೆ ಕರುಣಾಮಯಿಯಾಗಿ ಇರುತ್ತದೆ' ಎಂದು ಪ್ರಧಾನಿಯಾಗಿ ತಾನು ಎದುರಿಸಿದ ಕೊನೆಯ ಪತ್ರಿಕಾಗೋಷ್ಠಿಯಲ್ಲಿ ಡಾ.ಮನಮೋಹನ ಸಿಂಗ್ ವಿಶ್ವಾಸ ವ್ಯಕ್ತಪಡಿಸಿದ್ದರು. ಅವರ ಸಾವಿನ ನಂತರ ದೇಶ-ವಿದೇಶಗಳ ಗಣ್ಯರು ಡಾ.ಮನ ಮೋಹನ್ ಸಿಂಗ್ ಅವರ ಗುಣಗಾನ ಮಾಡುತ್ತಿರುವುದನ್ನು ನೋಡಿದರೆ ಇತಿಹಾಸ ಅವರನ್ನು ಸರಿಯಾಗಿಯೇ ಗುರುತಿಸಿರುವುದು ಅರಿವಾಗು



ತ್ತದೆ. ಡಾ.ಸಿಂಗ್ ಅವರ ವಿಷಾದಮಯವಾದ ಆ ಉದ್ಗಾರ ಕೇವಲ ಅವರೊಬ್ಬರ ಮನದಾಳದ ಮಾತುಗಳಾಗಿರಲಿಲ್ಲ. ಸತ್ಯ, ನ್ಯಾಯ ಮತ್ತು ನಿಷ್ಠುರತೆಯಿಂದ ಜನಪರವಾಗಿ ಕೆಲಸ ಮಾಡುತ್ತಿರುವ ಕಾರಣಕ್ಕಾಗಿ ವ್ಯವಸ್ಥೆಯ ಸಂಚಿಗೆ ಬಲಿಯಾಗುತ್ತಿರುವವರೆಲ್ಲರ ಮನದ ಮಾತಾಗಿತ್ತು.

ಡಾ.ಮನಮೋಹನ ಸಿಂಗ್ ಅವರು ತಮ್ಮ ವೈಯಕ್ತಿಕ ಬದುಕಿನ ಬಗ್ಗೆ ಹೇಳಿಕೊಂಡಿದ್ದು ಕಡಿಮೆ. ಬಾಲ್ಯದ ದಿನಗಳಲ್ಲಿ ಅವರು ಎದುರಿಸಿದ್ದ ಕಷ್ಟ-ಕಾರ್ಪಣ್ಯಗಳನ್ನು ಇತ್ತೀಚೆಗೆ ಕೇಳಿದಾಗ ನನಗೆ ನನ್ನ ಬಾಲ್ಯದ ದಿನಗಳು ನೆನಪಾಗಿತ್ತು. ಸರಿಯಾದ ರಸ್ತೆ, ಶಾಲೆ, ವಿದ್ಯುತ್ ಮೊದಲಾದ ಮೂಲಸೌಕರ್ಯಗಳೇ ಇಲ್ಲದ ಅವಿಭಜಿತ ಪಾಕಿಸ್ತಾನದ ಕುಗ್ರಾಮವೊಂದರಲ್ಲಿ ಜನಿಸಿದ್ದ ಮನಮೋಹನ ಸಿಂಗ್ ಬುಡ್ಡಿದೀಪದ ಮುಂದೆ ಕೂತು ಓದಿ ಪ್ರಾಥಮಿಕ ಶಿಕ್ಷಣ ಮುಗಿಸಿದವರು. ಅಲ್ಲಿಂದ ವಿಶ್ವವೇ ಗೌರವಿಸುವಂತಹ ಅರ್ಥಶಾಸ್ತ್ರಜ್ಞರಾಗಿ, ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ದೇಶದಲ್ಲಿ ಎರಡು ಬಾರಿ ಪ್ರಧಾನಿಯಾಗುವ ಮಟ್ಟಕ್ಕೆ ಬೆಳೆದದ್ದು ಪವಾಡದಂತೆ ಕಾಣಿಸುತ್ತಿದೆ. ಆದರೆ ಇದು ಖಂಡಿತ ಪವಾಡ ಅಲ್ಲ, ಈ ಸಾಧನೆಯ ಹಿಂದೆ ಮನಮೋಹನ ಸಿಂಗ್ ಅವರು ಬಾಲ್ಯದಲ್ಲಿಯೇ ಮೈಗೂಡಿಸಿಕೊಂಡಿದ್ದ ಕಠಿಣ ಶ್ರಮ, ಶಿಸ್ತು ಮತ್ತು ಮಹತ್ವಾಕಾಂಕ್ಷೆಗಳ ಕೊಡುಗೆ ಇದೆ.

ಡಾ.ಮನಮೋಹನ ಸಿಂಗ್ ಅವರ ರಾಜಕೀಯ ಬದುಕನ್ನು ಅವರು ವಹಿಸಿದ್ದ ಎರಡು ಪಾತ್ರಗಳ ಮೂಲಕ ನೋಡಬೇಕಾಗುತ್ತದೆ. ಮೊದಲನೆಯದು ಪಿ.ವಿ.ನರಸಿಂಹ ರಾವ್ ನೇತೃತ್ವದ ಕಾಂಗ್ರೆಸ್ ಸರಕಾರದಲ್ಲಿ ಅವರು ಐದು ವರ್ಷಗಳ ಕಾಲ ಹಣಕಾಸು ಸಚಿವರಾಗಿದ್ದದ್ದು. ಇನ್ನೊಂದು, ಹತ್ತು ವರ್ಷಗಳ ಕಾಲ ದೇಶದ ಪ್ರಧಾನ ಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದು. ಇವೆರಡೂ ಅವರು ಬಯಸಿದ್ದಲ್ಲ, ಆಕಸ್ಮಿಕವಾಗಿ ಕೂಡಿ ಬಂದದ್ದು.

ಆರ್ಥಿಕ ತಜ್ಞರಾಗಿ ಹಲವಾರು ಜವಾಬ್ದಾರಿಗಳನ್ನು ನಿರ್ವಹಿಸಿದ್ದ ಡಾ.ಸಿಂಗ್ ಅವರಿಗೆ ರಾಜಕೀಯ ಸ್ಥಾನಮಾನದ ಆಸೆ ಅವರ ಕನಸಿನಲ್ಲಿಯೂ ಇದ್ದಿರಲಾರದು. ಯುಜಿಸಿ ಅಧ್ಯಕ್ಷರಾಗಿ ತಮ್ಮ ಪಾಡಿಗೆ ತಾವಿದ್ದ ಮನಮೋಹನ ಸಿಂಗ್ ಅವರನ್ನು ಹುಡುಕಿ ಕರೆತಂದು ದೇಶದ ಹಣಕಾಸು ಸಚಿವರನ್ನಾಗಿ ಮಾಡಿದ್ದು 1991ರಲ್ಲಿ ಪ್ರಧಾನಿಯಾಗಿದ್ದ ಪಿ.ವಿ.ನರಸಿಂಹರಾವ್. ರೋಗಗ್ರಸ್ತವಾಗಿದ್ದ ದೇಶದ ಆರ್ಥಿಕತೆಯ ಚಿಕಿತ್ಸೆಗೆ ಈ ಹಿತ್ತಲಗಿಡವೇ ಸರಿಯಾದ ಮದ್ದು ಎಂದು ಅವರಿಗೆ ಮನವರಿಕೆಯಾಗಿದ್ದಿರಬಹುದು.

ಮನಮೋಹನ ಸಿಂಗ್ ಅವರು ಹಣಕಾಸು ಸಚಿವರಾಗಿ ಕಾರ್ಯಭಾರ ವಹಿಸಿಕೊಂಡಾಗ ದೇಶದ ಆರ್ಥಿಕತೆ ಸಂಪೂರ್ಣವಾಗಿ ಜಾರುದಾರಿಯಲ್ಲಿತ್ತು. ಜಿಡಿಪಿ ಬೆಳವಣಿಗೆ ಶೇಕಡಾ ಮೂರರ ವೇಗದಲ್ಲಿ ಕುಂಟುತ್ತಿತ್ತು. ನಮಗಿಂತ ಪಾಕಿಸ್ತಾನದ ಆರ್ಥಿಕತೆ ಸದೃಢವಾಗಿತ್ತು. ಸರಕಾರದ ಖಜಾನೆ ಖಾಲಿಯಾಗಿ ಟನ್‌ಗಟ್ಟಲೇ ಮೀಸಲು ಚಿನ್ನವನ್ನು ವಿದೇಶಿ ಬ್ಯಾಂಕುಗಳಲ್ಲಿ ಅಡವು ಇಡಲಾಗಿತ್ತು. ಮೂರು ವಾರಗಳಿಗಾಗುವಷ್ಟು ವಿದೇಶಿ ವಿನಿಮಯ ಮಾತ್ರ ಉಳಿದಿತ್ತು, ವಿದೇಶಿ ಸಾಲ ಬೆಟ್ಟದಷ್ಟು ಬೆಳೆದಿತ್ತು.

→ 4

ಸೇತುವೆಯಿಂದ ಉರುಳಿದ ಬಸ್: ಎಂಟು ಮಂದಿ ಸಾವು

ಬಟಿಂಡಾ: ಪಂಜಾಬ್‌ನ ಬಟಿಂಡಾದಲ್ಲಿ ಸೇತುವೆ ಮೇಲಿಂದ ಬಸ್ ಉರುಳಿ ಎಂಟು ಮಂದಿ ಮೃತಪಟ್ಟಿದ್ದಾರೆ. ಬಸ್ ತಲವಂಡಿ ಸಾಬೊ ಮಾರ್ಗವಾಗಿ ಬಟಿಂಡಾ ಕಡೆಗೆ ಸಂಚರಿಸುತ್ತಿದ್ದ ಸಂದರ್ಭದಲ್ಲಿ ಅವಘಡ ಸಂಭವಿಸಿದೆ. ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿದೆ. ಇದು ಅವಘಡಕ್ಕೆ ಕಾರಣವಾಗಿರಬಹುದು ಎನ್ನಲಾಗಿದೆ.

ನೌಕರರ ಸಂಘಕ್ಕೆ ಷಡಾಕ್ಷರಿ ಪುನರಾಯ್ಕೆ

ಬೆಂಗಳೂರು: ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ವತಿಯಿಂದ 2024-29ನೇ ಅವಧಿಯ ರಾಜ್ಯಾಧ್ಯಕ್ಷ ಹಾಗೂ ರಾಜ್ಯ ಖಜಾಂಚಿ ಸ್ಥಾನದ ಚುನಾವಣೆ ಶುಕ್ರವಾರ ಮುಗಿದಿದ್ದು, ಸಂಘದ ರಾಜ್ಯಾಧ್ಯಕ್ಷರಾಗಿ ಮತ್ತೊಮ್ಮೆ ಸಿ.ಎಸ್.ಷಡಾಕ್ಷರಿ ಆಯ್ಕೆಯಾಗಿದ್ದಾರೆ. ಬೆಳಗ್ಗೆ 9 ಗಂಟೆಯಿಂದ ಸಂಜೆ 4 ರವರೆಗೆ ಬೆಂಗಳೂರಿನ ಕಬ್ಬನ್ ಪಾರ್ಕ್‌ನ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಆವರಣದಲ್ಲಿ ಮತದಾನ ನಡೆಯಿತು. ಬಳಿಕ ನಡೆದ ಮತ ಎಣಿಕೆಯಲ್ಲಿ ಷಡಾಕ್ಷರಿಯವರು 507 ಮತಗಳನ್ನು ಪಡೆಯುವ ಮೂಲಕ ಪ್ರತಿಸ್ಪರ್ಧಿ ಬಿ.ಪಿ. ಕೃಷ್ಣಗೌಡ ಅವರಿಗಿಂತ 64 ಮತಗಳ ಅಂತರದಲ್ಲಿ ಭರ್ಜರಿ ಗೆಲುವು ಸಾಧಿಸಿದ್ದಾರೆ. ರಾಜ್ಯ ಖಜಾಂಚಿ ಸ್ಥಾನಕ್ಕೆ ಸ್ಪರ್ಧಿಸಿದ್ದ ಶಿವರುದ್ರಯ್ಯ ವಿ.ವಿ ಅವರು 485 ಮತಗಳನ್ನು ಗಳಿಸುವ ಮೂಲಕ ಪ್ರತಿಸ್ಪರ್ಧಿ ನಾಗರಾಜ ಆರ್.ಜುಮ್ಮನ್ನವರ ಅವರಿಗಿಂತ 18 ಮತಗಳ ಅಂತರದಲ್ಲಿ ಆಯ್ಕೆಯಾಗಿದ್ದಾರೆ.

ಮುಂಬಯಿ ದಾಳಿ ಉಗ್ರ ಮಕ್ಕಿ ಸಾವು

ಲಾಹೋರ್: 2006ರ ಮುಂಬೈ ದಾಳಿಯ ರೂವಾರಿ, ಉಗ್ರ ಹಫೀಜ್ ಸಯೀದ್ ಅವರ ಸಂಬಂಧಿ ಮತ್ತು ನಿಷೇಧಿತ ಭಯೋತ್ಪಾದಕ ಸಂಘಟನೆ ಜಮಾತ್-ಉದ್-ದವಾ (ಜೆಯುಡಿ) ಉಪ ನಾಯಕ ಹಫೀಜ್ ಅಬ್ದುಲ್ ರಹಮಾನ್ ಮಕ್ಕಿ ಶುಕ್ರವಾರ ಹೃದಯ ಸ್ತಂಭನದಿಂದ ನಿಧನರಾಗಿದ್ದಾನೆ.

ಗುತ್ತಿಗೆದಾರ ಆತ್ಮಹತ್ಯೆ; ಇಬ್ಬರು ಕಾನ್‌ಸ್ಟೇಬಲ್‌ಗಳ ಅಮಾನತು

ಬೀದರ್: ಸಚಿವ ಪ್ರಿಯಾಂಕ್ ಖರ್ಗೆ ಅವರ ಆಪ್ತ, ಕಾಂಗ್ರೆಸ್ ಮುಖಂಡ ರಾಜು ಕಪನೂರ ಹಾಗೂ ಇತರೆ ಎಂಟು ಜನರಿಂದ ಜೀವ ಬೆದರಿಕೆ ಇರುವುದಾಗಿ ಡೆತ್‌ನೋಟ್ ಬರೆದು ಯುವ ಗುತ್ತಿಗೆದಾರ ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ಸಂಬಂಧ ನಗರದ ಗಾಂಧಿ ಗಂಜ್ ಪೊಲೀಸ್ ಠಾಣೆಯ ಇಬ್ಬರು ಹೆಡ್ ಕಾನ್‌ಸ್ಟೇಬಲ್‌ಗಳನ್ನು ಶುಕ್ರವಾರ ಸೇವೆಯಿಂದ ಅಮಾನತುಗೊಳಿಸಲಾಗಿದೆ.

ರಾಜೇಶ್ ಚೆಲ್ವಾ ಹಾಗೂ ಶಾಮಲಾ ಅಮಾನತುಗೊಂಡವರು. ಭಾಲ್ಕಿ ತಾಲೂಕಿನ ಕಟ್ಟಿತೂಗಾಂವ್ ಗ್ರಾಮದ ಗುತ್ತಿಗೆದಾರ ಸಚಿನ್ ಮಾನಪ್ಪ ಪಾಂಚಾಳ್ (26) ಅವರು ಗುರುವಾರ (ಡಿ.26) ಡೆತ್‌ನೋಟ್ ಬರೆದು ಸಾಮಾಜಿಕ ಜಾಲತಾಣದಲ್ಲಿ ಅಪ್ಲೋಡ್ ಮಾಡಿದ್ದರು. ಇದನ್ನು ನೋಡಿ ಗಾಬರಿಗೊಂಡ ಸಚಿನ್ ಕುಟುಂಬ ಸದಸ್ಯರು ಗಾಂಧಿ ಗಂಜ್ ಠಾಣೆಗೆ ತೆರಳಿದ್ದರು. ಸಚಿನ್‌ನನ್ನು ಹುಡುಕಿಕೊಡುವಂತೆ ವಿಷಯ ತಿಳಿಸಿ, ದೂರು ಕೊಡಲು ಮುಂದಾಗಿದ್ದರು. ಈ ವೇಳೆ ಠಾಣೆಯಲ್ಲಿದ್ದ ಹೆಡ್ ಕಾನ್‌ಸ್ಟೆಬಲ್‌ಗಳಾದ ರಾಜೇಶ್ ಚೆಲ್ವಾ ಮತ್ತು ಶಾಮಲಾ ಅವರು ದೂರು ಸ್ವೀಕರಿಸಿ, ಎಫ್‌ಐಆರ್ ದಾಖಲಿಸಿರಲಿಲ್ಲ. ಮೃತ ಯುವಕ ಭಾಲ್ಕಿ ತಾಲೂಕಿನ ಕಟ್ಟಿತೂಗಾಂವ್ ಗ್ರಾಮದವನಾದ ಕಾರಣ, ಧನ್ನೂರ ಪೊಲೀಸ್ ಠಾಣೆಗೆ ಹೋಗಿ ದೂರು ಕೊಡುವಂತೆ ಹೇಳಿದ್ದರು. ದೂರು ಸ್ವೀಕರಿಸಿದೆ ನಿರ್ಲಕ್ಷ್ಯ ತೋರಿ, ಕರ್ತವ್ಯಲೋಪ ಎಸಗಿದ ಕಾರಣಕ್ಕಾಗಿ ಇಬ್ಬರನ್ನು ಅಮಾನತುಗೊಳಿಸಲಾಗಿದೆ.

- ಸಚಿನ್‌ನನ್ನು ಹುಡುಕಿಕೊಡುವಂತೆ ಠಾಣೆಗೆ ತೆರಳಿದ್ದ ಕುಟುಂಬಸ್ಥರು
- ಬೇರೆ ಠಾಣೆಗೆ ಹೋಗುವಂತೆ ಹೇಳಿ, ದೂರು ಸ್ವೀಕರಿಸದ ಪೊಲೀಸರು

ಬಿಜೆಪಿಯಲ್ಲಿ ಮುಂದುವರಿದ 'ಬೂದಿಮುಚ್ಚಿದ ಕೆಂಡದ ಸ್ಥಿತಿ' | ಜನವರಿ 6, 7ಕ್ಕೆ ದೆಹಲಿಗೆ ಹೋಗಲು ಯತ್ನಾಳ್ ಬಣ ನಿರ್ಧಾರ | ವಿಜಯೇಂದ್ರ ವಿರುದ್ಧ ಮುಗಿಯದ ಮುನಿಸು, ಎರಡನೇ ಹಂತದ ಹೋರಾಟಕ್ಕೆ ವೇದಿಕೆ ಸಿದ್ಧ

ಮತ್ತೆ ಸಭೆ ಸೇರಿದ ಬಿಜೆಪಿ ಭಿನ್ನರು

ಬೆಂಗಳೂರು: ರಾಜ್ಯದಲ್ಲಿ ಕಾಡುತ್ತಿರುವ ಬಣ ಬಡಿದಾಟ ವರಿಷ್ಠರ ಭೇಟಿಯ ಬಳಿಕ ತಣ್ಣಗಾದಂತಿತ್ತು. ಆದರೆ ಇದೀಗ ಎರಡನೇ ಹಂತದಲ್ಲಿ ಈ ಹೋರಾಟಕ್ಕೆ ವೇದಿಕೆ ಸಜ್ಜಾಗಿದೆ ಎನ್ನುವುದು ಸ್ಪಷ್ಟವಾಗುತ್ತಿದೆ.

ವಕ್ಫ್ ಹೋರಾಟಕ್ಕೆ ಸಂಬಂಧಿಸಿದಂತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ನಿರಾಸಕ್ತಿ ಹಾಗೂ ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಪಕ್ಷ ನಾಯಕ ಆರ್.ಅಶೋಕ ವಿಫಲವಾಗಿರುವುದು ಬಸನಗೌಡ ಪಾಟೀಲ್ ಯತ್ನಾಳ್ ಬಣವನ್ನು ಕೆರಳಿಸಿದ್ದು, ಇದೀಗ ಹೊಸ ವರ್ಷಕ್ಕೆ ಎರಡನೇ ಹಂತದ ವಕ್ಫ್ ಹೋರಾಟಕ್ಕೆ ವೇದಿಕೆಯನ್ನು ಸಿದ್ಧಪಡಿಸಿಕೊಂಡಿದ್ದಾರೆ.

ಗುರುವಾರ ರಾತ್ರಿ ಕುಮಾರ ಬಂಗಾರಪ್ಪ ಅವರ ನಿವಾಸದಲ್ಲಿ ನಡೆದ ಯತ್ನಾಳ್ ಬಣದ ಸಭೆಯಲ್ಲಿ ಪ್ರಮುಖವಾಗಿ ರಾಜ್ಯ ಬಿಜೆಪಿಯಲ್ಲಿ ಆಗುತ್ತಿರುವ ಹಲವು ಲೋಪಗಳಿಗೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ. ಪ್ರಮುಖವಾಗಿ ಚಳಿಗಾಲದ ಅಧಿವೇಶನದಲ್ಲಿ ವಕ್ಫ್, ಮುಡಾ ಸೇರಿದಂತೆ ಸರಕಾರದ ವಿರುದ್ಧ ಸರಣಿ ಆರೋಪಗಳಿದ್ದರೂ, ಪಕ್ಷವಾಗಿ ಇವುಗಳಲ್ಲಿ ಒಂದನ್ನು ಗಟ್ಟಿಯಾಗಿ ವಿರೋಧಿಸಲಿಲ್ಲ. ಹೊಂದಾಣಿಕೆ ರಾಜಕೀಯ ಬಿಟ್ಟು ಪಕ್ಷ ಸಂಘಟಿಸುವಂತೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರಿಗೆ ಸ್ಪಷ್ಟ ಸೂಚನೆಯಿದ್ದರೂ, ಅದರಿಂದ ಹೊರಬಂದಿಲ್ಲ ಎನ್ನುವ ಅಸಮಾಧಾನ ಸಭೆಯಲ್ಲಿ ವ್ಯಕ್ತವಾಗಿದೆ ಎನ್ನಲಾಗಿದೆ.

ಎರಡನೇ ಸುತ್ತಿನ ಹೋರಾಟ ಅಗತ್ಯ: ಕೆಲ ದಿನಗಳಿಂದ ವಿಜಯೇಂದ್ರ ವಿರುದ್ಧ ಯತ್ನಾಳ್ ಬಣದ ನಾಯಕರು ಬಹಿರಂಗ ಹೇಳಿಕೆ ನೀಡಿರಲಿಲ್ಲ. ಆದರೆ ಸಭೆಯಲ್ಲಿ, ವಿಜ ಯೇಂದ್ರ ವಿರುದ್ಧದ ಅಸಮಾಧಾನವನ್ನು ಹೊರಹಾಕಿರುವ ಅನೇಕರು, ವಕ್ಫ್ ವಿಷಯದಲ್ಲಿ ರಾಜ್ಯ ಬಿಜೆಪಿ ಸ್ಪಷ್ಟ ನಿಲುವು ಕೈಗೊಳ್ಳುವ ಸಾಧ್ಯತೆ ತೀರಾ ಕಡಿಮೆಯಿದೆ. ಆದ್ದರಿಂದ ಎರಡನೇ ಹಂತದಲ್ಲಿ ಹೊಸಪೇಟೆ ಹಾಗೂ ಬಳ್ಳಾರಿ ಭಾಗದಲ್ಲಿ ಜನರವಿ ಮೊದಲ ವಾರದಲ್ಲಿಯೇ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು ಎನ್ನುವ ತೀರ್ಮಾನಕ್ಕೆ ಬರಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮೇಲ್ನೋಟಕ್ಕೆ ಸಭೆಯಲ್ಲಿ ವಕ್ಫ್ 2ನೇ ಹಂತದ ಹೋರಾಟ ಹಾಗೂ ದೆಹಲಿಗೆ ತೆರಳಿ ವಕ್ಫ್ ಜಂಟಿ ಸದನ ಸಮಿತಿ ಅಧ್ಯಕ್ಷ ಜಗದಾಂಬಿಕಾ ಪಾಲ್ ಅವರ ಭೇಟಿಗೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ. ಆದರೆ ಈ ಸಭೆಯಲ್ಲಿ ವಿಜಯೇಂದ್ರ ಅವರ ವಿರುದ್ಧ ಮತ್ತೊಮ್ಮೆ ಅಸಮಾಧಾನವನ್ನು ಬಹುತೇಕ ನಾಯಕರು ಹೊರಹಾಕಿದ್ದಾರೆ. ಬಸನಗೌಡ ಪಾಟೀಲ್ ಯತ್ನಾಳ್, ಅರವಿಂದ ಲಿಂಬಾವಳಿ, ಮಾಜಿ ಸಂಸದ ಪ್ರತಾಪ್ ಸಿಂಹ, ಎನ್.ಆರ್. ಸಂತೋಷ್ ಸೇರಿದಂತೆ ಹಲವರು ಇದ್ದರು ಎಂದು ತಿಳಿಬಂದಿದೆ.

ಪ್ರಮುಖಾಂಶಗಳು

- ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹೊಂದಾಣಿಕೆ ರಾಜಕೀಯ ಬಿಟ್ಟು ಹೊರಬಂದಿಲ್ಲ
- ಸರಕಾರದ ವಿರುದ್ಧ ಆರೋಪಗಳಿದ್ದರೂ ಅಧಿವೇಶನದಲ್ಲಿ ಗಟ್ಟಿಯಾಗಿ ವಿರೋಧಿಸಲಿಲ್ಲ
- ವಕ್ಫ್ ವಿಷಯವಾಗಿ ಹೊಸಪೇಟೆ, ಬಳ್ಳಾರಿ ಭಾಗದಲ್ಲಿ ಜನವರಿಯಲ್ಲಿ ಕಾರ್ಯಕ್ರಮ

ವಕ್ಫ್ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಲ್ಲಿಸಿರುವ ದಾಖಲೆಗಳಿಗೆ ಪೂರಕವಾಗಿ ಕೆಲ ದಾಖಲೆಗಳನ್ನು ಜೆಪಿಸಿ ಅಧ್ಯಕ್ಷ ಜಗದಾಂಬಿಕಾ ಪಾಲ್ ಅವರು ಕೇಳಿದ್ದರು. ಈ ದಾಖಲೆಗಳನ್ನು ಜ.6, 7ರಂದು ದೆಹಲಿಗೆ ತೆರಳಿ ಸಲ್ಲಿಸಲಾಗುವುದು. ಇದರೊಂದಿಗೆ ಜನವರಿ ಮೊದಲ ವಾರದಲ್ಲಿ ಬಳ್ಳಾರಿ ಹಾಗೂ ಹೊಸಪೇಟೆಯಲ್ಲಿ ವಕ್ಫ್ ಜನಜಾಗೃತಿ ಕಾರ್ಯಕ್ರಮ ಆರಂಭಿಸಲಾಗುವುದು.

- ಅರವಿಂದ ಲಿಂಬಾವಳಿ ಮಾಜಿ ಸಚಿವ

ಸಮಾಚಾರ ಸಣ್ಣದಲ್ಲ

ಸಿಂಗ್ ಆರ್ಥಿಕ ಹರಿಕಾರ: ಭೀಮಣ್ಣ ಮೇಟಿ

ಯಾದಗಿರಿ: ಭಾರತ ದೇಶದ ಆರ್ಥಿಕ ಸುಧಾರಣೆಗಳ ಹರಿಕಾರ ಮಾಜಿ ಪ್ರಧಾನಮಂತ್ರಿ, ಮನಮೋಹನ್ ಸಿಂಗ್ ಅವರ ನಿಧನ ಭಾರತ ದೇಶಕ್ಕೆ ತುಂಬಲಾರದ



ನಷ್ಟವಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಡಾ. ಭೀಮಣ್ಣ ಮೇಟಿ ಹೇಳಿದರು. ಈ ಕುರಿತು ಪತ್ರಿಕಾ ಹೇಳಿಕೆ ಮೂಲಕ ಸಂತಾಪ ಸೂಚಿಸಿರುವ ಅವರು, ದೇಶದ ಆರ್ಥಿಕ ನೀತಿಗೆ ಹೊಸ ರೂಪು ನೀಡಿದವರು. ಆರ್ಥಿಕ ಉದಾರೀಕರಣ ಅವರ ನೀತಿಗಳು ಕೋಟ್ಯಂತರ ಜನರ ಬದುಕು ಬದಲಿಸಿದೆ ಎಂದು ತಿಳಿಸಿದರು. ಅಪಾರವಾದ ಜ್ಞಾನ ಹೊಂದಿದ್ದ ಅವರು, ಅಭಿವೃದ್ಧಿ ಪಥದಲ್ಲಿ ದೇಶವನ್ನು ಮುನ್ನೆಡಿಸಿದ್ದಾರೆ. ಮಾಜಿ ಪ್ರಧಾನಮಂತ್ರಿ ಮನಮೋಹನ ಸಿಂಗ್ ಅವರು ರಾಜಕೀಯದಲ್ಲಿ ಎಲ್ಲರನ್ನು ಗೌರವದಿಂದ ಕಾಣುತ್ತಿದ್ದರು. ಕಿರಿಯರಿಗೆ ಅಗತ್ಯವಾದ ಸಲಹೆ ಕೂಡ ನೀಡುತ್ತಿದ್ದರು. ನಿಜಕ್ಕೂ ಅವರ ಕೊಡುಗೆಯನ್ನು ನಾವು ಎಂದಿಗೂ ಮರೆಯಲು ಸಾಧ್ಯವಿಲ್ಲ ಎಂದು ಹೇಳಿದರು.

ಅತಿಥಿ ಉಪನ್ಯಾಸಕ ಸಂದರ್ಶನ ಡಿ.30ರಂದು

ಬೀದರ: ಬೀದರ ವಿಶ್ವವಿದ್ಯಾಲಯದ ಆವರಣದಲ್ಲಿ ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಅತಿಥಿ ಉಪನ್ಯಾಸಕರ ಸಂದರ್ಶನವು ಡಿ.27 ರಂದು ನಿಗಧಿಪಡಿಸಲಾಗಿತ್ತು. ಮಾಜಿ ಪ್ರಧಾನಮಂತ್ರಿ ಮನಮೋಹನಸಿಂಗ್ ಅವರು ನಿಧನ ನಿಮಿತ್ತ ಸಂದರ್ಶನ ದಿನಾಂಕ ಮುಂದೂಡಿ ಡಿ.30 ರಂದು ಬೆಳಗ್ಗೆ 10.30ಕ್ಕೆ ಪ್ರಾಣಿಶಾಸ್ತ್ರ ಹಾಗೂ ಡಿ.31 ರಂದು ಬೆಳಗ್ಗೆ 10 ಗಂಟೆಯಿಂದ ಗಣಿತ, ರಾಸಾಯನಶಾಸ್ತ್ರ, ವಾಣಿಜ್ಯಶಾಸ್ತ್ರ ಹಾಗೂ ರಾಜ್ಯಶಾಸ್ತ್ರ ವಿಷಯಗಳಿಗೆ ಸಂದರ್ಶನ ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಬೀದರ ವಿಶ್ವವಿದ್ಯಾಲಯದ ವೆಬ್‌ಸೈಟ್ https://bidaruniversity.ac.in ನಲ್ಲಿ ವೀಕ್ಷಿಸಬಹುದಾಗಿದೆ ಎಂದು ಬೀದರ ವಿಶ್ವವಿದ್ಯಾಲಯದ ಕುಲಸಚಿವರು (ಆಡಳಿತ) ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಘಟನೆ ಬಲವರ್ಧನೆಗೆ ಮುಂದಾಗಿ: ಗುಮ್ಮೆ

ಭಾಲ್ಕಿ: ತಾಲೂಕಿನಲ್ಲಿ ಸಂಘಟನೆ ಬಲವರ್ಧನೆಗೆ ಪದಾಧಿಕಾರಿಗಳು ಮುಂದಾಗಬೇಕು ಎಂದು ಕಲ್ಯಾಣ ಕರ್ನಾಟಕ ವಿಭಾಗೀಯ ಉಸ್ತುವಾರಿ ಅಧ್ಯಕ್ಷ ಸಂಗಮೇಶ ಗುಮ್ಮೆ ಹೇಳಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣದ ತಾಲೂಕು ಘಟಕದ ಪದಾಧಿಕಾರಿಗಳ ಪದಗ್ರಹಣ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಜಿಲ್ಲಾಧ್ಯಕ್ಷ ಚರಣಜೀತ ಆಣದೂರೆ. ಜಿಲ್ಲಾ ಘಟಕದ ಉಪಾಧ್ಯಕ್ಷ ಪ್ರವೀಣ ಮೊಳಕೇರೆ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೇತನ ಪಾಟೀಲ್. ಜಿಲ್ಲಾ ಸಂಚಾಲಕ ಧನರಾಜ್ ಸಂಗುಕರ್, ಬೀದರ್ ತಾಲೂಕು ಪ್ರಧಾನ ಕಾರ್ಯದರ್ಶಿ ಧನರಾಜ ಅಂದಕುಲ್, ಕರವೇ ಯುವ ಸೇನೆ ಭಾಲ್ಕಿ ತಾಲೂಕು ಅಧ್ಯಕ್ಷ ರಾಜಕುಮಾರ ಸೇರಿದಂತೆ ಹಲವರು ಇದ್ದರು. ಇದೇ ವೇಳೆ ತಾಲೂಕು ಅಧ್ಯಕ್ಷರಾಗಿ ರಾಹುಲ್ ಶಿಂಧೆ ಅವರನ್ನು ನೇಮಕ ಮಾಡಲಾಯಿತು.

ವೈದ್ಯಕೀಯ ಕ್ಷೇತ್ರಕ್ಕೆ ಗುರುಕುಲ ಕೊಡುಗೆ

ಭಾಲ್ಕಿ: ಪ್ರತಿವರ್ಷ ನೂರಾರು ವಿದ್ಯಾರ್ಥಿಗಳನ್ನು ವೈದ್ಯಕೀಯ ಕ್ಷೇತ್ರಕ್ಕೆ ನೀಡುತ್ತಿರುವ ಗುರುಕುಲ ಪಿಯು ಕಾಲೇಜಿನ ಕೊಡುಗೆ ವೈದ್ಯಕೀಯ ಕ್ಷೇತ್ರಕ್ಕೆ ಅಪಾರವಾಗಿದೆ ಎಂದು ಬೆಂಗಳೂರಿನ ವೈದ್ಯ ಪ್ರಶಾಂತ ಅಳ್ಳೆ ಹೇಳಿದರು. ತಾಲೂಕಿನ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ಶಿಕ್ಷಣ ಸಮುಚ್ಚಯದಲ್ಲಿ ಪಿಯುಸಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ವ್ಯಕ್ತಿತ್ವ ವಿಕಸನ ಕಾರ್ಯಕ್ರಮದಲ್ಲಿ ಹಿರೇಮಠದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಅವರಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು. ಶಿಕ್ಷಣ ಕ್ಷೇತ್ರದಲ್ಲಿ ಸಾಧನೆಗೈಯಲು ಬೇಕಾದ ಸೂಕ್ತ ತರಬೇತಿ, ಸಂಪನ್ಮೂಲ ಮತ್ತು ವಾತಾವರಣ ಗುರುಕುಲದಲ್ಲಿ ಇರುವುದು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ದೊರೆತ ಬಹುದೊಡ್ಡ ವರ ಎಂದು ನುಡಿದರು.ಹಿರೇಮಠದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು.ಪ್ರಾಚಾರ್ಯ ಬಸವರಾಜ ಮೊಳಕೀರೆ, ಉಪ ಪ್ರಾಚಾರ್ಯ ಸಿದ್ರಾಮ ಗೊಗ್ಗಾ, ಉಪನ್ಯಾಸಕರ ಬಲಭೀಮ ಸುತಾರ ಸೇರಿದಂತೆ ಇತರರು ಇದ್ದರು.

ವಿ+
ಸೋಮವಾರ

{ಸಿದ್ದರಾಮಯ್ಯ } ಮುಖ್ಯಮಂತ್ರಿ

ಇವರಿಗಿಂತ ದೊಡ್ಡ ಆರ್ಥಿಕ ತಜ್ಞರು ಇರಬಹುದು. ಆದರೆ, ಬಹಳ ಮೃದು ಸ್ವಭಾವದ, ಮಿತ ಭಾಷಿಯಾಗಿ ಮಧ್ಯಮ ಮತ್ತು ಬಡ ಜನರ ದೃಷ್ಟಿಯಿಂದ ಈ ಜನರ ಹಿತಕ್ಕಾಗಿ ದೇಶದ ಆರ್ಥಿಕತೆಯನ್ನು ರೂಪಿಸಿದವರು ಡಾ. ಮನಮೋಹನ್ ಸಿಂಗ್.

ಶಾ ಹೇಳಿಕೆಗೆ ಔರಾದ್ ಬಂದ್ ಸಂಪೂರ್ಣ ಯಶಸ್ವಿ

ದಲಿತಪರ ಸಂಘಟನೆಗಳಿಂದ ಪ್ರತಿಭಟನೆ | ಅಂಗಡಿ ಮುಂಗಟ್ಟು ಬಂದ್ | ಅಮಿತ್ ಶಾ ರಾಜೀನಾಮೆಗೆ ಆಗ್ರಹ

ಔರಾದ: ಅಂಬೇಡ್ಕರ ಅವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ ಅಮಿತ್ ಶಾ ರಾಜೀನಾಮೆಗೆ ಆಗ್ರಹಿಸಿ ಡಾ. ಬಿ. ಆರ್ ಅಂಬೇಡ್ಕರ್ ಸ್ವಾಭಿಮಾನಿ ಹೋರಾಟ ಸಮಿತಿ ಅಧ್ಯಕ್ಷ ಝರೆಪ್ಪ ನಾಗಮಾರಪಳ್ಳಿ ಔರಾದ ಬಂದ್ ಕರೆ ನೀಡಿದ ಹಿನ್ನೆಲೆ ಸಂಪೂರ್ಣ ಔರಾದ ಬಂದ್ ಮಾಡಲಾಯಿತು.

ವಿವಿಧ ದಲಿತಪರ ಸಂಘಟನೆಯ ಪದಾಧಿಕಾರಿಗಳು ಸೇರಿದಂತೆ ರಾಜಕೀಯ ಮುಖಂಡರು ಗಣ್ಯರು ಹೋರಾಟದಲ್ಲಿ ಭಾಗವಹಿಸಿದರು. ಕೇಂದ್ರ ಸರಕಾರದ ವಿರುದ್ಧ ಜಯಘೋಷ್ ಹಾಕಿ ಅಮಿತ್ ಶಾ ಮಾತಿನಿಂದ ದೇಶದ ಅಂಬೇಡ್ಕರ್ ಅನುಯಾಯಿಗಳಿಗೆ ಸಾಕಷ್ಟು ನೋವಾಗಿದೆ ಅಂಬೇಡ್ಕರ್ ಬಗ್ಗೆ ಪ್ರಧಾನಿ ನರೇಂದ್ರ ಮೋದಿರವರಿಗೆ ಅಭಿಮಾನ ಇದ್ದರೆ ಕೂಡಲೇ ಅಮಿತ್ ಶಾ ರಿಂದ ರಾಜೀನಾಮೆ ಪಡೆಯಬೇಕು ಎಂದು ಒತ್ತಾಯಿಸಿ. ಕೇಂದ್ರ ಗೃಹ ಸಚಿವ ಶಾ ವಿರುದ್ಧ ಆಕ್ರೋಶ ಹೊರಹಾಕಿದ ಪ್ರತಿಭಟನಾಕಾರರು ನಗರದ ಕನ್ನಡಾಂಬೆ ವೃತದಿಂದ ಬಸ್ ನಿಲ್ದಾಣದ ವರೆಗೆ ಹೋರಾಟ ನಡೆಸಿದರು. ಅಂಬೇಡ್ಕರ್ ಅನುಯಾಯಿಗಳು ಅಭಿಮಾನಿಗಳು ಭಾಗವಹಿಸಿ ಅಮಿತ್ ಶಾ ಪ್ರತಿಕೃತಿ ಹಾಗೂ ಟೈಯರ್ ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬರೆದ ಮನವಿ ಪತ್ರವನ್ನು ತಹಸೀಲ್ದಾರ ಮಲಶೆಟ್ಟಿ ಚಿದ್ರೆ ಮುಖಾಂತರ ಸಲ್ಲಿಸಿದರು. ಸಮಿತಿಯ ಮುಖಂಡ ಸುಭಾಸ್ ಲಾಧಾ ಸೇರಿದಂತೆ ಮಾರುತಿ, ಸಿಂಗೋಡೆ ಸುಂಧಾಳ, ಸುಧಾಕರ ಕೊಳ್ಳೂರ, ಕಲಾವತಿ ಎನಗುಂದಾ, ಬಾಬುರಾವ ತಾರೆ, ಕಂಟೆಪ್ಪ ಚಿಂತಾಕಿ, ನಾಗಪ್ಪ ತೇಗಂಪೂರ, ಝರೆಪ್ಪ ಕೊಂಡಾ, ಬಸಪ್ಪ ಸಿಂಗೆ, ಶಿವರಾಮ ತೇಗಂಪೂರ, ದತ್ತಾತ್ರಿ ಮುಂಗನಾಳ. ತುಕಾರಾಮ್ ಹಸನ್ಮುಖಿ, ಉತ್ತಮ ಮಾನಜರೆಕರ, ಸುನಿಲ್ ಮಿತ್ರಾ, ಸಂತೋಷ ಶಿಂಧೆ,

ಔರಾದ ಪಟ್ಟಣದ ಕನ್ನಡಾಂಬೆ ವೃತದಿಂದ ಬಸ್ ನಿಲ್ದಾಣದ ವರೆಗೆ ಬೃಹತ್ ಹೋರಾಟ ಕೈಗೊಳ್ಳಲಾಯಿತು.

ಅಮಿತ್ ಶಾ ಅಣಕು ಶವಯಾತ್ರೆ

ಡಾ.ಬಿ.ಆರ್ ಅಂಬೇಡ್ಕರ್ ಅವರ ಕುರಿತು ಅಮಿತ್ ಶಾ ಅವರು ರಾಜ್ಯ ಸಭೆಯಲ್ಲಿನ ಹೇಳಿಕೆ ಖಂಡಿಸಿ. ಅಂಬೇಡ್ಕರ್ ಸ್ವಾಭಿಮಾನಿ ಹೋರಾಟ ಹಾಗೂ ವಿವಿಧ ಸಂಘಟನೆಗಳು ಶುಕ್ರವಾರ ಕರೆ ನೀಡಿದ ಔರಾದ ಬಂದ ಅಂಗವಾಗಿ ಪಟ್ಟಣದ ಕನ್ನಡಾಂಬೆ ವೃತದಿಂದ ಬಸ್ ನಿಲ್ದಾಣದ ವರೆಗೆ ಅಮಿತ್ ಶಾ ಅವರ ಅಣಕು ಶವಯಾತ್ರೆ ನಡೆಸಲಾಯಿತು.

ಬಿಗಿ ಪೊಲೀಸ್ ಬಂದೋಬಸ್ತ್

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಡಾ. ಅಂಬೇಡ್ಕರ್ ಅವರ ಕುರಿತು ಅವಹೇಳನ ಹೇಳಿಕೆ ಖಂಡಿಸಿ ಔರಾದ ಬಂದ್ ಹಿನ್ನೆಲೆ ಶಾಂತಿಯುತ ಪ್ರತಿಭಟನೆ ಜರುಗಿತು. ಯಾವುದೇ ಅಹಿತಕರ ಘಟನೆ ಜರುಗದಂತೆ ಸಿಪಿಐ ರಘುವೀರ ಸಿಂಗ್ ಠಾಕೂರ. ಪಿಎಸ್ ಐ ವಸೀಮ್ ಪಟೇಲ್ ನೇತೃತ್ವದಲ್ಲಿ ಬಿಗಿ ಪೋಲಿಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಸುಭಾಸ್ ಲಾಧಾ, ಶಿವು ಕಾಂಬಳೆ, ಅಖಿಲೇಶ್, ಪ್ರವೀಣ ಕಾರಂಜೆ, ರತ್ನದೀಪ್ ಕಸ್ತೂರೆ, ಶಾಂತಕುಮಾರ್ ಭಾವಿಕಟ್ಟಿ, ದಿನೇಶ್ ಶಿಂಧೆ, ಸಂತೋಷ ಸೂರ್ಯವಂಶಿ, ಆನಂದ ಕಾಂಬ್ಳೆ, ಎಂ.ಡಿ.ನಯೂಮ್, ತಾನಾಜಿ ತೋರಣೆಕರ್, ಪ್ರಕಾಶ ಜಿರ್ಗಾ, ಘಾಳೆಪ್ಪ ಶೆಂಬೆಳ್ಳಿ, ಜೈಪ್ರಕಾಶ ಅಷ್ಟೂರೆ, ಗಣಪತಿ ದೊಡ್ಡೆ, ಸಂಗ್ರಾಮ ತೇಗಂಪೂರ, ವಿಲಾಸ ಹಸನ್ಮುಖಿ, ಮಹಾದೇವ ತೇಗಂಪೂರ, ಆನಂದ ಗಲಗಲೆ, ಬಸವರಾಜ ಲಾಧಾ, ಝರೇಪ್ಪ ವಡಗಾಂವ, ರತ್ನದೀಪ ಕಸ್ತೂರಿ ಸೇರಿದಂತೆ ಅನೇಕ ವಿವಿಧ ದಲಿತಪರ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

> ಅಂಬೇಡ್ಕರ್ ಅವರು ನೀಡಿದ ಸಂವಿಧಾನದಿಂದ ಇಂದು ನಮ್ಮೆಲ್ಲರಿಗೆ ಸಮಾನ ಹಕ್ಕುಗಳನ್ನು ಸಿಕ್ಕಿವೆ. ದೇಶದ ಗೃಹ ಸಚಿವ ಅಮಿತ್ ಶಾ ಅವರು ಡಾ. ಅಂಬೇಡ್ಕರ್ ಅವರ ಬಗ್ಗೆ ಈ ರೀತಿಯ ಹೇಳಿಕೆ ನೀಡಬಾರದಿತ್ತು. ಭಾರತದ ಸಂವಿಧಾನ ವಿಶ್ವಕ್ಕೆ ಮಾದರಿಯಾಗಿದೆ. ಅಂಬೇಡ್ಕರ್ ಅವರನ್ನು ಅವಮಾನಿಸುವ ಕೆಲಸ ಅಮಿತ್ ಶಾ ಅವರು ಮಾಡಿದ್ದಾರೆ ಶೀಘ್ರದಲ್ಲೇ ರಾಜೀನಾಮೆ ನೀಡಬೇಕು.
>
> -ಸತೀಶ್ ವಗ್ಗೆ, ದಲಿತ ಸಂಘರ್ಷ ಸಮಿತಿ ಜಿಲ್ಲಾಧ್ಯಕ್ಷ

> ಬಡವರಿಗೆ ಶೋಷಿತರು ಸೇರಿದಂತೆ ಎಲ್ಲಾ ವರ್ಗದವರಿಗೂ ಸಮಾನ ಹಕ್ಕು ನೀಡಿದ ಸಂವಿಧಾನ ಶಿಲ್ಪಿ ವಿರುದ್ಧ ಅವಹೇಳನಕಾರಿ ಮಾತನಾಡಿದ ಸಚಿವ ಅಮಿತ್ ಶಾ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ. ಕೇಂದ್ರ ಸರಕಾರ ಸಚಿವ ಸ್ಥಾನದಿಂದ ಕೈಬಿಡಬೇಕು.
>
> -ರಾಮಣ್ಣ ವಡಿಯಾರ, ಹಿರಿಯ ಮುಖಂಡರು

> ಸಂಸತ್ತಿನಲ್ಲಿ ಅಂಬೇಡ್ಕರ್ ಬಗ್ಗೆ ಅವಹೇಳನಕಾರಿ ಮಾತನಾಡಿದ ಅಮಿತ್ ಶಾ ಮಾತಿನಿಂದ ಅಂಬೇಡ್ಕರ್ ಅನುಯಾಯಿಗಳಿಗೆ ಸಾಕಷ್ಟು ನೋವಾಗಿದೆ.ಅಂಬೇಡ್ಕರ್ ಹಾಗೂ ಸಂವಿಧಾನ ಶಿಲ್ಪಿಯ ಮೇಲೆ ಪ್ರಧಾನಿ ಮೋದಿ ಅವರಿಗೆ ಅಭಿಮಾನ ಇದ್ದರೆ. ಅಮಿತ್ ಶಾ ಅವರಿಂದ ರಾಜೀನಾಮೆ ಪಡೆಯಬೇಕು.
>
> -ಧನರಾಜ ಮುಸ್ತಾಪೂರೆ, ಡಿಎಸ್‌ಎಸ್ ಜಿಲ್ಲಾ ಸಂಚಾಲಕ

ಬೃಹತ್ ಪ್ರತಿಭಟನಾ ಮೆರವಣಿಗೆ ತಹಸೀಲ್ದಾರ ಮಲಶೆಟ್ಟಿ ಚಿದ್ರೆ ಅವರಿಗೆ ಮನವಿ ಪತ್ರ ಸಲ್ಲಿಸಿದರು.

> ಔರಾದ ಬಂದ್‌ಗೆ ಕರೆ ನೀಡಿದ ಹಿನ್ನೆಲೆ ವ್ಯಾಪಾರಿಗಳು ಅಂಗಡಿ ಮುಂಗಟ್ಟು ಬಂದ್ ಮಾಡಿ ಸಹಕರಿಸಿದ್ದಾರೆ. ಅದೇ ರೀತಿ ಶಾಂತಿಯುತ ಪ್ರತಿಭಟನೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಅಂಬೇಡ್ಕರ್ ಅವರ ವಿಚಾರಧಾರೆಗಳು ಸೂರ್ಯ ಚಂದ್ರ ಇರುವವರೆಗೆ ಜೀವಂತ ಇರುತ್ತವೆ. ಯಾರಿಂದಲೂ ಸಂವಿಧಾನ ತಿರುಚಲು. ನಶಿಸಲು ಬಿಡುವುದಿಲ್ಲ. ಪ್ರಧಾನಿ ಮೋದಿ ಅವರಿಗೆ ಸಂವಿಧಾನದ ಮೇಲೆ ಗೌರವವಿದ್ದರೆ ಅಮಿತ್ ಶಾರನ್ನು ಸಚಿವ ಸ್ಥಾನದಿಂದ ಕೈಬಿಡಬೇಕು.
>
> -ಸುಧಾಕರ ಕೊಳ್ಳೂರ, ಮುಖಂಡ

ಜನರ ಪರವಾಗಿ ವಿಧಾನಸೌಧದಲ್ಲಿ ಧ್ವನಿ: ಶಾಸಕ ಕಂದಕೂರು

ಯಾದಗಿರಿ: ರಾಜಕೀಯದಲ್ಲಿ ವಿರೋಧ ಸಾಮಾನ್ಯ, ವಿಧಾನಸೌಧದಲ್ಲಿ ನಾನು ಮಾತನಾಡುತ್ತೇನೆ ಅಂದರೆ ಅದು ನಿಮ್ಮ ಆಶೀರ್ವಾದದಿಂದ ಮಾತ್ರ, ಜನರ ಧ್ವನಿಯಾಗಿ ನಾನು ವಿಧಾನಸೌಧದಲ್ಲಿ ಮಾತನಾಡಿದ್ದೇನೆ ಎಂದು ಗುರುಮಠಕಲ್ ಶಾಸಕ ಶರಣಗೌಡ ಕಂದಕೂರು

ತಾಲೂಕಿನ ಹೊನಗೇರಾ ಗ್ರಾಮದಲ್ಲಿ ಹಾಗೂ ಜೆಡಿಎಸ್ ನೂತನ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಸುಭಾಶ್ಚಂದ್ರ ಕಟಕಟಿ ಅವರಿಗೆ ಸನ್ಮಾನ ಸಮಾರಂಭ ವೇಳೆ ಸನ್ಮಾನ ಸ್ವೀಕರಿಸಿ ಮಾತನಾಡಿದ ಗುರುಮಠಕಲ್ ಶಾಸಕ ಶರಣಗೌಡ ಕಂದಕೂರು, ತಾಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ, ಎಪಿಎಂಸಿ ಸೇರಿದಂತೆ ಮುಂದೆ ಹಲವು ಚುನಾವಣೆಗಳು ಬರಲಿವೆ. ಪಕ್ಷ ಸಂಘಟನೆಗೆ ಇನ್ನು ಹೆಚ್ಚಾಗಿ ಆಗಬೇಕಿದೆ ಎಂದರು.

ಶಾಸಕ ಶರಣಗೌಡ ಕಂದಕೂರು ಅವರು ಗುರುಮಠಕಲ್‌ಗೆ ಶಾಶ್ವತ ಶಾಸಕರು. ಕಳೆದ ನಾಲ್ಕು ದಶಕಗಳಿಂದಾಗ ಅಭಿವೃದ್ಧಿಯನ್ನು ಮಾಡಿದ್ದಾರೆ. ಹಳ್ಳಿಗಳ ಪ್ರತಿಯೊಂದು ಕುಟುಂಬದ ಜತೆ ಸಂಪರ್ಕದಲ್ಲಿದ್ದು, ಅವರ ಕಷ್ಟ, ನೋವು ನಲಿವುಗಳಿಗೆ ಸ್ಪಂದಿಸುತ್ತಿದ್ದಾರೆ ಎಂದು ಹೇಳಿದರು.

ಈಶಪ್ಪ ರ್‍ಯಾಕಾ ಮಾತನಾಡಿ, ಕಂದಕೂರು ಕುಟುಂಬದಿಂದ ಯಾದಗಿರಿ ಜಿಲ್ಲೆಯಲ್ಲಿ ಜೆಡಿಎಸ್ ಜೀವಂತವಾಗಿದೆ. ನಮ್ಮ ನಾಯಕರು ಬರಿ ಹೇಳೋದಲ್ಲ, ಕೆಲಸ ಮಾಡಿ ತೋರಿಸುತ್ತಾರೆ. ಜೆಡಿಎಸ್‌ನಲ್ಲಿ ಲಾಬಿ ಇಲ್ಲ. ನಮ್ಮೂರಿಗೆ ಜೆಡಿಎಸ್ ಜಿಲ್ಲಾಧ್ಯಕ್ಷ ಹುದ್ದೆಯ ಜವಾಬ್ದಾರಿ ಕೊಟ್ಟು ಮೊತ್ತೊಮ್ಮೆ ಹೊನಗೇರಾ ಗ್ರಾಮದ ಕೈ ಶಾಸಕ ಶರಣಗೌಡ ಕಂದಕೂರು ಅವರು ಹಿಡಿದಿದ್ದಾರೆ



ಜೆಡಿಎಸ್ ನೂತನ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಸುಭಾಶ್ಚಂದ್ರ ಕಟಕಟಿ ಅವರಿಗೆ ಸನ್ಮಾನ ಸಮಾರಂಭ ವೇಳೆ ಗುರುಮಠಕಲ್ ಶಾಸಕ ಶರಣಗೌಡ ಕಂದಕೂರು ಸನ್ಮಾನ ಸ್ವೀಕರಿಸಿದರು.

ಎಂದು ಹೇಳಿದರು.

ನೂತನ ಜೆಡಿಎಸ್ ಜಿಲ್ಲಾಧ್ಯಕ್ಷ ಸುಭಾಶ್ಚಂದ್ರ ಕಟಕಟಿ ಮಾತನಾಡಿ, ಅಣ್ಣಾ ಇವತ್ತು ನನ್ನ ಕುಟುಂಬಕ್ಕೆ ನಿಮ್ಮ ಕುಟುಂಬದ ಆಶೀರ್ವಾದ ಸದಾ ಇದೆ. ಊರಿಗೆ ಒಳ್ಳೆಯದನ್ನು ಮಾತ್ರ ನಾ ಮಾಡಿನಿ ಅದಕ್ಕಾಗಿ ಕಂದಕೂರ ಕುಟುಂಬದ ಆಶೀರ್ವಾದ ಇದೆ.

ದೊಡ್ಡನಾಗಪ್ಪ ಬೋವಿ, ಜಿ. ತಮ್ಮಣ್ಣ, ಮಲ್ಲಣಗೌಡ ಕೌಳೂರ, ಶರಣು ಆವಂಟಿ, ಭೋಜನಗೌಡ ಯಡ್ಡಳ್ಳಿ, ಪ್ರಕಾಶ ನಿರೆಟಿ, ಬಸಣ್ಣ ದಥವರಳ್ಳಿ, ಕೃಷ್ಣಾರಡ್ಡಿ, ಪಾಪಣ್ಣ ಮನ್ನೆ, ನಾಗರಾಜ ದೇಶಮುಖ, ಅಜಯರಡ್ಡಿ ಎಲ್ಲೇರಿ, ರವಿ ಪಾಟೀಲ್, ರಾಮಣ್ಣ ಬಳಿಚಕ್ರ, ಸಣ್ಣಪ್ಪ ಕೋಟಗೇರಾ, ಗಿರಿನಾಥರಡ್ಡಿ, ನಾಗರಡ್ಡಿ ಮೋಟ್ನಳ್ಳಿ, ಮಾರ್ಥಂಡಪ್ಪ ಮಾನೇಗಾರ, ತಾಯಪ್ಪ ಬದ್ದೇಪಲ್ಲಿ, ಈಶ್ವರ ನಾಯಕ, ನರಾಪ್ಪ ಕವಡೆ, ಹಣಮಂತ ಬಂದಳ್ಳಿ, ತಿಪ್ಪಾರಡ್ಡಿ, ಶರಣಗೌಡ ಮೋಟ್ನಳ್ಳಿ, ಸೋಮನಗೌಡ ಬೆಳಗೇರಾ, ಗುರುನಾಥರಡ್ಡಿ ಸೈದಾಪೂರ, ಅಮೀನರಡ್ಡಿ, ಮಲ್ಲಣಗೌಡ ಹತ್ತಿಕುಣಿ ಇದ್ದರು

ಶಾಸಕ ಕಂದಕೂರರ ಅದ್ದೂರಿ ಮೆರವಣಿಗೆ

ಗುರುಮಠಕಲ್ ಮತಕ್ಷೇತ್ರದ ಹೊನಗೇರಾ ಗ್ರಾಮದಲ್ಲಿ ಗುರುಮಠಕಲ್ ಶಾಸಕ ಶರಣಗೌಡ ಕಂದಕೂರು ಅಭಿನಂದನಾ ಸಮಾರಂಭ ಹಾಗೂ ಜೆಡಿಎಸ್ ನೂತನ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಸುಭಾಶ್ಚಂದ್ರ ಕಟಕಟಿಯವರಿಗೆ ಸನ್ಮಾನ ಸಮಾರಂಭದ ನಿಮಿತ್ತ ಗ್ರಾಮದ ಪ್ರಮುಖ ಬೀದಿಗಳಲ್ಲಿ ಅದ್ದೂರಿ ಮೆರವಣಿಗೆ ಮಾಡಲಾಯಿತು.

ಯಾಳಗಿ ಗ್ರಾಮ ದೇವತೆ ಉತ್ಸವ

ಕೆಂಭಾವಿ: ಸಮೀಪದ ಯಾಳಗಿ ಗ್ರಾಮದಲ್ಲಿ ಗ್ರಾಮ ದೇವತೆ ಜಾತ್ರಾ ಮಹೋತ್ಸವ ಶುಕ್ರವಾರ ಸಂಭ್ರಮ ಸಡಗರದಿಂದ ಅದ್ದೂರಿಯಾಗಿ ಜರುಗಿತು.

ಗ್ರಾಮದೇವತೆ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿ ನಂತರ ಎತ್ತಿನ ಬಂಡಿಯಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಕಲ ವಾದ್ಯ ಮೇಳಗಳು ವಿಶೇಷ ಕಲಾ ತಂಡಗಳ ಸಮೇತ ಮೆರವಣಿಗೆ ಮಾಡಲಾಯಿತು. ಶ್ರೀದೇವಿಯ ಗಂಗಾಸ್ನಾನದ ನಂತರ ಪೂಜಾ ಕೈಕಂರ್ಯ ಕೈಗೊಂಡು ಲಕ್ಷ್ಮೀ ಗುಡಿಯ ಪಕ್ಕದಲ್ಲಿ ದೇವತೆಯನ್ನು ಪ್ರತಿಷ್ಠಾಪಿಸಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಉಡಿ ತುಂಬಲಾಯಿತು.

ಮೂರು ವರ್ಷಕ್ಕೊಮ್ಮೆ ನೇರವೇರುವ ಶ್ರೀದೇವಿಯ ಜಾತ್ರೆ ನಿಮಿತ್ತ ಗ್ರಾಮದಲ್ಲಿ ಕವಡಿ ಪದಗಳು, ಭಜನೆ, ಸಂಗೀತ ರಸ ಮಂಜರಿ, ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಭಕ್ತರು ದೇವಿಗೆ ದೀಡ ನಮಸ್ಕಾರ ಹಾಕುವ ಮೂಲಕ ಭಕ್ತಿಯ ಪರಾಕಾಷ್ಠೆ ಮೆರೆದರು. ಡೊಳ್ಳು ಕುಣಿತ, ಕಂಸಾಳೆ ಪದಗಳು, ವೀರಗಾಸೆ, ಗೊಂಬೆ ಕುಣಿತ ವಿವಿದ ಜಾನಪದ ಕಲಾ ಪ್ರದರ್ಶನ ಜಾತ್ರೆ ಸಂಭ್ರಮ ಇಮ್ಮಡಿಗೊಳಿಸಿತ್ತು. ಉತ್ಸವದಲ್ಲಿ ಸುತ್ತಮುತ್ತಲ ಗ್ರಾಮಗಳ ಸಾವಿರಾರು ಭಕ್ತರು ಭಾಗವಹಿಸಿದ್ದರು.

ಮಾಜಿ ಪ್ರಧಾನಿ ನಿಧನಕ್ಕೆ ಗಣ್ಯರ ಸಂತಾಪ

ಹುಮನಾಬಾದ: ದೇಶ ಕಂಡ ಅಪರೂಪದ ಭಾರತ ದೇಶದ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರ ನಿಧನ ಹುಮನಾಬಾದ ಪಟ್ಟಣದ ಮಾಜಿ ಸಚಿವ ರಾಜಶೇಖರ ಬಿ. ಪಾಟೀಲ್ ಅವರ ಗೃಹ ಕಚೇರಿಯಲ್ಲಿ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಡಾ. ಮನಮೋಹನ ಸಿಂಗ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ. ಮೌನಾಚರಣೆ ಆಚರಿಸುವ ಮೂಲಕ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

ಗುರುವಾರ ರಾತ್ರಿ ನಿಧನರಾದ ನಮ್ಮ ದೇಶದ ಮಹಾನ್ ಆರ್ಥಿಕ ತಜ್ಞ. ಮನಮೋಹನ್ ಸಿಂಗ್ ಅವರು ಹಲವಾರು ಯೋಜನೆಗಳ ರೂವಾರಿ. ಅವರು ಜಾರಿಗೆ ತಂದ ಹತ್ತಾರು ಯೋಜನೆಗಳು ಸಾಮಾನ್ಯರ ಪಾಲಿಗೆ ನಿಜಕ್ಕೂ ಬಹುಪಯೋಗಿಯಾಗಿವೆ. ಅವರ ಜನಪರ ಯೋಜನೆಗಳಾದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ. (ಮನರೇಗಾ) ಸೇರಿದಂತೆ ಪ್ರತಿ ಮಗುವಿಗೂ ಶಿಕ್ಷಣದ ಹಕ್ಕು ಕಡ್ಡಾಯ ಶಿಕ್ಷಣ ಸೇರಿದಂತೆ ಅನೇಕ ಜನಪರ ಯೋಜನೆಗಳು ಜಾರಿಗೆ ತಂದಿದ್ದಾರೆ ಎಂದು ಗಣ್ಯರು ಸಂತಾಪ ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಅಭಿಷೇಕ ಆರ್ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಪ್ಸರ್‌ಮಿಯ್ಯಾ, ಓಂಕಾರ ತುಂಬಾ, ಯುವ ಕಾಂಗ್ರೆಸ್ ಅಧ್ಯಕ್ಷ ಉಮೇಶ ಜಮಗಿ, ಪುರಸಭೆ ಉಪಾಧ್ಯಕ್ಷ ಮುಕ್ರಂ ಜಾ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಮಲ್ಲಿಕಾರ್ಜುನ ಮಾಶೆಟ್ಟಿ, ಕಂಟೇಪ್ಪಾ ದಾನಾ, ಸಿದ್ರಾಮ ವಾಘಮಾರೆ, ಪುರಸಭೆ ಸದಸ್ಯ ದತ್ತು ಲದ್ದಿ, ಸೈಯದ್ ಯಾಶೀನ್, ಸುರೇಶ ಘಾಂಗ್ರೆ, ಹುಲ್ಲೆಪ್ಪಾ ರಟಕಲ್, ಧರಮರೆಡ್ಡಿ, ನರಸಪ್ಪಾ ಪರಸನೋರ, ವಿಜಯಕುಮಾರ ಶಿವಪೂರ, ಅಶೋಕ ಸೊಂಡೆ, ಶಿವಕುಮಾರ ಪರೀಟ, ರಾಖೇಶ ಕೌಡಿಯಾಳ, ರಾಜಕುಮಾರ ಲಗೋಂಡ, ರವಿ ಘವಳಕರ್, ರಾಹುಲ ಉದ್ಗಾ, ಯಾಸೀರ್, ವೈಜಿನಾಥ ಡಾಂಗೆ, ಗುಂಡಪ್ಪಾ ಧನಗರಗಡ್ಡ, ಗುಂಡಪ್ಪಾ ಹೊನ್ನಕೇರಿ, ಜೈರಾಜ ಸದಲಾಪೂರೆ, ಖಾಲೀದ್ ಮತ್ತು ಪಕ್ಷದ ಮುಂತಾದ ಪ್ರಮುಖರು ಉಪಸ್ಥಿತರಿದ್ದರು.

ಹುಮನಾಬಾದ ಪಟ್ಟಣದ ಮಾಜಿ ಸಚಿವ ರಾಜಶೇಖರ ಬಿ. ಪಾಟೀಲ್ ಅವರ ಗೃಹ ಕಚೇರಿಯಲ್ಲಿ ಡಾ. ಮನಮೋಹನ ಸಿಂಗ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಶ್ರದ್ಧಾಂಜಲಿ ಸಲ್ಲಿಸಿದರು.

ಸಾರಿಗೆ ಅಧಿಕಾರಿ ನಡೆಗೆ ಆಕ್ರೋಶ

ಬೀದರ: ಮೋಟಾರ್ ವಾಹನ ತರಬೇತಿ ಶಾಲೆಯ ಸಂಘದವರ ವಿರುದ್ಧ ಅಸಭ್ಯ ವರ್ತನೆ ಹಾಗೂ ಸಂಘದವರು ತಮ್ಮ ದಿನನಿತ್ಯ ಕೆಲಸ ಕಾರ್ಯಕ್ಕೆ ಕಚೇರಿಗೆ ತೆರಳಿದಾಗ ಅವಾಚ್ಯ ಶಬ್ದಗಳಿಂದ ನಿಂದಿಸಲಾಗಿದೆ ಎಂದು ವಾಹನ ತರಬೇತಿ ಶಾಲೆಯ ಸಂಘದ ಪದಾಧಿಕಾರಿಗಳು ಆಕ್ರೋಶ ಹೊರಹಾಕಿದ್ದಾರೆ.

ಈ ಕುರಿತು ಬೀದರ ಸಾರಿಗೆ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಸ್ .ಡಿ.ಎ.ವಿರೇಂದ್ರ ಎಂ. ವಿರುದ್ಧ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು ಬೆಂಗಳೂರು ಅವರಿಗೆ ಬರೆದ ಮನವಿಪತ್ರವನ್ನು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರಿಗೆ ಸಲ್ಲಿಸಿದರು.

ತರಬೇತಿ ಸಂಘದ ಕೆಲಸ ಕಾರ್ಯಗಳಿಗೆ ಕಚೇರಿಗೆ ತೆರಳಿದರೆ ಈ ಸಿಬ್ಬಂದಿಯು ಸತತ ಹನ್ನೊಂದು ದಿವಸಗಳಿಂದ ಕೆಲಸ ಮಾಡಿಕೊಡದೆ ನಿಮಗೆ ಸಂಬಂಧಪಟ್ಟ ಫೈಲ್ ನಿವು ತೆಗೆದುಕೊಂಡು ಹೋಗಿ ಎಂದು ಏರು ಧ್ವನಿಯಲ್ಲಿ ಅವಾಜ್ ಹಾಕುತ್ತಿದ್ದಾರೆ. ಕಚೇರಿಯಲ್ಲಿ ಅಧಿಕೃತವಾಗಿ ಇಬ್ಬರು ಖಾಸಗಿ ವ್ಯಕ್ತಿಗಳಿಂದ ಅನಧಿಕೃತವಾಗಿ ಅವ್ಯವಹಾರ ನಡೆಸುತ್ತಿದ್ದಾರೆ. ಅವರಿಗೆ ಬೇಕಾದವರ ಹತ್ತಿರ ಹಣ ಪಡೆದು ಕೆಲಸ ಮಾಡಿಕೊಡಲಾಗುತ್ತಿದೆ. ಇವರ ವಿರುದ್ಧ ಸೂಕ್ತ ಕಾನೂನು ಕ್ರಮಕ್ಕೈಗೊಳ್ಳಬೇಕು ಎಂದು ಬೀದರ ಮೋಟಾರ ವಾಹನ ತರಬೇತಿ ಶಾಲೆಯ ಸಂಘದ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.

ಎಸ್.ಡಿ.ಎ.ವಿರೇಂದ್ರ ಎಂ. ವಿರುದ್ಧ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು ಬೆಂಗಳೂರು ಅವರಿಗೆ ಬರೆದ ಮನವಿಪತ್ರವನ್ನು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರಿಗೆ ಸಲ್ಲಿಸಿದರು.

ಕ್ಷೇತ್ರ ಕಲ್ಯಾಣಕ್ಕೆ ಬದ್ಧ

ಹುಮನಾಬಾದ: ತಾಲೂಕಿನ ಜನರ ನಿರೀಕ್ಷೆಗೆ ಅನುಗುಣವಾಗಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಶಾಸಕ ಸಿದ್ದು ಪಾಟೀಲ್ ಹೇಳಿದರು. ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಮೈಕ್ರೊ ಕ್ರಿಯಾ ಯೋಜನೆಯಡಿಯಲ್ಲಿ ಕ್ಷೇತ್ರದ ಘಾಟಬೋರಾಳ ಗ್ರಾಮದಲ್ಲಿ ಅಂದಾಜು ವೆಚ್ಚ 25 ಲಕ್ಷ ರು.ಗಳ ಸಿ.ಸಿ ರಸ್ತೆ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಗುಣಮಟ್ಟದ ಕಾಮಗಾರಿ ಕೈಗೊಳ್ಳಬೇಕು ಹಾಗೂ ಅಧಿಕಾರಿಗಳು ಸಕಾಲಕ್ಕೆ ಭೇಟಿ ನೀಡುವ ಮೂಲಕ ಪರಿಶೀಲನೆ ನಡೆಸಬೇಕು ಎಂದು ತಿಳಿಸಿದರು. ಗ್ರಾ.ಪಂ ಅಧ್ಯಕ್ಷೆ ಪ್ರಭಾವತಿ ಘಂಟೆ, ಡಾ. ಪ್ರಕಾಶ ಪಾಟೀಲ, ಅಭಿಮನ್ಯು ನಿರಗುಡಿ, ನಾಮದೇವರಾ ಮೂಳೆ, ಶಿವಾಜಿ ರಾಘು, ಪ್ರಮೋದ ಮೂಳೆ, ಸಾಯಿ ಹಂಡಗೆ, ಸಚಿನ ದಾಡಗೆ, ರತನ ಜಂಕು, ಬಸವರಾಜ ಸ್ವಾಮಿ, ಹರೀಶ ಮಾನಕಾರೆ, ತಾನಾಜಿ ಭೋಸಲೆ, ನಾಗು ಕೋಟೆ, ಗೋವಿಂದ ರಾಘು, ನಾಗಭೂಷಣ ಸಂಗಮ್, ಸುನೀಲ ಪತ್ರಿ, ದಿನಕರ ಮಾನಕಾರೆ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

ಮನಮೋಹನ ಸಿಂಗ್ ಅವರ ಸಾಧನೆ ಅಮರ

ಬೀದರ: ಮಾಜಿ ಪ್ರಧಾನಿ ಆರ್ಥಿಕ ತಜ್ಞರಾಗಿದ್ದ ದಿ. ಮನಮೋಹನ ಸಿಂಗ್‌ರವರು, ಹಲವಾರು ಹುದ್ದೆಗಳನ್ನು ಅಲಂಕರಿಸಿ, ಯಶಸ್ವಿಯಾಗಿ ನಿಭಾಯಿಸಿ, ಈ ದೇಶಕ್ಕೆ ಅವರು ನೀಡಿದ ಕೊಡುಗೆ, ಅವರ ಸಾಧನೆ ಅವರ ಹೆಸರಿನಂತೆ ಮನಮೋಹಕವಾಗಿಯೇ ಇದೆ, ಎಂದಿಗೂ ಅಮರವಾಗಿರಲಿದೆ ಎಂದು ಕೇಂದ್ರ ಮಾಜಿ ಸಚಿವ ಭಗವಂತ ಖೂಬಾ, ಮನಮೋಹನಸಿಂಗ್ ಅವರ ಅಗಲಿಕೆಗೆ ಕಂಬನಿ ಮಿಡಿದಿದ್ದಾರೆ. ಅಟಲ್ ಬಿಹಾರಿ ವಾಜಪೇಯಿ ನಂತರ ಈ ದೇಶಕ್ಕೆ ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದರಿಂದಲೆ ಈ ದೇಶದ ಅರ್ಥವ್ಯವಸ್ಥೆ ಸಧೃಡಗೊಂಡಿತ್ತು, ಯಾಕೆಂದರೆ ಅಟಲ್ ಜೀ ಅವರಂತೆ, ನಿಸ್ವಾರ್ಥದಿಂದ ದೇಶದ ಒಳಿತಿಗಾಗಿ ನಿರ್ಧಾರಗಳು ತೆಗೆದುಕೊಂಡ ಕೀರ್ತಿ ಮನಮೋಹನಸಿಂಗ್‌ರವರಿಗೆ ಸಲ್ಲುತ್ತದೆ. ಆಹಾರ ಭದ್ರತಾ ಕಾಯಿದೆ, ಆರ್‌ಟಿಐ, ಆಧಾರ್ ಮುಂತಾದ ಜನಪರ ಯೋಜನೆಗಳಿಗೆ ಮನಮೋಹನ್ ಸಿಂಗ್‌ರವರು ಎಂದಿಗೂ ಭಾರತಿಯರ ಮನದಲ್ಲಿ ಉಳಿಯಲಿದ್ದಾರೆ ಎಂದು ತಿಳಿಸಿದ್ದಾರೆ. ಗುತ್ತಿಗೆದಾರ ಆತ್ಮಹತ್ಯೆಗೆ ಖಂಡನೆ: ಸಚಿವ ಪ್ರಿಯಾಂಕ ಖರ್ಗೆಯವರ ಆಪ್ತನ ಕೊಲೆ ಬೆದರಿಕೆಯಿಂದ, ನಮ್ಮ ಜಿಲ್ಲೆಯ ಭಾಲ್ಕಿ ತಾಲೂಕಿನ ಕಟ್ಟಿ ತೂಗಾಂವ ಗ್ರಾಮದ ಸಚಿನ ಪಂಚಾಳ ಎನ್ನುವ ಯುವ ಗುತ್ತಿಗೆದಾರ ಆತ್ಮಹತ್ಯೆ ಮಾಡಿಕೊಂಡಿರುವ ಸುದ್ದಿ ತಿಳಿದು ತುಂಬಾ ನೋವಾಗುತ್ತಿದೆ. ನಮ್ಮ ಯುವಕನ ಸಾವಿಗೆ ನ್ಯಾಯ ಕೊಡಬೇಕು ಮತ್ತು ಸರ್ಕಾರದಿಂದ ಈ ಕುಟುಂಬಕ್ಕೆ ಪರಿಹಾರ ನೀಡಬೇಕೆಂದು ಒತ್ತಾಯಿಸಿದ್ದಾರೆ.

ಮಾಜಿ ಪ್ರಧಾನಿ ಸಿಂಗ್ ಅಗಲಿಕೆ ದೇಶಕ್ಕೆ ನಷ್ಟ

ಭಾಲ್ಕಿ: ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅಗಲಿಕೆಯಿಂದ ದೇಶಕ್ಕೆ ಬಹುದೊಡ್ಡ ಹಾನಿಯುಂಟಾಗಿದೆ ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷ ಮಹಾಂತೇಶ ಪಾಟೀಲ್ ಹೇಳಿದರು. ತಾಲೂಕಿನ ಭಾತಂಬ್ರಾ ಗ್ರಾಮದಲ್ಲಿ ಆಯೋಜಿಸಿದ್ದ ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ಭಾವಪೂರ್ಣ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಮನಮೋಹನ ಸಿಂಗ್ ಅವರು ರಾಜಕೀಯ ವ್ಯಕ್ತಿ ಎನ್ನುವುದಕ್ಕಿಂತ ಹೆಚ್ಚಾಗಿ ಉತ್ತಮ ಆರ್ಥಿಕ ತಜ್ಞರಾಗಿದ್ದರು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪಿಕೆಪಿಎಸ್ ಅಧ್ಯಕ್ಷ ಸತೀಶ ಬಿರಾದಾರ್, ಪ್ರಮುಖರಾದ ಶಂಕರ ಭೂರಾಳೆ, ಶಾಂತವೀರ ಕೇಸ್ಕರ್, ಕಾಶಿನಾಥ ಲದ್ದೆ, ಸುಭಾಷ ದಾಡಗೆ, ಶಿವಕುಮಾರ ಕಾಪಸೆ, ಶೀಲವಂತ ಭಂಡಾರೆ, ವೀರೇಶ ಭೂರಾಳೆ, ವೆಂಕಟ ಬಿರಾದಾರ್, ಅನಿಲ ದಾಡಗೆ, ಸಂತೋಷ ಭೂರಾಳೆ, ಇಸ್ತೇಕಾರ್, ಚಂದ್ರಕಾಂತ ಕುಟಮಲಗೆ, ನಾಗೇಶ ಟೋಕರೆ, ಮಹಾದೇವ ಭೂರೆ, ಪುನಿತ್ ಸೀತಾ, ವಿಶ್ವಜೀತ ವಿಚಾರೆ, ಶಿವಕುಮಾರ ಸೋನಾರ ಇದ್ದರು.

ಶಾ ವಜಾಕ್ಕಾಗಿ 31ರಂದು ಶಹಾಪೂರ ಬಂದ್‌ಗೆ ಕರೆ

ಶಹಾಪುರ: ಸಂಸತ ನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಕುರಿತು ಹೇಳಿಕೆ ನೀಡಿರುವ ಅಮಿತ್ ಶಾ ರನ್ನು ಸಚಿವ ಸಂಪುಟದಿಂದ ಕೈಬಿಡಬೇಕು ಹಾಗೂ ಸಾರ್ವತ್ರಿಕ ಕ್ಷಮೆಯಾಚಿಸಿಬೇಕೆಂದು ಆಗ್ರಹಿಸಿ ಡಿ.31 ರಂದು ಶಹಾಪುರ ನಗರ ಬಂದ್‌ಗೆ ದಲಿತ ಸಂಘಟನೆಗಳು ನಿರ್ಧರಿಸಿವೆ. ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಪೂರ್ವ ಭಾವಿ ಸಭೆಯಲ್ಲಿ ಒಮ್ಮತದೊಂದಿಗೆ ಈ ನಿರ್ಣಯ ಕೈಗೊಳ್ಳಲಾಗಿದೆ. 10 ಸಾವಿರಕ್ಕೂ ಅಧಿಕ ಪ್ರಗತಿಪರ ಸಂಘಟನೆಗಳು ಮತ್ತು ದಲಿಪರ ಸಂಘಟನೆಗಳ ಮುಖಂಡರು ಕಾರ್ಯಕರ್ತರು ಭಾಗವಹಿಸುವ ನಿರೀಕ್ಷೆ ಹೊಂದಲಾಗಿದೆ ಎಂದು ಮುಖಂಡರು ತಿಳಿಸಿದ್ದಾರೆ. ದಲಿತ ಮುಖಂಡ ಮಲ್ಲಿಕಾರ್ಜುನ ಪೂಜಾರಿ ಮಾತನಾಡಿ, ಪ್ರಜಾ ಪ್ರಭುತ್ವವನ್ನು ಜಾರಿಗೆ ತಂದು ಅಮಿತ್ ಶಾ ರವರಿಗೆ ಕೇಂದ್ರ ಮಂತ್ರಿ ಸ್ಥಾನಮಾನ ನೀಡಿದ್ದು, ಡಾ.ಬಾಬಾಸಾಹೇಬರ ಸಂವಿಧಾನ ಎನ್ನುವುದನ್ನು ಮರೆತು ಮಾತನಾಡಿದ ಅವರನ್ನು ಕೂಡಲೆ ಸಂಪುಟದಿಂದ ಕೈಬಿಡಬೇಕು ಎಂದು ಆಗ್ರಹಿಸಿದರು. ರೈತ ಮುಖಂ ಡ ಚೆನ್ನಪ್ಪ ಆನೆಗುಂದಿ ಮಾತನಾಡಿ, ಕೇಂದ್ರದ ಬಿಜೆಪಿ ಸರಕಾರ ಧಾರ್ಮಿಕ ಹೆಸರಿನಲ್ಲಿ ಮನುವಾದನ್ನು ಜಾರಿಗೆ ತರುವ ಉನ್ನಾರ ದಲ್ಲಿದ್ದಾರೆ. ಎಸ್.ಎಸ್.ಡಿ ಜಿಲ್ಲಾಧ್ಯಕ್ಷರಾದ ಮಾಹಾದೇವ ದಿಗ್ಗಿ, ಸೈಯದ್ ಕಾಲಿದ, ಸೈಯಿದ್ ಖಾದ್ರಿ, ಬಸವರಾಜ ಗುಡಿ ಮನಿ, ರಾಯಪ್ಪ ಸಾಲಿಮನಿ, ಮರೆಪ್ಪ ಕನ್ಯಾಕೊಳೂರ, ಮರೆಪ್ಪ ಕ್ರಾಂತಿ, ಚಂದ್ರಶೇಖರ ಗುತ್ತೇದಾರ,ಶರಣರಡ್ಡಿ ಹತ್ತಿಗೂಡೂರ, ಶಾಂತಪ್ಪ ಸಾಲಿಮನಿ, ಚಂದ್ರಕಾಂತ ಬಜೇರಿ, ಪರಶುರಾಮ ರೋಜಾ ಹಾಜರಿದ್ದರು.

ಪೇಂಟಾವೆಲೆಂಟ್ ಲಸಿಕೆ ಕಾರ್ಯಕ್ರಮ

ಶಹಾಪುರ: ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿಯಲ್ಲಿ ತಾಲೂಕಿನಾದ್ಯಂತ ಡಿ. 23 ರಿಂದ ಲಸಿಕಾ ಅಭಿಯಾನ ಆರಂಭಗೊಂಡಿದ್ದು ಇದು ಡಿ.31 ರವರೆಗೆ ಚಾಲ್ತಿ ಯಲ್ಲಿರುತ್ತದೆ, ಮಗುವಿನ ಸಮಗ್ರ

ಆರೋಗ್ಯಕರ ಬೆಳವಣಿಗೆ ರೋಗ ನಿರೋಧಕ ಲಸಿಕೆಗಳು ಬಹಳ ಅತ್ಯವಶ್ಯಕವಿದ್ದು, ಲಸಿಕೆಯಿಂದ ತಪ್ಪಿ ಹೋದ ಮತ್ತು ಬಿಟ್ಟುಹೋದ ವಂಚಿತ ಮಕ್ಕಳಿಗೆ ಲಸಿಕೆ ಹಾಕಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶ ಎಂದು ತಾಲೂಕಾ ಅರೋಗ್ಯ ಅಧಿಕಾರಿ ಡಾ. ರಮೇಶ ಗುತ್ತೇದಾರ ತಿಳಿಸಿದರು. ವಿಶೇಷ ಲಸಿಕಾ ಅಭಿಯಾನ ದಡಿಯಲ್ಲಿ ಪೆಂಟಾ -1 ಲಸಿಕೆಯನ್ನು ತಾಲೂಕಿನ ಎಲ್ಲಾ ಪ್ರಾಥಮಿಕ ಅರೋಗ್ಯ ಕೇಂದ್ರಗಳ, ಉಪಕೇಂದ್ರಗಳ ಎಲ್ಲಾ ಗ್ರಾಮಗಳಲ್ಲಿ ಹಮ್ಮಿಕೊಂಡು ಲಸಿಕ ನೀಡಲಾಗುತ್ತಿದ್ದು, ಮಕ್ಕಳ ಪೋಷಕರುಗಳು ತಪ್ಪದೆ ತಮ್ಮ ಮಕ್ಕಳಿಗೆ ಲಸಿಕೆ ಹಾಕಿಸಬೇಕು. ಪೆಂಟಾವೆಲೆಂಟ್ ಲಸಿಕೆಯಿಂದ ಗಂಟಲು ಮಾರಿ, ನಾಯಿಕೆಮ್ಮು, ಧನುರ್ವಾಯು, ಹೇಪಟೈಟಿಸ್ ಬಿ, ಮತ್ತು ಹಿಬ್ (ಇನ್ಫ್ಲುಯೊಂಜಾ ಟೈಪ್ ಬಿ)ಇತರೆ ರೋಗಗಳಿಂದ ಮಗುವಿಗೆ ರಕ್ಷಿಸುತ್ತದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಆರೋಗ್ಯ ಕೇಂದ್ರ, ಉಪಕೇಂದ್ರ, ಭೇಟಿ ನೀಡಲು ಹಾಗೂ ಕ್ಷೇತ್ರ ಮಟ್ಟದ ಆರೋಗ್ಯ ಅಧಿಕಾರಿಗಳನ್ನು ಮತ್ತು ಆಶಾ ಕಾರ್ಯಕರ್ತೆಯರನ್ನು ಸಂಪರ್ಕಿಸಲು ಕೋರಿದ್ದಾರೆ.

ಸಮಾಚಾರ ಸಣ್ಣದಲ್ಲ

ರಂಗದಂಗಳದಲಿ ಮಾತುಕತೆ ಮುಂದೂಡಿಕೆ

ಕಲಬುರಗಿ: ಮಾಜಿ ಪ್ರಧಾನಮಂತ್ರಿ ಡಾ. ಮನಮೋಹನ ಸಿಂಗ್ ಅವರ ನಿಧನ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ 7 ದಿನಗಳ ಕಾಲ ಶೋಕಾಚರಣೆ ಜಾರಿಯಲ್ಲಿರುವುದರಿಂದ ಕಲಬುರಗಿ ರಂಗಾಯಣದಿಂದ ಡಿ. 28 ರಂದು ಕಲಬುರಗಿ ನಗರದ ಐವಾನ್-ಎ-ಶಾಹಿ ಪ್ರದೇಶದಲ್ಲಿನ ಎಚ್.ಕೆ.ಇ. ಸಂಸ್ಥೆಯ ಬಾಲಕಿಯರ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ರಂಗದಂಗಳದಲಿ ಮಾತುಕತೆ ಕಾರ್ಯಕ್ರಮ ಮುಂದೂಡಲಾಗಿದೆ. ಕಾರ್ಯಕ್ರಮದ ಮುಂದಿನ ದಿನಾಂಕ ತದನಂತರ ತಿಳಿಸಲಾಗುವುದೆಂದು ಕಲಬುರಗಿ ರಂಗಾಯಣದ ನಿರ್ದೇಶಕಿ ಸುಜಾತಾ ಜಂಗಮಶೆಟ್ಟಿ ತಿಳಿಸಿದ್ದಾರೆ.

ಡಾ.ಸಿಂಗ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ

ಚಿಂಚೋಳಿ: ಜಾಗತಿಕ ಭಾರತದ ಶಿಲ್ಪಿ, ಉದಾರ ಆರ್ಥಿಕತೆಯ ಪಿತಾಮಹ, ಭಾರತದ ಸರ್ವಶ್ರೇಷ್ಠ ವಿತ್ತ ಸಚಿವ, ಭಾರತದ ಮಾಜಿ ಪ್ರಧಾನಿ ಡಾ. ಮನಮೋಹನ ಸಿಂಗ್ ನಿಧನ ಹಿನ್ನೆಲೆ ಚಿಂಚೋಳಿ ಬ್ಲಾಕ್ ಕಾಂಗ್ರೆಸ್ ಸಮಿತಿ ಕಾರ್ಯಾಲಯದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಚಿಂಚೋಳಿ ಬ್ಲಾಕ್ ಅಧ್ಯಕ್ಷ ಬಸವರಾಜ ಆರ್. ಮಲಿ ಮನಮೋಹನ್ ಸಿಂಗ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪ ನಮನದ ಗೌರವ ಸಮರ್ಪಣೆ ಸಲ್ಲಿಸುವ ಮೂಲಕ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರುಗಳಾದ ನಾಗೇಶ್ ಗುಣಾಜಿ, ರಾಮಶೇಟ್ಟಿ ಪವಾರ, ವಿಶ್ವ ಹೊಡೆಬೀರನಳ್ಳಿ, ಆರ್. ಗಣಪತಿ ರಾವ್, ಸುಭಾಷ್ಚಂದ್ರ ಪಾಟೀಲ್, ಗೋವಿಂದ ರಾಠೋಡ, ಚಂದ್ರ ಕಾರಬಾರಿ, ಆಕಾಶ್ ಲೋಡನೋರ ಇದ್ದರು.

ವಿದ್ಯುತ್ ಅವಘಡ: ಪರಿಹಾರಕ್ಕೆ ಆಗ್ರಹ

ಕಲಬುರಗಿ: ಕಡಿದು ಬಿದ್ದ ವಿದ್ಯುತ್ ತಂತಿ ಸ್ಪರ್ಶದಿಂದ ಸಂತ್ರಸ್ತಳಾದ ನಗರದ ಭಾಗ್ಯಶ್ರೀ ಕುಟುಂಬಕ್ಕೆ 1 ಕೋಟಿ ರೂ ಪರಿಹಾರ ನೀಡುವಂತೆ ಸೃಷ್ಟಿ ಸೋಶಿಯಲ್ ವೆಲ್ಫೇರ್ ಟ್ರಸ್ಟ್ ಅಧ್ಯಕ್ಷ ಕಿಶೋರ ಗಾಯಕವಾಡ ಆಗ್ರಹಿಸಿದರು. ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಭಾಗ್ಯಶ್ರೀ ಕುಟುಂಬದ ಒಬ್ಬರಿಗೆ ಸರಕಾರಿ ಉದ್ಯೋಗ ನೀಡಬೇಕು.ಭಾಗ್ಯಶ್ರೀ ಅವರ ಮಕ್ಕಳ ವ್ಯಾಸಂಗದ ವೆಚ್ಚವನ್ನು ಸರಕಾರ ಭರಿಸಬೇಕು. ಇದೇ ರೀತಿಯ ಅವಘಡಗಳು ಸಂಭವಿಸದಂತೆ ಮಹಾನಗರ ಪಾಲಿಕೆ ಮತ್ತು ಜೆಸ್ಕಾಂ ಅಗತ್ಯ ತುರ್ತುಕ್ರಮ ಕೈಗೊಳ್ಳಬೇಕು ಎಂದು ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು. ಈ ಸುದ್ದಿಗೋಷ್ಠಿಯಲ್ಲಿ ಸಂದೀಪ ಮಾಳಗಿ ಮತ್ತು ಸಂತ್ರಸ್ತೆ ಭಾಗ್ಯಶ್ರೀ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.

ಅಕ್ರಮ ಪಡಿತರ ಜೋಳ ಸಂಗ್ರಹ: ಅಮಾನತು

ಕಲಬುರಗಿ: ಪಡಿತರದಾರರಿಗೆ ವಿತರಿಸಲಾಗುವ ಜೋಳವನ್ನು ಅಕ್ರಮವಾಗಿ ಕೊಠಡಿಯಲ್ಲಿ ಸಂಗ್ರಹಿಸಿರುವ ಆರೋಪ ಹಿನ್ನೆಲೆಯಲ್ಲಿ ಅಫಜಲಪೂರ ತಾಲೂಕಿನ ಹೂವಿನಹಳ್ಳಿ ಗ್ರಾಮದ ನ್ಯಾಯಬೆಲೆ ಅಂಗಡಿ ಸಂಖ್ಯೆ 58ರ (ಕಾರ್ಯದರ್ಶಿ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘ ಹೂವಿನಹಳ್ಳಿ) ಲೈಸೆನ್ಸ್ ಸಂಖ್ಯೆ 1277/98ನ್ನು ಮುಂದಿನ ವಿಚಾರಣೆ ಕಾಯ್ದಿರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತುಗೊಳಿಸಿ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಕಲಬುರಗಿ ಉಪನಿರ್ದೇಶಕ ಭೀಮರಾಯ ಎಂ. ಆದೇಶ ಹೊರಡಿಸಿದ್ದಾರೆ. ಅಕ್ರಮ ಜೋಳ ಸಮಗ್ರಹಣೆ ಹಿನ್ನೆಲೆಯಲ್ಲಿ ಡೀಲರ್ ವಿರುದ್ಧ ದೇವಲ ಗಾಣಾಗಾಪೂರ ಪೊಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ.0089/2024 ರಂತೆ ಡಿ.20ರಂದು ಪ್ರಕರಣ ದಾಖಲಿಸಿರುವುದರಿಂದ ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ಪ್ರಸ್ತಾವನೆ ಸಲ್ಲಿಸಿದರು. ಡೀಲರ್‌ಗೆ ನೋಟಿಸ್ ಜಾರಿಗೊಳಿಸಿ 24 ಗಂಟೆಯಲ್ಲಿ ಲಿಖಿತ ಹೇಳಿಕೆ ನೀಡುವಂತೆ ಸೂಚಿಸಿದರು. ಯಾವುದೇ ಸಮಜಾಯಿಷಿ ಹೇಳಿಕೆ ನೀಡದ ಕಾರಣ ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ-2016ರ ಕ್ಲಾಜ್ 12(1) ಮತ್ತು ತಿದ್ದುಪಡಿ ಆದೇಶ-2017ರ 2(ಇ) ರಂತೆ ಹೂವಿನಳ್ಳಿ ಗ್ರಾಮದ ನ್ಯಾಯಬೆಲೆ ಅಂಗಡಿ ಸಂಖ್ಯೆ 58ರ ಪ್ರಾಧಿಕಾರ ಸಂಖ್ಯೆ:1277/98 ನ್ನು ಅಮಾನತ್ತುಗೊಳಿಸಲಾಗಿದೆ ಎಂದು ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ. ಎಫ್‌ಪಿಎಸ್.58ರ ಪಡಿತರದಾರರನ್ನು ಹತ್ತಿರದ ನ್ಯಾಯ ಬೆಲೆ ಅಂಗಡಿಗೆ ವರ್ಗಾಯಿಸಿ ಪಡಿತರ ಆಹಾರ ಧಾನ್ಯ ವಿತರಣಕ್ಕೆ ಕ್ರಮ ವಹಿಸಬೇಕೆಂದು ಅಫಜಲಪೂರ ತಹಸೀಲ್ದಾರ ಅವರಿಗೆ ಆದೇಶದಲ್ಲಿ ತಿಳಿಸಲಾಗಿದೆ.

ಗೆಜೆಟಿಯರ್
ಪ್ರತಿ ಮಂಗಳವಾರ
ಇದು ಅನುಕ್ಷಣದ ಆ್ಯಪ್

{ ವಿಶ್ವೇಶ್ವರ ಹೆಗಡೆ ಕಾಗೇರಿ } ಸಂಸದ

ಎಲ್ಲಾ ಸಮಾಜಕ್ಕೂ ಮೇಲ್ಪಂಕ್ತಿ ಸಂಘಟನೆ ಹವ್ಯಕ ಸಮಾಜ. ಸಮಾಜವನ್ನು ಸಂಘಟಿಸುವ ಜತೆಗೆ ಸನಾತನ ಹಿಂದೂ ಧರ್ಮದ ರಕ್ಷಣೆಯಲ್ಲೂ ಮುಂಚೂಣಿಯಲ್ಲಿದೆ. ಸಮಸ್ಯೆ, ಸವಾಲುಗಳು ಸದಾಕಾಲದಲ್ಲೂ ಇರುತ್ತದೆ. ಸಮಸ್ಯೆಗಳನ್ನು ಹೋಗಲಾಡಿಸಿ ಜೀವನದ ಸಾರ್ಥಕತೆಗೆ ಬೇಕಾದ ಪ್ರಯತ್ನ ಸಮ್ಮೇಳನಗಳ ಮೂಲಕ ಸಂಕಲ್ಪ ಮಾಡಬೇಕಿದೆ.

ಅಖಿಲ ಭಾರತ ವಿದ್ಯಾರ್ಥಿ ಪರಿಷತ್‌ನ ಉತ್ತರ ಪ್ರಾಂತದ 44ನೇ ರಾಜ್ಯ ಸಮ್ಮೇಳನ

ಶಿಸ್ತು ಮುಂದಿನ ಬದುಕಿಗೆ ಪ್ರೇರಣೆ: ಸಂಸದ

ವಿಶ್ವವಾಣಿ ಸುದ್ದಿಮನೆ

ಕಲಬುರಗಿ: ಕಣ್ಣುಗಳು ಚಿಕ್ಕದಿದ್ದರು, ಕನಸುಗಳು ದೊಡ್ಡದಾಗಿರಬೇಕು. ಗುರಿಯೆಡೆಗಿನ ನೇರ ದೃಷ್ಟಿ, ನಿಮ್ಮಲ್ಲಿನ ಕೌಶಲ, ಹೃದಯ ಶ್ರೀಮಂತಿಕೆ ನಿಮ್ಮನ್ನು ಮಹಾನ್ ವ್ಯಕ್ತಿಯನ್ನಾಗಿ ಮಾಡುತ್ತದೆ. ಸಂಸ್ಕಾರಯುತ ಶಿಕ್ಷಣ ಮತ್ತು ಜೀವನದಲ್ಲಿ ನಾವು ಅಳವಡಿಸಿಕೊಳ್ಳುವ ಶಿಸ್ತು ನಮ್ಮ ಮುಂದಿನ ಬದುಕಿಗೆ ಪ್ರೇರಣೆಯಾಗುತ್ತದೆ ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್.ಮಂಜುನಾಥ ಅಭಿಮತ ಪಟ್ಟರು.

ನಗರದ ಪಿಡಿಎ ಕಾಲೇಜಿನ ಸ್ಯಾಕ್ ಸಭಾಂಗಣದಲ್ಲಿ ಶುಕ್ರವಾರ ಅಖಿಲ ಭಾರತ ವಿದ್ಯಾರ್ಥಿ ಪರಿಷತ್‌ನ ಉತ್ತರ ಪ್ರಾಂತದ 44ನೇ ರಾಜ್ಯ ಸಮ್ಮೇಳನದ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಜತೆಗೆ ಶಿಸ್ತು ಇದ್ದಾಗ ಮಾತ್ರ ಭಾರತಕ್ಕೆ ಭವ್ಯ ಬುನಾದಿ ಸಿಗಲಿದೆ. ಶಿಕ್ಷಣ ಮತ್ತು ಸಂಸ್ಕಾರದಿಂದ ಪರಿಪೂರ್ಣ ವಿದ್ಯಾರ್ಥಿ ಹೊರಬರಲು ಸಾಧ್ಯವಿದೆ. ಆದರೆ, ನಮಗೆ ಸ್ವಾತಂತ್ರ್ಯ ಬಂದಾಗ ಶೇ.20ರಷ್ಟು ಸಾಕ್ಷರತೆ ಪ್ರಮಾಣ ಇದ್ದರೆ, ಶೇ.80ರಷ್ಟು ಸಂಸ್ಕಾರ ಕಂಡು ಬರುತ್ತಿತ್ತು. ಆದರೀಗ ಶೇ.80ರಷ್ಟು ಸಾಕ್ಷರತೆಯತ್ತ ದಾಪುಗಾಲಿಡುತ್ತಿದ್ದರು, ಕೇವಲ ಶೇ.20ರಷ್ಟು ಮಾತ್ರ ಸಂಸ್ಕಾರ ಉಳಿದಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಮಕ್ಕಳಿಗೆ ಸಂಸ್ಕಾರ ಹೇಳಿಕೊಡದಿದ್ದರೆ ಆಕರ್ಷಣೆಯ ಬದುಕಿಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ಆಕರ್ಷಣೆಯ ಬದುಕು ಅಲ್ಪ ಕಾಲದ್ದು, ಸಂಸ್ಕಾರಯುವ ಆದರ್ಶದ ಬದುಕು ಶಾಶ್ವತ. ಇಂದಿನ ದಿನಗಳಲ್ಲಿ ಯಾರ ಜತೆ ಹೇಗೆ ಮಾತನಾಡಬೇಕು ಎಂಬುದು ವಿಷಯಾಧಾರಿತ ಪಠ್ಯವಾದರೂ ಅಚ್ಚರಿಯಿಲ್ಲ ಎಂದು ಹೇಳಿದರು.



ಉತ್ತರ ಪ್ರಾಂತದ 44ನೇ ರಾಜ್ಯ ಸಮ್ಮೇಳನವನ್ನು ಸಂಸದ ಡಾ.ಸಿ.ಎನ್.ಮಂಜುನಾಥ ಉದ್ಘಾಟಿಸಿದರು.

> ವಿದ್ಯಾರ್ಥಿಗಳ ಶೈಕ್ಷಣಿಕ ಸಮಸ್ಯೆಗಳ ಧ್ವನಿಯಾಗಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ನಿರಂತರವಾಗಿ ಕೆಲಸ ಮಾಡುತ್ತಿದೆ.ವ್ಯಕ್ತಿ ನಿರ್ಮಾಣದ ಜೊತೆಗೆ ರಾಷ್ಟ್ರ ನಿರ್ಮಾಣದ ಕೆಲಸದಲ್ಲಿ ಸಂಘಟನೆ ತೊಡಗಿದೆ.ವಿವಿಧ ಸವಾಲುಗಳನ್ನು ಎದುರಿಸುವ ಮೂಲಕ ಸಮಾಜದಲ್ಲಿ ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡುತ್ತಾ ಕಳೆದ 75 ವರ್ಷಗಳಿಂದ ಎಬಿವಿಪಿ ಕೆಲಸ ಮಾಡುತ್ತಿದ್ದು,ಶೀಲವಂತರಾಗಿ ಬೆಳೆಯುವ ವೇದಿಕೆಯನ್ನು ಎಬಿವಿಪಿ ಬೆಳೆಸುತ್ತಿದೆ.
> -ಆನಂದ ಹೊಸೂರು, ರಾಜ್ಯಾಧ್ಯಕ್ಷ ಎಬಿವಿಪಿ ಕರ್ನಾಟಕ ಉತ್ತರ ಪ್ರಾಂತದ.

> ಎಬಿವಿಪಿ ಕಾರ್ಯಕರ್ತರ ಹೋರಾಟಕ್ಕೆ ಹಲವು ಸರಕಾರಗಳು ಮಣಿದಿವೆ. ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯತೆಯ ಜಾಗೃತಿ, ಹಕ್ಕುಗಳ ದಮನದ ವೇಳೆ ಮುಂದೆ ನಿಲ್ಲುವುದು ನಮ್ಮ ಸಂಘಟನೆಯಾಗಿದೆ. ಎಬಿವಿಪಿ ಕಾರ್ಯಕರ್ತರು ರಾಜಕಾರಣಿಯಾಗಿದ್ದು ಮಾತ್ರ ಕಾಣುತ್ತಾರೆ. ಆದರೆ, ಎಲ್ಲ ಕ್ಷೇತ್ರಗಳಲ್ಲೂ ಕೆಲಸ ಮಾಡುತ್ತ ಭಾರತ ಮಾತೆಯ ಸೇವೆ ತಮ್ಮದೇ ರೀತಿಯಲ್ಲಿ ಮಾಡುವ ಅಸಂಖ್ಯ ಕಾರ್ಯಕರ್ತರಿದ್ದಾರೆ.
> -ಸಚಿನ್ ಕುಳಗೇರಿ, ರಾಜ್ಯ ಕಾರ್ಯದರ್ಶಿ, ಎಬಿವಿಪಿ ಉತ್ತರ ಪ್ರಾಂತ

ಮಾಜಿ ಪ್ರಧಾನಿ ಡಾ. ಸಿಂಗ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಕೆ

ಸಮ್ಮೇಳನ ಉದ್ಘಾಟನೆಗೂ ಮುನ್ನ ಮಾಜಿ ಪ್ರಧಾನ ಮಂತ್ರಿ ಡಾ.ಮನಮೋಹನ್ ಸಿಂಗ್ ಅವರ ಭಾವಚಿತ್ರಕ್ಕೆ ಗೌರವ ನಮನ ಸಲ್ಲಿಸಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಡಾ.ಸಿ.ಎನ್. ಮಂಜುನಾಥ ಮಾತನಾಡಿ, ಮಾಜಿ ಪ್ರಧಾನ ಮಂತ್ರಿ ಡಾ.ಮನಮೋಹನ್ ಸಿಂಗ್ ಅವರ ನಿಧನ ದೇಶಕ್ಕೆ ತುಂಬಲಾರದ ನಷ್ಟವಾಗಿದೆ. ವಿದೇಶಾಂಗ ಸಚಿವರಾಗಿ, ಆರ್ಥಿಕ ಸಲಹೆಗಾರರಾಗಿ, ಹಣಕಾಸು ಮಂತ್ರಿಯಾಗಿ ಮತ್ತು ದೇಶದ ಪ್ರಧಾನಿಯಾಗಿ ದಿ.ಮನಮೋಹನ್ ಸಿಂಗ್ ಅವರು ದೇಶಕ್ಕಾಗಿ ನೀಡಿದ ಕೊಡುಗೆ ಅಪಾರವಾಗಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಯಾವಾಗಲೂ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಆದರ್ಶವಾಗಿದ್ದಾರೆ ಎಂದು ಹೇಳಿದರು. ಬಳಿಕ ಒಂದು ನಿಮಿಷದ ಮೌನಾಚರಣೆ ನಡೆಸಲಾಯಿತು.

ಎಬಿವಿಪಿ ರಾಷ್ಟ್ರೀಯ ಕಾರ್ಯದರ್ಶಿ ಶ್ರವಣಕುಮಾರ ಮಾತನಾಡಿ, ನಮ್ಮ ಸಂವಿಧಾನ-ನಮ್ಮ ಸ್ವಾಭಿಮಾನ ಎಂಬುದು ಪರಿಷತ್ತಿನ ಪ್ರತಿಯೊಬ್ಬ ಕಾರ್ಯಕರ್ತರ ನಿಲುವಾಗಿದೆ. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ನಮ್ಮೆಲ್ಲರ ಉಸಿರಾಗಿದ್ದಾರೆ. ಪರಿನಿರ್ವಾಣ ದಿನವನ್ನು ಎಬಿವಿಪಿ ಕಾರ್ಯಕರ್ತರು ಸಾಮಾಜಿಕ ಸಮರಸ ದಿನ ಎಂದು ಆಚರಣೆ ಮಾಡಿಕೊಂಡು ಬರುತ್ತಿದ್ದಾರೆ ಎಂದು ಹೇಳಿದರು.

1948ರಲ್ಲಿ ಕೇವಲ 5 ಜನರಿಂದ ಆರಂಭವಾದ ಸಂಘಟನೆ ಇಂದು 55 ಲಕ್ಷ ಕಾರ್ಯಕರ್ತರನ್ನು ಒಳಗೊಂಡಿದೆ. ರಾಷ್ಟ್ರೀಯತೆಯ ವಿಚಾರ ಬಂದಾಗ ಎಬಿವಿಪಿ ಕಾರ್ಯಕರ್ತರು ಸದಾ ಮುಂದಿರುತ್ತಾರೆ. 1990ರಲ್ಲಿ ಶ್ರೀನಗರದಲ್ಲಿ ರಾಷ್ಟ್ರೀಯ ಧ್ವಜ ಹಾರಿಸಲು ಬಿಟ್ಟಿರಲಿಲ್ಲ. ಆದರೆ, 10 ಸಾವಿರ ಕಾರ್ಯಕರ್ತರು ಜೀವ ಭಯ ತೊರೆದು ಧ್ವಜರೋಹಣ ಮಾಡಿದ್ದು ಇಂದು ಇತಿಹಾಸವಾಗಿದೆ. ಅಂದು ಕಾರ್ಯಕರ್ತರು ಮಾಡಿದರು, ಇಂದು ಎಬಿವಿಪಿಯ ಅಲುಮ್ನಿಗಳು 370 ತೆಗೆಯುವ ಮೂಲಕ ತಮ್ಮ ಕೆಲಸ ಮಾಡಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ನಾಡೋಜ ಮುನಿವೆಂಕಟಪ್ಪ, ಸ್ವಾಗತ ಸಮಿತಿಯ ಅಧ್ಯಕ್ಷ ಬಸವರಾಜ ದೇಶಮುಖ, ಶಾಸಕ ಬಸವರಾಜ ಮತ್ತಿಮಡು, ಜಿಲ್ಲಾಧ್ಯಕ್ಷ ಶಿವರಾಜ್ ಪಾಟೀಲ್ ರದ್ದೇವಾಡಗಿ, ಎಬಿವಿಪಿ ರಾಜ್ಯ ಸಹ ಕಾರ್ಯದರ್ಶಿ ಶಿವಾನಿ ಶೆಟ್ಟಿ, ರಾಜ್ಯ ಕಾರ್ಯಕಾರಣಿ ಸದಸ್ಯೆ ಸುಜ್ಞೇತಾ ಕುಲಕರ್ಣಿ, ಕೆಕೆಸಿಸಿಐ ಅಧ್ಯಕ್ಷ ಶಶಿಕಾಂತ್ ಪಾಟೀಲ್ ಇದ್ದರು. ಸಮ್ಮೇಳನದ ಸ್ವಾಗತ ಸಮಿತಿಯ ಸಂಯೋಜಕ ಡಾ.ಅಲ್ಲಂಪ್ರಭು ಗುಡ್ಡಾ ಸ್ವಾಗತಿಸಿದರು. ಹಣಮಂತ ಬಗಲಿ ಸೇರಿ ಪರಿಷತ್ತಿನ ಹಲವು ಮುಖಂಡರು ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕೆಕೆಆರ್‌ಬಿಬಿ ಅಧ್ಯಕ್ಷ , ಶಾಸಕ ಡಾ.ಅಜಯ ಧರ್ಮಸಿಂಗ್ ಕರೆ

ಮಹಿಳೆಯರು ಆರ್ಥಿಕವಾಗಿ ಸಬಲರಾಗಿ

ಜೇವರ್ಗಿ: ವಿವಿಧ ಕ್ಷೇತ್ರಗಳಲ್ಲಿ ಅನನ್ಯ ಸಾಧನೆ ಮಾಡುತ್ತಿರುವ ಮಹಿಳೆ ಸಬಲೆಯೇ ಹೊರತು ಅಬಲೆಯಲ್ಲ. ಮಹಿಳೆಯರು ಯಾವುದೇ ಕಾರಣಕ್ಕೂ ಅಸ್ತಿತ್ವ ಕಳೆದುಕೊಳ್ಳದೇ ಸ್ವಾಭಿಮಾನದಿಂದ ಬದುಕಬೇಕು ಎಂದು ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ ಧರ್ಮಸಿಂಗ್ ಹೇಳಿದರು.

> ಮಹಿಳೆಯರ ಮೇಲೆ ಸಮಾಜದಲ್ಲಿ ನಡೆಯುವ ದೌರ್ಜನ್ಯದ ಬಗ್ಗೆ ಅರಿವು ಮೂಡಿಸಿ ಧೈರ್ಯ ತುಂಬಿ ಸ್ವಾವಲಂಬಿಗಳಾಗಿಸಬೇಕು. ವೇದಗಳ ಕಾಲದಲ್ಲೂ ಮಹಿಳೆಯರಿಗೆ ಸಮಾನ ಅವಕಾಶಗಳಿದ್ದವು. ಮಹಿಳೆಯರನ್ನು ಕುಟುಂಬಕ್ಕೆ ಸೀಮಿತಗೊಳಿಸದೆ? ಎಲ್ಲಾ ಕ್ಷೇತ್ರದಲ್ಲೂ ಭಾಗವಹಿಸುವಂತೆ ಅವಕಾಶ ಕಲ್ಪಿಸಬೇಕು. ಬರಹಗಾರರ ವೇದಿಕೆ ಮಾಡಿದ್ದು ಸಂತಸದ ವಿಷಯ.
> -ಡಾ.ಅಜಯ ಧರ್ಮಸಿಂಗ್, ಕೆಕೆಆರ್‌ಡಿಬಿ ಅಧ್ಯಕ್ಷ

ಪಟ್ಟಣದಲ್ಲಿ ಕರ್ನಾಟಕ ರಾಜ್ಯ ಬರಹಗಾರರ ಸಂಘ ಹೂವಿನಹಡಗಲಿ ಹಾಗೂ ಜೇವರ್ಗಿ ತಾಲೂಕು ಬರಹಗಾರರ ಸಂಘ ಹಾಗೂ ಅಡುಗೆಮನೆಯ ಸಾಧಕಿಯರಿಗೊಂದು ವೇದಿಕೆ ಉದ್ಘಾಟನೆ, ಕವಿಗೋಷ್ಠಿ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿ,

ಮಹಿಳೆಯು ನಾಲ್ಕು ಗೋಡೆಗಳ ಮಧ್ಯೆ ಕುಟುಂಬ ನಿರ್ವಹಣೆಗಷ್ಟೇ ಸೀಮಿತವೆಂಬ ಕಾಲ ಬದಲಾಗಿದೆ. ಮಹಿಳೆಯರು ಈಗ ಪುರುಷರಿಗೆ ಸರಿ ಸಮಾನ. ಮಹಿಳೆಯರು ಸ್ವಯಂ ಉದ್ಯೋಗದ ಮೂಲಕ ಬದುಕು ಕಟ್ಟಿಕೊಂಡು ಆರ್ಥಿಕವಾಗಿ ಸಬಲರಾಗಬೇಕು. ಉನ್ನತ ಸ್ಥಾನ ಅಲಂಕರಿಸಿ ಪುರುಷರಿಗೆ ಸಮನಾಗಿ ಬೆಳೆಯಬೇಕು. ಮಹಿಳಾ ಸಬಲೀಕರಣ ಎಂದರೆ ಮಹಿಳೆಯರ ಸುರಕ್ಷತೆಗೆ ಒತ್ತು ನೀಡುವುದಾಗಿದೆ ಎಂದು ಹೇಳಿದರು.

ಸೊನ್ನದ ಡಾ.ಶಿವಾನಂದ ಸ್ವಾಮೀಜಿ, ಯಡ್ರಾಮಿಯ ಸಿದ್ದಲಿಂಗ ಸ್ವಾಮೀಜಿ ಸಾನಿಧ್ಯವಹಿಸಿದರು. ಸಂಘಟನೆಯ ತಾಲೂಕು ಘಟಕದ ಅಧ್ಯಕ್ಷೆ ಜ್ಯೋತಿ ಸಾಲಿಮಠ ಅಧ್ಯಕ್ಷತೆ ವಹಿಸಿದರು. ಪ್ರಗತಿಪರ ಚಿಂತಕ ಭಗವಂತ್ರಾಯ ಬೆಣ್ಣೂರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಾಹಿತಿ ಸದಾನಂದ ಪಾಟೀಲ ಸ್ವಾಗತಿಸಿದರು. ಬಸವರಾಜ ಬಾಗೇವಾಡಿ ನಿರೂಪಿಸಿದರು.

ಪಟ್ಟಣದಲ್ಲಿ ಕರ್ನಾಟಕ ರಾಜ್ಯ ಬರಹಗಾರರ ಸಂಘ ಹೂವಿನಹಡಗಲಿ ಹಾಗೂ ಜೇವರ್ಗಿ ತಾಲೂಕು ಬರಹಗಾರರ ಸಂಘ ಹಾಗೂ ಅಡುಗೆಮನೆಯ ಸಾಧಕಿಯರಿಗೊಂದು ವೇದಿಕೆ ಉದ್ಘಾಟನೆ, ಕವಿಗೋಷ್ಠಿ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ ಧರ್ಮಸಿಂಗ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಚನ್ನಮಲ್ಲಯ್ಯ ಸ್ವಾಮಿ ಹಿರೇಮಠ, ಶೋಬಾ ಬಾಣಿ, ಕಲ್ಯಾಣಕುಮಾರ ಸಂಗಾವಿ, ಬಸವಕೇಂದ್ರದ ಅಧ್ಯಕ್ಷ ಶರಣಬಸವ ಕಲ್ಲಾ, ಎಸ್.ಕೆ.ಬಿರಾದಾರ, ವೀರೇಶ ಕಂದಗಲ್, ಡಾ.ಪಿ.ಎಂ.ಮಠ, ರಾಜಶೇಖರ ಗೌಡ ಪಾಟೀಲ ಜೈನಾಪೂರ, ಉಲ್ಲಾಸ ಗುರುಮಠ, ಸದಾನಂದ ಪಾಟೀಲ, ಅಂಬೋಜಿ, ಶ್ರೀ ಹರಿ ಕರಕಿಹಳ್ಳಿ, ಶರಣಗೌಡ ಪಾಟೀಲ ಜೈನಾಪೂರ, ಡಾ.ಧರ್ಮಣ್ಣ ಬಡಿಗೇರ, ಜ್ಯೋತಿ ಸಾಲಿಮಠ, ಮಲ್ಲಿಕಾರ್ಜುನ ಬಿಲ್ಲಾರ, ಸುಧಾ ಬೆಣ್ಣೂರ, ಭಗವಂತ್ರಾಯ ಬೆಣ್ಣೂರ, ಬಸವರಾಜ ಬಾಗೇವಾಡಿ, ಪ್ರಶಾಂತಗೌಡ ಮಾಲಿಪಾಟೀಲ, ಶಿವಾನಂದ ಘಂಟಿಮಠ, ಐ.ಸ್.ಹಿರೇಮಠ, ಡಾ.ಮಹಾಂತೇಶ ಹಿರೇಮಠ, ಚಂದ್ರಶೇಖರ ಪಾಟೀಲ ಗುಡೂರ, ಮಹಾಂತೇಶ ಪಾಟೀಲ ಯಾತನೂರ, ಅನೀಲ ಪವಾರ, ಪ್ರಮೋದ್ ದೊರೆ ಸೇರಿ ಅನೇಕರು ಇದ್ದರು.

ಮಿಮಿಕ್ರಿಯಲ್ಲಿ ರಾಷ್ಟ್ರಮಟ್ಟಕ್ಕೆ ದೀಪಿಕಾ ಆಯ್ಕೆ

ಕಲಬುರಗಿ: ಶರಣಬಸವೇಶ್ವರ ವಿಜ್ಞಾನ ಮಹಾ ವಿದ್ಯಾಲಯದ ವಿದ್ಯಾರ್ಥಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಪ್ರತಿನಿಧಿಯಾಗಿ ಅಂತರ್ ವಿಶ್ವವಿದ್ಯಾಲಯ ಯುವಜನೋತ್ಸವದಲ್ಲಿ ಮಿಮಿಕ್ರಿಯಲ್ಲಿ ತೃತೀಯ ಸ್ಥಾನ ಪಡೆದು ರಾಷ್ಟ್ರಮಟ್ಟದ ಯುವಜನೋತ್ಸವಕ್ಕೆ ಆಯ್ಕೆಯಾಗಿದ್ದಾರೆ.

ಇತ್ತೀಚಿಗೆ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ನಡೆದ ಅಂತರ್ ಮಹಾವಿದ್ಯಾಲಯ ದಲ್ಲಿ ಪ್ರಥಮ ಸ್ಥಾನ ಪಡೆದ ಶರಣಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಅಂತರ್ ವಿಶ್ವವಿದ್ಯಾಲಯ ಮಟ್ಟಕ್ಕೆ ಆಯ್ಕೆಯಾಗಿದ್ದರು. ಈ ಸ್ಪರ್ಧೆಗಳು ಬೆಂಗಳೂರಿನ ಕ್ರೈಸ್ಟ್ ಯೂನಿವರ್ಸಿಟಿ ಅಲ್ಲಿ ನಡೆದಿದೆ. ಈ ಸ್ಪರ್ಧೆಗಳಲ್ಲಿ ದೀಪಿಕಾ ತಮಶೆಟ್ಟಿ ಮಿಮಿಕ್ರಿಯಲ್ಲಿ ತೃತೀಯ ಸ್ಥಾನ ಪಡೆದು ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿಯ ಈ ಪ್ರತಿಭೆಗೆ ಸಂಸ್ಥೆಯ ಅಧ್ಯಕ್ಷ ಡಾ. ಶರಣಬಸವಪ್ಪ ಅಪ್ಪಾಜಿ, ಡಾ. ದಾಕ್ಷಾಯಣಿ ಅವ್ವಾಜಿ, ಕಾರ್ಯದರ್ಶಿ ಬಸವರಾಜ್ ದೇಶಮುಖ್ ಹಾಗೂ ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಡಾ. ದಯಾನಂದ ಅಗರ್ಸ ವಿದ್ಯಾರ್ಥಿನಿಗೆ ಅಭಿನಂದಿಸಿದ್ದಾರೆ.

ಶರಣಬಸವೇಶ್ವರ ವಿಜ್ಞಾನ ಮಹಾ ವಿದ್ಯಾಲಯದ ಪ್ರಾಚಾರ್ಯರಾದ ಡಾ. ಬಿ ರಾಮಕೃಷ್ಣ ರೆಡ್ಡಿ ಮತ್ತು ಗುಲ್ಬರ್ಗಾ ವಿಶ್ವವಿದ್ಯಾಲಯದ ವಿದ್ಯಾರ್ಥಿ ಕಲ್ಯಾಣ ಅಧಿಕಾರಿ ಪ್ರೊ.ಡಾ. ರಮೇಶ್ ಲಂಡನ್ಕರ್ ವಿದ್ಯಾರ್ಥಿನಿಗೆ ಶುಭಾಶಯ ಕೋರಿದ್ದಾರೆ. ವಿದ್ಯಾರ್ಥಿಗೆ ಕಾಲೇಜಿನ ಎಲ್ಲಾ ಪ್ರಾಧ್ಯಾಪಕರುಗಳು ಮತ್ತು ಸಿಬ್ಬಂದಿ ವರ್ಗ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

ಅಂತರ್ ವಿಶ್ವವಿದ್ಯಾಲಯ ಯುವಜನೋತ್ಸವದಲ್ಲಿ ಮಿಮಿಕ್ರಿಯಲ್ಲಿ ತೃತೀಯ ಸ್ಥಾನ ಪಡೆದ ದೀಪಿಕಾ ತಮಶೆಟ್ಟಿ ಅವರನ್ನು ಸಂಸ್ಥೆಯ ಅಧ್ಯಕ್ಷ ಡಾ. ಶರಣಬಸವಪ್ಪ ಅಪ್ಪಾಜಿ, ಡಾ. ದಾಕ್ಷಾಯಣಿ ಅವ್ವಾಜಿ, ಕಾರ್ಯದರ್ಶಿ ಬಸವರಾಜ್ ದೇಶಮುಖ್ ಹಾಗೂ ಗುಲ್ಬರ್ಗ ವಿವಿ ಕುಲಪತಿ ಡಾ. ದಯಾನಂದ ಅಗಸರ್ ವಿದ್ಯಾರ್ಥಿನಿಗೆ ಅಭಿನಂದಿಸಿದರು.

ಸಿಖ್ ಸಮುದಾಯದಿಂದ ಡಾ.ಸಿಂಗ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಕೆ

ಆರ್ಥಿಕತೆಯ ಪಿತಾಮಹ ಡಾ. ಸಿಂಗ್

ಶುಕ್ರವಾರ ನಗರದ ಸರ್ದಾರ್ ವಲ್ಲಭ ಭಾಯಿ ಪಟೇಲ್ ವೃತ್ತದ ಬಳಿ ಸಿಖ್ ಸಮುದಾಯದ ಬಂಧುಗಳು ಡಾ. ಮನಮೋಹನ ಸಿಂಗ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ವಿಶ್ವವಾಣಿ ಸುದ್ದಿಮನೆ ಕಲಬುರಗಿ:

ಜಾಗತಿಕ ಭಾರತದ ಶಿಲ್ಪಿ, ಉದಾರ ಆರ್ಥಿಕತೆಯ ಪಿತಾಮಹ, ಭಾರತದ ಸರ್ವಶ್ರೇಷ್ಠ ವಿತ್ತ ಸಚಿವ, ಭಾರತದ ಮಾಜಿ ಪ್ರಧಾನಿ ಡಾ. ಮನಮೋಹನ ಸಿಂಗ್ ಅವರ ನಿಧನಕ್ಕೆ ಕಲಬುರಗಿಯಲ್ಲಿ ಸಿಖ್ ಸಮುದಾಯದಿಂದ ಸಂತಾಪ ಸೂಚಿಸಿ, ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

> ದೂರದೃಷ್ಟಿಯ ನಾಯಕ ಮತ್ತು ನಮ್ಮ ರಾಷ್ಟ್ರದ ಪ್ರಗತಿಯಲ್ಲಿ ಮಾರ್ಗದರ್ಶಿ ಶಕ್ತಿಯಾಗಿದ್ದ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರನ್ನು ಕಳೆದುಕೊಂಡ ಭಾರತವು ಶೋಕಿಸುತ್ತದೆ. ಅವರ ನಮ್ರತೆ, ಬುದ್ಧಿವಂತಿಕೆ ಮತ್ತು ಸೇವೆಯ ಪರಂಪರೆ ನಮಗೆ ಶಾಶ್ವತವಾಗಿ ಸ್ಫೂರ್ತಿ ನೀಡುತ್ತದೆ. ಅವರ ಮಾರ್ಗದರ್ಶನದಲ್ಲಿ ನಾವೆಲ್ಲರೂ ನಡೆಯೋಣ.
> -ಡಾ.ಅಜಯ್ ಧರ್ಮಸಿಂಗ್, ಅಧ್ಯಕ್ಷ, ಕೆಕೆಆರ್‌ಡಿಬಿ

> ಹಣಕಾಸು ಸಚಿವರಾಗಿ, ರಿಸರ್ವ್ ಬ್ಯಾಂಕ್ ಗೌವನರ್ರ ಆಗಿ, ಸತತ 10 ವರ್ಷಗಳ ಕಾಲ ಪ್ರಧಾನ ಮಂತ್ರಿಯಾಗಿ ತಮ್ಮ ಜ್ಞಾನ ಮತ್ತು ಬದ್ಧತೆ ಮೂಲಕ ದೇಶಕ್ಕೆ ಸೇವೆ ಸಲ್ಲಿಸಿದ ವಿಶ್ವ ಕಂಡಂತಹ ಶ್ರೇಷ್ಠ ಆರ್ಥಿಕ ತಜ್ಞರಾದ ಡಾ. ಮನಮೋಹನ್ ಸಿಂಗ್ ಅವರು ಅಗಲಿದ ಸುದ್ದಿ ತಿಳಿದು ಅತೀವ ದುಃಖವಾಗಿದೆ. ದೇಶಕ್ಕೆ ಕೊಡುಗೆಯಾಗಿರುವ ಅವರ ಸಾಧನೆಗಳು ಎಂದಿಗೂ ಅಜರಾಮರ.
> - ಪ್ರಿಯಾಂಕ್ ಖರ್ಗೆ, ಜಿಲ್ಲಾ ಉಸ್ತುವಾರಿ ಸಚಿವ

> ದೇಶದ ಶ್ರೇಷ್ಠ ಆರ್ಥಿಕ ತಜ್ಞ, ಪ್ರಧಾನಿಯಾಗಿ ದೇಶದ ಪ್ರಗತಿಗೆ ಶ್ರಮಿಸಿದ ಭಾರತದ ಹೆಮ್ಮೆಯ ಪುತ್ರ ಡಾ.ಮನಮೋಹನ ಸಿಂಗ್ ಅವರ ನಿಧನ ದೇಶಕ್ಕೆ ಭರಿಸಲಾಗದ ನಷ್ಟ. ಅವರ ಅಗಲಿಕೆಯ ದುಖಃ ಭರಿಸುವ ಶಕ್ತಿ ಭಗವಂತ ಆತ್ಮೀಯರು, ಅಭಿಮಾನಿಗಳು, ಕುಟುಂಬಸ್ಥರಿಗೆ ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ.
> - ಬಸವರಾಜ್ ಮತ್ತಿಮಡು, ಶಾಸಕ

> ಅತ್ಯುತ್ತಮ ಆರ್ಥಿಕ ತಜ್ಞ, ಮಾಜಿ ಪ್ರಧಾನಿ ಡಾ.ಮನಮೋಹನ ಸಿಂಗ್ ಅವರ ನಿಧನ ಅತೀವ ನೋವು ಉಂಟುಮಾಡಿದೆ. ಭಾರತೀಯ ರಾಜಕೀಯ ರಂಗದಲ್ಲಿ ಅತ್ಯಂತ ಸದುವಿನಯ, ತೀಕ್ಷ್ಣ ಹಾಗೂ ಪ್ರಾಮಾಣಿಕತೆಗೆ ಹೆಸರುವಾಸಿಯಾಗಿದ್ದ ಮನಮೋಹನಸಿಂಗ್ ಅವರು ಉತ್ತಮ ಶೈಕ್ಷಣಿಕ ಚಿಂತಕರಾಗಿದ್ದರು. ದೇಶವನ್ನು ಆರ್ಥಿಕ ನೆಲೆಗಟ್ಟಿನಲ್ಲಿ ಸುಭದ್ರವಾಗಿ ಮುನ್ನಡೆಸಿದ್ದರು. ಮನಮೋಹನಸಿಂಗ್ ಅವರ ಅಗಲಿಕೆಯಿಂದ ರಾಷ್ಟ್ರಕ್ಕೆ ತುಂಬಲಾರದ ನಷ್ಟವಾಗಿದೆ.
> - ಡಾ.ಶರಣಪ್ರಕಾಶ್ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವ

ಶುಕ್ರವಾರ ನಗರದ ಸರ್ದಾರ್ ವಲ್ಲಭ ಭಾಯಿ ಪಟೇಲ್ ವೃತ್ತದ ಬಳಿ ಸಿಖ್ ಸಮುದಾಯದ ಬಂಧುಗಳು ಡಾ. ಮನಮೋಹನ ಸಿಂಗ್ ಅವರ ಭಾವಚಿತ್ರಕ್ಕೆ, ಪೂಜೆ, ಪುಷ್ಪ ನಮನ, ಗೌರವ ಸಮರ್ಪಣೆ ಮಾಡಿ ಅಗಲಿದ ಆತ್ಮಕ್ಕೆ ಶಾಂತಿ ಕೋರಿದರು. ಇದಲ್ಲದೇ, ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಕಾಂಗ್ರೆಸ್ ಮುಖಂಡರು ಸಹ ಮಾಜಿ ಪ್ರಧಾನಿ ಅವರ ಅಗಲಿಕೆಗೆ ಸಂತಾಪ ಸೂಚಿಸಿದರು.

ಇನ್ನೂ, ಡಾ. ಸಿಂಗ್ ಅವರ ನಿಧನ ಸುದ್ದಿ ತಿಳಿಯುತ್ತಿದಂತೆ ಜಿಲ್ಲೆಯ ಸಚಿವರು, ಶಾಸಕರು ಹಾಗೂ ಮುಖಂಡರು ಅವರೊಂದಿಗಿನ ಒಡನಾಟದ ಮೆಲುಕು ಹಾಕುವ ಮೂಲಕ ಮಾಜಿ ಪ್ರಧಾನಿ ಮಂತ್ರಿಗಳ ಅಗಲಿಕೆಗೆ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

65 ಲಕ್ಷ ನಗದು, 200 ಗ್ರಾಂ ಚಿನ್ನಾಭರಣ ಸಂಗ್ರಹ

ಕಲಬುರಗಿ: ಜಿಲ್ಲೆಯ ಅಫಜಲಪುರ ತಾಲೂಕಿನ ಘತ್ತರಗಾ ಭಾಗ್ಯವಂತಿ ದೇವಾಲಯದ ಹುಂಡಿ ತೆರೆದು ಭಕ್ತರು ಕಾಣಿಕೆ ರೂಪದಲ್ಲಿ ಸಲ್ಲಿಸಿದ್ದ ನಗದು ಸೇರಿದಂತೆ ಇತರೆ ಕಾಣಿಕೆಗಳ ಎಣಿಕೆ ಪ್ರಕ್ರಿಯೆ ಗುರುವಾರ ನಡೆಯಿತು. ಇತ್ತೀಚೆಗೆ ಭಾಗ್ಯವಂತಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಪ್ರಭಾರ ಅಧಿಕಾರ ಸ್ವೀಕರಿಸಿದ ಕೆಕೆಆರ್‌ಡಿಬಿ ಅಧೀನ ಕಾರ್ಯದರ್ಶಿ ಪ್ರಕಾಶ ಕುದರಿ ಸಮ್ಮುಖದಲ್ಲಿ ದೇವಾಲಯದ ಹುಂಡಿಗಳನ್ನು ತೆರೆಯಲಾಯಿತು. ಸಿಸಿಟಿವಿ ಕ್ಯಾಮೆರಾ ಕಣ್ಗಾವಲಿನಲ್ಲಿ ನಡೆದ ಎಣಿಕೆ ವೇಳೆ 65,05,814 ರು. ನಗದು ಹಾಗೂ ಅಂದಾಜು 150-200 ಗ್ರಾಂ ಚಿನ್ನಾಭರಣ, ಒಂದು ಕಿಲೋಗ್ರಾಂ ಬೆಳ್ಳಿ ಕಾಣಿಕೆಯಾಗಿ ಭಕ್ತರು ಸಲ್ಲಿಸಿದ್ದಾರೆ. ಜತೆಗೆ ಗಯಾನಾ ದೇಶದ 100 ಡಾಲರ್ ಮುಖಬೆಲೆಯ ಐದು ನೋಟುಗಳು ಪತ್ತೆಯಾಗಿವೆ ಎಂದು ಪ್ರಕಾಶ ಕುದರಿ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ಆಪ್ತರನ್ನು ರಕ್ಷಿಸುವ ಕೆಲಸ ಮಾಡುತ್ತಿದ್ದಾರೆ: ಆಂದೋಲಾ ಶ್ರೀ

ಸಚಿನ ಪಂಚಾಳ ಆತ್ಮಹತ್ಯೆಯಲ್ಲಿ ಸಚಿವರ ಹಸ್ತಕ್ಷೇಪ

ಕಲಬುರಗಿ: ಬೀದರ್ ಗುತ್ತಿಗೆದಾರ ಸಚಿನ್ ಪಂಚಾಳ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಅವರ ಆಪ್ತರ ಹಸ್ತಕ್ಷೇಪವಿರುವುದು ಬಯಲಾಗಿದೆ ಎಂದು ಆಂದೋಲಾದ ಶ್ರೀ ಸಿದ್ದಲಿಂಗ ಸ್ವಾಮೀಜಿ ಆರೋಪಿಸಿದರು.

> ಮಿಥ್ಯಾರೋಪ ಮಾಡುವುದು ಬಿಜೆಪಿಯವರ ಹಳೆಯ ಅಭ್ಯಾಸ. ಈ ಹಿಂದೆಯೂ ನನ್ನ ಮೇಲೆ ನಿರಾಧರ ಆರೋಪ ಮಾಡಿದ್ದರು. ಈಗಲೂ ಮಾಡುತ್ತಿದ್ದಾರೆ. ಮುಂದೆಯೂ ಮಾಡುತ್ತಿರುತ್ತಾರೆ. ಬಿಜೆಪಿಯವರು ಆ ಪ್ರಯತ್ನ ಮುಂದುವರೆಸುತ್ತಲೇ ಇರಲಿ. ಆದರೆ, ಆಧಾರ ರಹಿತ ಆರೋಪಗಳಿಂದ ನನ್ನನ್ನು ಕುಗ್ಗಿಸುವ ಬಿಜೆಪಿಯವರ ಪ್ರಯತ್ನ ಯಶಸ್ವಿಯಾಗುವುದಿಲ್ಲ.
> - ಪ್ರಿಯಾಂಕ್ ಖರ್ಗೆ, ಜಿಲ್ಲಾ ಉಸ್ತುವಾರಿ ಸಚಿವ

ನಗರದ ಪತ್ರಿಕಾಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಟೆಂಡರ್ ನೀಡುವ ವಿಚಾರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ರಾಜು ಕಪನೂರ್ ಒಂದು ಕೋಟಿ ರು. ನೀಡುವಂತೆ ಗುತ್ತಿಗೆದಾರನಿಗೆ ಬೆದರಿಕೆ ಹಾಕಿದ್ದಾರೆ. ಅವರ ಜತೆಗೆ ನಂದಕುಮಾರ್ ನಾಗಭುಜಂಗೆ ಮತ್ತಿತರರು ಸೇರಿ ಕೊಲೆ ಬೆದರಿಕೆಯೂ ಒಡ್ಡಿದ್ದಾರೆಂದು ಆತ್ಮಹತ್ಯೆಗೆ ಶರಣಾದ 26 ವರ್ಷದ ಯುವಕ ಸಚಿನ್ ಡೆತ್ ನೋಟ್ ನಲ್ಲಿ ಬರೆದಿದ್ದಾರೆ ಎಂದು ಹೇಳಿದರು. ಕಲಬುರಗಿ ಜಿಲ್ಲೆಯಲ್ಲಿ ಹಲವು ಅಪರಾಧಗಳು ನಡೆಯುತ್ತಿದ್ದು, ಈವರೆಗೆ ಯಾವುದಕ್ಕೂ ನ್ಯಾಯ ಸಿಕ್ಕಿಲ್ಲ. ಸಚಿವರ ಆಪ್ತರೆ ಹನಿಟ್ರ್ಯಾಪ್, ಮತ್ತಿತರ ಅಪರಾಧ ಕೃತ್ಯಗಳಲ್ಲಿ ತೊಡಗಿದ್ದಾರೆ. ಅವರನ್ನು ರಕ್ಷಿಸಲು ಸಚಿವರು ನಿಂತಿರುವುದು ಅಕ್ಷಮ್ಯ ಅಪರಾಧ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಶಾಸಕ ಬಸವರಾಜ್ ಮತ್ತಿಮಡು, ಬಿಜೆಪಿ ಮಹಾನಗರ ಅಧ್ಯಕ್ಷ ಚಂದು ಪಾಟೀಲ್, ಶಿವರಾಜ್ ಪಾಟೀಲ್ ರದ್ದೆವಾಡಗಿ, ಅಮರನಾಥ್ ಪಾಟೀಲ್, ಸಂಗಮೇಶ್ ಪಾಟೀಲ್ ಇದ್ದರು.

> ಕಲಬುರಗಿಯಲ್ಲಿ ನಾವು ಸರಕಾರದ ವಿರುದ್ಧ ಹೋರಾಟ ಇಳಿದರೆ ನಮ್ಮ ವಿರುದ್ಧ ಪ್ರಕರಣ ದಾಖಲಿಸಲಾಗುತ್ತಿದೆ. ಬೆದರಿಕೆ ಹಾಕಿ ಸುಪಾರಿ ಕೊಡಲಾಗುತ್ತದೆ. ಈ ರೀತಿಯ ಬೆದರಿಕೆಗಳಿಗೆ ನಾವು ಅಂಜುವುದಿಲ್ಲ. ಈ ಪ್ರಕರಣ ಸಿಬಿಐಗೆ ವಹಿಸಬೇಕು.
> -ಬಸವರಾಜ್ ಮತ್ತಿಮಡು, ಶಾಸಕ

ತನಿಖೆಯಿಂದ ಸತ್ಯಾಸತ್ಯತೆ ಹೊರಬರಲಿದೆ

ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆ ಪ್ರಕರಣದ ಹಿನ್ನೆಲೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಈ ಪ್ರಕರಣದಲ್ಲಿ ಹೆಸರಿಸಿರುವ ಆರೋಪಿಗಳ ಹೇಳಿಕೆಗಳು ಒಂದು ಬಗೆಯಲ್ಲಿವೆ, ಸಚಿನ್ ಬರೆದಿದ್ದೆನ್ನಲಾಗಿರುವ ಡೆತ್ ನೋಟ್ ನಲ್ಲಿ ಇನ್ನೊಂದು ಬಗೆಯ ವಿಷಯಗಳು ಕಂಡು ಬರುತ್ತವೆ. ಈಗಾಗಲೇ, ರೈಲ್ವೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಈ ಪ್ರಕರಣದ ಸತ್ಯಾಸತ್ಯತೆ ಹೊರತರುವಲ್ಲಿ ತನಿಖಾ ಸಂಸ್ಥೆಗಳು ಪರಿಣಾಮಕಾರಿಯಾಗಿ ತನಿಖೆ ಮಾಡಲಿದ್ದಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಬಿಜೆಪಿ ಮುಖಂಡರ ಹತ್ಯೆಗೆ ಸುಪಾರಿ

ಇನ್ನೂ, ಗುತ್ತಿಗೆದಾರ ಸಚಿನ್ ಪಂಚಾಳ ಆತ್ಮಹತ್ಯೆ ಡೆಟ್ ನೋಟ್ ನಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಬೆದರಿಕೆ ಹಾಕಿದ್ದಾನೆ ಎಂದು ಬರೆದಿದ್ದು, ಇದರ ಜತೆಗೆ ಜಿಲ್ಲೆಯ ಬಿಜೆಪಿ ಮುಖಂಡರ ಮುಗಿಸಲು ಸಹ ಪ್ಲಾನ್ ನಡೆಸಿದ್ದ ಎಂದು ಸಹ ಬರೆದಿಟ್ಟಿದ್ದಾನೆ. ಶಾಸಕ ಬಸವರಾಜ ಮತ್ತಿಮಡು, ಬಿಜೆಪಿ ಮುಖಂಡರಾದ ಚಂದು ಪಾಟೀಲ್, ಮಣಿಕಂಠ ರಾಠೋಡ್ ಮತ್ತು ನನ್ನನ್ನು ಹತ್ಯೆ ಮಾಡಿಸಲು ಸೋಲಾಪುರ್ ಮೂಲದ ವ್ಯಕ್ತಿಗಳಿಗೆ ಸುಪಾರಿ ನೀಡಿದ್ದಾರೆ ಎಂದು ಡೆತ್ ನೋಟ್ ನಲ್ಲಿ ಉಲ್ಲೇಖಿಸಿ ಬರೆಯಲಾಗಿದೆ ಎಂದು ಸಿದ್ದಲಿಂಗ ಸ್ವಾಮೀಜಿ ಹೇಳಿದರು.

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ಸನ್ಮಾನ್ಯ ಪ್ರಿಯಾಂಕ್ ಖರ್ಗೆಯವರೇ, ಆತ್ಮಹತ್ಯೆ ಮಾಡಿಕೊಂಡ ಗುತ್ತಿಗೆದಾರ ಸಚಿನ, ಟೆಂಡರ್ ಕೆಲಸಕ್ಕಾಗಿ ಬೆಂಗಳೂರಿನಲ್ಲಿ ನಿಮ್ಮ ಆಪ್ತ ರಾಜು ಕಪನೂರ್ ಜತೆ ನಿಮ್ಮನ್ನು ಭೇಟಿಯಾಗಿದ್ದೇನೆ ಎಂದು ಡೆತ್‌ನೋಟ್‌ನಲ್ಲಿ ಬರೆದಿದ್ದಾರೆ. ಗುತ್ತಿಗೆದಾರ ಸಚಿನ್ ಆತ್ಮಹತ್ಯೆಗೆ ನೀವೇ ನೇರ ಹೊಣೆ. ಮೊದಲು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ, ತನಿಖೆ ಎದುರಿಸಿ.

ಮಂಜು, ಮಂಡ್ಯ

ಈಶ್ವರಪ್ಪ ರಾಜೀನಾಮೆ ಕೊಡಿಸಿದ್ರಲ್ಲ, ಹಾಗೇ ಇವರದು. ರಾಜೀನಾಮೆ ಪಡೆಯಿರಿ, ನೋಡುವ ನಿಮ್ಮ ತಾಕತ್ತು.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- ಸ್ಥಳ : ಚಿತ್ರದುರ್ಗ

ಸಮಸ್ಯೆಯೇನು..?

- ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕು ಸಾಣಿಕೆರೆ ಗ್ರಾಮದ ಸೇವಾ ರಸ್ತೆಗೆ ಬಾರದ ಬಸ್‌ಗಳ ಬಗ್ಗೆ.
- **ಪರಿಹಾರ:** ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕು ಸಾಣಿಕೆರೆ ಗ್ರಾಮದ ಸೇವಾ ರಸ್ತೆಯಲ್ಲಿ ಕಾರ್ಯಾಚರಣೆಯಾಗುವ ಎಲ್ಲಾ ವೇಗದೂತ ಸಾರಿಗೆ ಬಸ್‌ಗಳು ಸದರಿ ಮಾರ್ಗದಲ್ಲಿ ಕರ್ತವ್ಯ ನಿರ್ವಹಿಸುವ ಚಾಲನಾ ಸಿಬ್ಬಂದಿಗಳಿಗೆ ಸಾರ್ವಜನಿಕರಿಗೆ , ವಿದ್ಯಾರ್ಥಿಗಳಿಗೆ ನಿಲುಗಡೆ ಮಾಡಲು ಸೂಚಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಮನಮೋಹನ್ ಸಿಂಗ್ ನಿಧನಕ್ಕೆ ಸಂತಾಪ

ಗದಗ: ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರೊಬ್ಬ ಶ್ರೇಷ್ಠ ಹಾಗೂ ಅನುಭವಿ ಆರ್ಥಿಕ ತಜ್ಞರಾಗಿದ್ದರು ಎಂದು ಗದುಗಿನ ತೋಂಟದಾರ್ಯ ಮಠದ ಸಿದ್ದರಾಮ ಸ್ವಾಮೀಜಿ ಹೇಳಿದ್ದಾರೆ. ಅರ್ಥ ಶಾಸ್ತ್ರ ಪ್ರಾಧ್ಯಾಪಕರಾಗಿ, ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಆಗಿ, ಯೋಜನಾ ಆಯೋಗದ ಉಪಾಧ್ಯಕ್ಷರಾಗಿ, ಹಣಕಾಸು ಸಚಿವರಾಗಿ ಇದೆಲ್ಲಕ್ಕೂ ಮಿಗಿಲಾಗಿ ದೇಶದ ನೆಚ್ಚಿನ ಪ್ರಧಾನಿಯಾಗಿ ಅವರು ಸಲ್ಲಿಸಿದ ಸೇವೆ ಅಪೂರ್ವ ಹಾಗೂ ಅನುಪಮ. ದೇಶದ ಅರ್ಥ ವ್ಯವಸ್ಥೆಗೆ ಭದ್ರಬುನಾದಿ ಒದಗಿಸಿದ ಶ್ರೇಯಸ್ಸು ಡಾ. ಮನಮೋಹನ್ ಸಿಂಗ್ ಅವರಿಗೆ ಸಲ್ಲುತ್ತದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನವಭಾರತದ ಚಾಣಕ್ಯ ಅಸ್ತಂಗತ: ಸ್ಪೀಕರ್

ಮಂಗಳೂರು: ನವಭಾರತಕ್ಕೆ ಅರ್ಥಶಾಸ್ತ್ರ ಬರೆದ ಶ್ರೇಷ್ಠ ಆರ್ಥಿಕತಜ್ಞ ಮತ್ತು ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರ ಅಗಲಿಕೆ ಭಾರತದ ಮಾತ್ರವಲ್ಲ, ಜಗತ್ತಿನ ಆರ್ಥಿಕತೆಗೂ ತುಂಬಲಾರದ ನಷ್ಟವಾಗಿದೆ ಎಂದು ಯು. ಟಿ. ಖಾದರ್ ಸಂತಾಪ ವ್ಯಕ್ತಪಡಿಸಿ ದರು. 1991ರ ಆರ್ಥಿಕ ಬಿಕ್ಕಟ್ಟಿನ ತೀವ್ರ ಸಂಕಷ್ಟದಲ್ಲಿ ಭಾರತ ಸ್ಥಗಿತಗೊಂಡಿದ್ದ ಸಮಯದಲ್ಲಿ, ಅಧಿಕಾರ ಚುಕ್ಕಾಣಿ ಹಿಡಿದ ಡಾ. ಮನಮೋಹನ್ ಸಿಂಗ್ ಅವರ ದೂರದರ್ಶಿತ್ವ ದೇಶವನ್ನು ಆರ್ಥಿಕ ಪುನಶ್ಚೇತನದ ಮಾರ್ಗದಲ್ಲಿ ನಡೆಸಿತು. ಅವರು ವಿದೇಶದಲ್ಲಿ ಅಡವಿಟ್ಟಿದ್ದ ಚಿನ್ನವನ್ನು ಬಿಡುಗಡೆ ಮಾಡಿದ್ದು ಮಾತ್ರವಲ್ಲದೆ, ಅವರ ನೇತೃತ್ವದಲ್ಲಿ ಆರಂಭವಾದ ಆರ್ಥಿಕ ಉದಾರೀಕರಣದ ನೀತಿಗಳು, ಭಾರತದ ಪಾಲಿಗೆ ಆರ್ಥಿಕ ಸ್ವಾವಲಂಬನೆ, ಸಮೃದ್ಧಿಯ ಹೊಸ ಅಧ್ಯಾಯವನ್ನೇ ತೆರೆಯಿತು ಎಂದರು.

ವಿರಾಮ
ಪ್ರತಿ ಭಾನುವಾರ

{ಎಚ್.ಡಿ.ಕುಮಾರಸ್ವಾಮಿ} ಕೇಂದ್ರ ಸಚಿವ

ಆಸ್ಪತ್ರೆಗಳಲ್ಲಿ ವೈದ್ಯರು, ನರ್ಸ್‌ಗಳಿಲ್ಲದೆ, ಗುಣಮಟ್ಟದ ಚಿಕಿತ್ಸೆಯಿಲ್ಲದೆ ಬಾಣಂತಿಯರು, ಮಕ್ಕಳು ಸಾಯುತ್ತಿದ್ದಾರೆ. ಲಕ್ಷಾಂತರ ಹುದ್ದೆಗಳು ಖಾಲಿ ಬಿದ್ದಿರುವಾಗ ಆಡಳಿತ ಹೇಗೆ ಉತ್ತಮವಾಗಿರುತ್ತದೆ?. ಸರಕಾರ ಪ್ರತಿದಿನವೂ ಗ್ಯಾರಂಟಿ ಎನ್ನುತ್ತಿದೆ. ಜನರಿಗೆ ಇನ್ನೂ 2 ಸಾವಿರ ಕೊಡಲಿ, ಆದರೆ, ಮಿತಿ ಮೀರಿ ತೆರಿಗೆ ಹೇರುತ್ತಿದ್ದಾರೆ.



ಬೆಳಗಾವಿಯಲ್ಲಿ ಸಿಎಂ, ಡಿಸಿಎಂ ಸೇರಿದಂತೆ ಕಾಂಗ್ರೆಸ್ ನಾಯಕರಿಂದ ಮಾಜಿ ಪಿಎಂ ಡಾ.ಮನಮೋಹನ್ ಸಿಂಗ್‌ಗೆ ಶ್ರದ್ಧಾಂಜಲಿ

ಅಭಿವೃದ್ಧಿಯ ಬೀಜ ಬಿತ್ತಿದ ಡಾ. ಸಿಂಗ್

ಬೆಳಗಾವಿ: ಬಡ ಕುಟುಂಬದಲ್ಲಿ ಜನಿಸಿದ ವ್ಯಕ್ತಿ ದೇಶದ ಅತ್ಯುನ್ನತ ಹುದ್ದೆ ಅಲಂಕರಿಸಿದ್ದು ಮಾತ್ರವಲ್ಲದೆ ವಿಶ್ವಶ್ರೇಷ್ಠ ಆರ್ಥಿಕ ತಜ್ಞರಾಗಿ ಡಾ. ಮನಮೋಹನ್ ಸಿಂಗ್ ಗುರುತಿಸಿಕೊಂಡ ರೀತಿ ನಿಜಕ್ಕೂ ಆಶ್ಚರ್ಯ ತರಿಸುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶುಕ್ರವಾರ ಬೆಳಗಾವಿಯಲ್ಲಿ ಸಿಪಿಎಡ್ ಮೈದಾನದಲ್ಲಿ ಏರ್ಪಡಿಸಿದ್ದ ಸಂತಾಪ ಸಭೆ ಉದ್ದೇಶಿಸಿ ಮಾತನಾಡಿ, ಜಗತ್ತಿನಲ್ಲಿ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರಿಗಿಂತ ದೊಡ್ಡ ಆರ್ಥಿಕ ತಜ್ಞರು ಇರಬಹುದು. ಆದರೆ, ಬಹಳ ಮೃದು ಸ್ವಭಾವದ, ಮಿತಭಾಷಿಯಾಗಿ ಮಧ್ಯಮ ಮತ್ತು ಬಡ ಜನರ ದೃಷ್ಟಿಯಿಂದ ದೇಶದ ಹಿತಕ್ಕಾಗಿ ಆರ್ಥಿಕತೆಯನ್ನು ರೂಪಿಸಿದ ವಿಭಿನ್ನ ವ್ಯಕ್ತಿ. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ, ಸಿಎಂ ಇದ್ದ ಸಂದರ್ಭದಲ್ಲಿ ಅನೇಕ ಬಾರಿ ಅವರನ್ನು ಭೇಟಿಯಾಗಿದ್ದೆ. ಸಂಯಮದಿಂದ ನಮ್ಮ ಮಾತನ್ನು ಕೇಳಿಸಿಕೊಂಡು ಬಳಿಕ ಪ್ರಾಮಾಣಿಕ ಅಭಿಪ್ರಾಯ ನೀಡುತ್ತಿದ್ದರು ಎಂದು ಪ್ರಶಂಸಿಸಿದರು.

ಎಲ್ಲ ಹುದ್ದೆಗಳಿಗೂ ನ್ಯಾಯ: ಸಿಂಗ್ ಅವರು ಅಲಂಕರಿಸಿದ ಎಲ್ಲಾ ಹುದ್ದೆಗಳಿಗೂ ನ್ಯಾಯ ಒದಗಿಸಿದರು. ಆರ್ ಬಿ ಐ ಗವರ್ನರ್ ಆಗಿ, ಆರ್ಥಿಕ ಸಚಿವರಾಗಿ, ಹತ್ತು ವರ್ಷಗಳ ಕಾಲ ದೇಶದ ಪ್ರಧಾನಿಯಾಗಿ ಎಲ್ಲಾ ಹುದ್ದೆಗಳಿಗೂ ಪ್ರಾಮಾಣಿಕ ನ್ಯಾಯ ಒದಗಿಸಿದರು.ಸೋನಿಯಾಗಾಂಧಿ ಅವರು ಪ್ರಧಾನಿ ಹುದ್ದೆಯನ್ನು ತ್ಯಾಗ ಮಾಡಿ ಆ ಹುದ್ದೆಗೆ ಮನಮೋಹನ್ ಸಿಂಗ್ ಅವರನ್ನು ಆರಿಸಿದರು. ಹತ್ತು ವರ್ಷಗಳ ಕಾಲ ದೇಶವನ್ನು ಅತ್ಯಂತ ಸದೃಢವಾಗಿ ಮುನ್ನಡೆಸಿದ ಸಮರ್ಥ ನಾಯಕ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಉದಾರೀಕರಣದ ರೂವಾರಿ: ಭಾರತ ಆರ್ಥಿಕ ಸಂಕಷ್ಟದಲ್ಲಿದ್ದಾಗ ಉದಾರೀಕರಣ ಜಾರಿಮಾಡಿ ದೇಶವನ್ನು ಆರ್ಥಿಕವಾಗಿ ಮೇಲೆತ್ತಿದರು. ಮನಮೋಹನ್ ಸಿಂಗ್ ಅವರಿಗಿಂತ ಮೊದಲು ದೇಶದ ಆರ್ಥಿಕತೆಯನ್ನು ವಿಶ್ವ ಆರ್ಥಿಕತೆ ಜೊತೆಗೆ ಮುಕ್ತ ಮಾಡಿರಲಿಲ್ಲ. ಅವರು ಮುಕ್ತಗೊಳಿಸುವ ಮೂಲಕ ದೇಶದ ಆರ್ಥಿಕತೆಗೆ ಹೊಸ ಚೈತನ್ಯ ತುಂಬಿದರು. ನಮ್ಮ ಸಂವಿಧಾನದ ಮೂಲಭೂತ ಆಶಯಗಳನ್ನು ಅಕ್ಷರಶಃ ಜಾರಿ ಮಾಡಿದರು. ಆಹಾರ ಭದ್ರತೆ, ಶಿಕ್ಷಣ ಹಕ್ಕು ಕಾಯ್ದೆ, ಮಾಹಿತಿ ಹಕ್ಕು ಕಾಯ್ದೆ ಸೇರಿದಂತೆ ಹಲವು ಮೂಲಭೂತ ಹಕ್ಕುಗಳನ್ನು ಜಾರಿಗೊಳಿಸಿ ದೇಶದ ಬಡವರು, ಮಧ್ಯಮವರ್ಗದವರನ್ನು ಆರ್ಥಿಕವಾಗಿ ಮೇಲೆತ್ತುವುದರಲ್ಲಿ ಯಶಸ್ವಿಯಾದರು ಸಿಎಂ ಬಣ್ಣಿಸಿದರು.

ನಿಗರ್ವಿ, ವಿನಯಶೀಲ: ದೇಶದ ಆರ್ಥಿಕ ಸಮಸ್ಯೆಗಳನ್ನು ನಿಖರವಾಗಿ ಗ್ರಹಿಸಿ, ಪರಿಹರಿಸುತ್ತಿದ್ದ ಅವರು ನಿಗರ್ವಿ ಆಗಿದ್ದರು. ಅತ್ಯಂತ ವಿನಯಶೀಲರಾಗಿದ್ದರು. ನಾನು ಬದುಕಿರುವಾಗ ನನ್ನ ಕೆಲಸಗಳಿಗೆ ಹೆಚ್ಚು ಮಾನ್ಯ ಸಿಗದಿದ್ದರೂ ಮುಂದೆ ನಮ್ಮ ಕೆಲಸಗಳಿಗೆ ಹೆಚ್ಚು ಮಹತ್ವ ಸಿಗಲಿದೆ ಎಂದು ಮನಮೋಹನ್ ಸಿಂಗ್ ಅವರು ಅವತ್ತೇ ಹೇಳಿದ್ದರು ಎಂದು ಸಿಎಂ ಸಿದ್ದರಾಮಯ್ಯ ತಮ್ಮ ಅಭಿಪ್ರಾಯ ಹಂಚಿಕೊಂಡರು.

ಬೆಳಗಾವಿಯಲ್ಲಿ ಶುಕ್ರವಾರ ನಡೆದ ಮಾಜಿ ಪ್ರಧಾನಿ ಡಾ.ಮನಮೋಹನ ಸಿಂಗ್ ಶ್ರದ್ಧಾಂಜಲಿ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಮಾಜಿ ಸಿಎಂ ವೀರಪ್ಪ ಮೊಯ್ಲಿ, ಸಚಿವರಾದ ಎಂ.ಬಿ.ಪಾಟೀಲ್, ಎಚ್.ಕೆ. ಪಾಟೀಲ್, ಕೆ.ಜೆ.ಜಾರ್ಜ್, ಎಚ್.ಸಿ. ಮಹಾದೇವಪ್ಪ, ಎನ್.ಚಲುವರಾಯಸ್ವಾಮಿ, ಬೈರತಿ ಸುರೇಶ್, ಸತೀಶ್ ಜಾರಕಿಹೊಳಿ, ಗ್ಯಾರಂಟಿ ಅನುಷ್ಠಾನ ಮಂಡಳಿ ಅಧ್ಯಕ್ಷ ಎಚ್.ಎಂ.ರೇವಣ್ಣ, ಸಲೀಂ ಅಹಮದ್ ಮೊದಲಾದವರು ಪಾಲ್ಗೊಂಡಿದ್ದರು.

2017 ರಲ್ಲಿ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಆರಂಭಿಸಿದಾಗ ಮನಮೋಹನ್ ಸಿಂಗ್ ಅವರನ್ನು ಕರೆಸಿದ್ದೆವು. ಕರ್ನಾಟಕದ ಆರ್ಥಿಕತೆ ಬಗ್ಗೆ ಒಂದು ಕಾರ್ಯಕ್ರಮಕ್ಕೆ ನಾವು ಕರೆಸಿದ್ದೆವು. ಆಗ, ನಮ್ಮ ಅವಧಿಯಲ್ಲಿ ರಾಜ್ಯದ ಆರ್ಥಿಕತೆ ಅತ್ಯಂತ ಸದೃಢವಾಗಿದೆ ಎಂದು ಮೆಚ್ಚುಗೆ ಸೂಚಿಸಿದ್ದರು. ಅವರ ಜ್ಞಾನದಿಂದ ಭಾರತದ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಯಿತು.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ನಾವೆಲ್ಲರೂ ಗಾಂಧಿ ಭಾರತ ಕಾರ್ಯಕ್ರಮ ಮಾಡಲು ಸಜ್ಜಾಗಿದ್ದೆವು. ಆದರೆ, ಇದೇ ಚಪ್ಪರದ ಅಡಿಯಲ್ಲಿ ಆರ್ಥಿಕತೆಯ ಗಾಂಧಿ ಮನಮೋಹನ್ ಸಿಂಗ್ ಅವರ ಶ್ರದ್ಧಾಂಜಲಿ ಸಭೆಯನ್ನು ನಡೆಸುತ್ತಿದ್ದೇವೆ. ಇದನ್ನೇ ವಿಧಿಯಾಟ ಎಂದು ಕರೆಯಲಾಗುತ್ತದೆ. ಇದು ಅತ್ಯಂತ ದುಃಖದ ಸಂಗತಿ. ನಾವು ಅವರು ಹಾಕಿಕೊಟ್ಟ ಆದರ್ಶ ಮಾರ್ಗದಲ್ಲಿ ನಡೆಯುವುದೇ ಅವರಿಗೆ ನಾವು ಸಲ್ಲಿಸುವ ಕೊಡುಗೆ.

-ಡಿ.ಕೆ ಶಿವಕುಮಾರ್, ಉಪಮುಖ್ಯಮಂತ್ರಿ

ಭಾರತರದ ಜಿಡಿಪಿ ಬೆಳವಣಿಗೆಯಲ್ಲಿ ಡಾ. ಮನಮೋಹನ್ ಸಿಂಗ್ ಅವರ ಪಾತ್ರ ಬಹುಮುಖ್ಯವಾಗಿತ್ತು. ಈ ದೇಶದ ಭ್ರಷ್ಟಾಚಾರ ಹೋಗಲಾಡಿಸುವ ದೃಢ ಸಂಕಲ್ಪ ಮಾಡಿದ್ದರು.ಲೋಕಪಾಲ್ ಕಾಯ್ದೆ ಸೇರಿದಂತೆ ಮಹತ್ವದ ಕಾನೂನುಗಳು ದೇಶದ ಜನರ ಆರ್ಥಿಕ ಬೆಳವಣಿಗೆಗೆ ಸಾಕ್ಷಿಯಾಗಿವೆ.

- ವೀರಪ್ಪ ಮೊಯ್ಲಿ , ಮಾಜಿ ಮುಖ್ಯಮಂತ್ರಿ

ಗಾಂಧಿ ಭಾರತಕ್ಕೆ ಬೆಳಗಾವಿ ನಗರ ಸಾಕ್ಷಿಯಾಗಬೇಕಿತ್ತು

ಇಡೀ ಗಾಂಧಿ ಭಾರತ ಕಾರ್ಯಕ್ರಮಕ್ಕೆ ಸೋನಿಯಾ ಗಾಂಧಿ ಅವರು ಸಾಕ್ಷಿಯಾಗಲಿ ಎಂದು ಜೂಮ್ ಆಪ್ ಮುಖಾಂತರ ಅವರಿಗೆ ಕಾರ್ಯಕ್ರಮದ ಕೊಂಡಿಯನ್ನು ಕಳಿಸಲಾಗಿತ್ತು. ವೇಣುಗೋಪಾಲ್ ಸಲಹೆಯಂತೆ ಮನಮೋಹನ್ ಸಿಂಗ್ ಅವರನ್ನು ಕೂಡ ಈ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲು ನಾವು ಬಯಸಿದ್ದೆವು. ಈ ಕಾರಣಕ್ಕೆ ಅವರ ಕಚೇರಿಯನ್ನು ಸಂಪರ್ಕಿಸಿದಾಗ ಸಿಂಗ್ ಅವರ ಆರೋಗ್ಯ ಸರಿ ಇಲ್ಲ, ಅವರನ್ನು ದೆಹಲಿಯ ಏಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎನ್ನುವ ಮಾಹಿತಿ ದೊರೆಯಿತು. ಅವರು ಆರೋಗ್ಯಯುತವಾಗಿ ಮರಳಿ ಬರುವ ವಿಶ್ವಾಸವಿತ್ತು. ಆದರೆ ಇಂದು ಅವರು ನಮ್ಮ ಜೊತೆಯಲ್ಲಿಲ್ಲ ಎಂದು ಡಿಕೆಶಿ ವಿಷಾದಿಸಿದರು.

ಕರಾರುವಾಕ್ ಕಾಯ್ದೆ ರೂಪಿಸಿದ ಹೆಗ್ಗಳಿಕೆ ತಮ್ಮ ಆಡಳಿತ ಅವಧಿಯಲ್ಲಿ ಸಿಂಗ್ ಅವರು ರೂಪಿಸಿರುವ ಕಾಯ್ದೆಗಳು ಕರಾರುವಾಕ್ಕಾಗಿದ್ದವು. ಶಿಕ್ಷಣ ಹಕ್ಕು, ಆರೋಗ್ಯದ ಹಕ್ಕು, ಆಹಾರದ ಹಕ್ಕನ್ನು ಪ್ರತಿಪಾದಿಸಿದವರು. ಗ್ರಾಮೀಣ ಭಾಗದ ಜನರ ಆರೋಗ್ಯ ಕಾಪಾಡಲು ಆಶಾ ಕಾರ್ಯಕರ್ತರ ಯೋಜನೆಯನ್ನು ರೂಪಿಸಿದವರು.

ರೈತರ ಭೂಸ್ವಾಧೀನದ ವೇಳೆ ನಗರ ಭಾಗದಲ್ಲಿ ದುಪ್ಪಟ್ಟು ಪರಿಹಾರ. ನಗರದ ವ್ಯಾಪ್ತಿಗಿಂತ 18 ಕಿಲೋಮೀಟರ್ ದೂರ ಇದ್ದರೆ ಮೂರು ಪಟ್ಟು ಪರಿಹಾರ, ಗ್ರಾಮೀಣ ಭಾಗದಲ್ಲಿ ನಾಲ್ಕು ಪಟ್ಟು ಪರಿಹಾರ ನೀಡಬೇಕು ಎನ್ನುವ ರೈತ ಪರವಾದ ಕಾನೂನು ತಂದವರು ಎಂದರು.

ಈ ಸಂದರ್ಭದಲ್ಲಿ ಎಐಸಿಸಿ ಕಾರ್ಯಕಾರಿ ಸಮಿತಿ ಸದಸ್ಯರು, ಸಿದ್ದರಾಮಯ್ಯ ಸಂಪುಟದ ಸದಸ್ಯರು, ಶಾಸಕರು ಹಾಗೂ ಅಪಾರ ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

ಸಿಂಗ್ ಹೆಸರಿನಲ್ಲಿ ಅಧ್ಯಯನ ಕೇಂದ್ರ ಸ್ಥಾಪಿಸಿ: ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಮಾತನಾಡಿ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮನಮೋಹನ್ ಸಿಂಗ್ ಅವರ ಹೆಸರಿನಲ್ಲಿ ಆರ್ಥಿಕ ಸಂಶೋಧನಾ ಹಾಗೂ ಅಧ್ಯಯನ ಕೇಂದ್ರವನ್ನು ಸ್ಥಾಪನೆ ಮಾಡಬೇಕು ಎಂದು ಉನ್ನತ ಶಿಕ್ಷಣ ಸಚಿವರಲ್ಲಿ ಮನವಿ ಮಾಡುತ್ತೇನೆ. ಮುಂದಿನ ಪೀಳಿಗೆಗೆ ಇವರ ಆರ್ಥಿಕ ಕ್ರಾಂತಿ ಸೇರಿದಂತೆ ದೇಶಕ್ಕೆ ನೀಡಿದ ಕೊಡುಗೆಗಳನ್ನು ತಲುಪಿಸುವುದೇ ನಿಜವಾದ ಶ್ರದ್ಧಾಂಜಲಿ. ವಿದ್ಯಾರ್ಥಿಗಳು ಇವರ ಆರ್ಥಿಕ ನೀತಿಗಳನ್ನು ಅಧ್ಯಯನ ಮಾಡುವ ಮೂಲಕ ಸಿಂಗ್ ಅವರ ಜ್ಞಾನವನ್ನು ಪಸರಿಸುವ ಹಾಗೂ ಉಳಿಸುವ ಕೆಲಸವಾಗುತ್ತದೆ ಎಂದು ಹೇಳಿದರು.

ಅಭಿವೃದ್ಧಿಯ ಬೀಜ ಬಿತ್ತಿದ ಮಹಾನುಭಾವ ಮದುವೆಗೊ ಮಸಣಕೋ ಎಂದ ಕಡೆಗೋಡು ಮಂಕುತಿಮ್ಮ ಎನ್ನುವ ಕವಿ ಡಿವಿಜಿ ಅವರ ಮಾತು ಇಂದಿಗೆ ತಾಳೆಯಾಗುತ್ತಿದೆ. 'ಕೊರಗಲೇಕೆ, ಮರುಗಲೇಕೆ, ಹುಟ್ಟಿ ಬಂದಿದ್ದೆ ಅಳಲೇಕೆ ಸುಖವೇ ಬರಲೀ, ದುಃಖವೇ ಬರಲಿ, ರೋಗ-ಭೋಗವೇ ಇರಲಿ, ಎಲ್ಲಾ ಹೊತ್ತು ಋಣ ತೆತ್ತು, ಮುಂದೆ ಪುಣ್ಯದಬೀಜ ಬಿತ್ತು' ಎನ್ನುವ ಮಾತಿದೆ. ಮನಮೋಹನ್ ಸಿಂಗ್ ಅವರು ಪುಣ್ಯದ ಹಾಗೂ ಅಭಿವೃದ್ಧಿಯ ಬೀಜವನ್ನು ಬಿತ್ತಿ ಹೋಗಿದ್ದಾರೆ ಅದನ್ನು ನಾವು ಬೆಳೆಸೋಣ ಉಳಿಸೋಣ ಎಂದರು.

ಗಾಂಧಿಯವರ ಇತಿಹಾಸವನ್ನು ಮೆಲುಕು ಹಾಕಲು ಇಡೀ ದೇಶದ ಮೂಲೆ ಮೂಲೆಗಳಿಂದ ನಾಯಕರು ಬೆಳಗಾವಿಗೆ ಬಂದಿದ್ದರು. ನಮ್ಮ ಮುಂದಿನ ಪೀಳಿಗೆಗೆ ಗಾಂಧಿ ಅವರ ಆದರ್ಶಗಳನ್ನು ತಲುಪಿಸುವ ಕೆಲಸಕ್ಕೆ ನಾವು ಮುಂದಾಗಿದ್ದೆವು. ಆದರೆ ವಿಧಿಯಾಟ ಬೇರೆಯಾಗಿತ್ತು ಎಂದರು.



ಸಭೆಯಲ್ಲಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ

ಕಿರುಚಿತ್ರ ಪ್ರದರ್ಶನ ; ಪುಷ್ಪ ನಮನ

ಕಾರ್ಯಕ್ರಮದ ವೇಳೆ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಅಧಿಕಾರಾವಧಿಯಲ್ಲಿ ಕೈಗೊಂಡ ಹಲವು ಮಹತ್ವದ ನಿರ್ಧಾರ ಮತ್ತು ದೇಶದ ಅಭಿವೃದ್ಧಿ ಕುರಿತು ಎರಡು ಕಿರುಚಿತ್ರ ಪ್ರಸಾರ ಮಾಡಲಾಯಿತು. ಸಿಂಗ್ ಅವರು 10 ವರ್ಷಗಳ ಅವಧಿಗೆ ಭಾರತದ ಪ್ರಧಾನಿಯಾಗಿ ಮಾಡಿದ್ದ ಸಾಧನೆ ಕುರಿತು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರು ನೋಡಿ ಭಾವುಕರಾದರು. ನಂತರ ಮೌನಾಚರಣೆ ಮಾಡಿ ನೆರೆದಿದ್ದ ಎಲ್ಲರೂ ಡಾ. ಮನಮೋಹನ್ ಸಿಂಗ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಅತ್ಯಂತ ಬಡ ಕುಟುಂಬದಿಂದ ಬೆಳೆದುಬಂದ ಡಾ. ಮನಮೋಹನ್ ಸಿಂಗ್ ಅವರು ಅತ್ಯುನ್ನತ ಹುದ್ದೆ ಅಲಂಕರಿಸಿದರು. ಇವರ ಅಧಿಕಾರಾವಧಿಯಲ್ಲಿ ದೇಶ ಸಾಕಷ್ಟು ಅಭಿವೃದ್ಧಿ ಸಾಧಿಸಿದ್ದು, ಜಗತ್ತಿಗೆ ಆರ್ಥಿಕತೆಯ ಪಾಠ ಮಾಡುವ ಧೀಮಂತ ನಾಯಕ ನಮ್ಮನ್ನು ಅಗಲಿದ್ದು ತುಂಬಾ ನೋವು ತರಿಸಿದೆ.

- ಎಚ್.ಕೆ ಪಾಟೀಲ್, ಕಾನೂನು ಸಚಿವ

ನೆಚ್ಚಿನ ನಾಯಕನ ಸಾವಿನ ಸುದ್ದಿಯ ಸೂತಕದ ಛಾಯೆ | ಶೋಕಸಾಗರದಲ್ಲಿ ಮುಳುಗಿದ ಕುಂದಾನಗರಿ ಜನತೆ

ಸಂಭ್ರಮಾಚರಣೆ ನಡೆಯಬೇಕಿದ್ದ ಜಾಗದಲ್ಲಿ ಶೋಕಾಚರಣೆ ಸಭೆ

ವಿನಾಯಕ ಮಠಪತಿ, ಬೆಳಗಾವಿ

ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ ಬೆಳಗಾವಿ ನೆಲ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿ ಆಗಬೇಕಿತ್ತು. ಕಾಂಗ್ರೆಸ್ ನ ರಾಷ್ಟ್ರೀಯ ನಾಯಕರಿಂದ ಹಿಡಿದು ಗ್ರಾಮ ಪಂಚಾಯತಿ ಸದಸ್ಯರ ವರೆಗೂ ಈ ಐತಿಹಾಸಿಕ ಸಮಾವೇಶದ ಭಾಗವಾಗಿ ಸಾರ್ಥಕ ಕ್ಷಣಗಳನ್ನು ತುಂಬಿಕೊಳ್ಳಬೇಕಿತ್ತು. 1924 ರ ಮಹಾತ್ಮ ಗಾಂಧಿ ಅಧ್ಯಕ್ಷತೆ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಕಾರ್ಯಕ್ರಮದ ದಿನವೇ ವಿಧಿ ಆಟವೇ ಬೇರೆಯಾಗಿತ್ತು. ಒಬ್ಬ ಧೀಮಂತ ನಾಯಕನನ್ನು ಕಳೆದುಕೊಂಡು ಇಡೀ ಕಾಂಗ್ರೆಸ್ ಶೋಕ ಸಾಗರದಲ್ಲಿ ಮುಳುಗಿದ್ದು ವಿಪರ್ಯಾಸವೇ ಸರಿ.

ಹೌದು, ಬೆಳಗಾವಿ ಕಾಂಗ್ರೆಸ್ ಅಧಿವೇಶನ ಶತಮಾನೋತ್ಸವದ ಅದ್ಧೂರಿ ಕಾರ್ಯಕ್ರಮವನ್ನು ರಾಷ್ಟ್ರೀಯ ಕಾಂಗ್ರೆಸ್ ಹಮ್ಮಿಕೊಂಡಿತ್ತು. ಕಾರ್ಯಕ್ರಮದ ಮೊದಲ ಭಾಗವಾಗಿ ಗುರುವಾರ ಕಾರ್ಯಕಾರಿ ಸಭೆಗೆ ಹಾಜರಿದ್ದ ಗಣ್ಯರು ಎಐಸಿಸಿ ಮಲ್ಲಿಕಾರ್ಜುನ ಖರ್ಗೆ ಔತಣಕೂಟದಲ್ಲಿ ಭಾಗವಹಿಸಬೇಕು ಎನ್ನುವಷ್ಟರಲ್ಲಿ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಸಾವಿನ ಸುದ್ದಿ ಬಂದಪ್ಪಳಿಸಿತ್ತು.

ಮನಮೋಹನ್ ಸಿಂಗ್ ಅವರ ಆರೋಗ್ಯದಲ್ಲಿ ಏರುಪೇರಾಗಿದ್ದು ದೆಹಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂಬ ಸುದ್ದಿ ತಿಳಿಯುತ್ತಿದ್ದಂತೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಬೆಳಗಾವಿಯಿಂದ ವಿಶೇಷ ವಿಮಾನದ ಮೂಲಕ ದೆಹಲಿಗೆ ತೆರಳಿದರು. ಇದೇ ಹೊತ್ತಲ್ಲಿ ಕೆಲ ಪ್ರಮುಖ ನಾಯಕರು ಬೆಳಗಾವಿ ತೊರೆದು ಅಗಲಿದ ನಾಯಕನಿಗೆ ಗೌರವ ಸೂಚಿಸಲೆಂದೇ ದೆಹಲಿ ಹಾದಿ ಹಿಡಿದರು.

ಶುಕ್ರವಾರ ಮಧ್ಯಾಹ್ನ ನಗರದ ಸಿಪಿಎಡ್ ಮೈದಾನದಲ್ಲಿ ಲಕ್ಷಾಂತರ ಜನ ಭಾಗವಹಿಸಬೇಕಿದ್ದ ಜೈ ಬಾಪು, ಜೈ ಭೀಮ್, ಜೈ ಸಂವಿಧಾನ ಕಾರ್ಯಕ್ರಮಕ್ಕೆ ಕಳೆದ ಹದಿನೈದು ದಿನಗಳಿಂದ ಡಿಸಿಎಂ ಡಿ.ಕೆ ಶಿವಕುಮಾರ್ ಅವರ ನೇತೃತ್ವದಲ್ಲಿ ತಯಾರಿ ಮಾಡಲಾಗಿತ್ತು.

ಫೋಟೊ ಶೂಟ್ ಇತ್ತು

ಶುಕ್ರವಾರ ಬೆಳಗಾವಿ ಸುವರ್ಣಸೌಧ ಮುಂಭಾಗ ಮಹಾತ್ಮ ಗಾಂಧಿ ಪ್ರತಿಮೆ ಉದ್ಘಾಟನೆ ಆಯೋಜಿಸಲಾಗಿತ್ತು. ಖರ್ಗೆ ಹಾಗೂ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯಬೇಕಿದ್ದ ಕಾರ್ಯಕ್ರಮದ ನಂತರ ಕಾಂಗ್ರೆಸ್ ಪಕ್ಷದ ನಾಯಕರನ್ನು ಒಳಗೊಂಡಂತೆ ಐತಿಹಾಸಿಕ ಫೋಟೋ ಶೂಟ್ ಕೂಡ ಹಮ್ಮಿಕೊಳ್ಳಲಾಗಿತ್ತು.

ಗಾಂಧಿಯವರ ಇತಿಹಾಸವನ್ನು ಮೆಲುಕು ಹಾಕಲು ಇಡೀ ದೇಶದ ಮೂಲೆ ಮೂಲೆಗಳಿಂದ ನಾಯಕರು ಬೆಳಗಾವಿಗೆ ಬಂದಿದ್ದರು. ನಮ್ಮ ಮುಂದಿನ ಪೀಳಿಗೆಗೆ ಗಾಂಧಿ ಅವರ ಆದರ್ಶಗಳನ್ನು ತಲುಪಿಸುವ ಕೆಲಸಕ್ಕೆ ನಾವು ಮುಂದಾಗಿದ್ದೆವು. ಆದರೆ ವಿಧಿಯಾಟ ಬೇರೆಯಾಗಿತ್ತು.

ಡಿ.ಕೆ ಶಿವಕುಮಾರ್, ಉಪಮುಖ್ಯಮಂತ್ರಿ

ಶೋಕಸಾಗರದಲ್ಲಿ ಮುಳುಗಿದ ಕುಂದಾನಗರಿ

ಬೆಳಗಾವಿ ಹಾಗೂ ಬಾಪುವಿನ ನಡುವೆ ಇರುವ ಅವಿನಾಭಾವ ಸಂಬಂಧ. ಡಿ. 26 ಹಾಗೂ 27 ರಂದು ನಡೆಯಬೇಕಿದ್ದ ಗಾಂಧಿ ಭಾರತ ಕಾರ್ಯಕ್ರಮದ ತಯಾರಿ ಕಳೆದ ಹದಿನೈದು ದಿನಗಳಿಂದ ನಡೆದಿತ್ತು. ಬೆಳಗಾವಿ ಜನ ಎಂದೂ ನೋಡದ ರೀತಿಯಲ್ಲಿ ಗಲ್ಲಿ, ಗಲ್ಲಿಗಳಲ್ಲಿ ಲೈಟಿಂಗ್ ವ್ಯವಸ್ಥೆ ಮಾಡಲಾಗಿತ್ತು. ಅಷ್ಟೇ ಅಲ್ಲದೆ ಐತಿಹಾಸಿಕ ಕ್ಷಣ ಸಾರುವ ಬೃಹತ್ ಗೋಪುರ, ವೀರಸೌಧದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಭೆ ನಡೆಯುವ ಜಾಗದಲ್ಲಿ ಮಾಡಿದ್ದ ಬೃಹತ್ ವೇದಿಕೆ ಇವೆಲ್ಲವೂ ಅದ್ಭುತವಾಗಿತ್ತು. ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ ಇತಿಹಾಸದ ಪುಟದಲ್ಲಿ ಗಾಂಧಿ ಭಾರತ ಕಾರ್ಯಕ್ರಮ ಅಚ್ಚಳಿಯದೆ ಉಳಿದುಬಿಡುತ್ತಿತ್ತು. ಆದರೆ ಒಂದು ಕಡೆ ಕಾಂಗ್ರೆಸ್ ಪಕ್ಷದ ಮಹಾನ್ ನಾಯಕ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ನಿಧನ. ಮತ್ತೊಂದು ಕಡೆ ಐತಿಹಾಸಿಕ ಕಾರ್ಯಕ್ರಮ ನಡೆಯಬೇಕಿದ್ದ ಸಂದರ್ಭದಲ್ಲಿ ಇಡೀ ಕಾಂಗ್ರೆಸ್ ಸೂತಕದ ಮನೆಯಾಗಿದ್ದು ವಿಪರ್ಯಾಸ.

ಕಲಬುರಗಿ -ಯಾದಗಿರಿ ಜಿಲ್ಲೆಗೆ ವಿಶೇಷ ಕೊಡುಗೆಗಳು ನೀಡಿದ ದೂರದೃಷ್ಟಿಯ ಮಹಾನ್ ನಾಯಕ

ಕಲ್ಯಾಣದ ಕಾಮಧೇನು 371(ಜೆ) ಕಾಯಿದೆ ಜಾರಿಗೊಳಿಸಿದ ಡಾ. ಸಿಂಗ್

ದೇವೇಂದ್ರ ಜಾಡಿ, ಕಲಬುರಗಿ

ದೇಶದ ಮಾಜಿ ಪ್ರಧಾನಿ ಹಾಗೂ ಖ್ಯಾತ ಅರ್ಥಶಾಸ್ತ್ರಜ್ಞ ಡಾ.ಮನಮೋಹನ್ ಸಿಂಗ್ ಗುರುವಾರ ತಡರಾತ್ರಿ ನಿಧನರಾಗಿದ್ದು, ಆರ್ಥಿಕ ಉದಾರೀಕರಣಕ್ಕೆ ವಿಶೇಷ ಕೊಡುಗೆ ನೀಡಿದ ನಾಯಕರು. ಹಣಕಾಸು ಸಚಿವರಾಗಿ ಸೇವೆ ಸಲ್ಲಿಸುತ್ತಿರುವಾಗ, ಡಾ. ಮನಮೋಹನ್ ಸಿಂಗ್ ಅವರು 1991 ರಲ್ಲಿ ಪ್ರಾರಂಭವಾದ ಆರ್ಥಿಕ ಉದಾರೀಕರಣ ದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು ಎಂದು ಇಡೀ ದೇಶವೇ ಅವರನ್ನು ಸ್ಮರಿಸುತ್ತದೆ.

ಕಲ್ಯಾಣ ಕರ್ನಾಟಕಕ್ಕೆ ಕೊಡುಗೆ ಅಪಾರ: ಆದರೆ, ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರನ್ನು ಕಲ್ಯಾಣ ಕರ್ನಾಟಕ ಭಾಗದ ಜನರು ಸದಾ ಕಾಲ ನೆನೆಯುವಂತಹ ಕೊಡುಗೆ ನೀಡಿದ್ದನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಡಾ. ಸಿಂಗ್ ಅವರು ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗೆ ವಿಶೇಷ ಕೊಡುಗೆಗಳನ್ನು ತಮ್ಮ ಸಚಿವ ಸಂಪುಟದ ಸಚಿವರ ಮೂಲಕ ನೀಡಿದ್ದಾರೆ. ಬಹುಮುಖ್ಯವಾಗಿ ಕಲ್ಯಾಣ ಕರ್ನಾಟಕದ ಕಾಮದೇನು ಎಂದೇ ಕರೆಯ ಲ್ಪಡುವ 371(ಜೆ) ಕಾಯಿದೆಗೆ ಅನುಮೋ ದನೆ ನೀಡಿ, ಜಾರಿಗೊಳಿಸಲು ಕಾರಣಿಭೂತ ರಾದವರಲ್ಲಿ ಡಾ.ಮನಮೋಹನ್ ಸಿಂಗ್ ಅವರು ಸಹ ಒಬ್ಬರಾಗಿದ್ದಾರೆ ಎನ್ನುವುದನ್ನು ಯಾರು ಸಹ ಅಲ್ಲಗಳೇಯುವಂತಿಲ್ಲ.

ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ: ಅಂದಿನ, ಹೈದ್ರಾಬಾದ್ ಕರ್ನಾಟಕ ಹಿಂದುಳಿದ ಪ್ರದೇಶವಾಗಿದೆ. ಈ ಭಾಗಕ್ಕೆ ಸರಕಾರ ವಿಶೇಷ ಸ್ಥಾನಮಾನ ನೀಡಿ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಮೇಲತ್ತಬೇಕು. ಅದಕ್ಕಾಗಿ ವಿಶೇಷ ಹಕ್ಕುಗಳು ನೀಡಬೇಕು ಎಂದು ಈ ಭಾಗದಲ್ಲಿ ಸಾಕಷ್ಟು ಹೋರಾಟಗಳು ನಡೆ ದವು. ಈ ಭಾಗದಲ್ಲಿ ಅಭಿವೃದ್ಧಿಯ ಪರಿಣಾ ಮಗಳು ಕಾಣದೇ ಇದ್ದುದರಿಂದ ಮತ್ತು ಡಾ. ಡಿ. ಎಂ.ನಂಜುಂಡಪ್ಪ ಅವರ ವರದಿಯಲ್ಲಿ ಪ್ರಸ್ತಾಪಿಸಿದಂತೆ ರಾಜ್ಯ ಸರಕಾರವು ಈ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡಲು ಭಾರತ ಸರಕಾರಕ್ಕೆ ಅನೇಕ ಮನವಿಗಳನ್ನು ಮಾಡಿತು. ಅನೇಕರ ಹೋರಾಟಗಳ ಫಲ ವಾಗಿ 2013ರ ಮೇ 1ರಂದು ರಾಷ್ಟ್ರಪತಿಗಳು ಭಾರತದ ಸಂವಿಧಾನಕ್ಕೆ ತಿದ್ದುಪಡಿಯನ್ನು ತಂದು ಅನುಚ್ಛೇದ 371(ಜೆ)ಯನ್ನು ಸೇರ್ಪ ಡಿಸಿ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನ ಮಾನ ನೀಡಿದ್ದು ಇದೆ ಮನಮೋಹನ್ ಸಿಂಗ್ ಅವರ ಯುಪಿಎ-2 ಸರಕಾರದ ಕೊಡುಗೆ ಆಗಿದೆ.

ಈ ಅನುಚ್ಛೇದದಂತೆ ಭಾರತದ ರಾಷ್ಟ್ರಪತಿಗಳು ಕರ್ನಾಟಕದ ರಾಜ್ಯಪಾಲರಿಗೆ ವಿಶೇಷ ಜವಾಬ್ದಾರಿಯನ್ನು ವಹಿಸಿದರು. ಅದರಂತೆ ಕರ್ನಾಟಕದ ರಾಜ್ಯಪಾಲರು 2013ರ ಮೇ ತಿಂಗಳಲ್ಲಿ ಆದೇಶ ಹೊರಡಿಸಿ 371(ಜೆ) ಜಾರಿಗೊಳಿಸಲು ರಾಜ್ಯ ಸರಕಾರಕ್ಕೆ ಆದೇಶಿಸಿದರು.

ಮುಂದೆ 2014ರಲ್ಲಿ ಸಿದ್ದರಾಮಯ್ಯ ಅವರ ಹೊಸ ಸರಕಾರ ಅಸ್ತಿತ್ವಕ್ಕೆ ಬಂದ ನಂತರ ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ದೊರೆಯಿತು.

ಕಲ್ಯಾಣ ಕರ್ನಾಟಕ ಭಾಗದ ಜನರ ಬಹುದಿನಗಳ ಬೇಡಿಕೆ ಆರ್ಟಿಕಲ್ 371(ಜೆ) ಜಾರಿಗೆ ಬರಲು ಈ ಭಾಗದ ನಾಯಕರಾದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ದಿ. ಎನ್.ಧರ್ಮಸಿಂಗ್, ದಿ. ವೈಜನಾಥ್ ಪಾಟೀಲ್ ಸೇರಿ ನೂರಾರು ಹೋರಾಟ ಗಾರರ ಕೊಡುಗೆ ಜತೆಗೆ ಡಾ.ಮನಮೋಹನ ಸಿಂಗ್ ಅವರ ಅಧಿಕಾರವಧಿಯಲ್ಲಿ ಸಿಕ್ಕ ಸಹಕಾರ ದೊಡ್ಡದಾಗಿತ್ತು.

ಯುಪಿಎ-2 ಸರಕಾರದ ಅವಧಿಯಲ್ಲಿ ಡಾ. ಮನಮೋಹನ ಸಿಂಗ್ ಅವರು ಪ್ರಧಾನಿ ಆಗಿದ್ದಾಗ ಹಿರಿಯರಾದ ಡಾ. ಮಲ್ಲಿಕಾರ್ಜುನ ಖರ್ಗೆ ಹಾಗೂ ದಿ. ಎನ್. ಧರಂಸಿಂಗ್ ಅವರ ಅವಿರತ ಪ್ರಯತ್ನದಿಂದ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಆರ್ಟಿಕಲ್ 371(ಜೆ) ತಿದ್ದುಪಡಿಗೆ ಅನುಮೋದನೆ ಲಭಿಸಿದೆ. ಅದರ ಪರಿಣಾಮ 2013 ರಲ್ಲಿ ಹಿಂದುಳಿದ ಅಂದಿನ ಹೈದ್ರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ಸಿಕ್ಕಿತು. ಈ ಭಾಗದಲ್ಲಿ ಆರೋಗ್ಯ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದಲು ಕಾರಣವಾಗಿದೆ.

-ಡಾ.ಅಜಯ್ ಧರ್ಮಸಿಂಗ್, ಅಧ್ಯಕ್ಷ, ಕೆಕೆಆರ್‌ಡಿಬಿ

2011 ಆ.9 ರಂದು ದೆಹಲಿಗೆ ಕಲ್ಯಾಣ ಕರ್ನಾಟಕ ನಿಯೋಗ ಭೇಟಿ ನೀಡಿತ್ತು. ಮನಮೋಹನ ಸಿಂಗ್ ಅವರ ಇಚ್ಛಾ ಶಕ್ತಿ ಹಾಗೂ ಮಲ್ಲಿಕಾರ್ಜುನ್ ಖರ್ಗೆ ಹಾಗು ಧರ್ಮಸಿಂಗ್ ಅವರ ಹೋರಾಟದ ಫಲವಾಗಿ 2013 ರಲ್ಲಿ ಕಲ್ಯಾಣ ಕರ್ನಾಟಕಕ್ಕೆ ಡಾ.ಮನಮೋಹನ ಸಿಂಗ್ ಅವರ ಅವಧಿಯಲ್ಲಿ 371(ಜೆ) ಕಾಯಿದೆಗೆ ಒಪ್ಪಿಗೆ ಸಿಕ್ಕಿ, 2014 ರಲ್ಲಿ ಸಿದ್ದರಾಮಯ್ಯ ಅವರು ವಿಶೇಷ ಸ್ಥಾನಮಾನ ನೀಡಿ 371(ಜೆ) ಜಾರಿಗೆ ಬಂದಿದೆ.

-ಡಾ.ಲಕ್ಷ್ಮಣ ದಸ್ತಿ, ಅಧ್ಯಕ್ಷ , ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ

ಭಾರತದ ಮಾಜಿ ಪ್ರಧಾನಿ, ಅರ್ಥಶಾಸ್ತ್ರಜ್ಞರು, ಹಣಕಾಸು ಸಚಿವರಾಗಿದ್ದ ಮನಮೋಹನ್ ಸಿಂಗ್ ರವರು ದೈವಾಧೀನರಾದ ವಿಷಯ ಅತೀವ ನೋವನ್ನು ತಂದಿದೆ. ಮೃತರ ಆತ್ಮಕ್ಕೆ ಸದ್ಗತಿ ಸಿಗಲೆಂದು ನಾನು ಪ್ರಾರ್ಥಿಸುತ್ತೇನೆ. ಡಾ.ಮನಮೋಹನ್ ಸಿಂಗ್ ಅವರ ಸಾವು ದೇಶಕ್ಕೆ ತುಂಬಲಾರದ ನಷ್ಟವಾಗಿದೆ. ಈ ಸಮಯಲ್ಲಿ ಅವರ ಕುಟುಂಬಕ್ಕೆ ಧೈರ್ಯ ಸಿಗಲೆಂದು ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ.

-ಪ್ರಲ್ಹಾದ್ ಜೋಶಿ, ಕೇಂದ್ರ ಸಚಿವ

ದೇಶ ಕಂಡ ಅಪ್ರತಿಮ ಆರ್ಥಿಕ ತಜ್ಞರು, ಉದಾರೀಕರಣ ಜಾಗತೀಕರಣದ ಮೂಲಕ ರಾಷ್ಟ್ರದ ಅರ್ಥವ್ಯವಸ್ಥೆಗೆ ಹೊಸ ಭಾಷ್ಯ ಬರೆದ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರ ನಿಧನವು ದೇಶಕ್ಕೆ ತುಂಬಲಾರದ ನಷ್ಟವಾಗಿದೆ. ಮನಮೋಹನ್ ಸಿಂಗ್ ಅವರು ದೇಶದ ಪ್ರಧಾನಮಂತ್ರಿ ಇದ್ದಾಗ . ಈ ದೇಶಕ್ಕೆ ಕೊಟ್ಟ ಯೋಜನೆಗಳು ಈಗಲೂ ಅವಿಸ್ಮರಣೀಯ.

-ರಹೀಂಖಾನ್, ಸಚಿವ

ದೇಶದ ಅಭಿವೃದ್ಧಿಗೆ ಮನಮೋಹನ್ ಸಿಂಗ್ ಅವರ ಕೊಡುಗೆ ಎಂದಿಗೂ ಅವಿಸ್ಮರಣೀಯ. ಮನಮೋಹನ್ ಸಿಂಗ್ ಅವರು ಭಾರತದ ಶ್ರೇಷ್ಠ ಅರ್ಥಶಾಸ್ತ್ರಜ್ಞ ಮತ್ತು ಆರ್ಥಿಕ ಸುಧಾರಣೆಗಳ ಪ್ರವರ್ತಕರು. ಅವರ ಸೇವೆಯನ್ನು ದೇಶ ಸದಾ ಸ್ಮರಿಸುತ್ತದೆ. ಇದು ದೇಶಕ್ಕೆ ತುಂಬಲಾರದ ನಷ್ಟ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಪ್ರೀತಿಪಾತ್ರರಿಗೆ ಶಕ್ತಿಯನ್ನು ನೀಡಲಿ.

-ಪ್ರಿಯಾಂಕಾ ಜಾರಕಿಹೊಳಿ, ಸಂಸದೆ

ಆರ್ಥಿಕ ಸುಧಾರಣೆಯ ಹರಿಕಾರ- ಜಾಗತೀಕರಣದ ನೇತಾರ, ಶ್ರೇಷ್ಠ ಆಡಳಿತಕಾರ, ಮಹಾನ್ ಅರ್ಥಶಾಸ್ತ್ರಜ್ಞ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಅಗಲಿಕೆ ದೇಶಕ್ಕೆ ತುಂಬಲಾರದ ನಷ್ಟ. ದೇಶದ ಆರ್ಥಿಕ ಸಮಸ್ಯೆಗಳನ್ನು ನಿಖರವಾಗಿ ಗ್ರಹಿಸಿ, ಪರಿಹರಿಸುತ್ತಿದ್ದರು. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ.

-ಡಾ.ಎಂ.ಸಿ.ಸುಧಾಕರ್, ಸಚಿವ

ಶ್ರೇಷ್ಠ ಆರ್ಥಿಕ ತಜ್ಞರು, ಭವ್ಯ ಭಾರತ ಬಗ್ಗೆ ದೂರದೃಷ್ಟಿ ಹೊಂದಿದ್ದ ನಾಯಕ ಮಾಜಿ ಪ್ರಧಾನ ಮಂತ್ರಿ ಡಾ. ಮನಮೋಹನ್ ಸಿಂಗ್ ಅವರ ನಿಧನ ದೇಶಕ್ಕೆ ತುಂಬಲಾರದ ನಷ್ಟವಾಗಿದೆ. ಅರ್ಥಿಕ ಕುಸಿತವಾದ ಸಂದರ್ಭದಲ್ಲಿ ತಮ್ಮ ದೂರದೃಷ್ಟಿಯ ಆಲೋಚನೆಯಿಂದ ಆರ್ಥಿಕತೆ ಸುಧಾರಣೆಗೆ ಕಾರಣವಾದವರು. ಮನಮೋಹನ್ ಸಿಂಗ್ ಅವರಿಗೆ ಸದ್ಗತಿ ದೊರಕಲಿ.

-ಆರ್.ಬಿ.ತಿಮ್ಮಾಪುರ, ಸಚಿವ

ಅಖಿಲ ಹವ್ಯಕ ಮಹಾಸಭಾ ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಿರುವ ಮೂರು ದಿನದ ತೃತೀಯ ವಿಶ್ವ ಹವ್ಯಕ ಸಮ್ಮೇಳನಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು. ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತೀ ಸ್ವಾಮೀಜಿ, ವಿಶ್ವವಾಣಿ ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್, ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ, ಹೊರನಾಡು ಕ್ಷೇತ್ರದ ಭೀಮೇಶ್ವರ ಜೋಶಿ, ಶ್ರೀಧರ್ ಭಟ್ ಕೆಕ್ಕೇರಾ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಕಸಾಪ ಅಧ್ಯಕ್ಷ ನಾಡೋಜ ಮಹೇಶ್ ಜೋಶಿ ಹಾಗೂ ಮಹಾಸಭಾದ ಅಧ್ಯಕ್ಷ ಗಿರಿಧರ್ ಕಜೆ ಮೊದಲಾದ ಗಣ್ಯರು ಇದ್ದರು.

ನಾಡು ದೇಹವಿದ್ದಂತೆ, ಹವ್ಯಕರು ಮೆದುಳಿನಂತೆ

ರಾಘವೇಶ್ವರ ಭಾರತೀ ಸ್ವಾಮೀಜಿ ಅಭಿಪ್ರಾಯ

ಬೆಂಗಳೂರು: ಸಮಾಜದಲ್ಲಿ ಹವ್ಯಕ ಜನಾಂಗದ ಸಂಖ್ಯೆ ಕಡಿಮೆಯಿದ್ದರೂ ಅವರಲ್ಲಿನ ಜ್ಞಾನ ಭಂಡಾರ ಅಪಾರ. ಇಡೀ ನಾಡು ದೇಹವಿದ್ದಂತೆ, ಹವ್ಯಕರು ಮೆದುಳಿನಂತೆ ಎಂದು ರಾಮಚಂದ್ರಾಪುರ ಮಠದ ಪೀಠಾಧಿಪತಿ ರಾಘವೇಶ್ವರ ಭಾರತೀ ಸ್ವಾಮೀಜಿ ಅವರು ಅಭಿಪ್ರಾಯಪಟ್ಟರು.

ಅಖಿಲ ಹವ್ಯಕ ಮಹಾಸಭಾ 81 ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಿರುವ ಮೂರು ದಿನದ ತೃತೀಯ ವಿಶ್ವ ಹವ್ಯಕ ಸಮ್ಮೇಳನದಲ್ಲಿ ಮಾತನಾಡಿದ ಶ್ರೀಗಳು, ಮಯೂರ ವರ್ಮನ ಕಾಲದಲ್ಲಿ ಹವ್ಯಕ ಸಮುದಾಯ ಸರ್ವೋತ್ತಮ ಜನಾಂಗ. ಹವ್ಯಕರು ಸಮಾಜದ ಉತ್ತಮ ಅಂಗವೂ ಹೌದು. ಹವ್ಯಕರಲ್ಲಿನ ವಿದ್ವತ್ತು, ಜ್ಞಾನವನ್ನು ಕಂಡು ಭಾರತದ ಅಹಿಚ್ಛತ್ರದಿಂದ ಬನವಾಸಿಗೆ ಕರೆತರಲಾಯಿತು ಎಂದು ತಿಳಿಸಿದರು.

ಒಂದಾಗಿ ಬದುಕೋಣ ಪರಿಕಲ್ಪನೆ

ನನಗೆ, ನನ್ನಿಂದ ಎಂಬ ಜಪಕ್ಕೆ ಕೊರತೆ ಇಲ್ಲ. ನಾನು ಎಂಬ ಪರಿಕಲ್ಪನೆ ಸಾಯುವವರೆಗೂ ನಾವು ಉದ್ಧಾರವಾಗಲ್ಲ. ನಾನು ಸತ್ತ ಸ್ಥಾನದಲ್ಲಿ ನಾವು ಬಂದರೆ ಅದೇ ಸಮ್ಮೇಳನ. ಸಮ್ಮೇಳನ ಪದ್ಧತಿಗಿಂತ ಹಿಂದೆಯೇ ನಮ್ಮ ಹಿರಿಯರು ಕುಟುಂಬ ಪದ್ಧತಿ ಹಿರಿಯರು ಜಾರಿಗೆ ತಂದರು. ಮನೆಯೊಳಗೆ ಅವಿಭಕ್ತ ಕುಟುಂಬ ಒಳಗೊಂಡಿದ್ದು, ಸಂಸಾರ ಸಮುದ್ರದಲ್ಲೇ ನಾವು ಎಂಬ ಭಾವವಿತ್ತು. ಅದನ್ನೇ ಮುಂದುವರಿಸಿದರೆ ವ್ಯಕ್ತಿ, ಕುಟುಂಬ, ಸಮಾಜ. ನಾನು ಎನ್ನುವಾಗ ಸ್ವಾರ್ಥ ಹಾಗೂ ಏಕಾಂಗಿತನವಿದೆ. ನಾವು ಎಂದರೆ ನಿಸ್ವಾರ್ಥ ಹಾಗೂ ಏಕಾಂಗಿತನವಿಲ್ಲ. ನಾವಾಗಿ ಬದುಕೋಣ, ನಾನಾಗಿ ಅಲ್ಲ ಎಂದು ಹೇಳಿದ ಅವರು, ಕನ್ನಡ ಪತ್ರಿಕೋದ್ಯಮದಲ್ಲಿ ಮೀಸಲು ಇಲ್ಲ. ಎಲ್ಲ ಮಾಧ್ಯಮಗಳಲ್ಲಿ ಹವ್ಯಕ ಸಮಾಜದವರೇ ಪ್ರಧಾನ ಸಂಪಾದಕರಾಗಿದ್ದಾರೆ. ಕಾರಣ ಅವರಲ್ಲಿನ ಅಪಾರ ಜ್ಞಾನ ಎಂದರು.

ಅಹಿಚ್ಛತ್ರದಿಂದ ಮರಳಿ ಬನವಾಸಿಗೆ

ಹವ್ಯಕರನ್ನು ಮಯೂರ ವರ್ಮ ಉತ್ತರದ ಅಹಿಚ್ಛತ್ರದಿಂದ ಕರೆದುಕೊಂಡು ಬಂದವರು. ಕಾರಣಾಂತರಗಳಿಂದ ಇಲ್ಲಿಂದ ಉತ್ತರ ಭಾರತಕ್ಕೆ ವಲಸೆ ಹೋಗಿದ್ದರು. ಮಯೂರವರ್ಮ ಮತ್ತೆ ನಮ್ಮ ಈ ಮಣ್ಣಿಗೆ ಕರೆತಂದರು. ಸಮ್ಮೇಳನಗಳಲ್ಲಿ ನಾವು ಸಾಗಿಬಂದ ದೂರ, ಏರಿದ ಎತ್ತರ, ಇಳಿದ ಪ್ರಪಾತ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕು. ಕೇವಲ ಹಣದ ಶ್ರೀಮಂತಿಕೆಯಲ್ಲ, ನಮ್ಮ ಸಂಸ್ಕೃತಿ ಉಳಿಯಬೇಕು. ನಮ್ಮ ಪೂರ್ವಜರು ಪರಿಚಯಿಸಿದ ಸಂಪತ್ತನ್ನು ಉಳಿಸಿಕೊಳ್ಳಬೇಕು ಎಂದು ರಾಘವೇಶ್ವರ ಭಾರತೀ ಶ್ರೀಗಳು ತಿಳಿಸಿದರು.

ಗಾದೆ ಹವ್ಯಕರಿಗೆ ಅನ್ವಯ

ಮಂತ್ರಾಲಯ ರಾಘವೇಂದ್ರ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು ಮಾತನಾಡಿ, ಆಡುಮುಟ್ಟದ ಸೊಪ್ಪಿಲ್ಲ ಎಂಬ ಗಾದೆ ಮಾತಿನಂತೆ ಹವ್ಯಕ ಸಮಾಜ ಎಲ್ಲಾ ಆಯಾಮಗಳಲ್ಲೂ ತಮ್ಮದೇ ಛಾಪು ಮೂಡಿಸುತ್ತಿದೆ. ರಾಜಕೀಯ, ಪತ್ರಿಕಾ, ಕೃಷಿ, ಜ್ಯೋತಿಷ್ಯ, ಯಜ್ಞಯಾಗಾದಿ ಸದಾಚಾರ, ಕಷ್ಟ -ಸುಖಗಳಿಗೂ ಸ್ಪಂದಿಸುವ ಗುಣ ಹವ್ಯಕ ಸಮಾಜ ಹೊಂದಿದೆ. ಹವ್ಯಕಾರ್ಯ ಅಂದರೆ ದೇವತಾ ಕಾರ್ಯ. ದೇಶ ಹಾಗೂ ಸಮುದಾಯದ ಸಲುವಾಗಿ ಆಚರಿಸುವ ಕಾರ್ಯವಾಗಿದೆ. ಯಜ್ಞ-ಯಾಗಾದಿ ಭವ್ಯ ಕಾರ್ಯ ಮಾಡುವ ಸಮುದಾಯ. ಎಲ್ಲರಿಗೂ ಬೇಕಾದ ಹಾಗೂ ಕೈಚಾಚಿ ಬೇಡದ ಸಮುದಾಯ. ಯಾವ ಕಾರ್ಯವನ್ನೂ ಕಡೆಗಣಿಸದೆ ಯಶಸ್ವಿಗಳಿಸುತ್ತಿದೆ. ಎಲ್ಲಾ ಸಮುದಾಯಗಳ ಸಮ್ಮಿಲನವೇ ಭವ್ಯ ಭಾರತದ ನಿರ್ಮಾಣ ಪರಿಕಲ್ಪನೆ ಎಂದು ಪ್ರಶಂಸಿಸಿದರು.

ಹವ್ಯಕ ತಳಿ ಉಳಿಸುವ ಅಭಿಯಾನ

ನಮ್ಮ ಸಮಾಜದ ಎದುರು ಇರುವ ಅತ್ಯಂತ ಗಂಭೀರ ವಿಚಾರ ಹವ್ಯಕರು ಅಳಿದು ಹೋಗುತ್ತಿರುವುದು. ಹವ್ಯಕರ ಸಂಖ್ಯೆ ನೋಡಿದರೆ ಗುರುತು ಅಳಿದು ಹೋಗುವ ಕಾಲ ಬಹಳ ದೂರವಿಲ್ಲ. ಹವ್ಯಕರು ಕುಟುಂಬ ಕಲ್ಯಾಣ ಎಂಬ ಯೋಜನೆಯನ್ನು ತುಂಬಾ ಗಂಭೀರವಾಗಿ ಅಳವಡಿಸಿಕೊಂಡಿದ್ದಾರೆ. ಬ್ರಾಹ್ಮಣ ಸಮುದಾಯದಲ್ಲಿ ಹವ್ಯಕ ಪಂಗಡದವರ ಸಂಖ್ಯೆ ಕ್ಷೀಣಿಸುತ್ತಿದೆ. ಪೀಠಕ್ಕೆ ಬಂದ 30 ವರ್ಷಗಳ ಹಿಂದೆ ಇದ್ದ ಹವ್ಯಕ ಸಮುದಾಯದವರ ಸಂಖ್ಯೆ ಈಗ ಅರ್ಧಕ್ಕಿಂತ ಕಡಿಮೆಯಾಗಿದೆ. ಇಂದಿನ ಯುವಜನಾಂಗ ಮದುವೆ, ಮಕ್ಕಳೆಂಬ ಜವಾಬ್ದಾರಿ ಹೊಂದುವುದರಿಂದ ವಿಮುಖರಾಗುತ್ತಿದ್ದಾರೆ. ಹಿಂದಿನ ಕಾಲದಲ್ಲಿ ಮಕ್ಕಳು ಹೊಂದುವುದು ಖುಷಿಯ ವಿಚಾರವಾಗಿದ್ದರೆ ಇಂದು ಹೊರೆ ಎಂದು ಭಾವಿಸುತ್ತಾರೆ. ಇಂತಹ ಆಲೋಚನೆ ಸಮಾಜದ ಬೆಳವಣಿಗೆಗೆ ಉತ್ತಮವಲ್ಲ. 3, 4, 5 ಮಕ್ಕಳನ್ನು ನೀವು ಪಡೆದುಕೊಳ್ಳುವುದೇ ಆದರೆ ನಿಮ್ಮ ಮಕ್ಕಳ ವಿದ್ಯಾಭ್ಯಾಸ ಹಾಗೂ ಅವರನ್ನು ನೋಡಿಕೊಳ್ಳುವುದರ ಜತೆಗೆ ಮಕ್ಕಳಿಗೆ ನಾನೇ ತಂದೆ -ತಾಯಿ ಆಗುತ್ತೇನೆ. ಅಂದರೆ ನಮ್ಮ ಮಠ ಅವರ ಜತೆಗಿರಲಿದೆ. ಅಪರೂಪದ ಗೋತಳಿಗಳನ್ನು ಉಳಿಸುವ ಅಭಿಯಾನದಂತೆ ಹವ್ಯಕ ಸಮುದಾಯಗಳನ್ನು ಉಳಿಸುವ ಅಭಿಯಾನವನ್ನು ಆರಂಭಿಸುತ್ತೇವೆ. ಅನೇಕ ಮಕ್ಕಳನ್ನು ಹೆತ್ತತಾಯಿಗೆ ಕಂಚಿ ಆಚಾರ್ಯರು ವೀರಮಾತಾ ಎಂಬ ಪ್ರಶಸ್ತಿ ನೀಡಿ ಗೌರವಿಸುತ್ತಿದ್ದರು. ಅದೇ ರೀತಿ ಹವ್ಯಕ ಮಠದಲ್ಲಿಯೂ ಇನ್ನು ಆರಂಭಿಸಲಿದ್ದೇವೆ ಎಂದು ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತೀ ಸ್ವಾಮೀಜಿ ಮನವಿ ಮಾಡಿದರು.

ಪತ್ರಿಕಾ ರಂಗದ ತ್ರಿವಿಕ್ರಮ

ರಾಜಕೀಯ ಕ್ಷೇತ್ರದಲ್ಲಿ ಹವ್ಯಕ ಸಮಾಜದ ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಗಳಾಗಿದ್ದರು. ಅದೇ ರೀತಿಯಾಗಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ರಾಜಕೀಯ ವಲಯದಲ್ಲಿ ಸಾಕಷ್ಟು ಪ್ರಖ್ಯಾತಿ ಪಡೆದಿದ್ದಾರೆ. ಪತ್ರಿಕಾ ರಂಗದಲ್ಲಿ ತ್ರಿವಿಕ್ರಮ ಎಂದು ಪ್ರಖ್ಯಾತಿ ಪಡೆದಿರುವ ಪತ್ರಕರ್ತ ವಿಶ್ವೇಶ್ವರ ಭಟ್ ಅವರು ನಮ್ಮ ಸಮುದಾಯವರು. ಅವರು ಪ್ರಾಮಾಣಿಕ ಬರವಣಿಗೆ ಮೂಲಕ ಗುರುತಿಸಿಕೊಂಡಿದ್ದಾರೆ. ಅನೇಕ ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿ, ಈಗ ವಿಶ್ವವಾಣಿ ಪತ್ರಿಕೆ ನಡೆಸುತ್ತಿದ್ದಾರೆ ಎಂದು ಮಂತ್ರಾಲಯ ಶ್ರೀಗಳು ಶ್ಲಾಘಿಸಿದರು. ಆದಿಚುಂಚನಗಿರಿ ಮಠದ ಸೌಮ್ಯನಾಥ ಮಹಾಸ್ವಾಮೀಜಿ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಮಹೇಶ್ ಜೋಶಿ, ಬ್ರಾಹ್ಮಣ ಅಭಿವೃದ್ಧಿ ನಿಗಮದ ಅಧ್ಯಕ್ಷ ಅಸಗೋಡು ಜಯಸಿಂಹ, ತೃತೀಯ ವಿಶ್ವ ಹವ್ಯಕ ಸಮ್ಮೇಳನದ ಗೌರವಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾಜಿ ಉಪ ಮುಖ್ಯಮಂತ್ರಿ ಹಾಗೂ ಶಾಸಕ ಡಾ.ಅಶ್ವತ್ಥನಾರಾಯಣ, ಅಖಿಲ ಹವ್ಯಕ ಮಹಾಸಭಾದ ಅಧ್ಯಕ್ಷ ಡಾ. ಗಿರಿಧರ ಕಜೆ ಸೇರಿದಂತೆ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಬ್ರಾಹ್ಮಣರಿಗೆ ಶೇ.10 ಮೀಸಲು ಒದಗಿಸಿ

ಸಮಾಜದ ಜೀವನದಲ್ಲಿ ಸದಾಚಾರ ಅಳವಡಿಸಿಕೊಂಡಿರುವವರು ಹವ್ಯಕ ಸಮಾಜದವರು. ಇಡೀ ಬ್ರಾಹ್ಮಣ ಸಮುದಾಯದಲ್ಲಿ ಹವ್ಯಕ ಸಮಾಜ ಶಿಖರಪ್ರಾಯ. ಸ್ವಾತಂತ್ರ್ಯ ಹೋರಾಟದಲ್ಲೂ ಅನೇಕ ಹವ್ಯಕ ಕುರುಹುಗಳಿವೆ. ಹವ್ಯಕ ಸಮಾಜ ವಿಶಿಷ್ಟ ಭಾಷೆ, ಸಂಸ್ಕೃತಿ, ಜೀವನ ಶೈಲಿ ಅಳವಡಿಸಿಕೊಂಡಿದೆ. ಸನಾನತ ಧರ್ಮಕ್ಕೆ ಶಕ್ತಿಹೊಡುವ ಕೆಲಸ ಬ್ರಾಹ್ಮಣ ಸಮುದಾಯದವರು ಮಾಡಬೇಕಿದೆ. ಸಂವಿಧಾನವನ್ನು ಗೌರವಿಸಬೇಕು ಎಂದು ಆಡಳಿತಕ್ಕೆ ಬಂದ ಸರಕಾರಗಳು ಹೇಳುತ್ತಲೇ ಬಂದಿವೆ. ಸಂವಿಧಾನ ಉಲ್ಲೇಖವಾಗಿರುವಂತೆ ರಾಜಕೀಯ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಬ್ರಾಹ್ಮಣರಿಗಿರುವ ಶೇ. 10 ರಷ್ಟು ಮೀಸಲು ಇದುವರೆಗೂ ನೀಡಿಲ್ಲ. ನಮ್ಮನ್ನು ಕಾರಣಾಂತರಗಳಿಂದ ಟೀಕೆ ಹಾಗೂ ದೂಷಣೆ ಮಾಡುವ ಪ್ರವೃತ್ತಿ ಇತ್ತೀಚಿಗೆ ಮುಂದುವರಿದಿದೆ. ಸರಕಾರದಿಂದ ಬ್ರಾಹ್ಮಣರಿಗೆ ಅನುಕೂಲವಾಗುವ ಯೋಜನೆ ಇಲ್ಲ ಎಂದು ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಅವರು ಬೇಸರ ವ್ಯಕ್ತಪಡಿಸಿದರು.

ಹವ್ಯಕ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು, ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ನಿಧನದ ಹಿನ್ನೆಲೆಯಲ್ಲಿ ವಿಶೇಷ ಮಾಹಿತಿಗಳನ್ನು ಹೊತ್ತುತಂದ ವಿಶ್ವವಾಣಿ ಪತ್ರಿಕೆಯನ್ನು ಕುತೂಹಲದಿಂದ ಓದುವುದರಲ್ಲಿ ತಲ್ಲೀನರಾದ ದೃಶ್ಯ.

ವೇದಿಕೆಯಲ್ಲಿ ಆಸೀನರಾಗಿದ್ದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ, ಮಾಜಿ ಡಿಸಿಎಂ ಡಾ.ಅಶ್ವತ್ಥನಾರಾಯಣ.

ಅಡಕೆ ಬೆಳೆಗಾರರ ರಕ್ಷಣೆಗೆ ಕೇಂದ್ರ ಬದ್ಧ: ಪ್ರಲ್ಹಾದ ಜೋಶಿ

ಹವ್ಯಕ ಬ್ರಾಹ್ಮಣ ಸಮಾಜ ಮೂಲತಃ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಮಂದಿ. ನನ್ನ ಬಳಿ ಪ್ರಮುಖವಾಗಿ ಅಡಕೆ ಸಂಬಂಧಿತ ಸಮಸ್ಯೆಗಳನ್ನು ಹೇಳಿಕೊಂಡು ಬರುತ್ತಾರೆ. ಅಡಕೆ ಕೇವಲ ಎಲೆ ಅಡಕೆಯಾಗಿ ತಿನ್ನಲು ಮಾತ್ರ ಬಳಕೆಯಾಗದೆ ಮದುವೆಯಿಂದ ಹಿಡಿದು ಶ್ರಾದ್ಧದವರೆಗೆ ಉಪಯೋಗವಾಗಿದೆ. ಅನೇಕ ರೀತಿಯ ವ್ಯತಿರಿಕ್ತ ವರದಿಗಳು ಅಡಕೆ ಬಗ್ಗೆ ಬಂದರೂ ಸಹ ಭಾರತ ಸರಕಾರದ ಮಂತ್ರಿಯಾಗಿ ಅಡಕೆ ಬೆಳೆಗಾರರ ಯಾವುದೇ ಸಮಸ್ಯೆಗಳಿಗೆ ನಾವು ಜತೆಯಾಗಿ ಇರುತ್ತೇವೆ ಎಂದು ಭರವಸೆ ನೀಡುತ್ತೇನೆ. ಒಟ್ಟು ಹಿಂದೂ ಸಮಾಜವನ್ನು ನಾವು ಜೊತೆಯಾಗಿ ತೆಗೆದುಕೊಂಡು ಹೋಗಬೇಕಿದೆ. ಇಂದು ಭಾರತ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುತ್ತಿದೆ. ಒಂದು ಕಾಲದಲ್ಲಿ ಫ್ರೆಜೈಲ್ 5 ಎನ್ನುತ್ತಿದ್ದ ಆರ್ಥಿಕತೆ ಒಡೆದು ಹೋಗಬಹುದಾಗಿದ್ದ ಆರ್ಥಿಕತೆ ಸ್ಥಿತಿಯಿಂದ ಇಂದು ಜಗತ್ತಿನಲ್ಲಿ 5ನೇ ಅತಿದೊಡ್ಡ ಆರ್ಥಿಕ ಶಕ್ತಿಯ ದೇಶವಾಗಿ ಇವತ್ತು ಹೊರಹೊಮ್ಮಿದೆ. ಒಂದು ಕಾಲದಲ್ಲಿ ಆಮದು ಎನ್ನುತ್ತಿದ್ದ ಭಾರತದಲ್ಲಿ ಇಂದು ಮೊಬೈಲ್ ನಿಂದ ಹಿಡಿದು ರಕ್ಷಣಾ ಸಾಧನದವರೆಗೆ ರಫ್ತಿನ ಕೇಂದ್ರವಾಗಿ ಬೆಳೆಯುತ್ತಿದೆ. ಒಂದು ಕಾಲದಲ್ಲಿ ರಫ್ತಿನ ಕೇಂದ್ರ ಚೀನಾ ಎಂದು ಹೇಳುತ್ತಿದ್ದಲ್ಲಿ ಇಂದು ಭಾರತ ಅದನ್ನು ಹಿಂದಿಕ್ಕುವ ಸಾಧನೆ ತೋರಿಸುತ್ತಿದೆ. ಕರೋನಾ ನಂತರ ಭಾರತದ ಆರ್ಥಿಕತೆಯ ಪುನರುತ್ಥಾನದ ಬಗ್ಗೆ ಜಗತ್ತು ಆಸಕ್ತಿಯಿಂದ ನೋಡುತ್ತಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಕರಕುಶಲ ವಸ್ತುಗಳ ಪ್ರದರ್ಶನ

ಹವ್ಯಕರ ಕೈ ಕೌಶಲ್ಯದಿಂದ ತಯಾರಿಸಲ್ಪಟ್ಟ ಹಾಗೂ ಹಳ್ಳಿಸೊಗಡಿನ ಹವ್ಯಕರ ಪರಂಪರೆಯ ಜೊತೆಗೆ ಹಾಸುಹೊಕ್ಕಾದ ಪ್ರಾಚೀನ ವಸ್ತುಗಳಾದ ಕಡಗೋಲು, ಕೆರೆಮಣೆ, ಕಲ್ಲಿ, ಹೆಡಗೆ, ದೋಟಿ, ಕಡಕಲನಮನೆ ಮುಂತಾದವುಗಳು, ಬಿದಿರಿನ ಕಲೆ, ಕೌದಿಕಲೆ, ಕಸೂತಿ ಕಲೆ, ಜನಪದ ಶೈಲಿಯ ನೇಯ್ಗೆ, ಕಾಷ್ಠ ಕಲೆಗಳು ಒಂದೇ ಸೂರಿನಡಿ ಲಭ್ಯವಿದೆ.

ಹವ್ಯಕ ಪಾಕೋತ್ಸವ - ಆಹಾರ ಮೇಳ

ಹವ್ಯಕ ಸಂಸ್ಕೃತಿಯಲ್ಲಿ ಆಹಾರಕ್ಕು ವಿಶೇಷ ಮಾನ್ಯತೆ ಇದ್ದು, ಹವ್ಯಕರ ಪಾಕ ವೈವಿಧ್ಯಗಳು ನಾಡಿನ ಜನಮನ್ನಣೆ ಪಡೆದಿವೆ. ಮಲೆನಾಡು - ಕರಾವಳಿ ಭಾಗಗಳ ಪಾರಂಪರಿಕ ಹವ್ಯಕ ಪಾಕಗಳು ಈ ಐತಿಹಾಸಿಕ ಕಾರ್ಯಕ್ರಮದ ರುಚಿಯನ್ನು ಹೆಚ್ಚಿಸಿವೆ. ಪತ್ರೊಡೆ, ಕೊಟ್ಟೆಕಡುಬು, ವಿವಿಧ ರೀತಿಯ ಅವಲಕ್ಕಿಗಳು, ಗೆಣಸೆಲೆ, ಜಿಲೇಬಿ, ಅತ್ರಾಸ, ಚಕ್ಕುಲಿ, ಸುಕ್ಕಿನುಂಡೆ, ಕೇಸರಿ, ತಂಬುಳಿ, ಪಾಯಸ, ಹೋಳಿಗೆಗಳು ಜನಾಕರ್ಷಣೆಯ ಕೇಂದ್ರವಾಗಿದ್ದವು.

ಸಾಂಸ್ಕೃತಿಕ ಕಲಾಸಂಜೆ

ಶುಕ್ರವಾರ ಹಿರಿ-ಕಿರಿ ತೆರೆಯ ಕಲಾವಿದರಿಂದ ಹವ್ಯಕ ಕನ್ನಡದಲ್ಲಿರುವ ಕನ್ನಡದ ಪ್ರಥಮ ನಾಟಕ 'ಇಗ್ಗಪ್ಪ ಹೆಗಡೆ ವಿವಾಹ ಪಹಸನ', ನಾಡಿನ ಶ್ರೇಷ್ಠ ಕಲಾವಿದರಿಂದ ಸಂಗೀತ ಸಂಗಮ ಕಾರ್ಯಕ್ರಮ ಆಯೋಜಿಸಲಾಗಿತ್ತು. ಡಿ. 28ರಂದು ಶ್ರೇಷ್ಠ ಯಕ್ಷಕಲಾವಿದರಿಂದ ಯಕ್ಷಯಾನ ಹಾಗೂ ಡಿ. 29ರಂದು ಸಾಂಪ್ರದಾಯಿಕ ಹಾಡು, ಸಾಂಪ್ರದಾಯಿಕ ಫ್ಯಾಷನ್ ಶೋ, ವಾದ್ಯವೈಭವ ಜುಗಲ್ಬಂದಿ, ನಾಟ್ಯೋತ್ಸವ ನಡೆಯಲಿದೆ. ಹಾಗೆಯೇ ವಿಶೇಷ ರೀತಿಯಲ್ಲಿ ನರ್ತನ ಸಂಕೀರ್ತನ ಜನಮನ ಸೆಳೆಯಲಿದೆ.

ಹವ್ಯಕ ಸಮುದಾಯ ಮಾದರಿ ಸಮಾಜ

ಹವ್ಯಕ ಸಮುದಾಯವು ದೇಶದ ಚಿಂತನೆಗೆ ಪೂರಕವಾಗಿ ಬದುಕುತ್ತಿರುವ ಮಾದರಿ ಸಮಾಜ. ಕಡಿಮೆ ಜನಸಂಖ್ಯೆ ಹೊಂದಿದ ಹವ್ಯಕ ಸಮುದಾಯದ ವಿಶಿಷ್ಟ ಸಾಧನೆ ಮತ್ತು ಸಮಾಜಕ್ಕೆ ನೀಡುತ್ತಿರುವ ಕೊಡುಗೆಗಳ ಕುರಿತು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮೆಚ್ಚುಗೆ ವ್ಯಕ್ತಪಡಿಸಿದರು. ಸ್ವಾಭಿಮಾನಿ ಹಾಗೂ ಸೌಹಾರ್ದಯುತ ಮಾದರಿ ಬದುಕಿಗೆ ಹೆಸರಾಗಿರುವ ಹವ್ಯಕ ಸಮುದಾಯದ ವಿಶ್ವಮಟ್ಟದ ಸಮ್ಮೇಳನದ ಮೂಲಕ ಸಮುದಾಯದ ವಿಶಿಷ್ಟತೆಯನ್ನು ಜಗತ್ತು ನೋಡುವಂತಾಗಿದೆ. ಈ ಸಮುದಾಯವನ್ನು ಸಂಘಟಿತ ಮಾರ್ಗದಲ್ಲಿ ಕೊಂಡೊಯ್ಯುವ ನಿಟ್ಟಿನಲ್ಲಿ ಸಮ್ಮೇಳನ ಯಶಸ್ವಿಯಾಗಲೆಂದು ಅವರು ಹಾರೈಸಿದರು.

ಹವ್ಯಕ ಸಮ್ಮೇಳನಕ್ಕೆ ಹರಿದು ಬಂದ ಜನಸಾಗರ..

> ಎಲ್ಲಾ ಸಮಾಜಕ್ಕೂ ಮೇಲ್ಪಂಕ್ತಿ ಸಂಘಟನೆ ಹವ್ಯಕ ಸಮಾಜ. ಸಮಾಜವನ್ನು ಸಂಘಟಿಸುವ ಜತೆಗೆ ಸನಾತನ ಹಿಂದೂ ಧರ್ಮದ ರಕ್ಷಣೆಯಲ್ಲೂ ಮುಂಚೂಣಿಯಲ್ಲಿದೆ. ಸಮಸ್ಯೆ, ಸವಾಲುಗಳು ಸದಾಕಾಲದಲ್ಲೂ ಇರುತ್ತದೆ. ಸಮಸ್ಯೆಗಳನ್ನು ಹೋಗಲಾಡಿಸಿ ಜೀವನದ ಸಾರ್ಥಕತೆಗೆ ಬೇಕಾದ ಪ್ರಯತ್ನ ಸಮ್ಮೇಳನಗಳ ಮೂಲಕ ಸಂಕಲ್ಪ ಮಾಡಬೇಕಿದೆ.
>
> **- ವಿಶ್ವೇಶ್ವರ ಹೆಗಡೆ ಕಾಗೇರಿ** ಸಂಸದ

> ವಿವಿಧತೆಯಲ್ಲಿ ಏಕತೆಯ ದಿಕ್ಸೂಚಿ ಹವ್ಯಕರು. ಈ ಸಮಾಜವೇ ನನ್ನನ್ನು ಬೇರೆ ಬೇರೆ ಕ್ಷೇತ್ರದಲ್ಲಿ ಬೆಳೆಯಲು ಸ್ಫೂರ್ತಿ. ತನ್ನದೇ ಶಕ್ತಿಯಿಂದ ಸಾಮಾಜಿಕ ಬದಲಾವಣೆಗೆ ಮುಂಚೂಣಿಯಲ್ಲಿದೆ. ಹಲವಾರು ಕ್ಷೇತ್ರಗಳಲ್ಲಿ ತನ್ನದೇ ಆದ ಸೇವೆ ಸಲ್ಲಿಸುವ ಮೂಲಕ ಪ್ರಖ್ಯಾತಿ ಪಡೆದಿದ್ದಾರೆ.
>
> **-ಡಿ.ವಿ. ಸದಾನಂದಗೌಡ** ಮಾಜಿ ಮುಖ್ಯಮಂತ್ರಿ

> ರಾಮಾಯಣದಲ್ಲಿ ರಾಮ ಬ್ರಾಹ್ಮಣ ಅಲ್ಲ. ಆದರೆ ರಾವಣ ಬ್ರಾಹ್ಮಣ. ಇಲ್ಲಿ ನಾವು ರಾವಣನನ್ನು ಪೂಜೆ ಮಾಡಲ್ಲ. ರಾಮನನ್ನು ಪೂಜೆ ಮಾಡುತ್ತೇವೆ. ಅಂದರೆ ಇಲ್ಲಿ ಎಲ್ಲಾ ಧರ್ಮದವರನ್ನು ಗೌರವಿಸುತ್ತೇವೆ. ಐತಿಹಾಸಿಕವಾಗಿ ನಾವು ಜಾತಿಗೆ ಪ್ರಾಧಾನ್ಯತೆ ಕೊಟ್ಟವರಲ್ಲ, ಎಲ್ಲ ಜಾತಿ-ಧರ್ಮದವರಿಗೂ ವಿಶೇಷ ಸ್ಥಾನಮಾನ ನೀಡಿದವರು ಬ್ರಾಹ್ಮಣರು.
>
> **-ಪ್ರಲ್ಹಾದ ಜೋಶಿ** ಕೇಂದ್ರ ಸಚಿವ

ವಿಶ್ವವಾಣಿ

ಸಂಪಾದಕೀಯ

ಚೀನಾ ಜಲ ರಾಜಕಾರಣ

ಯರ್ಲುಂಗ್ ಜಂಗ್ಬೊ ಎಂಬ ಹೆಸರಿನಿಂದ ಕರೆಸಿಕೊಳ್ಳುವ ನಮ್ಮ ಬ್ರಹ್ಮಪುತ್ರ ನದಿಗೆ ಭಾರತದ ಗಡಿ ಸಮೀಪದಲ್ಲಿ ಬೃಹತ್ ಅಣೆಕಟ್ಟೆ ನಿರ್ಮಿಸಲು ಮತ್ತು ಜಲವಿದ್ಯುತ್ ಯೋಜನೆ ರೂಪಿಸಲು ಚೀನಾ ಮುಂದಾಗಿದೆ. ವಿಶ್ವದಲ್ಲೇ ಅತಿ ದೊಡ್ಡದಾದ ಅಣೆಕಟ್ಟು ಇದಾಗಲಿದ್ದು, ಆ ಮೂಲಕ ನದಿಯಲ್ಲಿ ಹರಿಯುವ ನೀರಿನ ಮೇಲೆ ಚೀನಾ ತನ್ನ ಹಿಡಿತ ಸಾಧಿಸಲು ಯತ್ನಿಸುತ್ತಿದೆ. ಅಣೆಕಟ್ಟಿನ ಗಾತ್ರದ ಲೆಕ್ಕಾಚಾರದಂತೆ ನದಿಯಿಂದ ದೊಡ್ಡ ಪ್ರಮಾಣದಲ್ಲಿ ನೀರು ಹರಿಸಿದರೆ, ಕೆಳಭಾಗದಲ್ಲಿ ಪ್ರವಾಹ ಸ್ಥಿತಿ ತಲೆದೋರುವ ಸಾಧ್ಯತೆಯಿದೆ. ಈ ನದಿ ಪಾತ್ರದ ಕೆಳಭಾಗದಲ್ಲಿರುವ ಮತ್ತು ಈ ನದಿ ನೀರಿನಲ್ಲಿ ಪಾಲು ಹೊಂದಿರುವ ಭಾರತ ಹಾಗೂ ಬಾಂಗ್ಲಾದೇಶಕ್ಕೆ ನಿಜಕ್ಕೂ ಇದು ಕಳವಳಕಾರಿ ವಿಚಾರ. 'ಈ ಅಣೆಕಟ್ಟೆಯಲ್ಲಿ ನೀರು ಸಂಗ್ರಹಿಸುವ ಉದ್ದೇಶ ಇಲ್ಲ, ವಿದ್ಯುತ್ ಉತ್ಪಾದನೆಗೆ ಬಳಸಿಕೊಂಡ ಬಳಿಕ ನೀರನ್ನು ನದಿಗೆ ಹರಿಸಲಾಗುವುದು. ಹಾಗಾಗಿ, ಈ ಯೋಜನೆಯಿಂದ ಬೇರೆ ದೇಶಗಳಿಗೆ ತೊಂದರೆ ಆಗದು' ಎಂದು ಚೀನಾ ಹೇಳುತ್ತಿದೆ. ಆದರೆ, ವಾಸ್ತವ ಹಾಗೆ ಇಲ್ಲ. ಅಣೆಕಟ್ಟೆ ನಿರ್ಮಾಣದ ವಿಚಾರದಲ್ಲಿ ಚೀನಾ ಪಾರದರ್ಶಕವಾಗಿ ವರ್ತಿಸುತ್ತಿಲ್ಲ ಎಂಬ ಅನುಮಾನ ಇದೆ. ಭಾರತ-ಚೀನಾ ನಡುವೆ ನೀರಿನ ವಿಚಾರದಲ್ಲಿ ಸಹಕಾರ ಅಥವಾ ಹಂಚಿಕೆಯ ಒಪ್ಪಂದ ಇಲ್ಲ. ಆದರೆ, ನೀರು ಹರಿಸುವಿಕೆಯ ಮಾಹಿತಿ ಹಂಚಿಕೆ ಒಪ್ಪಂದ ಇದೆ. ಅಂದರೆ, ಎಷ್ಟು ನೀರು, ಯಾವಾಗ ಹರಿಸಲಾಗುತ್ತಿದೆ ಎಂಬುದನ್ನು ಚೀನಾವು ಭಾರತಕ್ಕೆ ತಿಳಿಸಬೇಕು. ಆದರೆ, 2017 ದೋಕಲಾ ಮುಖಾಮುಖಿಯ ಸಂದರ್ಭದಲ್ಲಿ ಈ ಮಾಹಿತಿ ನೀಡಲು ಚೀನಾ ನಿರಾಕರಿಸಿತ್ತು. ಚೀನಾದ ಇಂತಹ ವರ್ತನೆಯಿಂದಾಗಿಯೇ ಗಡಿಯಲ್ಲಿ ಆ ದೇಶವು ಕೈಗೆತ್ತಿಕೊಳ್ಳುವ ಯಾವುದೇ ಯೋಜನೆ ಅಪಾಯಕಾರಿಯೇ. ತನ್ನ ನೆಲದಲ್ಲಿ ಹುಟ್ಟಿ, ಬೇರೆ ದೇಶಗಳಿಗೆ ಹರಿಯುವ ನದಿಗಳ ನೀರನ್ನು ಕೂಡ ಆಯುಧವನ್ನಾಗಿ ಚೀನಾ ಬಳಸಿಕೊಂಡ ಉದಾಹರಣೆ ಇದೆ. ಚೀನಾದ ಈ ಜಲ ರಾಜಕಾರಣಕ್ಕೆ ಈವರೆಗೆ ಮ್ಯಾನ್ಮಾರ್ ಮಾತ್ರ ಸಂತ್ರಸ್ತ ದೇಶವಾಗಿತ್ತು. ಆದರೆ ಈಗ ಭಾರತ ಮತ್ತು ಬಾಂಗ್ಲಾದೇಶವೂ ಸಂತ್ರಸ್ತವಾಗುವ ಅಪಾಯವಿದೆ. ಅದೆಲ್ಲಕ್ಕಿಂತ ಭಾರತ-ಚೀನಾ ನಡುವಿನ ಈ ಸ್ಪರ್ಧೆಯು ಆ ಭಾಗದ ಪರಿಸರಕ್ಕೆ ಬಹುದೊಡ್ಡ ಅಪಾಯ ತಂದೊಡ್ಡುವುದರಲ್ಲಿ ಯಾವುದೇ ಅನುಮಾನ ಇಲ್ಲ.

ಸೊಂಪಾದಕೀಯ

ಅಣ್ಣಾ ನಿನ್ನ ತೋಳಿನಲ್ಲಿ...

ಕರ್ನಾಟಕದಲ್ಲಿ ಪೊಲೀಸ್ ಅಧಿಕಾರಿ ಆಗಿದ್ದಾಗ ರಾಜ್ಯಾದ್ಯಂತ ಫೇಮಸ್ ಆದವರು ಅಣ್ಣಾಮಲೈ. ಇಲ್ಲಿ ಖಾಕಿ ಹಾಕಿದ್ದಾಗ ಸಿಂಗಂ ಅಂತಲೇ ಹೆಸರು ಮಾಡಿದವರು. ಆದರೆ ಅವರು ಖಾಕಿ ತೆಗೆದಿಟ್ಟು, ಖಾದಿ ಧರಿಸಿ ಹೆಗಲ ಮೇಲಿನ ಸ್ಟಾರ್‌ಗಳನ್ನು ಕಳಚಿ ರಾಜಕೀಯಕ್ಕೆ ಧುಮುಕಿದ ಮೇಲೆ ಮಾತ್ರ ಪಾಪ ಅವರ ಸ್ಟಾರ್ ಸರಿ ಇಲ್ಲ ಅನ್ಸುತ್ತೆ. ಅವರು ಏನು ಮಾಡಿದರೂ ಟ್ರೋಲ್ ಆಗ್ತಾ ಇರೋದಂತೂ ಸತ್ಯ. ಜೊತೆಯಲ್ಲಿ ಅವರು ಬಿಜೆಪಿ ಸೇರಿದ ಮೇಲೆ ಅವರಿಗೆ ಚುನಾವಣೆಗಳಲ್ಲೂ ಯಶಸ್ಸು ಸಿಗುತ್ತಿಲ್ಲ. ಆದರೆ ಕೇಂದ್ರ ಬಿಜೆಪಿ ನಾಯಕರ ಗಮನ ಸೆಳೆಯಲು ಅವರು ಯಾವಾಗಲೂ ಇನ್ನಿಲ್ಲದ ಕಸರತ್ತು ಮಾಡುತ್ತಿರೋದಂತೂ ಸತ್ಯ. ಆಗಾಗ ಅಲ್ಲಿ ಇಲ್ಲಿ ಪ್ರೊಟೆಸ್ಟ್‌ಗಳಲ್ಲಿ ಭಾಗವಹಿಸಿ ತಮ್ಮಲ್ಲಿ ಒಬ್ಬ ನಾಯಕ ಇದ್ದಾನಾ ಅಂತ ಟೆಸ್ಟ್ ಮಾಡಿಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲದೆ ನಾನೇ ತಮಿಳುನಾಡಿನ ಮುಂದಿನ ಮುಖ್ಯಮಂತ್ರಿ ಅನ್ನೋ ಲೆವೆಲ್ಲಿಗೆ ಅವರ ಅತಿಯಾದ ಆತ್ಮವಿಶ್ವಾಸ ಬೆಳೆಯುತ್ತಿದೆ. ಆದರೆ ಪಾಪ ನೋಡುಗರ ಕಣ್ಣಿಗೆ ಮಾತ್ರ ಅವರು ಕಾಮಿಡಿ ಪೀಸ್ ಆಗಿ ಕಾಣ್ತಾ ಇರೋದಂತೂ ಸತ್ಯ. ಈಗ ಕೂಡಾ ಅಂಥದ್ದೇ ಸಾಹಸಕ್ಕೆ ಕೈ ಹಾಕಿ ಮತ್ತೆ ನಗೆಪಾಟಲಿಗೆ ಈಡಾಗಿದ್ದಾರೆ ಅಣ್ಣಾಮಲೈ. ಈ ಬಾರಿ ಅವರ ಉದ್ದೇಶ ಸರಿ ಇದೆ. ತಮಿಳುನಾಡಿನ ಅಣ್ಣಾ ಯೂನಿವರ್ಸಿಟಿಯಲ್ಲಿ ಹುಡುಗಿಯೊಬ್ಬಳ ಮೇಲೆ ನಡೆದ ಲೈಂಗಿಕ ದೌರ್ಜನ್ಯದ ವಿರುದ್ಧ ಅವರು ದನಿ ಎತ್ತಿದ್ದಾರೆ. ಇದಕ್ಕೆ ಡಿಎಂಕೆ ಸರಕಾರವೇ ಕಾರಣ ಅಂತ ಆರೋಪ ಮಾಡಿ ಸಾರ್ವಜನಿಕವಾಗಿ ದೊಡ್ಡ ಚಾಟಿಯಿಂದ ತಮ್ಮನ್ನು ತಾವು ಶಿಕ್ಷಿಸಿಕೊಂಡಿದ್ದಾರೆ ಅಣ್ಣಾಮಲೈ. ಆದರೆ ತಮ್ಮ ಸಂಗಡಿಗರೊಂದಿಗೆ ಅವರು ನಡೆಸುತ್ತಿದ್ದ ಈ ಸಾರ್ವಜನಿಕ ಪ್ರದರ್ಶನದ ವೇಳೆ ಅಣ್ಣಾಮಲೈ ಅವರು ಒಂದು ಏಟು ಹೊಡೆಸಿಕೊಂಡ ತಕ್ಷಣ ಅವರ ಬೆಂಬಲಿಗ, ಅಣ್ಣಾ ನಿನ್ನ ತೋಳಿನಲ್ಲಿ ಬರೆಗಳನ್ನು ನೋಡಲಾರೆ ಅನ್ನೋ ರೀತಿ ಓಡಿ ಬಂದು ತಬ್ಬಿ ಹೊಡೆದುಕೊಳ್ಳುವುದನ್ನು ತಪ್ಪಿಸಿದ ರೀತಿ ಮಾತ್ರ ಟ್ರೋಲ್ ಆಗ್ತಿದೆ. ಈ ರೀತಿ ತಮಗೆ ತಾವು ಏಟು ಮಾಡಿಕೊಂಡರೆ, ಮುದಿನ ಚುನಾವಣೆಯಲ್ಲಿ ವೋಟು ಸಿಗುತ್ತದೆ ಅಂತ ಅವರಿಗೆ ಯಾರು ಹೇಳಿದರೋ ಗೊತ್ತಿಲ್ಲ. ಆದರೆ ಸದ್ಯಕ್ಕೆ ಇದು ಟ್ರೋಲ್‌ಗಳಿಗೆ ಆಹಾರ ಆಗಿದೆ.

ಸಂಪಾದಕರ ಸದ್ಯಶೋಧನೆ

ಆ ಎರಡು ಪ್ರಸಂಗಗಳು

ಮೈಸೂರಿನ ಕಿರಣ್ ಎಂಬುವವರು ಜಪಾನಿನಲ್ಲಿ ಎರಡು ತಿಂಗಳುಗಳು ವಾಸವಿದ್ದ ಸಂದರ್ಭದಲ್ಲಿ ತಮಗಾದ ಅನುಭವವನ್ನು ಹಂಚಿಕೊಂಡಿದ್ದನ್ನು ನಾನು ಸಾಮಾಜಿಕ ಜಾಲತಾಣದಲ್ಲಿ ಓದಿದ್ದೆ. ಅದನ್ನು ನಿಮಗೂ ಹೇಳಬೇಕು. 'ನಾನು ಟೋಕಿಯೋದಲ್ಲಿದ್ದ ಎರಡು ತಿಂಗಳ ಅವಧಿಯಲ್ಲಿ, ಅಲ್ಲಿ ನನಗೆ ನಿತ್ಯವೂ ವಿಭಿನ್ನ ಅನುಭವಗಳಾಗುತ್ತಿದ್ದುದು ನನ್ನನ್ನು ವಿಸ್ಮಯಗೊಳಿಸಿತ್ತು. ಅಲ್ಲಿನ ಜನರ ಸಂಸ್ಕೃತಿ, ಜೀವನವಿಧಾನ ಮತ್ತು ಜನಜೀವನ ನನ್ನ ಮೇಲೆ ಗಾಢ ಪ್ರಭಾವವನ್ನು ಬೀರಿದೆ' ಎಂದು ಕಿರಣ್ ಹೇಳುತ್ತಾ, ಆ ಅನುಭವವನ್ನು ನಿವೇದಿಸಿಕೊಂಡಿದ್ದರು. 'ಜಪಾನಿಗೆ ಬಂದ ಹತ್ತು ದಿನಗಳಾಗಿರಲಿಲ್ಲ. ನಾನು ಕೊರಿಯರ್ ಕಂಪನಿಗೆ ನನಗೆ ಪಾರ್ಸೆಲ್ ತಲುಪಿಸುವ ಸಮಯ ಮಧ್ಯಾಹ್ನ ಹನ್ನೆರಡು ಗಂಟೆ ಎಂದು ನಿಗದಿಪಡಿಸಿದ್ದೆ. ಸಾಮಾನ್ಯವಾಗಿ ನಮ್ಮೂರಿನಲ್ಲಿ ಯಾರೂ ಹೇಳಿದ ಸಮಯಕ್ಕೆ ಡೆಲಿವರಿ ಮಾಡುವುದಿಲ್ಲವಲ್ಲ. ಟೋಕಿಯೋದ ಕೊರಿಯರ್ ಕಂಪನಿಯೂ ಹಾಗೆ ವರ್ತಿಸಬಹುದು ಎಂಬುದು ನನ್ನ ಊಹೆಯಾಗಿತ್ತು. ನಾನು ಮಧ್ಯಾಹ್ನ 11:55ಕ್ಕೆ ನನ್ನ ಅಪಾರ್ಟ್‌ಮೆಂಟ್ ಬಾಗಿಲನ್ನು ತೆರೆದರೆ, ಡೆಲಿವರಿ ಬಾಯ್ ಅಲ್ಲಿಯೇ ಸುಮ್ಮನೆ ನಿಂತಿದ್ದ. ನನಗೆ ಆಶ್ಚರ್ಯವಾಯಿತು. ''ನೀನು ಮುಂಚಿತವಾಗಿಯೇ ಬಂದಿದ್ದರೆ ನನ್ನ ಬಾಗಿಲನ್ನು ಏಕೆ ತಟ್ಟಲಿಲ್ಲ?'' ಎಂದು ನಾನು ಅವನನ್ನು ಕೇಳಿದಾಗ ಆತ, ''ನಾನು 12 ಗಂಟೆ ಆಗುವುದಕ್ಕೆ ಕಾಯುತ್ತಿದ್ದೇನೆ. ಇನ್ನೂ ಐದು ನಿಮಿಷ ಇದೆಯಲ್ಲ'' ಎಂದು ಹೇಳಿದ. ''ಏನು ಇನ್ನೂ ಐದು ನಿಮಿಷಗಳಿರುವಾಗಲೇ ಬಂದುಬಿಟ್ಟಿದ್ದೀಯಾ?'' ಎಂದು ಕೇಳಿದೆ. ಅದಕ್ಕೆ ಆತ, ''ನೀವು ಹೇಳಿದ್ದು ಹನ್ನೆರಡು ಗಂಟೆಗೆ ತಾನೇ? ನಾನು ಸಮಯಪಾಲಿಸಬೇಕಲ್ಲ? ನೀವು ಯಾವ ಸಮಯಕ್ಕೆ ಹೇಳುತ್ತೀರೋ ಆ ಸಮಯಕ್ಕೆ ತಲುಪಿಸುತ್ತೇವೆ. ಮಧ್ಯರಾತ್ರಿ 2.51ಕ್ಕೆ ತಲುಪಿಸಿ ಎಂದು ಶೆಡ್ಯೂಲ್ ಮಾಡಿದರೆ, ಸರಿಯಾಗಿ ಅದೇ ಸಮಯಕ್ಕೆ ತಲುಪಿಸುತ್ತೇವೆ'' ಎಂದು ಹೇಳಿದ. ನನಗೆ ಆತನ ಸಮಯಪಾಲನೆ ಮತ್ತು ಕರ್ತವ್ಯಪ್ರಜ್ಞೆ ಅತೀವ ಅಚ್ಚರಿಯನ್ನುಂಟು ಮಾಡಿತು. ಆತನ ಕೆಲಸಕ್ಕೆ ಖುಷಿಯಾಗಿ ನಾನು ಟಿಪ್ ನೀಡಲು ಮುಂದಾದೆ. ಆತ ಅದನ್ನು ನಯವಾಗಿ ತಿರಸ್ಕರಿಸಿದ. ಇನ್ನೊಂದು ಪ್ರಸಂಗ. ಒಂದು ದಿನ ಚಳಿಗಾಲದ ಮಧ್ಯಾಹ್ನದ ಹೊತ್ತಿನಲ್ಲಿ ಭಾರತೀಯ ರೆಸ್ಟೋರೆಂಟಿನಲ್ಲಿ ಊಟಕ್ಕೆಂದು ಹೋಗಿದ್ದೆ. ನನ್ನ ಟೇಬಲ್ ಪಕ್ಕದಲ್ಲಿ ಕುಳಿತಿದ್ದ ಒಬ್ಬ ವ್ಯಕ್ತಿ ಊಟ ಮಾಡುವಾಗ ಧೂಮಪಾನ ಮಾಡಲು ಪ್ರಾರಂಭಿಸಿದ. ಆತ ಬಿಟ್ಟ ಹೊಗೆ ನನ್ನ ತನಕ ಬರುತ್ತಿತ್ತು. ನನ್ನನ್ನು ಬೇರೆ ಟೇಬಲ್‌ಗೆ ವರ್ಗಾಯಿಸುವಂತೆ ನಾನು ವೇಟರ್‌ಗೆ ಹೇಳಿದೆ. ಆತ ನನ್ನ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ. ಇದನ್ನು ಸಿಗರೇಟು ಸೇದುತ್ತಿದ್ದ ವ್ಯಕ್ತಿ ಗಮನಿಸುತ್ತಿದ್ದ. ನನಗೆ ಆತನ ಹೊಗೆ ಚಟದಿಂದ ತೊಂದರೆಯಾಗಿದೆ ಎಂಬುದು ಅವನಿಗೆ ಮನವರಿಕೆಯಾಯಿತು. ಆತ ನನ್ನ ಬಳಿ ಬಂದು ಕ್ಷಮೆಯಾಚಿಸಿದ. ನಡು ಬಗ್ಗಿಸಿ ನಮಸ್ಕರಿಸಿ ಹೋದ. ನಾನು ಪರವಾಗಿಲ್ಲ ಎಂದು ಅವನಿಗೆ ಹೇಳಿದೆ. ನಂತರ ನನ್ನ ಊಟವಾಯಿತು. ನಾನು ಬಿಲ್ ಪಾವತಿಸಲು ಕೌಂಟರ್ ಬಳಿ ಹೋದಾಗ, ''ಸಿಗರೇಟು ಸೇದುತ್ತಿದ್ದ ಆ ವ್ಯಕ್ತಿ ನಿಮ್ಮ ಊಟದ ಬಿಲ್ ಪಾವತಿಸಿದ್ದಾನೆ. ನಿಮಗಾದ ತೊಂದರೆಗೆ ಆತ ವಿಷಾದ ವ್ಯಕ್ತಪಡಿಸಿದ್ದಾನೆ'' ಎಂದು ವೇಟರ್ ಹೇಳಿದ. ನನಗೆ ಪಿಚ್ಚೆನಿಸಿತು. ''ನಿಮಗೆ ಅದೆಷ್ಟು ಕಿರಿಕಿರಿ ಆಯಿತೇನೋ ಎಂದು ಅವರು ಬಹಳ ಬೇಸರಿಸಿಕೊಂಡರು ಮತ್ತು ನಿಮ್ಮಿಂದ ಹಣ ತೆಗೆದುಕೊಳ್ಳುವುದು ಬೇಡ. ಅವರ ಬಿಲ್‌ನ್ನು ನಾನೇ ಕೊಡುತ್ತೇನೆ ಎಂದು ಹೇಳಿ ಹೊರಟುಹೋದರು'' ಎಂದು ವೇಟರ್ ಹೇಳಿದ. ಆತ ಬಿಟ್ಟ ಸಿಗರೇಟು ಹೊಗೆಯನ್ನು ಸಹಿಸಿಕೊಳ್ಳಬಹುದಿತ್ತು, ನಾನು ಅಲ್ಲಿಂದ ಎದ್ದು ಹೋಗಬಾರದಿತ್ತು ಎಂದು ನನಗೆ ಅನಿಸಿತು. ಹೀಗೆ ಜಪಾನಿನಲ್ಲಿ ಇದ್ದಷ್ಟು ದಿನ ನನಗೆ ಇಂಥ ಅವೆಷ್ಟು ಅನುಭವಗಳು ಆಗಿವೆಯೇನೋ? ಅಲ್ಲಿ ಇದ್ದಾಗ ಯಾರೂ ನನ್ನನ್ನು ಒರಟಾಗಿ ನಡೆಸಿಕೊಳ್ಳಲಿಲ್ಲ. ನನಗೆ ಯಾವುದೇ ಅಹಿತಕರ ಘಟನೆ ಸಂಭವಿಸಲಿಲ್ಲ. ನನಗೆ ಊರಿನ ನೆನಪು ಬರದಷ್ಟು ಆಪ್ತವಾಗಿ ಅಲ್ಲಿನ ಜನ ನನ್ನಂಥ ಅಪರಿಚಿತನನ್ನು ನಡೆಸಿಕೊಂಡರು. ಜಪಾನಿಯರು ಹೇಗೆ ಇದ್ದಾರೆ ಎಂಬುದನ್ನು ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸಗಳನ್ನು ಕೇಳುವುದಕ್ಕಿಂತ ಅವರನ್ನು ಗಮನಿಸುವುದರಿಂದ ಹೆಚ್ಚು ಕಲಿಯಬಹುದು ಎಂಬ ಭಾವನೆ ನನ್ನಲ್ಲಿದೆ. ಅದು ಜಪಾನಿಯರಿಗೆ ಸಹಜ. ಆದರೆ ನಮಗೆ ಅವರ ಪ್ರತಿ ನಡೆಯೂ ಒಂದು ಅಮೂಲ್ಯ ಪಾಠ. ಅವರಿಂದ ನಾವು ಕಲಿಯುವುದು ಬೇಕಾದಷ್ಟಿವೆ.'

ಅಮೆರಿಕದಲ್ಲಿ ಯಹೂದಿಗಳ ಜಾಗಕ್ಕೆ ಭಾರತೀಯರು!

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ಅಮೆರಿವನ್ನು ಕಟ್ಟಿದ ಬಹುತೇಕರು ಹೊರಗಿನಿಂದ ಬಂದವರು, ಮುನ್ನೂರು ವರ್ಷಗಳ ಪ್ರಜಾಪ್ರಭುತ್ವದ ಇತಿಹಾಸವಿರುವ ಅಮೆರಿಕ ಸತತವಾಗಿ ಐದು ದಶಕಗಳಿಂದ ವಿಶ್ವದ ದೊಡ್ಡಣ್ಣನ ಸ್ಥಾನವನ್ನು ಉಳಿಸಿಕೊಂಡಿದೆ. ಅಮೆರಿಕದ ಅಭಿವೃದ್ಧಿಯ ವೇಗಕ್ಕೆ ಇಂಧನ ಸುರಿದವರು ಜಗತ್ತಿನ ಅನೇಕ ದೇಶಗಳಿಂದ ಬಂದು ಅಲ್ಲಿ ನೆಲೆಸಿರುವ ವಲಸಿಗರೆಂದರೆ ತಪ್ಪಿಲ್ಲ. ಅಮೆರಿಕದ ಆಯಕಟ್ಟಿನ ಸ್ಥಳಗಳಲ್ಲಿ ತಳವೂರಿ ದೊಡ್ಡ ದೊಡ್ಡ ನಿರ್ಧಾರ ತೆಗೆದುಕೊಳ್ಳುವವರು ಯಹೂದಿಗಳು ಅಥವಾ ಭಾರತೀಯರು. ಅಮೆರಿಕದ ಪ್ರಮುಖ ವಿಜ್ಞಾನಿಗಳು, ವಿಶ್ವವಿದ್ಯಾಲಯದ ಕುಲಪತಿಗಳು, ಪ್ರಾಧ್ಯಾಪಕರು, ವೈದ್ಯರು, ಕ್ಯಾಬಿನೆಟ್ ಸದಸ್ಯರು ಯಹೂದಿಗಳು ಅಥವಾ ಭಾರತೀಯರು. ಮಾಹಿತಿ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಂತೂ ಭಾರತೀಯರದ್ದೇ ದರ್ಬಾರು. ಇತ್ತೀಚೆಗೆ ನಡೆದ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಅಭೂತಪೂರ್ವ ಗೆಲುವಿನೊಂದಿಗೆ ಎರಡನೇ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಡೊನಾಲ್ಡ್ ಟ್ರಂಪ್ ಅವರ ಗೆಲುವಿನ ಹಿಂದೆ ಅನಿವಾಸಿ ಭಾರತೀಯರ ಕೊಡುಗೆ ಬಹಳಷ್ಟಿದೆ. ಹಲವು ದಶಕಗಳ ಹಿಂದೆ ಅಮೆರಿಕಕ್ಕೆ ವಲಸೆ ಹೋಗಿ ನೆಲೆ ಕಂಡುಕೊಂಡಿರುವ ಭಾರತೀಯರ ಬಹುದೊಡ್ಡ ಮತಬ್ಯಾಂಕ್ ಈ ಬಾರಿಯ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಅವರ ಕೈ ಹಿಡಿದಿದೆ. ಡೊನಾಲ್ಡ್ ಟ್ರಂಪ್ ಅವರ ಚುನಾವಣಾ ಪ್ರಚಾರದಲ್ಲಿ ರಾಷ್ಟ್ರೀಯತೆ ಪ್ರಮುಖ ವಿಷಯವಾಗಿತ್ತು, ಇದರ ಜೊತೆಗೆ ಅನಧಿಕೃತವಾಗಿ ಅಮೆರಿಕದಲ್ಲಿ ನೆಲೆಸಿರುವ ವಲಸಿಗರನ್ನು ಮುಲಾಜಿಲ್ಲದೆ ದೇಶದಿಂದ ಓಡಿಸಿ ಸ್ಥಳೀಯರಿಗೆ ಕೆಲಸದ ವಿಷಯದಲ್ಲಿ ಆದ್ಯತೆ ನೀಡುವುದಾಗಿತ್ತು. 'ಮೇಕ್ ಅಮೆರಿಕ ಗ್ರೇಟ್ ಅಗೇನ್' ಎಂಬ ಘೋಷವಾಕ್ಯದೊಂದಿಗೆ ಟ್ರಂಪ್ ಚುನಾವಣೆಯನ್ನು ಎದುರಿಸಿದ್ದರು. ಮೂಲತಃ ಬಂಡವಾಳಶಾಹಿವಾದವನ್ನು ಬೆಂಬಲಿಸುವ ಡೊನಾಲ್ಡ್ ಟ್ರಂಪ್ ಬಂಡವಾಳಶಾಹಿವಾದವಿಲ್ಲದೆ ಸಮಾಜವಾದವಿಲ್ಲವೆಂಬ ತರ್ಕವನ್ನು ನಂಬಿರುವವರು. ಆಸ್ತಿಯನ್ನು ಹಂಚಿಕೆ ಮಾಡುವದರ ಜೊತೆಗೆ ಆಸ್ತಿಯ ಉತ್ಪಾದನೆಯೂ ಆಗಬೇಕಲ್ಲ?

ಡೊನಾಲ್ಡ್ ಟ್ರಂಪ್ ಗೆದ್ದ ನಂತರ ತಮ್ಮ ಸಂಪುಟದಲ್ಲಿ ಭಾರತೀಯರಿಗೆ ಹೆಚ್ಚಿನ ಜವಾಬ್ದಾರಿ ನೀಡುತ್ತಿದ್ದಾರೆ. ತಮಿಳುನಾಡು ಮೂಲದ ವಿವೇಕ್ ರಾಮಸ್ವಾಮಿಯನ್ನು ಸರಕಾರದ ಆಡಳಿತ ದಕ್ಷತೆಯ ಪರಿವೀಕ್ಷಣೆಗೆ ನೇಮಿಸಿದ್ದಾರೆ. ಶ್ರೀರಾಮ್ ಕೃಷ್ಣನ್ ಅವರನ್ನು ಕೃತಕ ಬುದ್ಧಿಮತ್ತೆಯ ನೀತಿಗಳನ್ನು ರೂಪಿಸುವ ಹಿರಿಯ ಸಲಹೆಗಾರರನ್ನಾಗಿ ನೇಮಿಸಿದ್ದಾರೆ. ಹರ್ಮೀತ್ ಧಿಲ್ಲನ್ ಅವರನ್ನು ನಾಗರೀಕ ಹಕ್ಕುಗಳ ವಿಭಾಗಕ್ಕೆ ನೇಮಿಸಿದ್ದಾರೆ. ಜೇ ಭಟ್ಟಾಚಾರ್ಯರ್ ಅವರನ್ನು ರಾಷ್ಟ್ರೀಯ ಆರೋಗ್ಯ ಸಂಸ್ಥೆಯ ನಿರ್ದೇಶಕರನ್ನಾಗಿ ನೇಮಿಸಿದ್ದಾರೆ. ಕಾಶ್ ಪಟೇಲ್ ಅವರನ್ನು ಅಮೆರಿಕದ ಅತ್ಯುನ್ನತ ಬೇಹುಗಾರಿಕಾ ಸಂಸ್ಥೆಯಾದ 'ಊಏಐ' ನಿರ್ದೇಶಕರನ್ನಾಗಿ ನೇಮಿಸಲಾಗಿದೆ. ಹೆಚ್ಚು ಚರ್ಚೆಯಲ್ಲಿದ್ದ 'ತುಳಸಿ ಗಬ್ಬಾರ್ಡ್' ಅವರನ್ನು ಮತ್ತೊಂದು ಪ್ರಮುಖ ಸಂಸ್ಥೆಯಾದ ರಾಷ್ಟ್ರೀಯ ಗುಪ್ತಚರ ವಿಭಾಗದ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ. ತುಳಸಿ ಹುಟ್ಟಿನಿಂದ ಭಾರತೀಯರಲ್ಲ, ಆದರೆ ಅವರ ತಾಯಿಯ ಮೂಲಕ ಹಿಂದೂ ಧರ್ಮವನ್ನು ಸ್ವೀಕರಿಸಿ ಹಿಂದೂ ಧರ್ಮವನ್ನು ಪಾಲಿಸುವ ಕುಟುಂಬಕ್ಕೆ ಸೇರಿದವರು. ಇಸ್ಕಾನ್ ಸಂಸ್ಥೆಯನ್ನು ಸಂಪೂರ್ಣ ಅನುಯಾಯಿಯಾಗಿರುವ ತುಳಸಿಯವರಿಗೆ ಭಗವದ್ಗೀತೆಯ ಮೇಲೆ ಅಪಾರ ಪ್ರೀತಿ, ತಮ್ಮ ಜೀವನದಲ್ಲಿ ಶ್ರೀಕೃಷ್ಣ ಮತ್ತು ಭಗವದ್ಗೀತೆ ದೊಡ್ಡ ಪರಿಣಾಮ ಬೀರಿದೆಯೆಂದು ಹೇಳಿಕೊಂಡಿದ್ದಾರೆ. ಬಾಂಗ್ಲಾ ದೇಶದಲ್ಲಿ ಇಸ್ಕಾನ್ ಸಂಸ್ಥೆಯ ಮೇಲೆ ಜಿಹಾದಿಗಳು ನಡೆಸಿದ್ದ ದಾಳಿಯನ್ನು ಖಂಡಿಸಿದ್ದರು. ಇವರನ್ನು ಗುಪ್ತಚರ ಇಲಾಖೆಯ ನಿರ್ದೇಶಕರನ್ನಾಗಿ ಟ್ರಂಪ್ ನೇಮಿಸಿರುವುದು ಬಾಂಗ್ಲಾದೇಶಕ್ಕೆ ಪ್ರಚೋದನೆ ನೀಡುತ್ತಿರುವವರಿಗೆ ಉರಿ ಬಿದ್ದಂತಾಗಿದೆ. ಡೊನಾಲ್ಡ್ ಟ್ರಂಪ್ ಅಧಿಕಾರ ಸ್ವೀಕರಿಸಿ ದಾಕ್ಷಣ, ಬಾಂಗ್ಲಾದಲ್ಲಿ ಇಸ್ಕಾನ್ ಮತ್ತು ಹಿಂದೂಗಳ ಮೇಲೆ ನಡೆಯುತ್ತಿವ ದಾಳಿಯನ್ನು ಮತ್ತಷ್ಟು ಗಂಭೀರವಾಗಿ ಅಮೆ ರಿಕ ತೆಗೆದುಕೊಳ್ಳುವುದು ಶತಸಿದ್ಧವೆಂದು ಹೇಳಲಾಗುತ್ತಿದೆ.ತುಳಸಿ ಗಬ್ಬಾರ್ಡ್ ಅಮೆರಿಕ ಕಾಂಗ್ರೆಸ್ಸಿನ ಮೊದಲ ಹಿಂದೂ ಸದಸ್ಯರೆಂಬುದು ಗಮನಿಸಬೇಕಾದ ಅಂಶ.

ಅಮೆರಿಕದಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರ ಜೀವನದ ಗುಣಮಟ್ಟದಲ್ಲಿ ಬಹಳಷ್ಟು ಚೇತರಿಕೆ ಕಂಡಿದೆ. 2019 ರ ಅಂಕಿ ಅಂಶಗಳ ಪ್ರಕಾರ ಅಮೆರಿಕದಲ್ಲಿ ನೆಲೆಸಿರುವ ವಲಸಿಗರ ಪೈಕಿ ಅತಿ ಹೆಚ್ಚಿನ ವಿದ್ಯಾವಂತರ ಪೈಕಿಯಲ್ಲಿ ಭಾರತೀಯರ ಸಂಖ್ಯೆ ಹೆಚ್ಚಿದೆ. 25 ವರ್ಷ ಮೇಲ್ಪಟ್ಟವರಲ್ಲಿನ ವಿದ್ಯಾವಂತರ ಪಟ್ಟಿಯಲ್ಲಿ ಶೇ.75 ರಷ್ಟು ಭಾರತೀಯರಿದ್ದಾರೆ. ಚೀನಾ, ಕೊರಿಯಾ ಮತ್ತು ಪಾಕಿಸ್ತಾನ ಮೂರೂ ದೇಶಗಳ ಸರಾಸರಿ ಕೇವಲ ಶೇ.57 ಮಾತ್ರ. ಇನ್ನು ಅಮೆರಿಕದಲ್ಲಿ ನೆಲೆಸಿರುವ ವಲಸಿಗರ ಸರಾಸರಿ ಆದಾಯವನ್ನು ನೋಡುವುದಾದರೆ, 2022 ರ ಅಂಕಿ ಅಂಶಗಳ ಪ್ರಕಾರ ಭಾರತೀಯರು 1,45,000 ಅಮೆರಿಕನ್ ಡಾಲರ್ ಗಳಿಸುವ ಮೂಲಕ ಮೊದಲ ಸ್ಥಾನದಲ್ಲಿದ್ದಾರೆ. ಚೀನಾ ದೇಶದವರ ಸರಾಸರಿ ಆದಾಯ 82,000 ಅಮೆರಿಕನ್ ಡಾಲರ್, ಸ್ಥಳೀಯಯಾಗಿ ಬಿಳಿಯರೆಂದು ಕರೆಯಲ್ಪಡುವವರ ಸರಾಸರಿ ಆದಾಯ 84,280 ಅಮೆರಿಕನ್ ಡಾಲರ್. 2021-22 ರ ಅಂಕಿ ಅಂಶಗಳ ಪ್ರಕಾರ ಅಮೆರಿಕದಿಂದ ಭಾರತಕ್ಕೆ ಜಮೆಯಾಗುವ ಹಣದಲ್ಲಿ ಭಾರತೀಯರ ಪಾಲು ಶೇ.23 ರಷ್ಟಿದ್ದು, ಪ್ರಥಮ ಸ್ಥಾನದಲ್ಲಿದೆ. ಅಮೆರಿಕದ ಆರ್ಥಿಕ ಪ್ರಗತಿಯ ಹಿಂದೆ ಭಾರತೀಯ ಕೊಡುಗೆ ಡೊನಾಲ್ಡ್ ಟ್ರಂಪ್ ಅವರಿಗೆ ಗೊತ್ತಿದೆ. ಹೆಚ್ಚಿನ ಭಾರತೀಯರು ಅಮೆರಿಕದಲ್ಲಿ ನೆಲೆಸಿ ಆ ದೇಶವನ್ನು ಉದ್ಧಾರ ಮಾಡುವ ಬದಲು ಭಾರತದಲ್ಲಿದ್ದಿದ್ದರೆ, ಭಾರತದ ಅಭಿವೃದ್ಧಿಗೆ ಸಹಕಾರಿ ಯಾಗುತ್ತಿತ್ತು. ಆದರೆ ಹಿಂದಿನ ಸರಕಾರಗಳ ಅವಧಿ ಯಲ್ಲಿ ಭಾರತದಲ್ಲಿ ಅವಕಾಶಗಳು ಹೆಚ್ಚಿರಲಿಲ್ಲವೆಂಬುದು ಮತ್ತೊಂದು ಚರ್ಚೆಯ ವಿಷಯ.

ಅಮೆರಿಕದಲ್ಲಿನ ಬಡತನದಲ್ಲಿರುವ ವಲಸಿಗರ ಶೇಕಡಾವಾರಿನ ಅಂಕಿಅಂಶವನ್ನು ಗಮನಿಸುವುದಾದರೆ, ಭಾರತೀಯರ ಪಾಲು ಶೇಕಡಾ 6 ರಷ್ಟಿದೆ. ಉಳಿದಂತೆ ಫಿಲಿಫೈನ್ಸ್ ಶೇ.7, ಜಪಾನ್ ಶೇ.8, ಚೀನಾ ಶೇ.13, ಪಾಕಿಸ್ತಾನಿ ಶೇ.15 ಮತ್ತು ಬಾಂಗ್ಲಾದೇಶಿಗಳು ಶೇ.19% ರಷ್ಟಿದ್ದಾರೆ. ಕೆಲವೊಮ್ಮೆ ಏಜೆಂಟ್ ಮೂಲಕ ಲಕ್ಷಾಂತರ ರುಪಾಯಿ ಹಣ ನೀಡಿ ಅಕ್ರಮವಾಗಿ ಅಮೆರಿಕ ದೇಶ ಪ್ರವೇಶಿಸಲು ಹೋಗಿ ಮೃತಪಟ್ಟಿರುವ ಘಟನೆಗಳೂ ನಡೆದಿವೆ, ಆದರೆ ಇತರ ದೇಶಗಳಿಗೆ ತಾಳೆ ಮಾಡಿ ನೋಡಿದರೆ ಭಾರತೀಯರು ಅಮೆರಿಕದಲ್ಲಿ ಉತ್ತಮ ಜೀವನ ನಡೆಸುತ್ತಿದ್ದಾರೆ.

ಅಮೆರಿಕದಲ್ಲಿ ಪ್ರಾರಂಭವಾಗಿರುವ ಅನೇಕ 'ಸ್ಟಾರ್ಟ್ ಅಪ್'ಗಳ ಜನಕರು ಭಾರತೀಯರು, ಭಾರತೀಯರು 90 ಸ್ಟಾರ್ಟ್ ಅಪ್‌ಗಳ ಜನಕರಾಗಿದ್ದಾರೆ. ಇಸ್ರೇಲಿಗರು 52 ಸ್ಟಾರ್ಟ್ ಅಪ್‌ಗಳ ಜನಕರಾಗಿದ್ದರೆ. ಕೆನಡಾದವರು 42 ಸ್ಟಾರ್ಟ್ ಅಪ್ ಗಳ ಜನಕರಾಗಿದ್ದಾರೆ. ಜಗತ್ತಿನ ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ಭಾರತೀಯರ ಕೊಡುಗೆ ಅಪಾರ. ಅಮೆರಿಕದ ದೊಡ್ಡ ದೊಡ್ಡ ಕಂಪನಿಗಳನ್ನು ಮುನ್ನಡೆಸುತ್ತಿರುವವರು ಭಾರತೀಯರು. ಸುಂದರ್ ಪಿಚೈ - ಗೂಗಲ್ (ಆಲ್ಫಬೆಟ್), ಸತ್ಯ ನಡೆಲ್ಲ (ಮೈಕ್ರೋಸಾಫ್ಟ್), ಶಂತನು ನಾರಾಯಣ್ (ಆಡೋಬ್), ಅರವಿಂದ್ ಕೃಷ್ಣ (ಐಬಿಎಂ), ನೀಲ್ ಮೋಹನ್ (ಯೂಟ್ಯೂಬ್), ಥಾಮಸ್ ಕುರಿಯನ್ (ಗೂಗಲ್ ಕ್ಲೌಡ್). ಜಗತ್ತಿನ ಪ್ರಸಿದ್ಧ ಹಾರ್ವರ್ಡ್ ವಿಶ್ವವಿದ್ಯಾಲಯದ ಮುಖ್ಯಸ್ಥ ಶ್ರೀಕಾಂತ್ ದಾತಾರ್ ಭಾರತೀಯರು, ಅವರ ಹಿಂದಿದ್ದ ನಿತಿನ್ ನೋರಿಯಾ ಭಾರತೀಯ. ಅಮೆರಿಕಾದ ವೈದ್ಯಕೀಯ ವಲಯದಲ್ಲೂ ಅನಿವಾಸಿ ಭಾರತೀಯರ ಕೊಡುಗೆ ಬಹಳಷ್ಟಿದೆ, ವಿವೇಕ್ ಮೂರ್ತಿ 2021 ರಿಂದ ಅಮೆರಿಕದ ಸರ್ಜನ್ ಜನರಲ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಜೋ ಬೈಡೆನ್ ರಾಹುಲ್ ಗುಪ್ತಾ ಅವರನ್ನು ಅಮೆರಿಕದ 'ರಾಷ್ಟ್ರೀಯ ಔಷದ ನಿಯಂತ್ರಣ ಮಂಡಳಿಯ' ನಿರ್ದೇಶಕರನ್ನಾಗಿ ಮಾಡಿದ್ದಾರೆ. ಈ ಹಿಂದೆ ಅಮೆರಿಕದ ಅನೇಕ ಆಯಕಟ್ಟಿನ ಸ್ಥಳಗಳಲ್ಲಿ ಯಹೂದಿಗಳ ಸಂಖ್ಯೆ ಬಹಳಷ್ಟಿತ್ತು. ಅಮೆರಿಕ ಇಸ್ರೇಲ್ ಪರವಾಗಿ ಸದಾ ನಿಲ್ಲಲು ಮುಖ್ಯ ಕಾರಣ ಅಮೆರಿಕದ ಪ್ರಗತಿಗೆ ಅವರ ಕೊಡುಗೆ. ಯಹೂದಿಗಳು ಬುದ್ಧಿವಂತರು, ಸಾವಿರಾರು ವರ್ಷಗಳ ಇತಿಹಾಸವಿರುವ ಯಹೂದಿ ಧರ್ಮದ ಉಳಿವಿಗಾಗಿ ಇಸ್ಲಾಂ ದೇಶಗಳ ಮಧ್ಯದಲ್ಲಿ ಇಸ್ರೇಲ್ ದೇಶವನ್ನು ಕಟ್ಟಿ, ತಮ್ಮ ಉಳಿವಿಗಾಗಿ ಹಗಲಿರುಳು ಶ್ರಮಿಸಿ ಸೊನ್ನೆಯಿಂದ ದೇಶ ಕಟ್ಟಿದವರು. ದಾಳಿಕೋರರಿಂದ ರಕ್ಷಣೆ ಪಡೆಯಲು ಅಮೆರಿಕದಲ್ಲಿ ನೆಲೆಸಿದ ಯಹೂದಿಗಳು, ಅಮೆರಿಕದ ಪ್ರಮುಖ ಆವಿಷ್ಕಾರಗಳಿಗೆ ಕಾರಣರಾದರು. ಕಂಪ್ಯೂಟರ್‌ಗಳಲ್ಲಿ ಬಳಸುವ ಚಿಪ್‌ಗಳನ್ನು ಮೊದಲು ಕಂಡು ಹಿಡಿದಿದ್ದು ಯಹೂದಿಗಳು, ವಿದ್ಯುತ್ ಚಾಲಿತ ವಾಹನಗಳನ್ನು ಮೊದಲು ಕಂಡು ಹಿಡಿದದ್ದು ಯಹೂದಿಗಳು. ಅಮೆರಿಕ ಯಹೂದಿಗಳ ಬುದ್ಧಿವಂತಿಕೆಯನ್ನು ಅಚ್ಚುಕಟ್ಟಾಗಿ ಬಳಸಿಕೊಂಡು, ಅವರ ಜನಾಂಗವನ್ನು ಕಾಪಾಡುವತ್ತ ಸದಾ ಕೆಲಸ ಮಾಡುತ್ತದೆ. ಅಮೆರಿಕದ ಪ್ರಮುಖ ನಿರ್ಧಾರಗಳ ಹಿಂದೆ ಯಹೂದಿಗಳ ಪಾತ್ರವಿದೆ.

ಯಹೂದಿಗಳ ಜಾಗವನ್ನು ಭಾರತೀಯರು ತುಂಬುತ್ತಿರುವ ವಿಷಯ ಅಮೆರಿಕದಲ್ಲಿ ಸದ್ಯದಲ್ಲಿ ಚರ್ಚೆಯಲ್ಲಿರುವ ವಿಷಯ, ಅಮೆರಿಕದ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈಗಾಗಲೇ ತಮ್ಮ ಸಂಪುಟದಲ್ಲಿನ ಆಯಕಟ್ಟಿನ ಜಾಗಗಳಿಗೆ ಅನಿವಾಸಿ ಭಾರತೀಯರನ್ನು ನೇಮಕ ಮಾಡಿದ್ದಾರೆ. ಅಮೆರಿಕದ ಅನೇಕ ಆಯಕಟ್ಟಿನ ಜಾಗಗಳಲ್ಲಿ ಅನಿವಾಸಿ ಭಾರತೀಯರು ಅಮೆರಿಕದ ಪರವಾಗಿ ನಿರ್ಧಾರ ತೆಗೆದುಕೊಳ್ಳುವಲ್ಲಿ ಕುಳಿತಿದ್ದಾರೆ. ಡೊನಾಲ್ಡ್ ಟ್ರಂಪ್ ಒಂದೆಡೆ 'ಮೇಕ್ ಅಮೆರಿಕಾ ಗ್ರೇಟ್ ಅಗೈನ್' ಎಂದು ಹೇಳಿ, ಮತ್ತೊಂದೆಡೆ ಅನಿವಾಸಿ ಭಾರತೀಯರನ್ನು ಪ್ರಮುಖ ನಿರ್ಧಾರ ತೆಗೆದುಕೊಳ್ಳುವ ಜಾಗಗಳಿಗೆ ನೇಮಕ ಮಾಡುತ್ತಿರುವುದು ಕೆಲವರಿಗೆ ಇಷ್ಟ ಆಗುತ್ತಿಲ್ಲ, ಡೊನಾಲ್ಡ್ ಟ್ರಂಪ್ ಮುಂದಿನ ಐದು ವರ್ಷಗಳಲ್ಲಿ ಅಮೆರಿಕದ ಸಿಲಿಕಾನ್ ವ್ಯಾಲಿ - ಸ್ಯಾನ್ ಫ್ರಾನ್ಸಿಸ್ಕೋಗೆ ಸಾವಿರಾರು ಬಿಳಿ ಕಾಲರ್ ವಲಸಿಗ ತಂತ್ರಜ್ಞಾನ ಪಂಡಿತರನ್ನು ಕರೆತಂದು, ಅಮೆರಿಕದ ಮೂಲ ಮಧ್ಯಮ ವರ್ಗದವರ ಕೆಲಸ ಕಿತ್ತುಕೊಳ್ಳುತ್ತಾರೆಂಬುದು ಕೆಲವರ ಆರೋಪ. ಈ ಹಿಂದೆ ಮೆಕ್ಸಿಕೋದಿಂದ ಬಂದವರು ಅಮೆರಿಕದ ಕೆಳ ವರ್ಗದ ಕೆಲಸ ಕಿತ್ತುಕೊಂಡ ಹಾಗೆ, ಭಾರತೀಯರು ಮೂಲ ಅಮೆರಿಕದ ಮಧ್ಯಮವರ್ಗದ ಕೆಲಸಕ್ಕೆ ಕುತ್ತು ತರುತ್ತಾರೆಂದು ಕೆಲವರು ಹೇಳುತ್ತಿದ್ದಾರೆ. ಮತ್ತೆ ಕೆಲವರು ಮುಂದಿನ ಐದು ವರ್ಷ 'ಭಾರತೀಯರು ನಡೆಸುವ ಅಮೆರಿಕವಾಗಲಿದೆ'ಎಂದು ಹೇಳಿದ್ದಾರೆ. ಇದಕ್ಕೆ ಪ್ರತ್ಯುತ್ತರವಾಗಿ 'ಸೌತ್ ಆಫ್ರಿಕಾದ ಎಲಾನ್ ಮಸ್ಕ್, ತೈವಾನಿನ ಜೆನ್ಸೆನ್, ಭಾರತದ ಸತ್ಯ ನಡೆಲ್ಲ ಎಂದು ಯೋಚಿಸುವುದರ ಬದಲು ಇವರೆಲ್ಲರೂ ಚೀನಾ ಬದಲು ಅಮೆರಿಕಕ್ಕೆ ಬಂದು, ಅಮೆರಿಕದ ಪ್ರಗತಿಯ ಪಾಲುದಾರರಾಗಿದ್ದಾರೆ ಎಂದು ತಿರುಗೇಟು ನೀಡುತ್ತಿದ್ದಾರೆ. ಮತ್ತೆ ಕೆಲವರು ಅಮೆರಿಕವನ್ನು ಬಿಳಿ ಯೂರೋಪಿಯನ್ನರು ಕಟ್ಟಿದರು. ಭಾರತೀಯರು ಕಟ್ಟಿದ್ದಲ್ಲವೆಂದು ಹೇಳುತ್ತಿದ್ದಾರೆ. ಆದರೆ ಅಮೆರಿಕಾದಲ್ಲಿ ನೆಲೆಸಿರುವ ಅನೇಕ ಭಾರತೀಯರು ದೊಡ್ಡ ದೊಡ್ಡ ಕಂಪೆನಿಗಳಲ್ಲಿ ಮೇಲ್ಪಂತಿಯಲ್ಲಿ ಕೆಲಸ ಮಾಡುತ್ತಿರುವುದು ಗಮನಿಸಬೇಕಾದಂತಹ ಸಂಗತಿ. ನೂತನವಾಗಿ ಟ್ರಂಪ್ ತಂಡದಲ್ಲಿ ಸ್ಥಾನ ಪಡೆದಿರುವ 'ಶ್ರೀರಾಂ ಕೃಷ್ಣನ್' ಬಗ್ಗೆಯಂತೂ ದೊಡ್ಡಮಟ್ಟದ ಚರ್ಚೆಯಾಗುತ್ತಿದೆ. ಅವರ ಆಯ್ಕೆ ಅನೇಕ ಸ್ಥಳೀಯ ಅಮೆರಿಕನ್ನರ ಟೀಕೆಗೆ ಗುರಿಯಾಗಿದೆ, ಆದರೆ ಅವರ ಪರವಾಗಿ ನಿಲ್ಲುವ ದೊಡ್ಡದೊಂದು ತಂಡವೂ ಅಲ್ಲಿದೆ. ಅಮೆರಿಕದ ವಿಶ್ವವಿದ್ಯಾಲಯಗಳಲ್ಲಿನ ಪ್ರತಿಭಾವಂತ ವಿದ್ಯಾರ್ಥಿಗಳ ಸಂಖ್ಯೆಗಳನ್ನು ಗಮನಿಸಿದರೆ ಭಾರತೀಯರು ಮುಂದಿದ್ದಾರೆ. ಸ್ಥಳೀಯ ಅಮೆರಿಕನ್ನರ ಸಂಖ್ಯೆ ಬಹಳ ಕಡಿಮೆ. 'ಎಲಾನ್ ಮಸ್ಕ್' ಸ್ವತಃ ಹೇಳಿರುವ ಪ್ರಕಾರ, ತಾನು ಬಾಹ್ಯಾಕಾಶ ಕ್ಷೇತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆಯುತ್ತಿದ್ದ ಸಂದರ್ಭದಲ್ಲಿ 'ಫ್ಲೋರಿಡಾ ವಿಶ್ವವಿದ್ಯಾಲಯ'ದಲ್ಲಿ 600 ಜನ ಭಾರತೀಯ ಮೂಲದ ವಿದ್ಯಾರ್ಥಿಗಳಿದ್ದರಂತೆ. ಆದರೆ ಕೇವಲ 10 ಜನ ಅಮೆರಿಕನ್ನರಿದ್ದರಂತೆ'. ಒಟ್ಟಿನಲ್ಲಿ ಡೊನಾಲ್ಡ್ ಟ್ರಂಪ್ ಎರಡನೇ ಬಾರಿ ಚುನಾವಣೆ ಗೆದ್ದ ನಂತರ ಅಮೆರಿಕದ ಅಭಿವೃದ್ಧಿಯಲ್ಲಿ ಭಾರತೀಯರ ಕೊಡುಗೆ ಮತ್ತು ಅವರಿಗೆ ಸಿಗುತ್ತಿರುವ ಉನ್ನತ ಸ್ಥಾನಮಾನದ ಬಗ್ಗೆ ಪರ ಮತ್ತು ವಿರೋಧದ ಚರ್ಚೆಗಳು ದೊಡ್ಡಮಟ್ಟದಲ್ಲಿ ನಡೆಯುತ್ತಿದೆ. ಮತ್ತೊಂದೆಡೆ ಭಾರತೀಯರು ಯಹೂದಿಗಳ ಜಾಗಕ್ಕೆ ಬರುತ್ತಿರುವ ವಿಷಯವೂ ಚರ್ಚೆಯಲ್ಲಿದೆ. ಅಮೆರಿಕದ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ತಂಡದಲ್ಲಿ ಸ್ಥಾನ ಪಡೆದಿರುವ ಅನಿವಾಸಿ ಭಾರತೀಯರಿಗೆ ಶುಭವಾಗಲಿ.

ನೃಪತುಂಗನೆ ಚಕ್ರವರ್ತಿ, ಪಂಪನಲ್ಲಿ ಮುಖ್ಯಮಂತ್ರಿ!

ತನ್ನಿಮಿತ್ತ

ಆಮಿರ್ ಅಶ್‌ಅರೀ ಬನ್ನೂರು
vveditoped@gmail.com

1904ರಲ್ಲಿ ಹುಟ್ಟಿ 1994ರಲ್ಲಿ ಭವ ತೊರೆದ ಕನ್ನಡದ ಶ್ರೇಷ್ಠ ಮತ್ತು ಮನುಷ್ಯ ಪ್ರೇಮದ ಕವಿ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ(ಕುವೆಂಪು). ತೊಂಬತ್ತು ವರ್ಷಗಳ ಕಾಲ ಬದುಕಿ ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಕನ್ನಡಕ್ಕಾಗಿ ಉತ್ಕೃಷ್ಟ ಕೃಷಿ ಮಾಡಿದವರು. ಕತೆ, ಕವಿತೆ, ನಾಟಕ, ಕಾದಂಬರಿ, ಪ್ರಬಂಧ, ಕಂಡ ಕಾವ್ಯ, ಕಥನ ಕಾವ್ಯ, ಭಾವಗೀತೆ, ಮಹಾಕಾವ್ಯ, ಆತ್ಮಚರಿತ್ರೆ, ವಿಮರ್ಶೆ,ಮಕ್ಕಳ ಸಾಹಿತ್ಯ ಹಾಗೂ ವೈಚಾರಿಕ ಬರಹ ಹೀಗೆ ತರಹೇವಾರು ಪ್ರಕಾರಗಳಲ್ಲಿ ಕನ್ನಡ ಸಾಹಿತ್ಯಕ್ಕೆ ಕುವೆಂಪು ಜೀವ ತುಂಬಿದ ಪರಿ ವಿಶೇಷ. ಅದಕ್ಕೆ ನಿತ್ಯ ನಿರಂತರವಾಗಿ ಶಾಲೆಗಳಲ್ಲಿ ಮಕ್ಕಳು ಪಠಿಸುವ ನಾಡಗೀತೆಯೇ ಉದಾಹರಣೆ. ಇಪ್ಪತ್ತನಾಲ್ಕನೆ ವಯಸ್ಸಿನಲ್ಲೇ ಅಮಲನ ಕಥೆ ಎಂಬ ಶಿಶು ಸಾಹಿತ್ಯದ ಮೂಲಕ ಅಧಿಕೃತವಾಗಿ ದಾಪುಗಾಲಿಟ್ಟು, ಇಪ್ಪತ್ತೆಂಟನೇಯ ವಯಸ್ಸಿನಲ್ಲಿ ಯಮನ ಸೋಲು ಮತ್ತು ಜಲಗಾರ ನಾಟಕಗಳು ಪ್ರಕಟಿಸಿದ ಅವರು ಮತ್ತೆ ಎಂದೂ ಹಿಂತಿರುಗಿ ನೋಡಿದವರಲ್ಲ. ಕವಿ, ಲೇಖಕ, ಪ್ರಾಧ್ಯಾಪಕ, ಪ್ರಾಂಶುಪಾಲ ಹಾಗೂ ಕುಲಪತಿಯಾಗಿಯೂ ಸೇವೆ ಸಲ್ಲಿಸಿದ್ದಾರೆ.

ಅವರ ಸಾಹಿತ್ಯ ಮತ್ತು ಸಾಧನೆಗೆ ಕೇಂದ್ರ ಸರಕಾರವು ಪದ್ಮಭೂಷಣ ಮತ್ತು ರಾಜ್ಯ ಸರಕಾರ ರಾಷ್ಟ್ರಕವಿ ಹಾಗೂ ಕರ್ನಾಟಕ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಜ್ಞಾನಪೀಠ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಕನ್ನಡಕ್ಕೆ ಮೊದಲು ತಂದುಕೊಟ್ಟ ಕವಿ ಯಾರು ಎಂಬ ಪ್ರಶ್ನೆಗಿರುವ ಉತ್ತರವೇ ಕುವೆಂಪು. ಅವರ ಶ್ರೀರಾಮಾಯಣ ದರ್ಶನಂ ಮಹಾಕಾವ್ಯಕ್ಕಾಗಿದೆ ಅವೆರಡು ಪ್ರತಿಷ್ಠಿತ ಪ್ರಶಸ್ತಿಗಳು ದೊರೆತದ್ದು. ಕರ್ನಾಟಕ ಸರಕಾರ ಕೊಡುವ ಕರ್ನಾಟಕ ರತ್ನ ಪ್ರಶಸ್ತಿ ಹಾಗೂ ಪಂಪ ಪ್ರಶಸ್ತಿಗಳನ್ನು ಮೊದಲ ತಮ್ಮದಾಗಿಸಿಕೊಂಡಿರುವುದು ಶ್ರೇಷ್ಠ ಸಂಗತಿ.

ಸರಕಾರ ಅಥವಾ ಸಂಘ-ಸಂಸ್ಥೆಗಳು ನೀಡಿರುವ ಗೌರವ ಮತ್ತು ಪ್ರಶಸ್ತಿ ಪುರಸ್ಕಾರಕ್ಕಿಂತಲೂ ಮಿಗಿಲಾಗಿ ಅವರಿಗೆ ಸಂದ ಗೌರವವೇ ಅವರ ಜನ್ಮದಿನವನ್ನು ವಿಶ್ವಮಾನವ ದಿನ ವೆಂದು 2015 ರಲ್ಲಿ ಕರ್ನಾಟಕ ಸರಕಾರ ಘೋಷಣೆ ಮಾಡಿರುವುದು. ಇದರಿಂದ ಅವರ ಸಾಹಿತ್ಯ ಮತ್ತು ಮಾನವೀಯ ತತ್ವಗಳಿಗೆ ನೀರುಣಿಸಿ ಬೆಳೆಸಿದಂತಾಗಿದೆ.

6ನೇ ಶತಮಾನದಲ್ಲಿ ವಿಶ್ವ ಪ್ರವಾದಿ ಪೈಗಂಬರರು, 10ನೇ ಶತಮಾನದಲ್ಲಿ ಪಂಪ, 12ನೇ ಶತಮಾನದಲ್ಲಿ ಬಸವಣ್ಣ, 19ನೇ ಶತಮಾನದ ಆಧ್ಯಾತ್ಮಿಕ ಸಂತ ವಿವೇಕಾನಂದರು ಹಾಗೂ 20ನೇ ಶತಮಾನದ ಕವಿ ಕುವೆಂಪು ಇವರೆಲ್ಲರೂ ವಿಶ್ವಮಾನವರು ಮತ್ತು ಅಮಾನವೀಯತೆಯನ್ನು ಭೇದಿಸಿ, ಮಾನವೀಯತೆಯನ್ನು ಭೋದಿಸಿದವರಾಗಿದ್ದಾರೆ. ತಮ್ಮ ಶಿಷ್ಯ ಮತ್ತು ಸಮುದಾಯಗಳಿಗೆ ಸಮಸಮಾಜದ ಪ್ರತಿಷ್ಠಾಪನೆಗೆ ಪ್ರಚೋದಿಸಿದ ಮಹಾನ್ ಚೇತನಗಳು. ಇವರಂತೆಯೇ ಇನ್ನೂ ಅನೇಕ ವಿಶ್ವಮಾನವರ ಸಾಲೂ ಲಭ್ಯ. ಒಬ್ಬರಿಗೊಬ್ಬರು ಸಾಮ್ಯರಲ್ಲ, ವಿಶ್ವಾಸದ ವಿಚಾರದಲ್ಲಂತೂ ಪ್ರತಿಯೊಬ್ಬರಿಗೂ ವಿಭಿನ್ನ ನಿಲುವು ಮತ್ತು ವಿಶ್ವಾಸ. ಆದರೆ ಮಾನವೀಯತೆ ಮತ್ತು ಮನುಷ್ಯತ್ವದ ಚಿಂತನೆಯಲ್ಲಿ ಅವರೆಲ್ಲರೂ ಸಮಾನರು.

ಮಾನವೀಯತೆಗಾಗಿ ಕುವೆಂಪು ಅವರ ಸಾಹಿತ್ಯಗಳು ದುಡಿದಿತ್ತು, ಮಿಡಿಯುತ್ತಿತ್ತು ಎಂಬುದನ್ನು ಒಪ್ಪಿಕೊಳ್ಳಬೇಕು. 1996 ರಲ್ಲಿ ಪೂರ್ಣಚಂದ್ರ ತೇಜಸ್ವಿಯವರು ತಂದೆ ಕುವೆಂಪು ಅವರ ಬಗ್ಗೆ ಬರೆದ 'ಅಣ್ಣನ ನೆನಪು' ಎಂಬ ಆತ್ಮಕಥನದಲ್ಲಿ ಒಂದು ಸನ್ನಿವೇಶವನ್ನು ಅದ್ಭುತವಾಗಿ ವಿವರಿಸುತ್ತಾರೆ. ಹಾಗೆ ಒಂದು ದಿನ ಮನೆಗೆ ಪತ್ರಿಕೆ ಹಾಕಲು ಬಂದ ಹುಡುಗನೊಂದಿಗೆ ಕುವೆಂಪು ಮಾರನೆಯ ದಿನ ಈ ಪತ್ರಿಕೆಯ ಬದಲು ಬೇರೆ ಪತ್ರಿಕೆಯನ್ನು ಹಾಕಲು ಸೂಚಿಸುತ್ತಾರೆ. ಪತ್ರಿಕೆಯ ಮಾರನೇ ದಿನದಿಂದ ಬೇರೆ ಪತ್ರಿಕೆ ಹಾಕಲು ಪ್ರಾರಂಭಿಸಿದ. ಇದನ್ನು ಮನಗಂಡ ತೇಜಸ್ವಿ ಹುಡುಗನನ್ನು ಪತ್ರಿಕೆಯ ಬದಲಾವಣೆ ಬಗ್ಗೆ ಪ್ರಶ್ನಿಸಿದರು. 'ಅಲ್ಲ ಸಾರ್ ನಿಮ್ಮ ತಂದೆ ಪತ್ರಿಕೆ ಬದಲಾಯಿಸಲು ಹೇಳಿದ್ರು,' ಎಂದುತ್ತರಿಸಿದ.

ಈ ಬೆಳವಣಿಗೆ ತೇಜಸ್ವಿಯವರಿಗೆ ಕುತೂಹಲವನ್ನು ಉಂಟು ಮಾಡಿತು. ಅದನ್ನು ತಂದೆ ಕುವೆಂಪುರೊಂದಿಗೆ ಕೇಳುತ್ತಾರೆ. ನೀವು ಪತ್ರಿಕೆಯ ಬದಲಾವಣೆಗೆ ಹೇಳಿದ್ರಂತೆ? ಹೌದು ಹೇಳಿದೆ. ಯಾಕೆ? ಮಗನ ಮತ್ತೊಂದು ಪ್ರಶ್ನೆ. ಅದೇನೋ ಅಡ್ಡ ಪಲ್ಲಕ್ಕಿ ಉತ್ಸವ ಎಂಬ ಚಿತ್ರ ಎಲ್ಲ ಹಾಕಿದ್ದಾರೆ ಅದಕ್ಕೆ ನಾನೇ ಬೇಡ, ಬೇರೆ ಹಾಕಲು ಹೇಳಿದೆ ಎಂದು ಮಗನಲ್ಲಿ ಉತ್ತರಿಸುತ್ತಾರೆ. ಕಾರಣ ಕೊಟ್ಟ ಕುವೆಂಪು ಜೀವಂತ ಮನುಷ್ಯನನ್ನು, ಜೀವಂತ ಮನುಷ್ಯರ ಸಂಖ್ಯೆಯೊಂದು ಹೊತ್ತುಕೊಂಡು ಹೋಗುವುದು (ಅಡ್ಡ ಪಲ್ಲಕ್ಕಿ) ಮನುಷ್ಯ ಘನತೆಗೆ ತಕ್ಕುದಲ್ಲ, ಅದೂ ಅಮಾನವೀಯ ಗುಣವೆಂದು ಆಕ್ರೋಶ ವ್ಯಕ್ತಪಡಿಸಿದರು. ಜಾತಿ, ಮತ, ಭೇದವಿಲ್ಲದೆ ಮನುಷ್ಯರನ್ನು ಗೌರವಿಸುವುದೇ



ನಿಜ ಧರ್ಮವೆಂಬ ವಿಶ್ವಾಸ ಮತ್ತು ಸಿದ್ಧಾಂತದ ಮೇಲೆ ಬದುಕನ್ನು ನಾಟಿದ್ದ ಕುವೆಂಪು ಅವೆಲ್ಲವನ್ನೂ ತೀವ್ರವಾಗಿ ವಿರೋಧಿಸುತ್ತಿದ್ದರು. ವಿಶ್ವಮಾನವ ಸಂದೇಶವನ್ನು ಸಾರಲೆಂದು ಲೇಖನಗಳು ಮತ್ತು ಪುಸ್ತಕಗಳನ್ನೂ ಬರೆದರು. ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮನುಜಮತ-ವಿಶ್ವಪಥ ಮತ್ತು ವಿಚಾರ ಕ್ರಾಂತಿಗೆ ಆಹ್ವಾನ ಎಂಬ ಪುಸ್ತಕಗಳು ಅವುಗಳಲ್ಲಿ ಮುಖ್ಯವಾದದ್ದು ಮತ್ತು ಕನ್ನಡಿಗರು ಓದಲೇ ಬೇಕಾಗಿದ್ದು.

ಒಬ್ಬ ಸಾಹಿತಿಯಲ್ಲಿ ಇರಬೇಕಾದ ಎಲ್ಲ ಗುಣಲಕ್ಷಣಗಳು ಅವರಲ್ಲಿತ್ತು. ತನ್ನ ಸಿದ್ಧಾಂತ, ನಂಬಿಕೆ ಅಥವಾ ನಿಲುವುಗಳ ಮೇಲೆ ಯಾರೊಂದಿಗೂ ರಾಜಿ ಮಾಡಿಕೊಂಡವರಲ್ಲ. ಬಸವಣ್ಣ ಕೇಳಿದಂತೆ ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ, ಆಕಳ ಹಾಲನೆರೆದು, ಜೇನು ತುಪ್ಪವ ಹೊಯ್ದರೆ, ಸಿಹಿಯಾಗಬಲ್ಲುದೆ ಕಹಿಯಹುದಲ್ಲವೇ..? ಹೇಳುವ ವಿಷಯಕ್ಕಿರುವ ರುಚಿ ಸಿಹಿ ಅಥವಾ ಕಹಿಯೇ ಇರಲಿ ಇದ್ದದ್ದು ಇದ್ದಹಾಗೆ ಹೇಳುತ್ತಿದ್ದರು. ಎಂದೂ ರುಚಿ ಬದಲಿಸಿದವರಲ್ಲ, ಎಲ್ಲವನ್ನು, ಎಲ್ಲರನ್ನೂ ಎದುರಿಸುತ್ತಲೇ ವಿಷಯ ಮಂಡಿಸುವ ಪ್ರೌಢಿಮೆ. ಎಡವಟ್ಟು ಮಾಡಿದರೆ ಸಿಹಿ ಕಹಿಯಾದಿತು, ಕಹಿಗೆ, ಸಿಹಿಯ ಅಭಿಷೇಕ ಮಾಡಿದರೂ ಸಿಹಿಯಾಗ ಬಲ್ಲದೆಂಬ ಎಂಬ ಪ್ರಜ್ಞೆಯಿಂದ ಕುವೆಂಪು ಹೊರಬಂದವರಲ್ಲ. ಅಂಕುಡೊಂಕು ನಿಲುವುಗಳ ಸಮಾಜದ ಮುಂದೆ ನೇರ ದಿಟ್ಟತನದಿಂದ ನಡೆದು, ಸಾಹಿತ್ಯದಲ್ಲೇ ಉತ್ತರಿಸುವ ವಿಶೇಷ ಕೌಶಲ್ಯ ಅವರಿಗಲ್ಲದೆ ಮತ್ಯಾರಿಗಿತ್ತು ಹೇಳಿ? ಅಧಿಕಾರವೋ, ಅಧಿಕಾರಿಗಳಿಗೋ ಅಂಜಿಕೊಂಡವರಲ್ಲ. ರಾಜಪ್ರಭುತ್ವದ ಕಾಲದಲ್ಲೂ ಅದನ್ನು ಓಲೈಸುವ ಕೆಲಸ ಮಾಡದೆ ತೀವ್ರವಾಗಿ ಪ್ರಜಾಪ್ರಭುತ್ವವನ್ನು ಪ್ರತಿಪಾದಿಸುತ್ತಿದ್ದರು. ಮೈಸೂರು ರಾಜಕುಮಾರನ ಮಗನಿಗೆ ಶಿಕ್ಷಣವನ್ನು ಕಲಿಸಬೇಕೆಂಬ ಆಜ್ಞೆ ಬಂದಾಗ, ಕಲಿಯುವ ಆಸಕ್ತಿ ಇದ್ದರೆ ನಾನು ಕಲಿಸುವ ಶಾಲೆಯಲ್ಲಿ ಬಂದು ಕಲಿಯಲಿ ಎಂದು ನೇರವಾಗಿ ಉತ್ತರಿಸುತ್ತಾರೆ.

ಸ್ವಾತಂತ್ರ್ಯದ ನಂತರ ಕರ್ನಾಟಕದ ಏಕೀಕರಣ ಚಳುವಳಿಯಲ್ಲಿ ಹೋರಾಟಗಾರರಿಗೆ ಸಂಪೂರ್ಣ ಬೆಂಬಲವನ್ನು ಕುವೆಂಪು ನೀಡಿದರು. ಅದನ್ನು ಗಮನಿಸಿದ ಶಾಸಕರು ಮತ್ತು ಸಚಿವರ ಹಾಗೂ ರಾಜಕಾರಣಿಗಳು ಅವರ ವಿರುದ್ಧ ಮುಖ್ಯಮಂತ್ರಿಗೆ ದೂರನ್ನು ಕೊಟ್ಟರು. ಸರಕಾರವು ತಕ್ಷಣ ಕುವೆಂಪು ಅವರಿಗೆ ನೋಟಿಸ್ ನೀಡಿತು. ಅದಕ್ಕೆ ಕವಿತೆ ಮೂಲಕ ಉತ್ತರಿಸಿದ ಕುವೆಂಪುಗೆ ಮತ್ತೆಂದೂ ನೋಟಿಸ್ ಕಳಿಸುವ ಸಾಹಸ ಮಾಡಿರಲಿಲ್ಲ, ನೋಟೀಸ್ ಕೊಟ್ಟು ಕೈ ಸುಟ್ಟಿಸಿಕೊಂಡ ಪರಿಸ್ಥಿತಿ ಉಂಟಾಯಿತು. ಅಖಂಡ ಕರ್ನಾಟಕ ಎಂಬ ಕವಿತೆಯೂ ರಾಜಕಾರಣಿಗಳ ಸೊಕ್ಕು, ದರ್ಪ ಮತ್ತು ಅಹಂಕಾರದ ಎದೆಯನ್ನು ಸೀಳಿ ಬಿಟ್ಟಿದ್ದಂತೂ ನಿಜ.

ಕನ್ನಡ ನಾಡು ಸಕಲರ ಗೌರವ ಮತ್ತು ವಂದನೆಗೆ ಪಾತ್ರವಾದದ್ದು, ಈ ನಾಡಿನ ನಿರ್ಮಾಣಕ್ಕೆ ಕೋಟ್ಯಾಂತರ ಮನಸ್ಸುಗಳ ಪ್ರಾಮಾಣಿಕ ಪರಿಶ್ರಮ, ತ್ಯಾಗ ಬಲಿದಾನವಿದೆ. ಅಂತಹ ನಾಡಿನ ನಿರ್ಮಾಮ ಇಂದು ಬಂದು ನಾಳೆ ನಿರ್ಗಮಿಸುವ ನಿಮ್ಮಿಂದ ಅದು ಹೇಗೆ ಸಾಧ್ಯವೇ? ವೆಂದು ರಾಜಕಾರಣಿಗಳಿಗೆ ಬಹಿರಂಗ ಪ್ರಶ್ನೆ ಕವಿತೆಯಲ್ಲೇ ಕೇಳುತ್ತಾರೆ. ಬೂಟಾಟಿಕೆಯ ರಾಜಕೀಯದಿಂದ ಈ ನಾಡಿನ ರಕ್ಷಣೆಗಾಗಿ ಒಬ್ಬರಿಗೊಬ್ಬರಂತೆ ತಂಡೋಪ ತಂಡವಾಗಿ ಬರುತ್ತಲೇ ಇರುತ್ತಾರೆ. ಕನ್ನಡ ನಾಡು ಅಮೂಲ್ಯ ಮತ್ತು ಅಮರವಾದದ್ದು. ನೀವು ಮತ್ತು ನಿಮ್ಮ ಸರಕಾರ ಎಂದಿಗೂ ಶಾಶ್ವತವಲ್ಲ. ಅಖಂಡ ಕರ್ನಾಟಕಕ್ಕೆ ಸರಸ್ವತಿಯೇ ರಚಿಸಿರುವ ಸರಕಾರವಿದೆ. ನೃಪತುಂಗನೆ ಚಕ್ರವರ್ತಿ! ಪಂಪನಲ್ಲಿ ಮುಖ್ಯಮಂತ್ರಿ! ಕನ್ನಡ ಸಾಹಿತ್ಯದ ಮೊದಲ ಪರಂಪರೆಯನ್ನು ಪ್ರಾರಂಭಿಸಿದ ಅಮೋಘವರ್ಷಣ್ ನೃಪತುಂಗ ಅಖಂಡ ಕರ್ನಾಟಕದ ಚಕ್ರವರ್ತಿ, ಕನ್ನಡದ ಮೊದಲ ಕವಿ ಪಂಪ ಈ ನಾಡಿನ ಅಜೀವ ಮುಖ್ಯಮಂತ್ರಿ. ರನ್ನ, ಜನ್ನ, ನಾಗವರ್ಮ, ರಾಘವಾಂಕ, ಹರಿಹರ, ಬಸವೇಶ್ವರ, ಸರ್ವಜ್ಞ ಮತ್ತು ಷಡಕ್ಷರಿ ಸೇರಿದ ಸಚಿವರುಗಳ ತಂಡವೇ ಅಖಂಡ ಕರ್ನಾಟಕದ ನಿಜವಾದ ಮಂತ್ರಿ ಮಂಡಲವೆಂದು ಅಂದಿನ ಸರಕಾರವನ್ನು ಕಟುವಾಗಿ ವಿರೋಧಿಸುತ್ತಾರೆ.

ಕುವೆಂಪು ಧನಾತ್ಮಕ ನಿಲುವು ಮತ್ತು ಸಾಮಾಜಿಕ ಪ್ರಜ್ಞೆಗೆ ಮತ್ತೊಂದು ಹೆಸರು. ಭೌತಿಕವಾಗಿ ಅಗಲಿದ ಕುವೆಂಪು ಇಲ್ಲಿನ ಪ್ರತಿ ಕಾಲ ಮತ್ತು ನಿಸರ್ಗದೊಳಗೆ ನಿತ್ಯ ಜೀವಿಸುತ್ತಿದ್ದಾರೆ. ಕಾರಣ ಯುಗದ ಕವಿ ಜಗದ ಕವಿ ಎಂದು ವರಕವಿ ಬೇಂದ್ರೆಯವರಿಂದ ಎನಿಸಿಕೊಂಡಿರುವ ಬಿರುದು ಕಾಲಾಂತ್ಯದವರೆಗೂ ಕುವೆಂಪುರವರನ್ನು ಜನರ ನಡುವೆ ಜೀವಿಸುವಂತೆ ಮಾಡಿದೆ.

(ಲೇಖಕರು: ಹವ್ಯಾಸಿ ಬರಹಗಾರರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ವೇಶ್ಯಾವಾಟಿಕೆ ಮತ್ತು ಸಮತೋಲನ!

ವಿಷಯ ಅತಿ ಗಂಭೀರ ಮತ್ತು ಸಾರ್ವಜನಿಕವಾಗಿ ಚರ್ಚಿಸಲಾಗದಂತಹುದು. ಆದರೂ, ಶಿಶಿರ ಹೆಗಡೆಯವರು ಪ್ರಾಮಾಣಿಕ ಪ್ರಯತ್ನದ ಜತೆ ಸಾಹಸವನ್ನೂ ತೋರಿದ್ದಾರೆ!

ಹೌದು. ವೇಶ್ಯಾವಾಟಿಕೆ, ಇಂದು ನಿನ್ನೆಯ ಕಸುಬಲ್ಲ. ಇದೊಂದು ಅತ್ಯಂತ ಪುರಾತನ 'ವೃತ್ತಿ' ಎಂದು ಪರಿಗಣಿಸುವಲ್ಲಿ, ಇದಕ್ಕೆ ತನ್ನದೇ ಆದ ಮಾನ್ಯತೆಯೂ ಇರಲೇಬೇಕಲ್ಲವೆ? ಇದು ಬರಿ ಕೆಲಸವಲ್ಲ, ಬದಲಿಗೆ ಇಷ್ಟಪಟ್ಟು ಮಾಡುವಂತಹುದು ಎಂಬುದೂ ನಿಜ. ಇಷ್ಟೊಂದು ಹಳೆಯ ವೃತ್ತಿಯಾಗಿ, ಹುಲುಸಾಗಿ ಬೆಳೆಯುತ್ತಿದೆ ಮತ್ತು ಒಂದು ಜನಾಂಗದ, ಪ್ರದೇಶದ ಆರ್ಥಿಕತೆಯನ್ನೇ ಸುಧಾರಿಸುತ್ತದೆ ಎಂದಾಗ, ಇದಕ್ಕೆ ಕಡಿವಾಣದ ಅವಶ್ಯಕತೆ ಇದೆಯೇ? ಇದು ನಿಜಕ್ಕೂ Love for sale ಅನ್ನಬಹುದೇ? ಪ್ರೀತಿ ಎಂಬುದನ್ನೂ ಮಾರಾಟದ ವಸ್ತುವಾಗಿ ಕಂಡರೆ 'ಪ್ರೀತಿ' ಪದವೇ ಅಶುದ್ಧಿಯಾದಂತೆ! ಪ್ರೀತಿ, ವಿಶ್ವಾಸ, ಭರವಸೆ, ನಂಬಿಕೆಗಳಿಗೆಲ್ಲ ದರ ನಿಗದಿ ಮಾಡಲು ಸಾಧ್ಯವೇ? ಅಷ್ಟಕ್ಕೂ, ವೇಶ್ಯಾವಾಟಿಕೆಯಲ್ಲಿ ನಿಜವಾದ ಪ್ರೀತಿ ಇದ್ದೀತೆ? ಒಂದೊಮ್ಮೆ ಇದ್ದರೂ ಇದು ಕೇವಲ ದುಡ್ಡಿನ ಮೇಲಿನ ಪ್ರೀತಿಯೇ ಹೊರತು, ಮಾನವ ಸಹಜ ಪ್ರೀತಿಯಲ್ಲ. ಹಣಕ್ಕಾಗಿ ಪ್ರೀತಿ!

ಇನ್ನು, ಈ ವೇಶ್ಯಾವಾಟಿಕೆಯನ್ನು ಕಾನೂನುಬದ್ಧ ಮಾಡುವುದು ಅಂದರೂ, ನಮ್ಮ ದೇಶದಲ್ಲಿ ಇದು ತಿಳಿದಷ್ಟು ಸುಲಭದ ಮಾತಲ್ಲ. ಭಾರತೀಯ ಸಂಸ್ಕೃತಿಯೇ ಭಿನ್ನ. ಇಲ್ಲಿ, ಹೆಣ್ಣನ್ನು ಪೂಜ್ಯಭಾವದಿಂದ ನೋಡಲಾಗುತ್ತದೆ, ಹೆಣ್ಣಿಗಿರುವ ಮಾನ, ಸಮ್ಮಾನ ಗಂಡಿಗಿಲ್ಲ. ಹಾಗೂ ಹೆಣ್ಣಿನ ಪಾವಿತ್ರ್ಯತೆ ಎಂಬುದೇ ಬಹುದೊಡ್ಡ ವಿಷಯ. ಕಾನೂನುಬದ್ಧ ವೇಶ್ಯಾವಾಟಿಕೆ ಇಲ್ಲಸಲ್ಲದ ಗೊಂದಲಗಳಿಗೆ ಎಡೆಮಾಡಿಕೊಡುತ್ತದೆ ಎಂಬುದು ಬೇರೆ ವಿಚಾರ. ಅದನ್ನು ಕಾನೂನಿನ ಅಡಿ ತರುವಲ್ಲೇ ಹಿಂಜರಿಕೆ. ಇಲ್ಲಿ ಮಡಿವಂತಿಕೆ ಕೆಲಸಮಾಡುತ್ತದೆ.

ಇನ್ನು, ಸೆಕ್ಸ್ ಎನ್ನುವುದು ಹುಟ್ಟಿನಿಂದಲೇ ಬರುವಂತಹುದು ಅಷ್ಟೇ ಅಲ್ಲ ಅತ್ಯಂತ ಪ್ರಬಲವಾದದ್ದು ಎಂದು ಪ್ರಸಿದ್ಧ ಮನೋ ವಿಜ್ಞಾನಿ Fraud ಸಿದ್ಧ ಪಡಿಸಿದ್ದಾನೆ. Sex instinct is innate or in born and is strongest. ಅಷ್ಟೇ ಅಲ್ಲ, ಆತನ ಪ್ರಕಾರ, ಹೆಂಗಸರಲ್ಲಿ ಗಂಡಸಿಗಿಂತ ಹದಿನಾರು ಪಟ್ಟು ಜಾಸ್ತಿ ಸೆಕ್ಸ್ ಬಯಕೆ ಇರುತ್ತದೆ ಅಂತಲೂ ಅಂದಿದ್ದಾನೆ. ಹೀಗಿರುವಾಗ, ವೇಶ್ಯಾವಾಟಿಕೆ ವಿಚಾರದಲ್ಲಿ ಹೆಚ್ಚಾಗಿ ಗಂಡಸರೇ ಅಪರಾಧಿಗಳು ಎಂದು ಬಿಂಬಿಸುವುದರ ಅರ್ಥವೇನು? ಕೆಲ ಪ್ರದೇಶಗಳಲ್ಲಿ ವೇಶ್ಯಾವಾಟಿಕೆಯೇ ಅಲ್ಲಿಯ ಆರ್ಥಿಕತೆಗೆ ಬುನಾದಿಯಾದರೆ, ಇನ್ನು ಕೆಲವೆಡೆ ಸರಾಯಿಯೇ ಮುಖ್ಯ. ಉದಾ: ಗೋವಾ. ಒಂದೊಮ್ಮೆ ಗೋವಾದಲ್ಲಿ ಪಾನ ನಿರೋಧ ಕಾನೂನು ಜಾರಿಯಾದರೆ, ಗೋವಾದ ಸ್ಥಿತಿ ಹೇಗಾಗಬೇಡ? ಅದೇ ಕೆಲ ದೇಶಗಳಲ್ಲಿ ವೇಶ್ಯಾವಾಟಿಕೆಯೇ ಮುಖ್ಯವಾದಲ್ಲಿ ಅದನ್ನು ತಡೆಯಲು ಸಾಧ್ಯವೇ?

ಆದರೊಂದು. ಚಿಕ್ಕ ಹೆಣ್ಣು ಮಕ್ಕಳ ಮೇಲಿನ, ಮುದುಕಿಯರ ಮೇಲಿನ ಅತ್ಯಾಚಾರಗಳೆಲ್ಲ ಗಂಡಸಿನ ಜರೂರತೆಯನ್ನೋ, ವಿಕೃತ ಕಾಮುಕತೆಯನ್ನೋ ವ್ಯಕ್ತ ಪಡಿಸುತ್ತವೆ. ತಂದೆಯೇ ಮಗಳ ಮೇಲೆ ಅತ್ಯಾಚಾರ ನಡೆಸಿದ ವರದಿಗಳೂ ಬರುತ್ತಿರುತ್ತವೆ. ಆದರೆ ಇವೆಲ್ಲ ಅಪವಾದಗಳೆಂದೇ ಸ್ವೀಕರಿಸಬೇಕೇ ಹೊರತು ಉದಾಹರಣೆಗಳಾಗಿ ಅಲ್ಲ. ಒಂದು ಸಮಾಜ ಅಂದಮೇಲೆ ಭಿನ್ನ ಭಿನ್ನ ರೀತಿಯ ಮನೋಧರ್ಮದವರು ಇದ್ದೇ ಇರುತ್ತಾರೆ. ಇಲ್ಲಿ ಇನ್ನೂ ಒಂದು ವಿಷಯಪ್ರಸ್ತಾಪಿಸಲೇಬೇಕು. ಮೊದಲಾಗಿದ್ದರೆ, ಬಡತನ ವೇಶ್ಯಾವಾಟಿಕೆಗೆ ಮೂಲ ಅಂದುಕೊಂಡಿದ್ದರು. ವೇಶ್ಯಾವಾಟಿಕೆ, ನಿಜಕ್ಕೂ ಸಮಾಜದ ಸಮ ತೋಲನ ಕಾಪಾಡಬಹುದೆ ಎಂಬುದನ್ನು ಸ್ಪಷ್ಟವಾಗಿ ಹೇಳಲು ಸಾಧ್ಯವೇ ಇಲ್ಲ. ಸಮತೋಲನವೋ, ಅಸಮತೋಲನವೋ, ಉಳಿದೆಲ್ಲ ಚಟುವಟಿಕೆಗಳಂತೆ ಇದೂ ಒಂದು. ಇದು ಗಂಡಿಗಾಗಿಯೋ, ಹೆಣ್ಣಿಗಾಗಿಯೋ ಎನ್ನದೇ, ಇಬ್ಬರಿಗೂ ಅಂದರೇನೇ ಹೆಚ್ಚು ಸೂಕ್ತ.

-ಶಂಕರನಾರಾಯಣ ಭಟ್, ಹೊನ್ನಾವರ

ಭಟ್ಟರ್ ಸ್ಕಾಚ್

- **ಪೂರ್ಣಯ್ಯ, ಮೈಸೂರು**
  ಭಟ್ರೆ, ಈಚೀಚೆಗೆ ಭಟ್ಟರು ಸಮಾರಂಭಗಳಿಗೆ ಸಪತ್ನಿಕರಾಗಿ ಹೋಗುವುದೇಕೆ?
  – **ಹೆಂಡತಿಗಿಂತ ಉತ್ತಮ ಬಾಡಿಗಾರ್ಡ್ ಯಾರಿದ್ದಾರೆ ಪೂರ್ಣಯ್ಯ?!**
- **ರಾಘಣ್ಣ, (ಇಮೇಲ್ ಮೂಲಕ)**
  ಭಟ್ರೆ, ಸತ್ತಾಗ ಬಳಸುವ ಯಾವ ಪದವೊಂದರ ಹೆಸರನ್ನು ಇಟ್ಟುಕೊಂಡರೆ ಬದುಕಿರುವಾಗಲೂ ಜನ ಅದರಿಂದ ಕರೆಯುತ್ತಾರೆ?
  – **ಕೀರ್ತಿಶೇಷ!**
- **ವಿ.ಹೇಮಂತಕುಮಾರ., ಬೆಂಗಳೂರು**
  ಸಾರ್, ಮನೆಯೊಡತಿಗೂ, ಮನದೊಡತಿಗೂ ವ್ಯತ್ಯಾಸವೇನು?
  – **ಇಬ್ಬರೂ ಒಬ್ಬರೇ ಅಲ್ಲ ಎಂದು ಭಾವಿಸಿ ಪ್ರಶ್ನೆ ಕೇಳಿದಂತಿದೆಯಲ್ಲ?!**
- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರಗಿ**
  ಭಟ್ರೇ, ಎಲ್ಲ ಪತ್ರಿಕೆಗಳೂ 'ಮನಮೋಹನ ಚಿರಮೌನ' ಎಂಬ ಶೀರ್ಷಿಕೆ ಕೊಟ್ಟಿವೆಯಲ್ಲ?
  – **ಅದೇ ಒಂಥರ ಸರಿ.. ಯಾರು ಯಾರನ್ನು ನಕಲು ಮಾಡಿದರೆಂಬುದು ಗೊತ್ತಾಗುವುದಿಲ್ಲ!**
- **ರವಿ ಕೆ. ಹೆಗಡೆ., ಶಿರಸಿ**
  ಭಟ್ರೆ, ಡಾ.ಮನಮೋಹನ ಸಿಂಗ್ ಅವರನ್ನು ಟೀಕಿಸುತ್ತಿದ್ದವರೆಲ್ಲ ಅವರನ್ನು ಹೊಗಳುತ್ತಿದ್ದಾರಲ್ಲ.?
  – **ನಮ್ಮನ್ನು ಟೀಕಿಸುವವರೂ ನಮ್ಮನ್ನು ಹೊಗಳುತ್ತಾರೆಂಬುದನ್ನು ಪರೀಕ್ಷಿಸಬೇಕೆಂದರೆ ಒಂದು ಸಲ ಸತ್ತು ನೋಡಬೇಕು!**
- **ಎಲ್.ವಿ.ಸತೀಶ್, ಮೈಸೂರು**
  ಭಟ್ರೇ, ಮದುವೆಯಾಗಬೇಕೆಂದಿದ್ದೇನೆ, ಹುಡುಗಿಯರೇ ಸಿಗುವುದಿಲ್ಲವಲ್ಲ?
  – **ಹುಡುಗರನ್ನೂ ಮದುವೆಯಾಗಬಹುದು!**
- **ರವೀಂದ್ರ ಕ್ಯಾತನದೊಡ್ಡಿ, (ಇಮೇಲ್ ಮೂಲಕ)**
  ಭಟ್ರೇ, ನಿಮ್ಮನ್ನು ಭೇಟಿಯಾದ ವರಿಗೆಲ್ಲ ನ್ಯಾಯ ಕೊಡಿಸುತ್ತಿರಂತೆ ನಿಜವಾ?
  – **ಆದರೆ ಅದು ಉಪದೇಶದ ರೂಪದಲ್ಲಿರುತ್ತದೆ!**
- **ಸುರೇಶ್ ಕಂಬಾರ, ಹುಬ್ಬಳ್ಳಿ**
  ಭಟ್ರೇ, ಕೇಂದ್ರ ಸಚಿವ ಕುಮಾರ ಸ್ವಾಮಿ ಮಂಡ್ಯ ಸಮ್ಮೇಳನದಲ್ಲಿ ಚೆಲುವರಾಯಸ್ವಾಮಿ ಅವರನ್ನು ಹೊಗಳಿದ್ದಾರಲ್ಲ?
  – **ಅದು ಬರಲಿರುವ ಅಪಾಯದ ಮುನ್ಸೂಚನೆ!**
- **ರಾಜಣ್ಣ ಸೋಮವಾರಪೇಟೆ, (ಇಮೇಲ್ ಮೂಲಕ)**
  ಭಟ್ರೇ, ರಾತ್ರಿ ಒಂದು ಗಂಟೆಯ ನಂತರವೇ ಆಕೆ ಮಿಸ್ ಕಾಲ್ ಕೊಡುತ್ತಾಳಲ್ಲ?
  – **ನೀನೇಕೆ ಆಕೆ ಮಿಸ್ ಕಾಲ್ ಕೊಡದಿದ್ದರೆ ಚಡಪಡಿಸುತ್ತೀಯ ಎಂಬುದನ್ನು ಮೊದಲು ಹೇಳು!**

ಬೆಳಗಾವಿ ಆಟ; ರವಿಯ ಮೇಲಾಟ

ಪೊಲೀಸರು ಬಾಗಲಕೋಟೆಯ ಲೋಕಾಪುರದಿಂದ ಮುಧೋಳ ರಸ್ತೆಯಲ್ಲಿನ ಕಬ್ಬಿನ ತೋಟ, ಕಲ್ಲು ಕ್ವಾರಿಗಳಿಗೆ ಸುತ್ತಾಡಿಸಿದರು. ಅಲ್ಲಿ ಏನಿತ್ತು ನಿಮ್ಮ ಕೆಲಸ ಎಂದು ಕೇಳಿದರೆ ಪೊಲೀಸರು ಹೇಳುವುದು ಮಾಧ್ಯಮಗಳ ಕಣ್ಣು ತಪ್ಪಿಸಿ ಎಂದು ಹಿರಿಯ ಅಧಿಕಾರಿಗಳು ಹೇಳಿದ್ದರು.

ರಾಜಬೀದಿ
ವಿನಾಯಕ ಮಠಪತಿ
vveditoped@gmail.com

ಈ ಬಾರಿ ಬೆಳಗಾವಿಯ ಚಳಿಗಾಲದ ಅಧಿವೇಶನ ಅನವಶ್ಯಕ ವಿಷಯಗಳಿಗೆ ಹೆಚ್ಚು ಸದ್ದು ಮಾಡಿದೆ. ದಶಕಗಳ ಸಮಸ್ಯೆಗಳಿಗೆ ಈ ಬಾರಿಯೂ ಸ್ಪಷ್ಟ ಉತ್ತರ ಸಿಗದ ಕಾರಣ ಕೋಟ್ಯಾಂತರ ಜನರ ನಿರೀಕ್ಷೆ ಮುಂದಿನ ವರ್ಷಕ್ಕೆ ತಳ್ಳಲ್ಪಟ್ಟಿದ್ದು ವಿಷಾದನಿಯ.

ಅಧಿವೇಶನದ ಕೊನೆಯ ದಿನ ಉತ್ತರ ಕರ್ನಾಟಕದ ಕುರಿತು ವಿಶೇಷ ಚರ್ಚೆಯು ಅಂಬೇಡ್ಕರ್ ವಿಚಾರವಾಗಿ ಉಂಟಾದ ಗದ್ದಲದಿಂದ ಬದಿಗೆ ಸರಿಯಿತು. ಅತ್ತ ಕಾಂಗ್ರೆಸ್ ಸದಸ್ಯರು ಬಿಜೆಪಿ ವಿರುದ್ಧ ಅಂಬೇಡ್ಕರ್ ವಿಚಾರವಾಗಿ ಜೋರು ಧ್ವನಿಯಲ್ಲಿ ವಾಗ್ದಾಳಿ ನಡೆಸುತ್ತಿದ್ದರೆ, ಇತ್ತ ಬಿಜೆಪಿ ಸದಸ್ಯರು ಅಂದು ಅಂಬೇಡ್ಕರ್ ವಿಚಾರದಲ್ಲಿ ಕಾಂಗ್ರೆಸ್ ನಡೆದುಕೊಂಡ ರೀತಿಯ ಕುರಿತು ಪ್ರತ್ಯುತ್ತರ ನೀಡುತ್ತಿದ್ದರು. ಇಬ್ಬರು ಸದಸ್ಯರ ಗಲಾಟೆ ಮಧ್ಯೆ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಕೆಲ ಸಮಯ ಕಲಾಪ ಮುಂದೂಡಿದರು.

ಈ ಬಾರಿ ಸಂಪೂರ್ಣ ಚಳಿಗಾಲ ಅಧಿವೇಶನ ಕುರಿತು ಚರ್ಚೆಯ ದಿಕ್ಕು ಬದಲಿಸಿದ್ದ ಮಹಾಭಾರ ಪ್ರಹಸನ ನಿಜಕ್ಕೂ ಪ್ರಾರಂಭವಾಗಿದ್ದು ಇದೇ ಸಂದರ್ಭದಲ್ಲಿ. ಕೆಲ ಸದಸ್ಯರು ಊಟಕ್ಕೆಂದು ಹೊರಡುತ್ತಿದ್ದರು. ಈ ಮಧ್ಯದಲ್ಲೇ ಸಿದ್ದರಾಮಯ್ಯ ಸರಕಾರದ ಏಕೈಕ ಮಹಿಳಾ ಸಚಿವರು, ಸಭಾಪತಿ ಕೊನೆಗೆ ದೌಡಾಯಿಸಿದ್ದಾಗಿತ್ತು. ಅಷ್ಟರಲ್ಲೇ ಸುವರ್ಣಸೌಧದ ಎಲ್ಲೆಡೆಯೂ ಪರಿಷತ್ತಿನಲ್ಲಿ ಏನೋ ನಡೆದಿದೆ ಎಂಬ ಗುಸು ಗುಸು ಚರ್ಚೆಗಳು ಹೆಚ್ಚಾದವು. ಅಷ್ಟರಲ್ಲೇ ಕೆಲವರು ಪರಿಷತ್ ಸದಸ್ಯ ಸಿ.ಟಿ ರವಿ ಕಾರಿಗೆ ಸುವರ್ಣಸೌಧದ ಪಶ್ಚಿಮ ದ್ವಾರದ ಮುಂದೆ ಮುತ್ತಿಗೆ ಹಾಕಿ ಘೋಷಣೆಗಳನ್ನು ಮೊಳಗಿಸಿದ್ದರು. ನೆರೆದಿದ್ದ ಪೊಲೀಸರು ಅಚಾನಕ್ಕಾಗಿ ನಡೆದ ಗಲಾಟೆಯಿಂದ ಕ್ಷಣಹೊತ್ತು ವಿಚಲಿತರಾಗಿ ನಂತರ ಪರಿಸ್ಥಿತಿ ತಿಳಿಗೊಳಿಸುವ ಕೆಲಸ ಮಾಡಿದರು.

ಇದಾದ ಕೆಲ ಸಮಯದಲ್ಲಿ ಎಲ್ಲರ ಚಿತ್ತ ಪರಿಷತ್ ಕಲಾಪದ ಮೇಲಿತ್ತು.. ಆಗಲೇ ಎಲ್ಲರಿಗೂ ತಿಳಿದಿದ್ದು ಸಿ.ಟಿ ರವಿ ಲಕ್ಷ್ಮೀ ಹೆಬ್ಬಾಳಕರ್ ಅವರಿಗೆ ಆಡಬಾರದ ಮಾತು ಆಡಿದ್ದಾರೆಂದು. ಈ ಸಮಯದಲ್ಲೇ ಸಭಾಪತಿ ಹೊರಟ್ಟಿಯವರ ಕಚೇರಿ ಕಡೆ ಕಾಂಗ್ರೆಸ್ ಪ್ರಮುಖ ಸಚಿವರೊಬ್ಬರು ಬಂದುಬಿಟ್ಟರು. ಯಾರಿಗೂ ಪ್ರವೇಶ ಇರದಂತೆ ಪರಿಷತ್ತಿನ ಬಾಗಿಲುಗಳು ಬಂದ್ ಆದವು. ಅತ್ತ ಬಿಜೆಪಿ ನಾಯಕರು ಹೊರಟ್ಟಿ ಬಳಿ ಓಡಿ ಬಂದರು. ಈ ಮಧ್ಯೆ ವಿಧಾನಸಭೆ ಹೊರಾಂಗಣದಿಂದ ಪರಿಷತ್ತಿನ ಕಡೆ ಸಿ.ಟಿ.ರವಿ ಬರುತ್ತಿದ್ದಂತೆ ಮತ್ತೆ ಐದಾರು ಯುವಕರ ಗುಂಪು ಹಲ್ಲೆಗೆ ಮುಂದಾಯ್ತು. ಕೂಡಲೇ ರಕ್ಷಣೆಗೆ ಧಾವಿಸಿದ ಮಾರ್ಷಲ್‌ಗಳು ರವಿ ಅವರನ್ನು ಪರಿಷತ್ತಿನ ಸಭಾಂಗಣದ ಕೂದಲೆಳೆ ಅಂತರದಲ್ಲಿ ತಡೆದರು. ಅಷ್ಟರಲ್ಲೇ ಸಿ.ಟಿ.ರವಿ ಧರಣಿಯನ್ನು ಪ್ರಾರಂಭಿಸಿದರು. ಏನೂ ತಿಳಿಯದ ಸ್ಥಿತಿಯಲ್ಲಿದ್ದ ಬೆಳಗಾವಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಂತೂ ಅಥ್ಲೆಟಿಕ್ಸ್ ರೀತಿಯಲ್ಲಿ ಓಡಿ ಸಿಬ್ಬಂದಿ ಕರೆತಂದಿದ್ದು ಸಿನಿಮಾ ಶೈಲಿಯಲ್ಲಿ ನೋಡುವಂತಿತ್ತು.

ಇಷ್ಟೆಲ್ಲ ಪ್ರಹಸನಗಳ ನಡುವೆ ಹೊರಟ್ಟಿ ಪರಿಷತ್ ಕಲಾಪ ಪ್ರಾರಂಭಿಸಿದ್ದರು. ಘಟನೆಯ ಕುರಿತು ಸಭಾಪತಿಗಳು ತಮ್ಮ ನಿರ್ಣಯ ತಿಳಿಸಿ ಸದನವನ್ನು ಅನಿರ್ಧಿಷ್ಟಾವಧಿಗೆ ಮುಂದೂಡಿದರು. ಇದೇ ಸಂದರ್ಭಕ್ಕೆ ಕಾಯುತ್ತಿದ್ದ ಬೆಳಗಾವಿಯ ಹಿರೇಬಾಗೇವಾಡಿ ಪೊಲೀಸರು ಲಕ್ಷ್ಮೀ ಹೆಬ್ಬಾಳಕರ್ ಕೊಟ್ಟ ದೂರಿಗೆ ಸಂಬಂಧಿಸಿದಂತೆ ಸಿ.ಟಿ.ರವಿ ಅವರನ್ನು ಬಂಧಿಸಲು ತಯಾರಿ ಮಾಡಿಕೊಂಡಿದ್ದರು. ಅಷ್ಟರಲ್ಲೇ ವಿಪಕ್ಷ ನಾಯಕ ಆರ್.ಅಶೋಕ್ ನೇತೃತ್ವದಲ್ಲಿ ಬಿಜೆಪಿ ಸದಸ್ಯರು ಸರಕಾರದ ವಿರುದ್ಧ ಧಿಕ್ಕಾರ ಕೂಗುತ್ತಿದ್ದಂತೆ ನಾಲ್ಕಾರು ಪೊಲೀಸರು ಬಂದು ಸಿ.ಟಿ.ರವಿ ಅವರನ್ನು ವಶಕ್ಕೆ ಪಡೆದು ರಾಷ್ಟ್ರೀಯ ಹೆದ್ದಾರಿ ಮಾರ್ಗ ಹಿಡಿದು ಕರೆದೊಯ್ದರು.

ಸಿ.ಟಿ.ರವಿ ಪ್ರಕರಣಕ್ಕೆ ರೋಚಕ ತಿರುವು ಕೊಟ್ಟಿದ್ದೇ ಇದೇ ಸಂದರ್ಭ. ಹಿರೇಬಾಗೇವಾಡಿಗೆ ತೆರಳಿದ್ದ ಪೊಲೀಸ್ ವಾಹನ ಎಂ.ಕೆ ಹುಬ್ಬಳ್ಳಿ ಮಾರ್ಗವಾಗಿ ಪಾರಿಶ್ವಾಡ, ದೇವಲತ್ತಿ ಕಡೆ ಮುಖಮಾಡಿ ನೇರವಾಗಿ ಹೋಗಿದ್ದು ಖಾನಾಪುರಕ್ಕೆ. ಪಶ್ಚಿಮ ಘಟ್ಟದ ತಪ್ಪಲಿನಲ್ಲಿರುವ ಖಾನಾಪುರಕ್ಕೆ ಯಾವ ಕಾರಣಕ್ಕೆ ಸಿ.ಟಿ ರವಿ ಅವರನ್ನು ಕರೆತರಲಾಗಿತ್ತು ಎಂಬ ಅರಿವು ಪೊಲೀಸರಿಗೂ ಇರಲಿಲ್ಲ. ಈ ಮಧ್ಯದಲ್ಲೇ ವಿಪಕ್ಷ ನಾಯಕ ಆರ್. ಅಶೋಕ್, ಬಸನಗೌಡ ಪಾಟೀಲ ಯತ್ನಾಳ್, ಸುನಿಲ್ ಕುಮಾರ್ ಜೊತೆಗೆ ನೋಡ, ನೋಡುತ್ತಿದ್ದಂತೆ ಖಾನಾಪುರ ಪೊಲೀಸ್ ಠಾಣೆಯಲ್ಲಿ ಬಿಜೆಪಿಗರು ಜಮಾವಣೆ ಆಗತೊಡಗಿದರು. ಆಗಲೇ ಬೆಳಗಾವಿ ಪೊಲೀಸರು ಖಾನಾಪುರ ಕಾಡನ್ನು ತೊರೆಯುವ ನಿರ್ಧಾರ ಮಾಡಿದ್ದು.

ಮೊದ, ಮೊದಲು ಸಿ.ಟಿ ರವಿ ಅವರನ್ನು ಬೆಂಗಳೂರಿಗೆ ಸ್ಥಳಾಂತರ ಮಾಡುತ್ತಿದ್ದಾರೆ ಎಂಬ ವಿಷಯ ತಿಳಿಯಿತು. ಮತ್ತದೇ ಪೊಲೀಸರ ತಂಡ ಗಣೇಶನನ್ನು ಹೊತ್ತುಕೊಂಡಂತೆ ಸಿ.ಟಿ ರವಿ ಅವರನ್ನು ಹೊತ್ತು ವಾಹನಕ್ಕೆ ಹಾಕಿಕೊಂಡರು. ಈ ಸಂದರ್ಭದಲ್ಲೇ ಠಾಣೆಯ ಬಾಗಿಲು ತಾಗಿ ರವಿ ಅವರ ತಲೆಗೆ ಗಾಯವಾಗಿದ್ದು, ಮಾಧ್ಯಮಗಳ ಕ್ಯಾಮೆರಾ ಕೂಡ ಈ ಸಂದರ್ಭದಲ್ಲಿ ಪೊಲೀಸರ ಘರ್ಷಣೆಗೆ ಕೆಳಗುರುಳಿದ್ದವು. ಇದಾದ ನಂತರ ಸಿ.ಟಿ.ರವಿ ಅವರಿಗೆ ಅಸಲಿ ಯಾತ್ರೆಯ ಅನುಭವ ಆಗಿದ್ದು. ಮತ್ತದೇ ಖಾನಾಪುರ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ ಹಿಡಿದ ಪೊಲೀಸ್ ವಾಹನಗಳು ರಾಣಿ ಚನ್ನಮ್ಮ ಆಳಿದ ಕಿತ್ತೂರಿನ ಕಡೆ ಮುಖ ಮಾಡಿದವು. ಕಿತ್ತೂರು ಕೋಟೆ ಹೊರವಲಯದ ಸರಕಾರಿ ಆಸ್ಪತ್ರೆಯಲ್ಲಿ ರವಿ ಅವರ ತಲೆಗೆ ಬ್ಯಾಂಡೇಜ್ ಸುತ್ತಿದ ನಂತರ ಬೆಳಗಡಿ, ಕರಿಕಟ್ಟಿ ಮಾರ್ಗವಾಗಿ ಸವದತ್ತಿಗೆ ಪ್ರಯಾಣ ಮುಂದುವರಿಯಿತು. ನಂತರ ಹುಲಿಕಟ್ಟಿ ದಾಟಿ ರಾಮದುರ್ಗ ಡಿವೈಎಸ್ಪಿ ಕಚೇರಿಗೆ ಕರೆತಂದರು.

ಈ ಸಂದರ್ಭದಲ್ಲಿ ಪೊಲೀಸರು ಬಾಗಲಕೋಟೆಯ ಲೋಕಾಪುರದಿಂದ ಮುಧೋಳ ರಸ್ತೆಯಲ್ಲಿನ ಕಬ್ಬಿನ ತೋಟ, ಕಲ್ಲು ಕ್ವಾರಿಗಳಿಗೆ ಸುತ್ತಾಡಿಸಿದರು. ಅಲ್ಲಿ ಏನಿತ್ತು ನಿಮ್ಮ ಕೆಲಸ ಎಂದು ಕೇಳಿದರೆ ಪೊಲೀಸರು ಹೇಳುವುದು ಮಾಧ್ಯಮಗಳ ಕಣ್ಣು ತಪ್ಪಿಸಿ ಎಂದು ಹಿರಿಯ ಅಧಿಕಾರಿಗಳು ಹೇಳಿದ್ದರು, ಇದೇ ಕಾರಣಕ್ಕೆ ಹೋಗಿದ್ದೇವು ಎಂಬ ಉತ್ತರ. ನಂತರ ಯಾದವಾಡ, ಯರಗಟ್ಟಿ ರಸ್ತೆ ಮೂಲಕ ಅಂಕಲಗಿ ಪೊಲೀಸ್ ಠಾಣೆಯಲ್ಲಿ ಕ್ಷಣಕಾಲ ವಿಶ್ರಾಂತಿ ಪಡೆದಿದ್ದು. ಇಷ್ಟೆಲ್ಲ ಪ್ರಹಸನ ನಂತರ ಮರುದಿನ ಬೆಳಿಗ್ಗೆ ಬೆಳಗಾವಿ ಜಿಲ್ಲಾ ಕೋರ್ಟ್‌ಗೆ ಸಿ.ಟಿ ರವಿ ಅವರನ್ನು ಕರೆತಂದಿದ್ದು. ಸಧ್ಯ ರಾಜ್ಯದ ಜನರಿಗೆ ಕಾಡುತ್ತಿರುವ ಕಟ್ಟ ಕಡೆಯ ಪ್ರಶ್ನೆ ಸಿ.ಟಿ.ರವಿ ಅವರನ್ನು ಇಷ್ಟೆಲ್ಲ ಸ್ಥಳಗಳಿಗೆ ಅಲೆದಾಡಿಸಿದ್ದು ಯಾವ ಕಾರಣ? ಇಲ್ಲಿ ದಿಕ್ಕು ತಪ್ಪಿದ್ದು ಸಿ.ಟಿ.ರವಿ ಅವರಾ ಅಥವಾ ಬೆಳಗಾವಿ ಪೊಲೀಸರಾ?

ಪ್ರಬುದ್ಧತೆ ಪ್ರದರ್ಶಿಸಿದ ಸತೀಶ್ ಜಾರಕಿಹೊಳಿ

ಸಿ.ಟಿ.ರವಿ ಪ್ರಕರಣದ ನಂತರ ಹೆಚ್ಚು ಗಮನ ಸೆಳೆದಿದ್ದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಆಡಿದ ಆ ಒಂದು ಮಾತು. ದೇಶದಲ್ಲಿ ಇಂತಹ ಅನೇಕ ಪ್ರಕರಣಗಳು ಸದನದಲ್ಲಿ ನಡೆದುಹೋಗಿವೆ. ಇಬ್ಬರೂ ನಾಯಕರು ಈ ಪ್ರಕರಣವನ್ನು ಇಲ್ಲಿಯೇ ಕೈಬಿಡುವುದು ಒಳಿತು ಎಂಬ ಹೇಳಿಕೆ ತುಂಬಾ ಸದ್ದು ಮಾಡಿದೆ. ಸತೀಶ್ ಜಾರಕಿಹೊಳಿ ಅವರದು ಮೌನದಿಂದಲೇ ರಾಜಕೀಯ ಸಂದೇಶ ಕೊಡುವ ವ್ಯಕ್ತಿತ್ವ. ಆಗಾಗ್ಗೆ ಅವರು ಆಡುವ ಮಾತುಗಳು ಸದ್ಯದ ಪರಿಸ್ಥಿತಿ ಹಾಗೂ ಮುಂದೆ ಆಗುವ ಅನಾಹುತದ ಕುರಿತು ಎಚ್ಚರಿಕೆಯ ಸಂದೇಶವಾಗುವ ಅನುಮಾನವಿಲ್ಲ. ಇದೇ ಕಾರಣಕ್ಕೆ ಸಚಿವ ಸತೀಶ್ ಆಡಿದ ಮಾತು ತೀರಾ ಮಹತ್ವದ್ದು ಎಂದೆನಿಸಿದೆ.

ಸಿ.ಟಿ.ರವಿ ಪ್ರಕರಣದಲ್ಲಿ ಅವರು ಆಡಿರುವ ಎನ್ನಲಾದ ಅಶ್ಲೀಲ ಪದದ ಸಮರ್ಥನೆಗೆ ಯಾರೂ ಬರುವ ಮಾತಿಲ್ಲ. ಆದರೆ ಬಂಧನದ ನಂತರ ಗೃಹ ಇಲಾಖೆ ನಡೆದುಕೊಂಡ ರೀತಿಯ ಕುರಿತು ಸ್ವಪಕ್ಷದವರಿಗೂ ಅಸಮಾಧಾನ ಇದೆ. ಖುದ್ದು ಸತೀಶ್ ಜಾರಕಿಹೊಳಿ ಅವರೇ ಹೇಳಿದ್ದು, ರವಿ ಅವರನ್ನು ಕೋರ್ಟ್‌ಗೆ ಹಾಜರುಪಡಿಸುವಂತೆ ಎಂದು. ಆದರೆ ಈ ಮಾತನ್ನು ಪೊಲೀಸರು ಕೇಳಲಿಲ್ಲ ಎಂದು ಹೇಳಿದ್ದರು.

ಪ್ರಸ್ತುತ ಘಟನೆ ಹಾಗೂ ಅದು ಸಾಗುತ್ತಿರುವ ದಾರಿ ನೋಡಿದರೆ ಅನವಶ್ಯಕವಾಗಿ ವಿಷಯ ಎಳೆದಂತಾಗುತ್ತಿದೆ. ಇದರಿಂದ ಹಿರಿಯ ನಾಯಕರು ಮುಜುಗರ ಪಡುವ ಸನ್ನಿವೇಶವೂ ಎದುರಾಗಿದೆ. ಆದರೆ ಇಲ್ಲಿ ಪ್ರಮುಖವಾಗಿ ಸತೀಶ್ ಜಾರಕಿಹೊಳಿ ತಮ್ಮ ರಾಜಕೀಯ ಪ್ರಬುದ್ಧತೆ ಪ್ರದರ್ಶನ ಮಾಡಿದ್ದಾರೆ. ಕೆಲವು ಸಂದರ್ಭಗಳಲ್ಲಿ ರಾಜಕೀಯವಾಗಿ ಪಡೆದುಕೊಂಡಷ್ಟು ಕಳೆದುಕೊಳ್ಳುವುದು ಅನಿವಾರ್ಯ. ಆದರೆ ಲಕ್ಷ್ಮೀ ಹೆಬ್ಬಾಳಕರ್ ಅವರಿಗೆ ಆದ ಮನಸ್ಸಿನ ಗಾಯಕ್ಕೆ ಸಧ್ಯ ಔಷಧಿ ಎಂದರೆ ಅದು ಕಾನೂನು ಸಮರ. ಹೋರಾಡಿ ಗೆದ್ದು ಮತ್ತೊಂದು ಉದಾಹರಣೆ ಆಗುತ್ತಾರಾ? ಎಂಬುದನ್ನು ಕಾಲವೇ ತಿಳಿಸಲಿದೆ.

ಮಹಿಳೆಯರ ಶೋಷಣೆ ಸಾಮಾಜಿಕ ಪಿಡುಗು

ಪ್ರಜಾಪ್ರಭುತ್ವ ವ್ಯವಸ್ಥೆ ಅತ್ಯುನ್ನತ ವೇದಿಕೆಯಾದ ಸಂಸತ್ತಿಗೆ ಗೆದ್ದು ಬರುವ ಮಹಿಳೆಯರೂ ದೌರ್ಜನ್ಯಕ್ಕೆ ಒಳಗಾಗುತ್ತಿರುವುದು ಶೋಚನೀಯ ಸಂಗತಿ. 1889 ರಲ್ಲಿ ರಚನೆಯಾದ ಐಪಿಯು (ಇಂಟರ್ ಪಾರ್ಲಿಮೆಂಟರಿ ಯುನಿಯನ್)2023 ರಲ್ಲಿ ನೀಡಿರುವ ವರದಿ ಅನ್ವಯ. ಜಗತ್ತಿನ ಎಲ್ಲ ದೇಶಗಳ ಸಂಸತ್ತಿನನಲ್ಲಿ ಮಹಿಳೆಯರು ಪ್ರತಿನಿಧಿಸುವ ಸರಾಸರಿ ಶೇಕಡಾ 26.9 ರಷ್ಟಿದ್ದು. ಸದ್ಯ 0.4 ಪ್ರತಿಶತ ಹೆಚ್ಚಳ ಕಂಡಿದೆ. ಆದರೆ ಕೆಲ ದೇಶಗಳಲ್ಲಿ ಮಹಿಳೆಯರು ಸಂಸತ್ ಚುನಾವಣೆ ಸ್ಪರ್ಧೆಗೆ ಪಾಲ್ಗೊಳ್ಳುವ ಪ್ರಮಾಣ ಗಣನೀಯವಾಗಿ ಇಳಿಕೆ ಕಂಡಿದ್ದರ ಕುರಿತು ಸಂಸ್ಥೆ ಬೆಳಕು ಚೆಲ್ಲಿದೆ. ಇದಕ್ಕೆ ಪ್ರಮುಖ ಕಾರಣ ಮಹಿಳಾ ಸಂಸದರನ್ನು ಅಶ್ಲೀಲ ಪದಬಳಸಿ ನಿಂದಿಸುವುದು. ಲೈಂಗಿಕ ಕಿರುಕುಳ, ವೈಯಕ್ತಿಕ ದಾಳಿಗಳಿಂದ ಮಹಿಳೆಯರು ರಾಜಕೀಯದಿಂದ ದೂರ ಸರಿಯುತ್ತಿದ್ದಾರೆ ಎಂದು ವರದಿ ಹೇಳಿದೆ.

ಈ ಹಿಂದೆ ಪ್ರಾನ್ಸ್ ಸಂಸತ್ತಿನಲ್ಲಿ ಮಹಿಳಾ ಸಂಸದರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ರಾಜಕೀಯ ವಲಯದಲ್ಲಿ ಸಾಕಷ್ಟು ಚರ್ಚೆ ಹುಟ್ಟುಹಾಕಿತ್ತು. ಜಗತ್ತಿನ ಅನೇಕ ಭಾಗಗಳಲ್ಲಿ ರಾಜಕೀಯವಾಗಿ ಗುರುತಿಸಿಕೊಂಡ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಾಸಾಗಿವೆ. ಇದರಿಂದ ಭವಿಷ್ಯದಲ್ಲಿ ಮಹಿಳೆಯರು ರಾಜಕೀಯಕ್ಕೆ ಬರಲು ಹಿಂದೇಟು ಹಾಕುವ ಪರಿಸ್ಥಿತಿ ಬಂದರು ಅಚ್ಚರಿ ಪಡಬೇಕಿಲ್ಲ. ಆದರೆ ಭಾರತ ದೇಶ ಇದಕ್ಕೆ ತದ್ವಿರುದ್ಧವಾಗಿ ನಿಂತಿದೆ. ಇಲ್ಲಿ ಮಹಿಳೆಯರಿಗೆ ಹೆಚ್ಚಿನ ರಾಜಕೀಯ ಸ್ಥಾನಮಾನ ನೀಡಿದ್ದು, ಇದು ಇನ್ನಷ್ಟು ಬಲಿಷ್ಠವಾದರೆ ದೇಶಕ್ಕೆ ಒಳಿತು.

(ಲೇಖಕರು: ಪತ್ರಕರ್ತರು)

ಅಭಿಮತ

ಪ್ರಕಾಶ ಹೆಗಡೆ

ಅಮೆರಿಕದ ಡೋಜ್‌ನಿಂದ ಭಾರತಕ್ಕೆ ಪ್ರೇರಣೆ

ಡೊನಾಲ್ಡ್ ಟ್ರಂಪ್ ಅಮೆರಿಕ ಅಧ್ಯಕ್ಷರಾಗಿ ಪುನಃ ಆಯ್ಕೆಯಾದಾಗಿನಿಂದ ಆಡಳಿತಾತ್ಮಕ ಸುಧಾರಣೆಗಳ ಸರಣಿಗಳನ್ನು ಘೋಷಿಸುತ್ತಿರುವುದನ್ನು ನಾವೆಲ್ಲರೂ ಗಮನಿಸುತ್ತಿದ್ದೇವೆ. ಅವುಗಳಲ್ಲಿ ಡೋಜ್ (DOGE: Department of Government Efficiency) ಜಗದ ಮನಸೆಳೆಯುವಲ್ಲಿ ಮುಂಚೂಣಿಯಲ್ಲಿದೆ. ಡೋಜ್ ಸರಕಾರದ ಸಲಹಾ ಇಲಾಖೆಯಾಗಿದ್ದು, ಫೆಡರಲ್ ಸರಕಾರದ ವೆಚ್ಚವನ್ನು ಕಡಿತಗೊಳಿಸಲು ಹಾಗೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಲಹಾ ಮಾರ್ಗಗಳನ್ನು ಸೂಚಿಸುವುದೇ ಈ ಇಲಾಖೆಯ ಉದ್ದೇಶವಾಗಿದೆ. ಈ ಇಲಾಖೆಯ ಮುಖ್ಯಸ್ಥರು ಜನಪ್ರತಿನಿಧಿಗಳಲ್ಲ ಅಥವಾ ಸರಕಾರದ ನೌಕರರೂ ಅಲ್ಲ. ಖಾಸಗೀ ವಲಯದ ತಮ್ಮದೇ ಆದ ಯಶಸ್ವಿ ಉದ್ಯಮಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಸಾಧಿಸಿದ ದಿಗ್ಗಜರಾದ ಎಲೋನ್ ಮಸ್ಕ್ ಹಾಗೂ ವಿವೇಕ್ ರಾಮಸ್ವಾಮಿ ಅವರು. ಡೋಜ್ ನೀತಿಯ ಬಾಹ್ಯರೇಖೆಗಳು ಹಾಗೂ ಚೌಕಟ್ಟುಗಳು ಇಲಾಖೆಯ ಯಶಸ್ಸಿನ ಮುನ್ಸೂಚನೆಗಳೆನ್ನಬಹುದು.

ಅಮೆರಿಕದಲ್ಲಿ ಹೆಚ್ಚಿನ ಕಾನೂನು ಮತ್ತು ಶಾಸನಗಳು ಕಾಂಗ್ರೆಸ್ ಜಾರಿಗೆ ತಂದಿಲ್ಲ. ಅದೇ ರೀತಿ, ಸರಕಾರದ ನಿರ್ಧಾರಗಳು ಹಾಗೂ ವೆಚ್ಚಗಳನ್ನು ಚುನಾಯಿತ ಅಧ್ಯಕ್ಷರಿಂದ ಅಥವಾ ಅವರ ರಾಜಕೀಯ ನೇಮಕಾತಿಯಿಂದಲೂ ಮಾಡಲಾಗುವುದಿಲ್ಲ. ಇವೆಲ್ಲವೂ ಸಾವಿರಾರು ಸರಕಾರೀ ನಾಗರಿಕ ಅಧಿಕಾರಿಗಳು ಘೋಷಿಸಿದ ನಿಬಂಧನೆಗಳಾಗಿವೆ. ಭಾರತದಲ್ಲಿಯೂ ಇಂತಹದೇ ಮಾದರಿ. ರಾಷ್ಟ್ರೀಯ ಆಯವ್ಯಯ ವರ್ಷಕ್ಕೊಮ್ಮೆ ಉನ್ನತ ಮಟ್ಟದ ಸಂಸತ್ತಿನಲ್ಲಿ ಅಂಗೀಕಾರವಾದೊಡನೆ ಸಂಬಂಧಿಸಿದ ಇಲಾಖೆಯ ನಾಗರಿಕ ಅಧಿಕಾರಿಗಳಿಗೆ(Bureaucrats) ವರ್ಗಾವಣೆಯಾಗುತ್ತದೆ. ಅಲ್ಲಿಂದ ಮುಂದೆ ಖರ್ಚಿನ ವಹಿವಾಟು, ಸರಕಾರಿ ಶಾಸನಗಳ ಚೌಕಟ್ಟಿನಲ್ಲಿ ಅನುಷ್ಠಾನಗೊಳಿಸುವುದು ಈ ಅಧಿಕಾರಿಗಳ ವಿವೇಚನೆಗೆ ಬಿಟ್ಟಿದ್ದು. ಕೇಂದ್ರ, ಹಣಕಾಸು ಸಚಿವಾಲಯವು, ವೆಚ್ಚ ಇಲಾಖೆಯೆಂಬ ಪ್ರತ್ಯೇಕ ವಿಭಾಗವನ್ನು ಹೊಂದಿದೆ. ಈ ಇಲಾಖೆಯು ಸಾರ್ವಜನಿಕ ಸೇವೆಗಳ ವೆಚ್ಚ ಮತ್ತು ಬೆಲೆಗಳನ್ನು ನಿಯಂತ್ರಿಸುವಲ್ಲಿ ಕೇಂದ್ರ ಸಚಿವಾಲಯಗಳು ಹಾಗೂ ಇತರೆ ಇಲಾಖೆಗಳಿಗೆ ಸಹಾಯಮಾಡುತ್ತದೆ. ಆದರೆ ಅನೇಕ ಅಧಿಕಾರಿಗಳು ರಾಜಕೀಯ ಒತ್ತಡಕ್ಕೊ, ಇಲ್ಲ ಮಾಧ್ಯಮಗಳ ಟೀಕೆಗೊ ಒಳಗಾಗದಿರಲು ಸುರಕ್ಷಿತ ಮಾರ್ಗದ ಮೊರೆಹೋಗಿ ತಟಸ್ಥರಾಗಿದ್ದುಬಿಡುತ್ತಾರೆ. ಇನ್ನು ಕೆಲವೊಮ್ಮೆ ರಾಜಕೀಯ ಪ್ರೇರಿತ ನಿಬಂಧನೆಗಳಾಗಿದ್ದರೆ, ಅನುಷ್ಠಾನಗೊಳಿಸಲು ನ್ಯಾಯಾಂಗದ ನಿರ್ಧಾರಕ್ಕಾಗಿ ಕಾಯುತ್ತಾರೆ. ಬಹಳಷ್ಟು ಸರಕಾರಿ ಕಾರ್ಯಕ್ರಮಗಳು ಈ ರೀತಿಯ ರೆಡ್ ಟೇಪಿಸಮ್ ಸುರುಳಿಯಲ್ಲಿ ಮಂದಗತಿಯಲ್ಲಿ ಸಾಗುತ್ತವೆ ಅಥವಾ ಕಳೆದುಹೋಗುತ್ತವೆ.

ಭಾರತದಲ್ಲಿಯೂ ನಾವು ಡೋಜ್ ರೀತಿಯಲ್ಲಿ ಕ್ರಾಂತಿಕಾರಿ ಸುಧಾರಣೆಗಳನ್ನು ತರಲು ಯೋಚಿಸಬಹುದಲ್ಲವೇ? ಡೋಜ್ ಇನ್(ಈಣಎಉಐಘೆ: Department of Government Efficiency&India)ಎಂಬ ನಾಮಾಂಕಿತ ಈ ಇಲಾಖೆಗೆ ಸಮಂಜಸವೇ? ಆದರೆ ಇಲಾಖೆಯ ಮುಖ್ಯಸ್ಥರು ಯಾವುದೇ ರಾಜಕೀಯ, ನ್ಯಾಯಾಂಗ ಅಥವಾ ಬ್ಯೂರೋಕ್ರಾಟಿಕ್ ಅಧಿಕಾರಿಗಳಾಗಿರಬಾರದು. ವೆಚ್ಚಗಳನ್ನು ನಿಯಂತ್ರಿಸಿ, ಪರಿಣಾಮಕಾರಿಯಾಗಿ ಸಂಸ್ಥೆಗಳನ್ನು ನಡೆಸಿ ಸಾಬೀತುಪಡಿಸಿ ಪೂರ್ವನಿದರ್ಶನಗಳನ್ನು ಪ್ರದರ್ಶಿಸಿದವರಿರಬೇಕು. ಇಲಾಖೆಯ ಮುಖ್ಯಸ್ಥರಾಗಿ ಯಶಸ್ವಿ ಉದ್ಯಮಿಗಳಾದ ನಾರಾಯಣ್ ಮೂರ್ತಿ, ಆನಂದ್ ಮಹೇಂದ್ರ, ಟಾಟಾ ಸನ್‌ನ ಚೇರ್ಮನ್‌ರಾದ ಚಂದ್ರಶೇಖರನ್‌ರಂತಹ ಯಾವುದೇ ಕಪ್ಪುಚುಕ್ಕೆಯಿರದವರನ್ನು ನೇಮಿಸಿದರೆ ಯಶಸ್ಸು ಶತಃಸಿದ್ಧ.

ಕೇಂದ್ರ ಸರಕಾರದ ಒಟ್ಟು ವೆಚ್ಚದ ಬಜೆಟ್ ಸುಮಾರು ನಲವತ್ತಾರು ಲಕ್ಷ ಕೋಟಿ ರುಪಾಯಿಗಳು. ಇದರ ಒಂದು ಭಾಗವಾದ ಕೇಂದ್ರ ಸರಕಾರದ ನೌಕರರ ಸಂಬಳ ಸಂಬಂಧಿತ ಖರ್ಚು ಸುಮಾರು ಎಂಟು ಲಕ್ಷ ಕೋಟಿ ರುಪಾಯಿಗಳು. ಈ ಮೊಬಲಗಲ್ಲಿ ಶೇ.2 ಉಳಿತಾಯವಾದರೂ ಸುಮಾರು ತೊಂಭತ್ತೆರಡು ಸಾವಿರ ಕೋಟಿ ರುಪಾಯಿಗಳಷ್ಟು ಬೇರೆಯ ಮೌಲವರ್ಧಿತ ಕಾರ್ಯಗಳಿಗೆ ಲಭ್ಯವಾಗುತ್ತದೆ. ಈ ಮೊತ್ತ ಭಾರತದ ಅರ್ಧ ತಿಂಗಳ ಜಿಎಸ್‌ಟಿ ಸಂಗ್ರಹಣೆಷ್ಟಿದೆ. ಹಾಗೆಯೇ ಸರಕಾರದಲ್ಲಿ ಬಹಳಷ್ಟು ಸುಪ್ತ ಇಲಾಖೆಗಳಿವೆ. ಸಕಾರಣವಿಲ್ಲದೆಯೇ ಅಥವಾ ತಮ್ಮ ಇರುವಿಕೆಯನ್ನು ತೋರಿಸುವಂತಹ ಇಲಾಖೆಗಳೂ ಇವೆ. ಕೆಲಸವಿಲ್ಲದೆಯೆ ಬಜೆಟ್ ಹಂಚಿಕೆ ಪಡೆದು ಹಣವನ್ನು ಖರ್ಚು ಮಾಡುವಂತಹವು. ಇಂತಹ ಇಲಾಖೆಗಳನ್ನು ಉತ್ಪಾದಕತೆಯೆಡೆಗೆ ನಡೆಸುವ ಸಲಹೆಗಳು ಅಗತ್ಯವಾಗಿದೆ. ಹಾಗೆಯೇ ಸರಕಾರೀ ನೌಕರರ ಕಾರ್ಯಕ್ಷಮತೆಯನ್ನು ಪರಿಶೀಲಿಸಿ ವಿಆರ್‌ಎಸ್ ನಂತಹ ಕ್ರಮಗಳನ್ನು ಜಾರಿಗೊಳಿಸಿ ಖರ್ಚನ್ನು ಕಡಿತಗೊಳಿಸಬಹುದು. ಸರಕಾರೀ ನೌಕರರನ್ನು ಮುಂದುವರಿದ ಉಚ್ಚ ಮಟ್ಟದ ಎಆಇ ಸಂಬಂಧಿತ ತರಬೇತಿ ನೀಡಿ ಅವರ ಕಾರ್ಯಕ್ಷಮತೆಯನ್ನು ನವೀಕರಿಸಬಹುದು. ಹೆಚ್ಚುವರಿ ನೌಕರರನ್ನು ಗುರುತಿಸಿ ಅವರ ಅಗತ್ಯವಿರುವೆಡೆ ವರ್ಗಾವಣೆ ಮಾಡಿ ಹೆಚ್ಚು ಉತ್ಪಾದಕ ನೌಕರರನ್ನಾಗಿ ಪರಿವರ್ತಿಸಬಹುದು. ಡಿಜಿಟಲ್ ತಂತ್ರಜ್ಞಾನದ ಬಳಕೆಯಿಂದ ಸರಕಾರದ ಕಲ್ಯಾಣ ಯೋಜನೆಗಳನ್ನು ಸರಿಯಾದ ವರ್ಗಕ್ಕೆ ತಲುಪುವಂತೆ ಮಾಡಿ ಅನಗತ್ಯ ಸೋರಿಕೆಗಳನ್ನು ತಡೆಗಟ್ಟುವುದಷ್ಟೇ ಅಲ್ಲದೇ ಯೋಜನೆಗಳು ಸಮರ್ಪಕವಾಗಿ ಸಾಗಿಕೊಂಡು ಯಶಸ್ಸಿನ ಹಾದಿ ಹಿಡಿಯುವಂತೆ ಕಾರ್ಯನಿರ್ವಹಣೆ ಮಾಡಬಹುದು. ಏಕ ಗವಾಕ್ಷ ಅನುಮತಿಗಳು ಸರಿಯಾಗಿ ಕಾರ್ಯನಿರ್ವಹಿಸಿದರೆ ಹೀಗೇ ಅಸಂಖ್ಯಾತ ಸುಧಾರಣೆಗಳನ್ನು ಕಂಡುಕೊಳ್ಳಬಹುದು.

ಕೇಂದ್ರ ಸರಕಾರದ ಪ್ರಯತ್ನ ಈ ದಿಶೆಯಲ್ಲಿ ಕಳೆದ ಹಲವು ವರ್ಷಗಳಿಂದ ನಿರಂತರವಾಗಿದೆ. ಜಗವೇ ಬೆರಗಾಗಿ ನೋಡುತ್ತಿರುವ ಆಧಾರ್ ನೋಂದಣಿ, ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಕಲ್ಯಾಣ ಯೋಜನೆಗಳ ಸಂಬಂಧಿತ ವರ್ಗಾವಣೆಗಳು, ಹಾಗೂ ಡಿಜಿಟಲ್ ಪಾವತಿಗಳು ಅಭಿವೃದ್ಧಿ ಕ್ರಾಂತಿಯ ಅಲೆಯನ್ನು ಸೃಷ್ಟಿಸಿವೆ. ಡೋಜ್-ಇನ್ ಇಲಾಖೆಯ ಸಲಹೆಯಿಂದ ಹೊಸ ದಿಕ್ಕು ಮತ್ತು ವೇಗ ದೊರಕಬಹುದು. ರಾಜ್ಯ ಸರಕಾರಗಳೂ ಸಹ ಇದೇ ರೀತಿಯ ಪರಿವರ್ತನಾ ಮಾರ್ಗವನ್ನು ಅನುಸರಿಸಿದರೆ ಭಾರತದ ಬೆಳವಣಿಗೆಯೊಂದೇ ಅಲ್ಲದೇ, ನಾಗರಿಕರ ಜೀವನ ಮಟ್ಟ ಸುಧಾರಿಸಿ ಮುಂದುವರಿದ ರಾಷ್ಟ್ರಗಳ ಸರಿಸುಮಾರಿಗೆ ತಲುಪಬಲ್ಲದು. ಭಾರತದ ಜಿಡಿಪಿ ಇಂದಿರುವುದಕ್ಕಿಂತ ವೇಗವಾಗಿ ಚಲಿಸುವ ಸಾಧ್ಯತೆಯಂತೂ ಖಚಿತ.

ಗೋಲು ದೂರವಿಲ್ಲ, ಗೋಲು ಅಸಾಧ್ಯವೇನಲ್ಲ. ಒಬ್ಬರು ಇನ್ನೊಬ್ಬರ ಕಾಲೆಳೆಯದೆಯೆ ಒಟ್ಟಾಗಿ ಸಾಗಬೇಕಷ್ಟೆ.

(ಲೇಖಕರು: ಚಾರ್ಟರ್ಡ್ ಅಕೌಂಟೆಂಟ್ ಹಾಗೂ ಹವ್ಯಾಸಿ ಬರಹಗಾರ)

ನಾಗರಿಕ ಸೇವೆಗೆ ವಿಸ್ತಾರಗೊಳ್ಳಬೇಕಿದೆ ಸಕಾಲ ಯೋಜನೆ

ಸಹಾಯಧನಗಳು ಪಾರದರ್ಶಕವಾಗಿ ನಡೆಯಬೇಕಾದರೆ ಎಲ್ಲವನ್ನೂ ಆನ್ ಲೈನ್ ಮೂಲಕ ಸಕಾಲ ಯೋಜನೆಯಡಿ ಫಲಾನುಭವಿಗಳಿಗೆ ದೊರಕುವಂತಾಗಬೇಕು. 94ಸಿ, ಸಿಸಿ ಯೋಜನೆಗಳು, ಬಸವ ವಸತಿ ಯೋಜನೆ, ಭೂ ಪರಿವರ್ತನೆ ಇವೆಲ್ಲವೂ ನಿಗದಿತ ಅವಧಿಯಲ್ಲಿ ಫಲಾನುಭವಿಗಳಿಗೆ ದೊರಕುವಂತಾಗಬೇಕು.

ವಿಶ್ಲೇಷಣೆ
ಆದರ್ಶ್ ಶೆಟ್ಟಿ ಉಪ್ಪಿನಂಗಡಿ
vveditoped@gmail.com

ಸರಕಾರಿ ಸೇವೆಗಳು ಎಲ್ಲವೂ ಒಂದೇ ಸೂರಿನಡಿ ಜನಸಾಮಾನ್ಯರ ಕೈಗೆಟುಕುವ ನಿಟ್ಟಿನಲ್ಲಿ ಕರ್ನಾಟಕ ಸರಕಾರದ ಅಂದಿನ ಮುಖ್ಯಮಂತ್ರಿ ಡಿ.ವಿ ಸದಾನಂದ ಗೌಡರು ಜಾರಿಗೆ ತಂದ ಸಕಾಲ ಯೋಜನೆಯಡಿಯಲ್ಲಿ ಸುಮಾರು 90 ಕ್ಕೂ ಅಧಿಕ ಸೇವೆಗಳು ಆರಂಭಿಕ ದಿನಗಳಲ್ಲಿ ಜನಸಾಮಾನ್ಯರಿಗೆ ಲಭ್ಯವಾಗುತ್ತಿತ್ತು. ಈ ಯೋಜನೆ ಬಹುಮುಖ್ಯವಾಗಿ ಮಧ್ಯವರ್ತಿಗಳ ಹಾವಳಿ ತಡೆ ಹಾಗೂ ತ್ವರಿತ ಸೇವೆಗೆ ಪೂರಕವಾದ ವೇದಿಕೆಯನ್ನು ಜನಸಾಮಾನ್ಯರಿಗೆ ಒದಗಿಸಿತ್ತು. ಯಾವುದೇ ಇಲಾಖೆಯ ಸರಕಾರಿ ಸೌಲಭ್ಯಗಳನ್ನು ಪಡೆಯಲು ಜನಸಾಮಾನ್ಯರ ಬೆಳಗ್ಗಿನಿಂದ ಸಂಜೆಯವರೆಗೆ ಕಚೇರಿ ಅಲೆದಾಟ ತಪ್ಪಿಸುವುದು, ತಾವು ಸಲ್ಲಿಸಿದ ಅರ್ಜಿಯ ಪೂರ್ಣ ವಿವರಗಳನ್ನು ಪಡೆಯಲು ಹಾಗೂ ಪಾರದರ್ಶಕ ಸೇವೆಗಾಗಿ ಸಕಾಲ ಯೋಜನೆ ಸಾಕಷ್ಟು ಪ್ರಯೋಜನ ಉಂಟು ಮಾಡಿದೆ.

ಇನ್ನು ಗ್ರಾಮೀಣ ಅಥವಾ ನಗರ ಪ್ರದೇಶದ ಜನರೇ ಇರಲಿ ಕಂದಾಯ, ಗ್ರಾಮೀಣಾಭಿವೃದ್ಧಿ ಅಥವಾ ಯಾವುದೇ ಇಲಾಖೆಯ ಪ್ರಮಾಣ ಪತ್ರಗಳನ್ನು ಪಡೆಯಲು ದೂರದ ತಾಲೂಕು ಕೇಂದ್ರವನ್ನು ಅವಲಂಬಿಸುವುದು. ಅನಕ್ಷರಸ್ಥ ಮಂದಿ ಮಧ್ಯವರ್ತಿಗಳ ಸಹಾಯ ಪಡೆದು ಲಂಚ ನೀಡಿ ಕೆಲಸ ಮಾಡಿಸಬೇಕಾದ ಸಂದಿಗ್ಧ ಪರಿಸ್ಥಿತಿಗಳು ಎದುರಾಗಿದ್ದವು. ಹಾಗಂದ ಮಾತ್ರಕ್ಕೆ ಇಂತಹ ಆನ್‌ಲೈನ್ ಅರ್ಜಿ ತುಂಬಿ ಬೇರೆ ಅಧಿಕಾರಿಗಳ ಟೇಬಲ್‌ಗಳಿಗೆ ಕಳುಹಿಸುವುದರಿಂದ ಯೋಜನೆಗಳ ಬಳಕೆಯಲ್ಲಿ ಭ್ರಷ್ಟಾಚಾರ ಕೊನೆಗೊಂಡಿದೆಯೆಂದೇನಲ್ಲ.

ಆನ್‌ಲೈನ್ ಸೇವೆ, ನೇರ ಡಿಜಿಟಲೀಕರಣ, ಇ-ಸೇವೆಗಳು ಬಂದರೂ ಕೂಡ ಫಲಾನುಭವಿಯ ಫೈಲ್‌ಗಳಲ್ಲಿ ಯಾವುದಾದರೂ ನ್ಯೂನ್ಯತೆಯನ್ನು ಕಂಡು ಹಿಡಿದು ಕಾನೂನು ತೊಡಕು ಎಂದೆಲ್ಲ ಸಬೂಬು ಹೇಳಿ ಕಡತ ಧೂಳು ಹಿಡಿಯುವಂತೆ ಮಾಡಿ ದುಡ್ಡು ಪಡೆಯುವಲ್ಲಿ ಕೆಲ ಅಧಿಕಾರಿಗಳು ನೈಪುಣ್ಯತೆಯನ್ನು ಹೊಂದಿರುತ್ತಾರೆ. ಕೇಂದ್ರ ಸರಕಾರ ಈಗಾಗಲೇ ಜನ್ ಧನ್ ಖಾತೆಯ ಮೂಲಕ ಕೃಷಿಕರಿಗೆ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ ಸೇರಿದಂತೆ ವಿವಿಧ ಸಹಾಯ ಧನಗಳನ್ನು ನೇರ ರೈತರ ಅಥವಾ ಫಲಾನುಭವಿಗಳ ಖಾತೆಗೆ ಜಮೆ ಮಾಡುತ್ತಿರುವುದರಿಂದ ಜನಸಾಮಾನ್ಯರು ಇಲ್ಲಿ ಪಾರದರ್ಶಕತೆಯನ್ನು ಕಾಣುತ್ತಾರೆ.

ಇನ್ನು ಭ್ರಷ್ಟಾಚಾರದ ಮುಖವಾಣಿಯಂತಿರುವ ವಾಸಕ್ಕೆ ಸೂರಿಗಾಗಿ ಸರಕಾರದ ನಿವೇಶನ ಪಡೆಯುವ 94ಸಿ, 94ಸಿಸಿ, ಅಕ್ರಮ ಸಕ್ರಮ ಕಡತ, ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ, ವಿಧವಾ ವೇತನ, ಅಂಗವಿಕಲ ವೇತನ, ಉದ್ಯೋಗ ಖಾತರಿ ಯೋಜನೆ, ಕೃಷಿ ಇಲಾಖೆಯ ಸವಲತ್ತುಗಳು ಹಾಗೂ ಇನ್ನಿತರ ಸಹಾಯಧನಗಳ ಮಂಜೂರಾತಿಗಾಗಿ ಹಲವಾರು ದಾಖಲೆಗಳನ್ನು ಪಡೆದು ಗ್ರಾಮ ಲೆಕ್ಕಿಗ, ಕಂದಾಯ ನಿರೀಕ್ಷಕ, ಉಪತಹಶಿಲ್ದಾರ್ ಬಳಿಕ ತಹಶಿಲ್ದಾರರ ಕಚೇರಿಯಲ್ಲಿ ಅಂತಿಮಮುದ್ರೆ ಬಿದ್ದ ಬಳಿಕ ಸರಕಾರದ ಹಂತಕ್ಕೆ ತಲುಪಿ ಫಲಾನುಭವಿಯ ಖಾತೆಗೆ ಮೂರು ತಿಂಗಳ ಬಳಿಕ ಸಹಾಯಧನಗಳು ಜಮೆಯಾಗುತ್ತದೆ.

ಇನ್ನು ಗ್ರಾಮೀಣ ಪ್ರದೇಶಗಳಲ್ಲಿ ಸಾಕಷ್ಟು ಭ್ರಷ್ಟಾಚಾರದ ವಾಸನೆ ಪಡೆಯುವ ವ್ಯವಸ್ಥೆಯೆಂದರೆ ಅದು ಬಡವರ ಸೂರಿಗಾಗಿ ನಿವೇಶನದ 94 ಸಿ ಹಾಗೂ 94ಸಿಸಿ ಕಡತಗಳ ವಿಲೇವಾರಿಯೆಂಬುವುದು.ಮತ್ತೊಂದು ಸರಕಾರಿ,ಕುಮ್ಕಿ ಭೂಮಿಗಳಲ್ಲಿ ಕೃಷಿ ಚಟುವಟಿಕೆಗಳ ಉದ್ದೇಶಕ್ಕಾಗಿ ಸಕ್ರಮಗೊಳಿಸುವ ಅಕ್ರಮ ಸಕ್ರಮ ಕಡತಗಳು. ಈ ಅಕ್ರಮ ಸಕ್ರಮ ಹಾಗೂ 94 ಸಿ,ಸಿಸಿ ಕಡತಗಳು ತಾರ್ಕಿಕ ಅಂತ್ಯ ಕಾಣಬೇಕಾದರೆ ಇಲ್ಲಿ ಒಂದು ಆಯಾ ಕ್ಷೇತ್ರದ ಶಾಸಕನ ಕೃಪಾಕಟಾಕ್ಷ, ಅಕ್ರಮ ಸಕ್ರಮ ಸಮಿತಿಯ ಸದಸ್ಯರ ಶಿಫಾರಸು ಮತ್ತೊಂದು ಆಡಳಿತ ವ್ಯವಸ್ಥೆಯಲ್ಲಿ ದಳ್ಳಾಳಿಗಳು, ಗ್ರಾಮ ಲೆಕ್ಕಿಗ, ಕಂದಾಯ ನಿರೀಕ್ಷಕ, ಉಪತಹಶಿಲ್ದಾರ್, ತಹಶಿಲ್ದಾರ್ ಮಟ್ಟದವರೆಗೆ ದುಡ್ಡು ಚೆಲ್ಲಿದರೆ ಮಾತ್ರ ಫಲಾನುಭವಿಯ ಕೈಗೆ ಹಕ್ಕು ಪತ್ರ ಇಲ್ಲವೇ ಸಾಗುವಳಿ ಚೀಟಿ ದೊರೆಯುತ್ತದೆ. ಅರ್ಜಿದಾರ ನೀಡುವ ಮೊತ್ತದಲ್ಲಿ ಕೊಂಚ ವ್ಯತ್ಯಾಸವಾದರೂ ಕಾನೂನು ತೊಡಕಿನ ನೆಪದಲ್ಲಿ ತಾಲೂಕು ಕಚೇರಿಗಳಲ್ಲಿ ಕಡತಗಳು ಧೂಳು ಹತ್ತಿಕೊಳ್ಳುತ್ತದೆ. ಇಲ್ಲಿ ಬಡಪಾಯಿಗಳು, ರೈತಾಪಿ ವರ್ಗದ ಜನ ಸವಲತ್ತು ಪಡೆಯಲು ಅರ್ಹತೆಯನ್ನು ಹೊಂದಿದ್ದರೂ ರಾಜಕೀಯ ಪುಢಾರಿಗಳ, ಸಮಿತಿ ಸದಸ್ಯರ, ಅಧಿಕಾರಿಗಳ ಕೈಕಾಲು ಹಿಡಿಯುವ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಈ ಎಲ್ಲ ಕಾರಣಕ್ಕಾಗಿ ನಮ್ಮ ಊರಿನ ಪತ್ರಕರ್ತ ಮಿತ್ರರೋರ್ವರು 94ಸಿ, ಸಿಸಿ ಅಕ್ರಮ ಸಕ್ರಮ ವ್ಯವಸ್ಥೆ ಎಂಬುವುದು ಹಾಗೂ ಅದಕ್ಕೊಂದು ಸಮಿತಿಗಳಿಗೆ, ಅಧಿಕಾರಿ ವರ್ಗ, ದಲ್ಲಾಳಿಗಳಿಗೆ ಈ ವ್ಯವಸ್ಥೆ ಚಿನ್ನದ ಮೊಟ್ಟೆ ಇಡುವ ಕೋಳಿ ಎಂಬ ವಿಶೇಷ ವರದಿಯನ್ನು ರಾಜ್ಯಮಟ್ಟದ ಪತ್ರಿಕೆಯಲ್ಲಿ ಮಾಡಿದ್ದರು. ಅಕ್ರಮ ಸಕ್ರಮ ಸಮಿತಿಗಳಿಗೆ ಆಡಳಿತಾರೂಢ ಪಕ್ಷದ ಶಾಸಕರ ಬೆಂಬಲಿಗರನ್ನೇ ಬಹುತೇಕ ಸದಸ್ಯರನ್ನಾಗಿ ಆಯ್ಕೆ ಮಾಡುವ ಪರಿಪಾಠಗಳಿವೆ. ಒಂದು ಎಕರೆಗೆ ಒಂದು ಲಕ್ಷದವರೆಗೆ ಹಾಗೂ 94ಸಿ, ಸಿಸಿಗಳಿಗೆ 30 ರಿಂದ 40 ಸಾವಿರದವರೆಗೆ ದುಡ್ಡಿನ ಬೇಡಿಕೆಗಳು ಬಡ, ಮಾಧ್ಯಮ ವರ್ಗದ ಜನಸಾಮಾನ್ಯರಿಂದ ವಸೂಲು ಮಾಡುವ ಬಗ್ಗೆ ಆರೋಪಗಳಿವೆ. ವೇದಿಕೆಗಳಲ್ಲಿ ಭ್ರಷ್ಟಾಚಾರದ ಬಗ್ಗೆ ಅಬ್ಬರದ ಭಾಷಣ ಬಿಗಿಯುವ ಜನಪ್ರತಿನಿಧಿಗಳ ಬ್ಯಾಕ್‌ಸೀಟ್ ಡ್ರೈವರ್‌ಗಳು, ಹೊಗಳುಭಟರುಗಳು ಅಧಿಕಾರಿ ವರ್ಗಗಳನ್ನು ಬಳಸಿಕೊಂಡು ದುಡ್ಡು ಮಾಡುವ ದಂಧೆಗೆ ಸರಕಾರಿ ಸವಲತ್ತು ಯೋಜನೆಗಳು ಬಡಜನರ ರಕ್ತ ಹೀರುತ್ತಿದೆ.

ಇನ್ನು ಕೆಲವು ಕಡೆ ಜನಪ್ರತಿನಿಧಿಗಳ ಈ ಬೆಂಬಲಿಗ ವರ್ಗಗಳು ಅರ್ಧದಷ್ಟು ಮೊತ್ತ ಪಡೆದು ಅತ್ತ ಕೆಲಸವೂ ಮಾಡಿಕೊಡದೆ ಇತ್ತ ಪಡೆದ ಹಣವೂ ವಾಪಾಸು ನೀಡದೇ ಅಧಿಕಾರಿಗಳ ತಲೆಗೆ ಕಟ್ಟಿ ವಂಚಿಸುತ್ತಿರುವ ಪ್ರಕರಣಗಳು ಬೆಳಕಿಗೆ ಬಂದಿವೆ.ಸಮಾಜದಲ್ಲಿ ಅನೇಕ ಕುಟುಂಬಗಳು ಸ್ವಂತ ನಿವೇಶನಕ್ಕಾಗಿ ಭ್ರಷ್ಟಾಚಾರದ ಪರಾಕಾಷ್ಠೆಯಿಂದ ಅಧಿಕಾರಿ ಹಾಗೂ ರಾಜಕಾರಣಿಗಳ ಮನೆ ಬಾಗಿಲಿಗೆ ತೆರಳಿ ಅಂಗಲಾಚುವ ಪರಿಸ್ಥಿತಿ ಮತ್ತೊಂದೆಡೆ ಹಣ ನೀಡದೆ ಕೆಲಸ ಮಾಡಿಕೊಡುವುದಿಲ್ಲ ಎಂಬ ಅಧಿಕಾರಿಗಳ ಮಾನಸಿಕತೆಗೆ ಫಲಾನುಭವಿಗಳು ಹೈರಾಣಾಗಿ ಬಿಡುತ್ತಾರೆ. ಕೈಯಲ್ಲಿ ದುಡ್ಡಿಲ್ಲದ ಬಡಪಾಯಿಗಳು ತಮ್ಮ ಮೈಮೇಲಿದ್ದ ಚಿನ್ನಾಭರಣ ಅಡವಿಟ್ಟು ಸ್ಥಳೀಯ ಬ್ಯಾಂಕ್, ಸ್ವಸಹಾಯ ಸಂಘಗಳ ಮೂಲಕ ಸಾಲ ಪಡೆದು ದಳ್ಳಾಳಿ ಅಧಿಕಾರಿ ವರ್ಗದ ಕೈಬಿಸಿ ಮಾಡಬೇಕಾದ ಪರಿಸ್ಥಿತಿಗಳಲ್ಲಿದೆ ಜನಸಾಮಾನ್ಯರ ಬದುಕು.

ಅದೆಷ್ಟೋ ವರ್ಷಗಳಿಂದ ಹಕ್ಕು ಪತ್ರಕ್ಕಾಗಿ ಒದ್ದಾಟ ನಡೆಸುತ್ತಿರುವ ವಯೋವೃದ್ಧರುಗಳು ಹಕ್ಕು ಪತ್ರವನ್ನು ಕ್ಷೇತ್ರದ ಶಾಸಕರುಗಳ ಕೈಯಿಂದ ವೇದಿಕೆಯಲ್ಲಿ ಪಡೆದುಕೊಳ್ಳುವ ಸಂದರ್ಭದಲ್ಲಿ ಕಣ್ಣೀರಿಡುವ ದೃಶ್ಯಗಳನ್ನು ಕೂಡ ಆಗಾಗ ಕಾಣುತ್ತೇವೆ. ಕಂದಾಯ ಅಥವಾ ಗ್ರಾಮೀಣಾಭಿವೃದ್ಧಿ ಇಲಾಖೆ ಜನಸಾಮಾನ್ಯರಿಗೆ ಬಹು ಹತ್ತಿರವಾಗಿರುವ ವ್ಯವಸ್ಥೆ. ಜನರಿಗೆ ಮೂಲಭೂತ ಸೌಕರ್ಯಗಳ ಅವಶ್ಯಕತೆಗಾಗಿ ಸರಕಾರದ ಸವಲತ್ತುಗಳಿಗಾಗಿ ಈ ಇಲಾಖೆಗಳನ್ನು ಹೆಚ್ಚು ಜನರು ಅವಲಂಬಿತರಾಗುತ್ತಾರೆ. ಇನ್ನು ಸರಕಾರಿ ವ್ಯವಸ್ಥೆಯಲ್ಲಿನ ಎಲ್ಲ ಸಹಾಯಧನಗಳು ಪಾರದರ್ಶಕವಾಗಿ ನಡೆಯಬೇಕಾದರೆ ಎಲ್ಲವನ್ನೂ ಆನ್ ಲೈನ್ ಮೂಲಕ ಸಕಾಲ ಯೋಜನೆಯಡಿ ಫಲಾನುಭವಿಗಳಿಗೆ ದೊರಕುವಂತಾಗಬೇಕು. 94ಸಿ, ಸಿಸಿ ಯೋಜನೆಗಳು, ಬಸವ ವಸತಿ ಯೋಜನೆ, ಭೂ ಪರಿವರ್ತನೆ ಇವೆಲ್ಲವೂ ನಿಗದಿತ ಅವಧಿಯಲ್ಲಿ ಆನ್ ಲೈನ್ ಮೂಲಕವೇ ಅರ್ಜಿ ಸಲ್ಲಿಸಿ, ಆ ಅರ್ಜಿಯ ಪ್ರಗತಿ ಹಾಗೂ ಸ್ಟೇಟಸ್‌ಗಳು ಫಲಾನುಭವಿಗಳಿಗೆ ದೊರಕುವಂತಾಗಬೇಕು. ಅಧಿಕಾರಿ ಅಥವಾ ಮಧ್ಯವರ್ತಿಗಳು ಈ ವ್ಯವಸ್ಥೆಯಲ್ಲಿ ಮೂಗು ತೂರಿಸದಂತಹ ವ್ಯವಸ್ಥೆಗಳು ನಿರ್ಮಾಣವಾಗಬೇಕಿದೆ.

ಕೆಲ ಜಿಲ್ಲೆಗಳಲ್ಲಿ ಚುನಾಯಿತ ಜನಪ್ರತಿನಿಧಿಗಳಿಗೆ ಅಧಿಕಾರಿ ವರ್ಗಗಳು, ತಹಶಿಲ್ದಾರ್, ಸಹಾಯಕ ಆಯುಕ್ತರು, ನೋಂದಾವಣಾಧಿಕಾರಿಗಳು, ನಗರಸಭೆ, ಪುಡಾ, ಪಟ್ಟಣ ಪಂಚಾಯತ್ ಅಧಿಕಾರಿ ವರ್ಗಗಳೇ ಇಂತಿಷ್ಟು ಮಾಮೂಲು ನೀಡಬೇಕೆಂಬ ಒತ್ತಡಗಳಿವೆ. ಈ ಕಾರಣಕ್ಕಾಗಿಯೂ ಅಧಿಕಾರಿ ವರ್ಗಗಳು ಮಾನವೀಯತೆ ಮರೆತು ವಸೂಲಿ ಬಾಜಿಗೆ ಇಳಿಯುತ್ತಿರುವುದು ಕೂಡ ಗುಟ್ಟಿನ ಸಂಗತಿಯಲ್ಲ.

ಇನ್ನು ತಾಲೂಕಿನ ಹೋಬಳಿ ಮಟ್ಟದಲ್ಲಿ ಜನಸಾಮಾನ್ಯರಿಗೆ ಸೇವೆ ಒದಗಿಸುತ್ತಿದ್ದ ನಾಡಕಚೇರಿ ಅಥವಾ ನೆಮ್ಮದಿ ಕೇಂದ್ರಗಳನ್ನು ಬಿಜೆಪಿ ಸರಕಾರದಲ್ಲಿ ಅಂದಿನ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ಕೆ.ಎಸ್.ಈಶ್ವರಪ್ಪನವರು ಅಟಲ್ ಜೀ ಜನಸ್ನೇಹಿ ಕೇಂದ್ರ ಎಂಬ ಹೆಸರಿನಲ್ಲಿ ನಾಮಕರಣ ಮಾಡಿದ್ದು, ಈ ನಾಡಕಚೇರಿ ಅಥವಾ ಜನಸ್ನೇಹಿ ಕೇಂದ್ರದಲ್ಲಿ ಒಂದೇ ಸೂರಿನಡಿ ಎಲ್ಲ ಸೌಲಭ್ಯಗಳು ಲಭ್ಯವಿರುವ ಹಿನ್ನೆಲೆಯಲ್ಲಿ ದಿನವಿಡೀ ಸಾಲು ಗಟ್ಟಲೆ ಜನರು ಸರತಿ ನಿಲ್ಲುವುದು ಕಂಡು ಬರುತ್ತದೆ. ಈ ನಾಡಕಚೇರಿ ಅಥವಾ ಜನಸ್ನೇಹಿ ಕೇಂದ್ರಗಳಲ್ಲಿ ಕೂಡ ಹಲವು ಸಮಸ್ಯೆಗಳು ತಾಂಡವವಾಡುತ್ತಿದೆ. ಸೂಕ್ತ ಕಟ್ಟಡ ಕೊರತೆ, ಸರ್ವರ್ ಸಮಸ್ಯೆ, ಸಿಬ್ಬಂದಿಗಳ ಕೊರತೆ ಮುಂತಾದ ಸಮಸ್ಯೆಗಳು ಜನಸಾಮಾನ್ಯರನ್ನು ಬೆಳಗಿನಿಂದ ಸಂಜೆಯವರೆಗೆ ಹೈರಾಣಾಗಿಸುತ್ತಿದೆ. ಸರಕಾರಗಳು ಬಹುಮುಖ್ಯವಾಗಿ ಹೆಚ್ಚುವರಿಯಾಗಿ ಕಂಪ್ಯೂಟರ್, ಪ್ರಿಂಟರ್ ನಂತಹ ಸೌಲಭ್ಯಗಳನ್ನು ಒದಗಿಸುವುದು. ಈಗಾಗಲೇ ಈ ವ್ಯವಸ್ಥೆಯಲ್ಲಿ ಹಲವಾರು ವರ್ಷಗಳಿಂದ ಗುತ್ತಿಗೆ ಅಥವಾ ತಾತ್ಕಾಲಿಕ ನೆಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಖಾಯಂಗೊಳಿಸುವುದು ಇಲ್ಲವೇ ಸಿಬ್ಬಂದಿಗಳಿಗೆ ಗರಿಷ್ಠ ವೇತನ ನಿಗದಿ, ಜೀವನ ಭದ್ರತೆ ಒದಗಿಸುವ ಕಡೆ ಕಂದಾಯ ಇಲಾಖೆ ಲಕ್ಷ್ಯ ವಹಿಸಬೇಕಿದೆ.

ಕೆಲವು ಅಧಿಕಾರಿಗಳಿಗೆ ಅಥವಾ ಜನಪ್ರತಿನಿಧಿಗಳಿಗೆ ದುಡ್ಡು ಮಾಡುವುದೆಂದರೆ ಕೆಟ್ಟ ಚಾಳಿಯೆನಿಸಿಬಿಟ್ಟಿದೆ. ತಮಗೆ ದೊರಕುವ ಸರಕಾರಿ ಸಂಬಳದಲ್ಲಿ ತೃಪ್ತಿಪಟ್ಟುಕೊಳ್ಳದೆ ತಮಗೆ ಸಿಕ್ಕಿದ್ದನ್ನು ಬಾಚಿಕೊಳ್ಳುವ ಮನಸ್ಥಿತಿಯೂ ಇದೆ. ತಾವು ಲಂಚದ ರೂಪದಲ್ಲಿ ಪಡೆಯುವ ದುಡ್ಡಿನಲ್ಲಿ ಅದೆಷ್ಟು ಕಣ್ಣೀರು, ಸಾಲ,ನೋವುಗಳು, ಕಷ್ಟಗಳು ಅಡಕವಾಗಿರುವ ಬಗ್ಗೆ ಹಣ ನೀಡಿದ ಮಂದಿಗೆ ಮಾತ್ರ ಅರಿವಿಗೆ ಬಂದಿರುತ್ತದೆ. ಮಾನವೀಯತೆ ಮರೆತು ಸಂಪಾದಿಸಿದ ಹಣ ಯಾರಿಗೂ ಶಾಶ್ವತವಾಗಿ ದಕ್ಕಿದ ಉದಾಹರಣೆಗಳು ಕಡಿಮೆ.

ಸರಕಾರಗಳು ಬಹುಮುಖ್ಯವಾಗಿ ಜನಸಾಮಾನ್ಯರು, ಬಡಪಾಯಿಗಳಿಗೆಂದು ಘೋಷಿಸುವ ಯೋಜನೆಗಳು ಅನುದಾನಗಳು ಸಮರ್ಪಕವಾಗಿ ಫಲಾನುಭವಿಯ ನೇರ ಕೈಗೆ ದೊರಕುವ ವ್ಯವಸ್ಥೆಗಳನ್ನು ಕಲ್ಪಿಸಬೇಕಿದೆ.ಸಕಾಲ ಯೋಜನೆಯನ್ನು ಮತ್ತಷ್ಟು ವಿಸ್ತಾರಗೊಳಿಸಿ ಆ ಯೋಜನೆಗೆ ಶಕ್ತಿ ತುಂಬಿ ಸರಕಾರದ ಒಂದಷ್ಟು ನಿಯಮಗಳನ್ನು ಸಡಿಲೀಕರಣಗೊಳಿಸಿ ಯೋಜನೆಗಳು ಸರಳವಾಗಿ ಜನಸಾಮಾನ್ಯರ ಕೈಸೇರುವಂತೆ ಮಾಡಬೇಕಿದೆ.

(ಲೇಖಕರು: ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 233

ಸಮಾಚಾರ ಸಣ್ಣದಲ್ಲ

ಸ್ಟಾಕ್ ಮಾರ್ಕೆಟ್ ಪರಿವರ್ತನೆಗೆ ನಾಂದಿ

ದೆಹಲಿ: ಮನಮೋಹನ್ ಸಿಂಗ್ ಅವರು 70-80ರ ದಶಕದಲ್ಲೂ ಸರ್ಕಾರದಲ್ಲಿ ಹಲವು ಹುದ್ದೆಗಳಲ್ಲಿ ಆರ್ಥಿಕತೆಗೆ ಸಂಬಂಧಿಸಿದಂತೆ ಸೇವೆ ಸಲ್ಲಿಸಿದ್ದರು. ಆರ್‌ಬಿಐ ಗವರ್ನರ್, ಮುಖ್ಯ ಆರ್ಥಿಕ ಸಲಹೆಗಾರ, ಯೋಜನಾ ಆಯೋಗದ ಮುಖ್ಯಸ್ಥ ಹೀಗೆ ಹಲವು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದರು.

ಭಾರತದ ಆರ್ಥಿಕತೆಯ ಸುಧಾರಣೆಗೆ ಪಣ ತೊಟ್ಟಿದ್ದ ಅವರು ಭಾರತೀಯ ಷೇರು ಮಾರುಕಟ್ಟೆಯ ಸುಧಾರಣೆಗೂ ಅಗತ್ಯ ಕ್ರಮ ಕೈಗೊಂಡರು. ಮುಖ್ಯವಾಗಿ ಮಾರುಕಟ್ಟೆ ನಿಯಂತ್ರಕ ಸೆಬಿಗೆ ಹೆಚ್ಚಿನ ಅಧಿಕಾರ ಒದಗಿಸುವಲ್ಲಿಯೂ ಸಫಲರಾದರು. ಇದರಿಂದ ಷೇರುಪೇಟೆಯಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಉಂಟಾಯಿತು. 1991ರಲ್ಲಿ 1,000 ಅಂಕಗಳ ಮಟ್ಟದಲ್ಲಿದ್ದ ಸೆನ್ಸೆಕ್ಸ್ ಈಗ 78,000 ಅಂಕಗಳಿಗೂ ಹೆಚ್ಚಿನ ಎತ್ತರದಲ್ಲಿದೆ. ಈಗ ಜನಪ್ರಿಯವಾಗಿರುವ ನ್ಯಾಶನಲ್ ಸ್ಟಾಕ್ ಎಕ್ಸ್‌ಚೇಂಜ್ (ಎನ್‌ಎಸ್‌ಇ) ರಚನೆಯಾಗುವ ನಿಟ್ಟಿನಲ್ಲಿಯೂ ಮನಮೋಹನ್ ಸಿಂಗ್ ಅವರು ನಿರ್ಣಾಯಕ ಪಾತ್ರ ವಹಿಸಿದ್ದರು. ಉದಾರೀಕರಣ ಅಥವಾ ಖಾಸಗೀಕರಣಕ್ಕೆ ಮಾಡಿದ ಉತ್ತೇಜನದ ಪರಿಣಾಮವಾಗಿ ಭಾರತ ಷೇರು ಮಾರುಕಟ್ಟೆಗಳೂ ಅನೂಹ್ಯವಾಗಿ ಬೆಳವಣಿಗೆ ದಾಖಲಿಸಿತು. ಈಗ ರಿಟೇಲ್ ಹೂಡಿಕೆಗೂ ಕೂಡ ಪ್ರಶಸ್ತ ತಾಣವಾಗಿ ಷೇರು ಮಾರುಕಟ್ಟೆಗಳು ಬೆಳೆದಿರುವುದನ್ನು ನೋಡುತ್ತಿದ್ದೇವೆ.

ಪತ್ರಿಕಾಗೋಷ್ಠಿ: ಮಾತು ವೈರಲ್

ದೆಹಲಿ: ಮನಮೋಹನ್ ಸಿಂಗ್‌ರವರು ಪ್ರಧಾನಿಯಾಗಿ ಆಡಿದ್ದ ಕೊನೆಯ ಮಾತಗಳು ಇದೀಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದೆ. 2004ರಿಂದ 2014ರ ವರೆಗೆ ಪ್ರಧಾನಿಯಾಗಿದ್ದ ಮನಮೋಹನ್ ಸಿಂಗ್ ಅವರು 2014ರ ಜನವರಿ 3ರಂದು ಪ್ರಧಾನಿಯಾಗಿ ತಮ್ಮ ಕೊನೆಯ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ್ದರು. ಅಂದು ಪತ್ರಕರ್ತರೊಬ್ಬರು ಅವರ ಆಡಳಿತದ ಬಗ್ಗೆ ಹಾಗೂ ತಮ್ಮ ಸಚಿವರನ್ನು ಹಿಡಿತದಲ್ಲಿಟ್ಟುಕೊಳ್ಳಲು ತೋರಿದ ಅಸಮರ್ಥತೆಯ ಬಗ್ಗೆ ಪ್ರಶ್ನೆ ಎತ್ತಿದ್ದರು. ಆಗ ಇದಕ್ಕೆ ನಗುತ್ತಲೇ ಉತ್ತರಿಸಿದ ಸಿಂಗ್ ಅವರು, ಸಮಕಾಲೀನ ಮಾಧ್ಯಮಗಳಿಗಿಂತ ಅಥವಾ ಸಂಸತ್ತಿನಲ್ಲಿ ವಿಪಕ್ಷಗಳಿಗಿಂತ ಇತಿಹಾಸವು ನನಗೆ ಹೆಚ್ಚು ಕರುಣೆ ತೋರುತ್ತದೆ ಎಂದು ಪ್ರಾಮಾಣಿಕವಾಗಿ ನಂಬುತ್ತೇನೆ ಎಂದು ಹೇಳಿದ್ದರು.

ಶಸ್ತ್ರಚಿಕಿತ್ಸೆಯಲ್ಲೂ ದೇಶದ ಚಿಂತೆ



ದೆಹಲಿ: ಭಾರತದ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ 2009ರಲ್ಲಿ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಆ ಬಳಿಕ ಅವರು ವೈದ್ಯರ ಬಳಿ ತಮ್ಮ ಆರೋಗ್ಯದ ಬಗ್ಗೆ ವಿಚಾರಿಸಿರಲಿಲ್ಲ ಎನ್ನುವ ವಿಚಾರವನ್ನು ಡಾ. ರಮಾಕಾಂತ್ ತಿಳಿಸಿದ್ದಾರೆ. ದೆಹಲಿಯ ಏಮ್ಸ್‌ನಲ್ಲಿ 10-11ಗಂಟೆಗಳ ಕಾಲ ಬೈಪಾಸ್ ಶಸ್ತ್ರಚಿಕಿತ್ಸೆ ನಡೆದಿತ್ತು. ರಾತ್ರಿ ಆಕ್ಸಿಜನ್ ಮಾಸ್ಕ್ ಹೊರತೆಗೆದಾಗ ಅವರು ಮಾತನಾಡಲು ಸಾಧ್ಯವಾಗಿತ್ತು. ಅವರು ಮೊದಲು ತಮ್ಮ ಆರೋಗ್ಯ ಹೇಗಿದೆ ಎಂದು ಕೇಳುವುದು ಬಿಟ್ಟು 'ನನ್ನ ದೇಶ ಹೇಗಿದೆ? ಜಮ್ಮು ಕಾಶ್ಮೀರ ಹೇಗಿದೆ?' ಎಂದು ಕೇಳಿದ್ದರಂತೆ. ಆಗ ವೈದ್ಯರು ನಿಮ್ಮ ಶಸ್ತಚಿಕಿತ್ಸೆ ಬಗ್ಗೆ ಏನನ್ನೂ ಕೇಳಿಲ್ಲ ಎಂದು ಪ್ರಶ್ನಿಸಿದಾಗ ನೀವು ಶಸ್ತ್ರಚಿಕಿತ್ಸೆಯನ್ನು ಸರಿಯಾಗಿಯೇ ಮಾಡಿರುತ್ತೀರಿ ಎನ್ನುವ ನಂಬಿಕೆ ಇದೆ ಎಂದಿದ್ದರಂತೆ. ನನಗೆ ಶಸ್ತ್ರಚಿಕಿತ್ಸೆಯ ಬಗ್ಗೆ ಚಿಂತೆ ಇಲ್ಲ, ನನ್ನ ದೇಶದ ಬಗ್ಗೆ ನನಗೆ ಹೆಚ್ಚು ಚಿಂತೆ ಇದೆ ಎಂದು ಹೇಳಿದ್ದರು' ಎಂದು ವೈದ್ಯರು ತಿಳಿಸಿದ್ದಾರೆ.

ನೀಲಿ ಟರ್ಬನ್ ರಹಸ್ಯ

ದೆಹಲಿ: ನೀಲಿ ಬಣ್ಣದ ಟರ್ಬನ್ ಯಾವಾಲೂ ಮನಮೋಹನ್ ಸಿಂಗ್ ಅವರ ತಲೆಯ ಮೇಲೆ ರಾರಾಜಿಸುತ್ತಿತ್ತು. ಈ ಪೇಟ ಅವರ ವ್ಯಕ್ತಿತ್ವದ ಅವಿಭಾಜ್ಯ ಅಂಗವಾಯಿತು.ಅವರನ್ನು ನೀಲಿ ಟರ್ಬನ್ ಎಂದು ಅಡ್ಡ ಹೆಸರಿನಿಂದಲೇ ಕರೆಯುತ್ತಿದ್ದರು. ತಾನು ಕಾಲೇಜು ದಿನಗಳಿಂದಲೂ ನೀಲಿ ಬಣ್ಣದ ಪೇಟ ಧರಿಸುತ್ತಿದ್ದೆ ಎಂದು ಹೇಳಿದರು. ನನ್ನ ಸ್ನೇಹಿತರು ನನ್ನನ್ನು 'ಬ್ಲೂ ಟರ್ಬನ್' ಎಂದು ಅಡ್ಡಹೆಸರಿನಲ್ಲೇ ಕರೆಯುತ್ತಿದ್ದರು ಎಂಬ ಸಂಗತಿಯನ್ನು ಹಂಚಿಕೊಂಡಿದ್ದರು. ನೀಲಿ ನನ್ನ ನೆಚ್ಚಿನ ಬಣ್ಣ ಎಂದು ಮಾಜಿ ಪ್ರಧಾನಿ ಹೇಳಿದ್ದಾರೆ. ಇದೇ ಕಾರಣಕ್ಕೆ ಅವರು ಈ ಬಣ್ಣದ ಪೇಟ ಧರಿಸಲು ಆರಂಭಿಸಿದರು. ಕಾಲಾನಂತರದಲ್ಲಿ, ನೀಲಿ ಬಣ್ಣದ ಅವನ ಒಲವು ಮುಂದುವರೆಯಿತು.

ಸ್ಮಾರಕಕ್ಕೆ ಖರ್ಗೆ ಮನವಿ

ದೆಹಲಿ: ಸ್ಮಾರಕ ನಿರ್ಮಿಸಬಹುದಾದ ಸ್ಥಳದಲ್ಲಿ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರ ಅಂತ್ಯಕ್ರಿಯೆ ನಡೆಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪತ್ರ ಬರೆದು ಮನವಿ ಮಾಡಿದ್ದಾರೆ. ನಾಳೆ ಡಾ.ಮನಮೋಹನ್ ಸಿಂಗ್ ಅವರ ಅಂತಿಮ ವಿಧಿವಿಧಾನಗಳು ನಡೆಯಲಿರುವ ಸ್ಥಳವನ್ನು ದೇಶದ ಮಹಾನ್ ಪುತ್ರನ ಸ್ಮಾರಕವನ್ನಾಗಿಸುವ ಕುರಿತು ಪ್ರಧಾನಿ ಮೋದಿ ಅವರ ಜೊತೆ ಇಂದು ಬೆಳಗ್ಗೆ ಮಾತನಾಡಿದ್ದೇನೆ ಎಂದು ಖರ್ಗೆ ತಿಳಿಸಿದ್ದಾರೆ. ರಾಷ್ಟ್ರನಾಯಕರು ಮತ್ತು ಮಾಜಿ ಪ್ರಧಾನಿಗಳ ಅಂತ್ಯಕ್ರಿಯೆಯ ಸ್ಥಳದಲ್ಲಿ ಸ್ಮಾರಕ ನಿರ್ಮಾಣ ನಿರ್ಮಾಣ ಮಾಡುವ ಸಂಪ್ರದಾಯವಿದೆ. ಅದರಂತೆ ಸ್ಮಾರಕ ನಿರ್ಮಾಣದ ಸ್ಥಳದಲ್ಲೇ ಅಂತ್ಯಕ್ರಿಯೆ ನಡೆಯಬೇಕು ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ.

ರಾಷ್ಟ್ರಪತಿ, ಪ್ರಧಾನಿ ನಮನ | ಕೇಂದ್ರ ಸಚಿವ ಸಂಪುಟದಿಂದ ಸಂತಾಪ | ಸೋನಿಯಾ, ಖರ್ಗೆ, ರಾಹುಲ್ ಸಹಿತ ಕಾಂಗ್ರೆಸ್ ನಾಯಕರಿಂದ ನಮನ | ಎಐಸಿಸಿ ಕಚೇರಿಯಿಂದ ಅಂತಿಮ ಯಾತ್ರೆ

ಆರ್ಥಿಕ ಹರಿಕಾರನಿಗೆ ಅಂತಿಮ ಗೌರವ

ದೆಹಲಿ: ಮಾಜಿ ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರ ಪಾರ್ಥಿವ ಶರೀರವನ್ನು ಅವರ ನಿವಾಸದಲ್ಲಿರಿಸಲಾಗಿದ್ದು, ಶುಕ್ರವಾರ ಗಣ್ಯಾತಿಗಣ್ಯರು ಸಿಂಗ್ ಅವರ ಅಂತಿಮ ದರ್ಶನ ಪಡೆದಿದ್ದಾರೆ. ಸಿಂಗ್ ಅವರ ನಿಧನದ ಹಿನ್ನಲೆಯಲ್ಲಿ, ಅವರ ಗೌರವಾರ್ಥವಾಗಿ ಕೇಂದ್ರ ಸರ್ಕಾರವು ದೇಶದಾದ್ಯಂತ ಏಳು ದಿನಗಳ ಶೋಕಾಚರಣೆಯನ್ನು ಘೋಷಿಸಿದ್ದು, ಶುಕ್ರವಾರ ಬೆಳಗ್ಗೆ 11 ಗಂಟೆಗೆ ಕೇಂದ್ರ ಸರಕಾರದ ಸಚಿವ ಸಂಪುಟ ಸಭೆ ನಡೆಸಿದ್ದು, ಸಚಿವ ಸಂಪುಟದ ಸದಸ್ಯರೆಲ್ಲರೂ ಸಿಂಗ್ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಕೂಡ ಮನಮೋಹನ್ ಸಿಂಗ್ ಅವರ ಪಾರ್ಥಿವ ಶರೀರವನ್ನು ದೆಹಲಿಯ ಮೋತಿಲಾಲ್ ನೆಹರೂ ರಸ್ತೆಯ 3ನೇ ನಂಬರ್‌ನ ಅವರ ನಿವಾಸದಲ್ಲಿ ಸಾರ್ವಜನಿಕ ದರ್ಶನಕ್ಕೆ ಇರಿಸಲಾಗಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪ ರಾಷ್ಟ್ರಪತಿ ಜಗದೀಪ್ ಧನಕರ್, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಶುಕ್ರವಾರ ಬೆಳಿಗ್ಗೆ ಅವರ ನಿವಾಸಕ್ಕೆ ಭೇಟಿ ನೀಡಿ ಅಂತಿಮ ದರ್ಶನ ಪಡೆದರು. ಅವರ ಜೊತೆ ಕೇಂದ್ರ ಗೃಹ ಸಚಿವ ಅಮಿತ್ ಶಾ, ಕೇಂದ್ರ ಸಚಿವ ಜೆ.ಪಿ ನಡ್ಡಾ ಸಹಿತ ಇತರೆ ಬಿಜೆಪಿ ನಾಯಕರು ಸಿಂಗ್‌ರವರ ಸ್ವಗೃಹಕ್ಕೆ ಬಂದು ಪಾರ್ಥಿವ ಶರೀರಕ್ಕೆ ಗೌರವ ಸಲ್ಲಿಸಿದರು. ಕಾಂಗ್ರೆಸ್ ಸಂಸದರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಮತ್ತು ಪ್ರಿಯಾಂಕಾ ಗಾಂಧಿ ಕೂಡಾ ಶುಕ್ರವಾರ ಮನಮೋಹನ್ ಸಿಂಗ್ ಅವರ ಅಂತಿಮ ದರ್ಶನ ಪಡೆದಿದ್ದು, ಸಿಂಗ್ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ್ದಾರೆ.

ಮನಮೋಹನ್ ಸಿಂಗ್‌ರವರ ಪಾರ್ಥಿವ ಶರೀರವನ್ನು ಶನಿವಾರ ಬೆಳಿಗ್ಗೆ 8 ಗಂಟೆಗೆ ದೆಹಲಿಯ ಎಐಸಿಸಿ ಕೇಂದ್ರ ಕಚೇರಿಗೆ ಕೊಂಡೊಯ್ಯಲಾಗುತ್ತದೆ. ಅಲ್ಲಿ ಪಕ್ಷದ ಮುಖಂಡರು ಅಗಲಿದ ನಾಯಕನಿಗೆ ಅಂತಿಮ ಗೌರವ ಸಲ್ಲಿಸುತ್ತಾರೆ. ಬಳಿಕ ಅಲ್ಲಿಂದ ಅಂತಿಮ ಯಾತ್ರೆ ಆರಂಭವಾಗಲಿದೆ.

ಸಿಂಗ್‌ರವರ ಮೂಲಕ 1991ರಲ್ಲಿ ದೇಶದ ಗತಿ ಬದಲಾವಣೆ: ಮನಮೋಹನ್ ಸಿಂಗ್ ನೆದರ್ಲೆಂಡ್ಸ್‌ನಲ್ಲಿ ನಡೆದ 1991ರಲ್ಲಿ ವಿದೇಶದಲ್ಲಿ ಸಮ್ಮೇಳನವೊಂದನ್ನು ಮುಗಿಸಿ ದಿಲ್ಲಿಗೆ ವಾಪಸ್ ಆಗಿದ್ದರು. ಪ್ರಯಾಣದಿಂದ ದಣಿದಿದ್ದ ಅವರು ಅವತ್ತು ಬೇಗನೇ ಮಲಗಿದ್ದರು. ಆ ರಾತ್ರಿ ಮನಮೋಹನ್ ಸಿಂಗ್ ಅವರ ಅಳಿಯ ವಿಜಯ್ ತಂಖಾ ಅವರಿಗೆ ಫೋನ್ ಕರೆಯೊಂದು ಬಂದಿತ್ತು. ಆ ಕಡೆಯಿಂದ ಅಂದಿನ ಪ್ರಧಾನಿ ಪಿ.ವಿ. ನರಸಿಂಹರಾವ್ ಅವರ ಆಪ್ತರಾಗಿದ್ದ ಪಿ.ಸಿ. ಅಲೆಕ್ಸಾಂಡರ್ ಹಲೋ ಅಂತ ಕರೆ ಮಾಡಿ ಮನಮೋಹನ್ ಸಿಂಗ್ ಅವರಲ್ಲಿ ಮಾತನಾಡಿದರು. ಆ ಮಾತುಕತೆಯ ಬಳಿಕ ಅಂದಿನ ಪ್ರಧಾನಿ ಪಿ.ವಿ. ನರಸಿಂಹರಾವ್ ಅವರು ಮನಮೋಹನ್ ಸಿಂಗ್ ರವರನ್ನು ಕೇಂದ್ರ ಹಣಕಾಸು ಸಚಿವರನ್ನಾಗಿ ಮಾಡಲು ನಿರ್ಧರಿಸಿದ್ದರು. ಆಗ ಯು.ಜಿ.ಸಿ ಅಧ್ಯಕ್ಷರಾಗಿದ್ದ ಮನಮೋಹನ್ ಸಿಂಗ್ ಅದೆಲ್ಲಾ ಆಗುವ ಮಾತಲ್ಲ ಅಮತ ತಲೆಗೆ ಹಾಕೊಂಡಿರಲಿಲ್ಲ. ಆದರೆ ಪಿ.ವಿ. ನರಸಿಂಹರಾವ್ ಮಾತ್ರ ಮನಮೋಹನ್ ಸಿಂಗ್ ಕೇಂದ್ರ ಹಣಕಾಸು ಸಚಿವರಾಗಬೇಕೆಂದು ನಿರ್ಧರಿಸಿ, ಸಿಂಗ್‌ರವರ ಮನವೊಲಿಸುವಲ್ಲಿ ಸಫಲರಾದರು. ಪಿ,ವಿ. ನರಸಿಂಹರಾವ್ ಅವರು ತೆಗೆದುಕೊಂಡ ನಿರ್ಧಾರ ಭಾರತದ ಭಾಗ್ಯದ ಬಾಗಿಲನ್ನು ತೆರೆದಿತ್ತು.

ಸಿಂಗ್ ಪ್ರಧಾನಿಯಾಗಿದ್ದ ಹಿನ್ನಲೆ

ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದು ಮತ್ತೊಂದು ಅಚ್ಚರಿ. 2004ರಲ್ಲಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಎನ್‌ಡಿಎ ಚುನಾವಣೆಯಲ್ಲಿ ಸೋಲುತ್ತದೆ. 145 ಕ್ಷೇತ್ರಗಳಲ್ಲಿ ಗೆದ್ದಿದ್ದ ಕಾಂಗ್ರೆಸ್ ಇತರೆ ಪ್ರಾದೇಶಿಕ ಪಕ್ಷಗಳ ಜೊತೆ ಸೇರಿ ಯುಪಿಎ ಮೈತ್ರಿಕೂಟ ರಚಿಸಿಕೊಂಡು ಸರ್ಕಾರ ರಚಿಸಲು ಮುಂದಾಗುತ್ತದೆ. ಎಲ್ಲರೂ ಆಗ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರೇ ಪ್ರಧಾನಿ ಆಗುತ್ತಾರೆ ಎಂದೇ ಭಾವಿಸಿದ್ದರು. ಆದರೆ ಸೋನಿಯಾ ಆ ಪಟ್ಟಕ್ಕೇರಲು ತಾವು ಸಿದ್ಧರಿಲ್ಲ ಎಂದು ದೃಢ ನಿರ್ಧಾರ ಮಾಡಿದರು. ಸೋನಿಯಾ ಗಾಂಧಿರವರ ಆ ನಿರ್ಧಾರದ ಬೆನ್ನಲ್ಲೇ ಹಲವರ ಹೆಸರು ಪ್ರಧಾನಿ ಹುದ್ದೆಗೆ ಕೇಳಲು ಶುರುವಯಿತು. ದೊಡ್ಡ ದೊಡ್ಡ ನಾಯಕರ ಹೆಸರು ಪ್ರಧಾನಿ ಹುದ್ದೆಯ ರೇಸ್‌ಗೆ ಬಂತು. ಆದರೆ ಸೋನಿಯಾರವರು ಮನಮೋಹನ್ ಸಿಂಗ್ ಅವರ ಹೆಸರನ್ನು ಪ್ರಧಾನಿ ಹುದ್ದೆಗೆ ಅಂತಿಮಗೊಳಿಸಿದರು. ವಿತ್ತ ಸಚಿವರಾಗಿ ಅಪಾರ ಅನುಭವ ಹೊಂದಿದ್ದ ಮನಮೋಹನ್ ಸಿಂಗ್ ಅವರನ್ನು ಪ್ರಧಾನಿ ಪಟ್ಟದಲ್ಲಿ ಕೂರಿಸಿ ಅವರ ಬುದ್ಧಿವಂತಿಕೆಯನ್ನು ಯುಪಿಎ ಸರಕಾರದಲ್ಲಿ ಬಳಸಿಕೊಳ್ಳುವುದು ಸೋನಿಯಾರವರ ನಿಲುವಾಗಿತ್ತು. ಕಾಂಗ್ರೆಸ್ಸಿನ ಯಾರೇ ಪ್ರಧಾನಿಯಾದರೂ ಮಿತ್ರಪಕ್ಷಗಳನ್ನು ಸಂಭಾಳಿಸುವುದು ಆ ವೇಳೆ ಕಷ್ಟವಿತ್ತು, ಆ ಹುದ್ದೆಗಾಗಿ ಕಿತ್ತಾಟ ಶುರುವಾಗುವ ನಿರೀಕ್ಷೆಯೂ ಇತ್ತು. ಆದ್ದರಿಂದ ಸೌಮ್ಯ ಸ್ವಭಾವದ ಮನಮೋಹನ್ ಸಿಂಗ್ ಅವರನ್ನು ಪ್ರಧಾನಮಂತ್ರಿ ಮಾಡಿದರೆ ಮಿತ್ರಪಕ್ಷಗಳು ವಿರೋಧ ಮಾಡುವುದಿಲ್ಲ ಎಂಬ ನಿರ್ಧಾರದ ಕಾರಣಕ್ಕೆ, ಮನಮೋಹನ್ ಸಿಂಗ್ ಪ್ರಧಾನಿ ಹುದ್ದೆಯನ್ನಲಂಕರಿಸಿಕೊಂಡರು.

ದಲೈಲಾಮಾ ಭಾವುಕ ಪತ್ರ



ದೆಹಲಿ: ಮನಮೋಹನ್ ಸಿಂಗ್ ನಿಧನದ ಸುದ್ದಿ ಕೇಳಿ ಹಲವು ಗಣ್ಯರು ಕಂಬನಿ ಮಿಡಿದಿ ದ್ದಾರೆ. ಅಂತಾರಾಷ್ಟ್ರೀಯ ಪ್ರಭಾವಿ ವ್ಯಕ್ತಿಗಳು ಅಗಲಿದ ನಾಯಕನಿಗೆ ಪತ್ರದ ಮೂಲಕ ಸಂತಾಪ ಸೂಚಿಸಿದ್ದಾರೆ. ಧಾರ್ಮಿಕ ನಾಯಕ ದಲೈಲಾಮಾ ಅವರು ತಮ್ಮ ದುಃಖವನ್ನು ವ್ಯಕ್ತಪಡಿಸಿ ಪತ್ರ ಬರೆದಿದ್ದಾರೆ. 'ಸಿಂಗ್ ಅರ್ಥಪೂರ್ಣವಾಗಿ ಬದುಕಿ ಹೋಗಿದ್ದಾರೆ. ಅವರು ನಮಗೆಲ್ಲರಿಗೂ ಸ್ಫೂರ್ತಿ. ನಾನು ಅವರನ್ನು ನನ್ನ ಪ್ರಾರ್ಥ ನೆಯಲ್ಲಿ ನೆನಪಿಸಿಕೊಳ್ಳುತ್ತೇನೆ. ಈ ದುಃಖದ ಸಮಯದಲ್ಲಿ ನಿಮಗೆ ಮತ್ತು ನಿಮ್ಮ ಕುಟುಂಬಕ್ಕೆ ನನ್ನ ಸಂತಾಪವನ್ನು ಸೂಚಿ ಸುತ್ತಿದ್ದೇನೆ' ಎಂದು ಅವರು ಬರೆದಿದ್ದಾರೆ. 'ಪ್ರತಿಬಾರಿ ಭೇಟಿ ಯಾದಾಗಲೂ ಅವರು ನನ್ನ ಬಗ್ಗೆ ಅತೀವ ಕಾಳಜಿ ತೋರುತ್ತಿದ್ದರು, ಉತ್ತಮ ಸಲಹೆಗಳನ್ನು ನೀಡುತ್ತಿದ್ದರು. ಅವರು ನನಗೆ ಹಿರಿಯಣ್ಣನಂತಿದ್ದರು. ನಿಮ್ಮ ಪತಿ ಇತರರಿಗೆ ಸಹಾಯ ಮಾಡುವ ಗುಣವನ್ನು ಹೊಂದಿದ್ದರು. ಅವರಿಂದ ನಾವು ಪ್ರೇರಣೆಗೊಂಡಿದ್ದೇವೆ. ಅವರು ಭಾರತದ ಅಭಿವೃದ್ಧಿಗೆ ಮತ್ತು ಆರ್ಥಿಕ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಕೋಟ್ಯಂತರ ಜನ ಸಾಮಾನ್ಯರ ಜೀವನವನ್ನು ಸುಧಾರಿಸಿದ್ದಾರಲ್ಲದೆ. ಅವರು ಟಿಬೆಟಿಯನ್ ಜನರಿಗೆ ಉತ್ತಮ ಸ್ನೇಹಿತರಾಗಿದ್ದರು' ಎಂದಿದ್ದಾರೆ.

ಒಡನಾಟ ಸ್ಮರಿಸಿದ ಚೀನಾ

ಮನಮೋಹನ್ ಸಿಂಗ್ ಅವರ ನಿಧನಕ್ಕೆ ಚೀನಾ ಸಂತಾಪ ವ್ಯಕ್ತಪಡಿಸಿದೆ. ಚೀನಾದ ಮಾಜಿ ಅಧ್ಯಕ್ಷ ಹು ಜಿಂಟೊರವರು ತಮ್ಮ ಜೊತೆಗಿನ ಸಿಂಗ್ ಅವರ 2006ರ ಭೇಟಿಯನ್ನು ಸ್ಮರಿಸಿಕೊಂಡಿದ್ದಾರೆ. ಚೀನಾದ ವಿದೇಶ ಸಚಿವಾಲಯವು ಶುಕ್ರವಾರ ತನ್ನ ಸಂತಾಪ ಸೂಚಕದಲ್ಲಿ, ಭಾರತ-ಚೀನಾ ಸಂಬಂಧ ಬಲಗೊಳ್ಳುವ ನಿಟ್ಟಿನಲ್ಲಿ ಮನಮೋಹನ್ ಸಿಂಗ್ ಅವರ ಕೊಡುಗೆ ಅಪಾರವಾಗಿತ್ತು ಎಂದು ವ್ಯಾಖ್ಯಾನಿಸಿದೆ.

ಆರ್‌ಎಸ್‌ಎಸ್ ಶೋಕ



ಭಾರತದ ಮಾಜಿ ಪ್ರಧಾನಮಂತ್ರಿ ಮತ್ತು ದೇಶದ ವರಿಷ್ಠ ನಾಯಕ ಡಾ. ಮನಮೋಹನ್ ಸಿಂಗ್ ಅವರ ನಿಧನದಿಂದ ಇಡೀ ದೇಶವು ತೀವ್ರ ದುಃಖಿತವಾಗಿದೆ. ಅವರ ಅಗಲಿಕೆಗೆ ರಾಷ್ಟ್ರೀಯ ಸ್ವಯಂಸೇವಕ ಸಂಘವು ಸಂತಾ ಪವನ್ನು ಸೂಚಿಸಿದೆ. ದೇವರು ಅವರ ಕುಟುಂಬಕ್ಕೆ ದು:ಖ ಭರಿಸುವ ಶಕ್ತಿ ಕೊಡಲಿ ಎಂದು ಪ್ರಾರ್ಥಿಸುತ್ತೇವೆ. ವಿನಮ್ರ ಹಿನ್ನೆಲೆಯಲ್ಲಿ ಬಂದ ಡಾ. ಮನಮೋಹನ್ ಸಿಂಗ್ ಅವರು ದೇಶದ ಅತ್ಯುನ್ನತ ಹುದ್ದೆಯನ್ನು ಅಲಂಕರಿಸಿದ್ದರು. ಭಾರತಕ್ಕೆ ಖ್ಯಾತ ಅರ್ಥಶಾಸ್ತ್ರಜ್ಞ ಡಾ. ಸಿಂಗ್ ಅವರ ಕೊಡುಗೆ ಯಾವಾಗಲೂ ನೆನಪಿನಲ್ಲಿ ಉಳಿಯುತ್ತದೆ.ಅಗಲಿದ ಆತ್ಮಕ್ಕೆ ಸದ್ಗತಿ ಸಿಗಲಿ ಎಂದು ನಾವು ದೇವರನ್ನು ಪ್ರಾರ್ಥಿಸುತ್ತೇವೆ.

ಪ್ರಿಯಾಂಕಾ ಸಂತಾಪ

ಸರ್ದಾರ್ ಮನಮೋಹನ್ ಸಿಂಗ್ ಅವರಷ್ಟು ಗೌರವವನ್ನು ರಾಜ ಕೀಯದಲ್ಲಿ ಕೆಲವೇ ಜನರು ಪಡೆಯುತ್ತಾರೆ. ಅವರ ಪ್ರಾಮಾ ಣಿಕತೆ ಯಾವಾಗಲೂ ನಮಗೆ ಸ್ಫೂರ್ತಿಯಾಗಿರುತ್ತದೆ ಮತ್ತು ಅವರು ತಮ್ಮ ವಿರೋಧಿಗಳಿಂದ ಅನ್ಯಾಯದ ಮತ್ತು ಆಳವಾದ ವೈಯಕ್ತಿಕ ದಾಳಿಗೆ ಒಳಗಾದ ಹೊರತಾಗಿಯೂ ರಾಷ್ಟ್ರಕ್ಕೆ ಸೇವೆ ಸಲ್ಲಿಸುವ ಬದ್ಧತೆಯಲ್ಲಿ ದೃಢವಾಗಿ ಉಳಿದಿರುವ ವ್ಯಕ್ತಿಯಾಗಿ ಈ ದೇಶವನ್ನು ನಿಜವಾ ಗಿಯೂ ಪ್ರೀತಿಸುವವರಲ್ಲಿ ಅವರು ಶಾಶ್ವತವಾಗಿ ನಿಲ್ಲುತ್ತಾರೆ. ಅವರು ನಿಜವಾದ ಸಮಾನ ತಾವಾದಿ, ಬುದ್ಧಿವಂತ, ಬಲವಾದ ಇಚ್ಛಾಶಕ್ತಿ ಮತ್ತು ಕೊನೆಯವರೆಗೂ ಧೈರ್ಯಶಾಲಿ ಯಾಗಿದ್ದರು. ರಾಜಕೀಯದ ಒರಟು ಜಗತ್ತಿನಲ್ಲಿ ವಿಶಿಷ್ಟವಾದ ಘನತೆ ಮತ್ತು ಸೌಮ್ಯ ವ್ಯಕ್ತಿ.

1991ರ ಬಜೆಟ್ ಭಾಷಣ: ಆರ್ಥಿಕತೆಗೆ ಹೊಸ ಭಾಷ್ಯ

ಕೇಶವ ಪ್ರಸಾದ್ ಬಿ, ಕಿದೂರು

ಮನಮೋಹನ್ ಸಿಂಗ್ ಅವರು ಮೂರು ದಶಕಗಳ ಹಿಂದೆಯೇ ತಮ್ಮ ಮೊದಲ ಕೇಂದ್ರ ಬಜೆಟ್ ಭಾಷಣದಲ್ಲಿ, 'ಭಾರತವು ಜಗತ್ತಿನಲ್ಲಿಯೇ ಪ್ರಮುಖ ಆರ್ಥಿಕ ಶಕ್ತಿಯಾಗಿ ಹೊರ ಹೊಮ್ಮುವುದನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ' ಎಂದು ಅತ್ಯಂತ ಸ್ಪಷ್ಟವಾಗಿ, ಸರಳವಾಗಿ ಸಾರಿದ್ದರು.

ಅವರು ಹಣಕಾಸು ಸಚಿವರಾಗಿದ್ದಾಗ ದೇಶದ ಪರಿಸ್ಥಿತಿ ಎಷ್ಟೊಂದು ಅಯೋಮಯವಾಗಿತ್ತು ಎಂಬುದನ್ನು ಗ್ರಹಿಸುವುದೂ ಸುಲಭವಲ್ಲ. ಆಗ ಭಾರತ ಮತ್ತು ಜಗತ್ತಿನ ನಾನಾ ರಾಷ್ಟ್ರಗಳು ಆರ್ಥಿಕವಾಗಿ ದಿವಾಳಿಯ ಅಂಚಿನಲ್ಲಿದ್ದವು. ಸೋವಿಯತ್ ಒಕ್ಕೂಟ ಕೊನೆಯ ದಿನಗಳನ್ನು ಎಣಿಸುತ್ತಿತ್ತು, ಮತ್ತೊಂದು ಕಡೆ ಗಲ್ಫ್ ವಾರ್ ತಾರಕ್ಕೇರಿತ್ತು. ಹೀಗಾಗಿ ಆಗಿನ ಕಾಲದಲ್ಲೇ ಪ್ರತಿ ಬ್ಯಾರೆಲ್ ಕಚ್ಚಾ ತೈಲದ ದರ 90 ಡಾಲರ್‌ಗೆ ಜಿಗಿದಿತ್ತು. ಅದರ ಪರಿಣಾಮವಾಗಿ ನಮ್ಮ ದೇಶದಲ್ಲಿ ಆಮದು ತುಟ್ಟಿಯಾಗಿ ಹಣದುಬ್ಬರ ಬರೋಬ್ಬರಿ 13-16%ಕ್ಕೆ ಜಿಗಿದಿತ್ತು. ಭಾರತದ ವಿದೇಶಿ ವಿನಿಮಯ ಸಂಗ್ರಹ ಕೇವಲ 2,500 ಕೋಟಿ ರೂ.ಗೆ ಕುಸಿದಿತ್ತು. ಅಂದರೆ ಎರಡು ವಾರಗಳ ಆಮದಿಗೆ ಮಾತ್ರ ಸಾಕಾಗುವಷ್ಟಿತ್ತು.

ಮತ್ತೊಂದು ಕಡೆ ಭಾರತದ ಪರಿಸ್ಥಿತಿ ಕಂಡು ಜಾಗತಿಕ ಬ್ಯಾಂಕ್‌ಗಳು ಸಾಲ ಕೊಡುತ್ತಿರಲಿಲ್ಲ. ರಷ್ಯನ್ ಪ್ರೇರಿತ ಸಮಾಜವಾದ ಮತ್ತು ಕಮ್ಯುನಿಸಂನ ಪ್ರಭಾವದಿಂದ ಹೊರ ಜಗತ್ತಿಗೆ ದೇಶದ ಆರ್ಥಿಕತೆಯ ದಿಡ್ಡಿ ಬಾಗಿಲುಗಳನ್ನು ಮುಚ್ಚಲಾಗಿತ್ತು. ಅದರ ಪರಿಣಾಮವಾಗಿ ಭಾರತದಲ್ಲಿ ಲೈಸೆನ್ಸ್ ರಾಜ್ ತಾಂಡವವಾಡುತ್ತಿತು. 1999ರಲ್ಲಿ ಭಾರತದ ಜಿಡಿಪಿ ಬೆಳವಣಿಗೆ ನೆಲಕಚ್ಚಿತ್ತು. ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ ಐಎಂಎಫ್‌ನಿಂದ ಹೊಸ ಸಾಲ ಹುಟ್ಟಬೇಕಿದ್ದರೆ, ಚಿನ್ನವನ್ನು ಅಡಮಾನ ಇಡಲೇಬೇಕಾದ ಮತ್ತು ಕಠಿಣ ವಿತ್ತೀಯ ನಿಯಂತ್ರಣ ಕ್ರಮಗಳು ಹಾಗೂ ಲೈಸೆನ್ಸ್ ರಾಜ್ ಅನ್ನು ಕೊನೆಗೊಳಿಸಲೇಬೇಕಾದ ತುರ್ತು ಸನ್ನಿವೇಶ ಉಂಟಾಗಿತ್ತು. ಇಂಥ ಕ್ಲಿಷ್ಟಕರ ಸಂದರ್ಭದಲ್ಲಿ ದೇಶದ ಹಣಕಾಸು ಸಚಿವರಾಗಿ ಅಧಿಕಾರ ಸ್ವೀಕರಿಸಿದ ಮನಮೋಹನ್ ಸಿಂಗ್‌ರವರು 1991ರ ಐತಿಹಾಸಿಕ ಬಜೆಟ್‌ನಲ್ಲಿ ಕ್ರಾಂತಿಕಾರಕ ಆರ್ಥಿಕ ಸುಧಾರಣೆಯ ಪರ್ವಕ್ಕೆ ನಾಂದಿ ಹಾಡಿದರು. ಇಂಥ ಸಂದರ್ಭದಲ್ಲಿ ಭಾರತದ ಹಳೆಯ ಮತ್ತು ನಿಷ್ಪ್ರಯೋಜಕ ಆರ್ಥಿಕ ರೀತಿ-ನೀತಿಗಳನ್ನು ಬದಲಿಸುವ ನಾಯಕರು ಬೇಕಿತ್ತು. ಆಗ ಹೊರ ಜಗತ್ತಿಗೆ ಮುಚ್ಚಿಟ್ಟಿದ್ದ ಭಾರತದ ಆರ್ಥಿಕತೆಯನ್ನು, ವಿರೋಧದ ನಡುವೆಯೂ ತೆರೆದು ಜಾಗತೀಕರಣದ ಸ್ಪರ್ಧೆಗೆ ಒಡ್ಡಿಕೊಳ್ಳುವಂತೆ ಮಾಡಿದ್ದಲ್ಲದೆ, ಅದರಲ್ಲಿ ಯಶಸ್ವಿಯೂ ಆದವರು ಮಾಜಿ ಪ್ರಧಾನಿಗಳಾದ ಪಿ.ವಿ. ನರಸಿಂಹರಾವ್-ಮನಮೋಹನ್ ಸಿಂಗ್ ಜೋಡಿ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಆರ್ಥಿಕ ಸ್ವಾತಂತ್ರ್ಯವನ್ನು ಕೂಡ ದೇಶದ ಜನತೆಗೆ ಒದಗಿಸಿಕೊಡುವಲ್ಲಿ ಮನಮೋಹನ್ ಸಿಂಗ್ ಅವರ ಪಾತ್ರ ನಿಜಕ್ಕೂ ಮನಮೋಹಕ.

1991: 2005 ಕೋಟಿ ರು. ಗಳಿಕೆಯ ಲೆಕ್ಕಾಚಾರ

ದೆಹಲಿ: ಮನಮೋಹನ್ ಸಿಂಗ್ ಸಿಂಗ್ ಅವರು 1991ರಲ್ಲಿ ತಮ್ಮ ಮೊದಲ ಬಜೆಟ್ ಮಂಡನೆಯಲ್ಲಿ, ಅತೀವ ಕಷ್ಟ-ಸಂಕಷ್ಟಗಳಿದ್ದರೂ, ಕೇಂದ್ರ ಸರ್ಕಾರದ ಬೊಕ್ಕಸಕ್ಕೆ 2005 ಕೋಟಿ ರೂ.ಗಳ ನಿವ್ವಳ ತೆರಿಗೆ ಗಳಿಕೆಯ ಲೆಕ್ಕಾಚಾರವನ್ನು ತೋರಿಸಿಕೊಟ್ಟಿದ್ದರು. ನೇರ ತೆರಿಗೆಯ ಮೂಲಕ 2,139 ಕೋಟಿ ರು. ಗಳಿಸಬಹುದು. ಅದರಲ್ಲಿ 97 ಕೋಟಿ ರು. ರಾಜ್ಯಗಳಿಗೆ ಹೋಗುತ್ತದೆ. 2042 ಕೋಟಿ ರು. ಕೇಂದ್ರಕ್ಕೆ ಹೋಗುತ್ತದೆ ಎಂದು ಪ್ರಸ್ತಾಪಿಸಿದ್ದರು. ಕೊನೆಯಲ್ಲಿ ಸಿಂಗ್ ಹೀಗೆನ್ನುತ್ತಾರೆ-'ನಾನು ಈಗ ಪಾಕಿಸ್ತಾನದ ಭಾಗವಾಗಿರುವ ಪಾಕಿಸ್ತಾನದ ಪಂಜಾಬ್‌ನಲ್ಲಿ ಹುಟ್ಟಿದ್ದೆ, ಅದು ಬರಪೀಡಿತ ಪ್ರದೇಶ. ವಿಶ್ವವಿದ್ಯಾಲ ಯಗಳ ಸ್ಕಾಲರ್‌ಶಿಪ್‌ಗಳಿಂದ ಮತ್ತು ಅನುದಾನಗಲಿಂದ ನಾನು ಇಂಗ್ಲೆಂಡ್‌ನಲ್ಲಿ ಓದುವಂತಾಯಿತು. ಭಾರತ ನನಗೆ ಸಾರ್ವಜನಿಕ ಜೀವನದಲ್ಲಿ ಉನ್ನತ ಹುದ್ದೆ ಮತ್ತು ಜವಾಬ್ದಾರಿಗಳನ್ನು ವಹಿಸಿದೆ. ಈ ಋಣವನ್ನು ನಾನೆಂದಿಗೂ ಸಂಪೂರ್ಣ ತೀರಿಸಲು ಅಸಾಧ್ಯ. ಪ್ರಾಮಾಣಿಕ ಮತ್ತು ಶ್ರದ್ಧೆಯಿಂದ ಸೇವೆ ಸಲ್ಲಿಸುವ ಕೆಲಸವನ್ನು ಮಾಡಬಲ್ಲೆ ಎಂಬ ಮಾತನ್ನು ನೀಡುವೆ' ಎಂದಿದ್ದರು.

1990-91ರಲ್ಲಿ ಜಿಡಿಪಿ 1.1%ಕ್ಕೆ ಕುಸಿತ

ಭಾರತದ ಆರ್ಥಿಕ ಬೆಳವಣಿಗೆ 1990-91ರಲ್ಲಿ ಕೇವಲ 1.1%ಕ್ಕೆ ಕುಸಿದು ಹೋಗಿತ್ತು. ಆದರೆ ಪಿ.ವಿ ನರಸಿಂಹರಾವ್ ಮತ್ತು ಮನಮೋಹನ್ ಸಿಂಗ್ ಜೋಡಿಯು ಆರ್ಥಿಕ ಉದಾರೀಕರಣದ ನೀತಿಗಳನ್ನು ಜಾರಿಗೊಳಿಸಿದ ಬಳಿಕ ವರ್ಷದಿಂದ ವರ್ಷಕ್ಕೆ ಜಿಡಿಇ ಬೆಳವಣಿಗೆ ಏರಿತ್ತು. ಸೋವಿಯತ್ ಒಕ್ಕೂಟ ಪತನವಾಗುವುದಕ್ಕೆ ಮುನ್ನ, ಎಂಭತ್ತರದ ದಶಕದ ತನಕ ಸೋವಿಯತ್ ಒಕ್ಕೂಟದ ಜತೆಗೆ ಭಾರತವು ರೂಪಾಯಿಯಲ್ಲಿ ವ್ಯವಹರಿಸುತ್ತಿತ್ತು. ಆದರೆ 1990-91ರಲ್ಲಿ ಸೋವಿಯತ್ ಒಕೂಟ ದುರ್ಬಲವಾಯಿತು. ಯುರೋಪಿ ಹಲವು ದೇಶಗಳು ರೂಪಾಯಿ ಪೇಮೆಂಟ್ ಸಿಸ್ಟಮ್ ಅನ್ನು ರದ್ದುಪಡಿಸಿದವು. ಇರಾಕ್-ಕುವೈತ್ ಯುದ್ಧದಿಂದ ಕಚ್ಚಾ ತೈಲ ದರ ಸ್ಫೋಟವಾಯಿತು. ತೈಲೇತರ ಆಮದು ವೆಚ್ಚ ಹೆಚ್ಚಳವಾಯಿತು. ಭಾರತದ ಸಾಲವೂ ಉಲ್ಬಣಿಸಿತ್ತು. 1991ರಲ್ಲಿ ಜಿಡಿಪಿ ಸ್ಥಾನದಲ್ಲಿ 17ಕ್ಕೆ ಭಾರತ ಇಳಿದಿತ್ತು.

ಆರ್ಥಿಕ ನೀತಿಯ ಹೈಲೈಟ್ಸ್

ಸಿಂಗ್ ಅವರು 1991ರ ಜುಲೈ 24ರಂದು ಮಂಡಿಸಿದ ಐತಿಹಾಸಿಕ ಬಜೆಟ್‌ನಲ್ಲಿದ್ದ ಪ್ರಮುಖ ಆರ್ಥಿಕ ಸುಧಾರಣಾ ನೀತಿಗಳು ಇಂತಿ ವೆ ಉದ್ದಿಮೆಗಳನ್ನು ಆರಂಭಿಸಲು ಚಾಲ್ತಿಯಲ್ಲಿದ್ದ ಕರಾಳ, ಕಠಿಣ ನಿಯಮಗಳನ್ನು, ಲೈಸೆನ್ಸ್‌ಗಳನ್ನು ರದ್ದುಪಡಿಸಲಾಯಿತು. ಆರಂ ಭದಲ್ಲಿ 18 ಸೆಕ್ಟರ್‌ಗಳು ಲೈಸೆನ್ಸ್ ರಾಜ್‌ನಿಂದ ಮುಕ್ತಿ ಪಡೆಯಿತು.

- 34 ಕ್ಷೇತ್ರಗಳಿಗೆ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅನುಮತಿ ನೀಡಲಾಯಿತು.
- ಡಾಲರ್ ಮತ್ತಿತರ ಕರೆನ್ಸಿಗಳ ಎದುರು ರೂಪಾಯಿಯ ಅಪಮೌಲ್ಯವನ್ನು ಮಾಡುವ ಮೂಲಕ ರಫ್ತಿಗೆ ಉತ್ತೇಜನ ಕಲ್ಪಿಸಲಾಯಿತು.
- ಸಾರ್ವಜನಿಕ ಸಂಸ್ಥೆ, ಕಾರ್ಖಾನೆಗಳಿಂದ ಬಂಡವಾಳ ಹಿಂತೆಗೆತದ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು.
- ಹಲವು ರಫ್ತು ವ್ಯವಹಾರಗಳಿಗೆ ಇದ್ದ ನಿಷೇಧಗಳನ್ನು ರದ್ದುಪಡಿಸಲಾಯಿತು.
- ಸರ್ಕಾರದ ಅನಗತ್ಯ ವೆಚ್ಚಗಳನ್ನು ನಿಯಂತ್ರಣಗೊಳಿಸುವ ಪದ್ಧತಿ ಶುರುವಾಯಿತು.
- ಹಲವು ಆಮದು ತೆರಿಗೆಗಳನ್ನು ಕಡಿತಗೊಳಿಸಲಾಯಿತು.

ಸಿಂಗ್ ಈಸ್ ಕಿಂಗ್, ಭಾರತ ಆರ್ಥಿಕ ಪ್ರಗತಿಯ ಹೈ ಜಂಪ್

ನಮ್ಮ ದೇಶವು ಜಾಗತಿಕ ಆರ್ಥಿಕತೆಯಲ್ಲಿ ಈಗ 7.93% ಪಾಲನ್ನು ಹೊಂದಿದೆ. ಡಿಜಿಟಲ್ ಇಕಾನಮಿಯಲ್ಲೂ ಯುನಿಫೈಟ್ ಪೇಮೆಂಟ್ಸ್ ಇಂಟರ್‌ಫೇಸ್ ಮೂಲಕ ವಿಶ್ವದಲ್ಲೇ ಮುಂಚೂಣಿ ಯಲ್ಲಿದೆ. ಜಗತ್ತಿನ ಐದನೇ ಪ್ರಮುಖ ಆರ್ಥಿಕತೆಯಾಗಿದ್ದು, 2030ರ ವೇಳೆಗೆ 7 ಲಕ್ಷ ಕೋಟಿ ಡಾಲರ್ ಗಾತ್ರದೊಂದಿಗೆ, ಜಪಾನನ್ನು ಹಿಂದಿಕ್ಕಿ ಜಗತ್ತಿನ ಮೂರನೇ ಅತಿ ದೊಡ್ಡ ಆರ್ಥಿಕ ಶಕ್ತಿಯಾಗುವ ಉತ್ಸಾಹದಲ್ಲಿದೆ. ಆದರೆ ಇವೆಲ್ಲದರ ಹಿಂದೆ 90ರ ದಶಕದಲ್ಲಿ ಮನಮೋಹನ್ ಸಿಂಗ್ ಅವರು ಹಾಕಿಕೊಟ್ಟ ಆರ್ಥಿಕ ಉದಾರೀಕರಣ ನೀತಿಯ ಬುನಾದಿ ಇರುವುದನ್ನು ಮರೆಯುವಂತಿಲ್ಲ.

ಪ್ರಧಾನಿಯಾಗಿದ್ದಾಗ ಮನಮೋಹನ್ ಸಿಂಗ್‌ರವರು ಜಾರಿಗೊಳಿಸಿದ್ದ ಹಲವು ನೀತಿಗಳೂ ಆರ್ಥಿಕ ಪ್ರಗತಿಗೆ ಪ್ರಭಾವ ಬೀರಿವೆ. ನರೇಗಾ ಜಾರಿಗೊಳಿಸಿದ ಬಳಿಕ ಗ್ರಾಮೀಣ ಪ್ರದೇಶ ಗಳಲ್ಲಿ ಜನರಿಗೆ ಆದಾಯದ ಮೂಲ ವೃದ್ಧಿಸಿತು. ಆಧಾರ್ ಕಾರ್ಡ್ ಯೋಜನೆಯ ಬಳಿಕ ಡಿಜಿಟಲ್ ಇಕಾನಮಿಯ ಬೆಳವಣಿಗೆಗೆ ಸಹಕಾರಿಯಾಯಿತು. ಆರ್‌ಟಿಐ ಕಾಯಿದೆ ಬಂದ ಬಳಿಕ ಜನಸಾಮಾನ್ಯರೂ ಸಾರ್ವಜನಿಕ ಸಂಸ್ಥೆಗಳಿಂದ ಮಾಹಿತಿಗಳನ್ನು ಪಡೆಯುವುದು ಸುಗಮವಾಯಿತು, ಹಾಗಾಗಿ ಅನೇಕ ಅವ್ಯವಹಾರಗಳು ಬಯಲಾಯಿತು. ಭ್ರಷ್ಟಾಚಾರ ನಿಯಂತ್ರಣವೂ ಆರ್ಥಿಕ ಪ್ರಗತಿಗೆ ಸಹಕಾರಿಯಾಗುತ್ತದೆ.

1990-93ರಲ್ಲಿ ಜಾಗತಿಕ ಆರ್ಥಿಕತೆಯಲ್ಲಿ ಭಾರತದ ಪಾಲು ಕೇವಲ 1.08%ರ ಆಸುಪಾಸಿನಲ್ಲಿತ್ತು. 1990-91ರಲ್ಲಿ 1.1%ಕ್ಕೆ ಕುಸಿದಿದ್ದ ಭಾರತದ ಜಿಡಿಪಿ ಬೆಳವಣಿಗೆಯ ವಾರ್ಷಿಕ ದರ 1995ರ ವೇಳೆಗೆ 7.6%ಕ್ಕೆ ಏರಿತ್ತು. 2005ರಲ್ಲಿ 7.9%ರಷ್ಟಿತ್ತು. 2016ರಲ್ಲಿ ಭಾರತದ ಜಿಡಿಪಿ ಲೆಕ್ಕಾಚಾರದ ಪದ್ಧತಿಯನ್ನು ಸುಧಾರಿಸಲಾಯಿತು. ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ, 2010-11ರಲ್ಲಿ ಜಿಡಿಪಿ 10.3%ರ ಎರಡಂಕಿಗೆ ಏರಿಕೆಯಾಗಿತ್ತು. 2004ರಿಂದ 2009ರ ತನಕ ಸರಾಸರಿ 8% ಜಿಡಿಪಿ ಬೆಳವಣಿಗೆ ದಾಖಲಾಗಿತ್ತು. 2009-2013ರ ಅವಧಿಯಲ್ಲಿ ಸರಾಸರಿ 7.5% ಬೆಳವಣಿಗೆಯಾಗಿತ್ತು.

ಬಜೆಟ್ ಭಾಷಣದ ಭರವಸೆಯ ಸಾಲು

ಬಜೆಟ್ ಬಜೆಟ್ ಭಾಷಣದ ಕೊನೆಯ ಸಾಲು ಓದಿದರೇ ಸಾಕು, ರೋಮಾಂಚನವಾಗುತ್ತದೆ. ಅದು ಹೀಗಿದೆ-'ಸರ್, ಭಾರತದ ಮುಂದಿರುವ ಸುದೀರ್ಘ ಸವಾಲುಗಳನ್ನು ನಾನು ಸಣ್ಣದೆಂದು ಪರಿಗಣಿಸುವುದಿಲ್ಲ, ಆದರೆ ವಿಕ್ಟರ್ ಹ್ಯೂಗೊ ಒಂದೆಡೆ ಹೀಗೆನ್ನುತ್ತಾನೆ- ಒಂದು ಆದರ್ಶದ ಕಾಲ ಬಂತೆಂದರೆ, ಅದನ್ನು ತಡೆಯಲು ವಿಶ್ವದ ಇತರ ಯಾವುದೇ ಶಕ್ತಿಯಿಂದ ಅಸಾಧ್ಯ. ನಾನು ಈ ಸದನಕ್ಕೆ ಹೇಳಲು ಬಯಸುವುದೇನೆಂದರೆ, ಭಾರತವು ವಿಶ್ವದ ಪ್ರಮುಖ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುವುದೂ ಅಂತಹ ಒಂದು ಶ್ರೇಷ್ಠವಾದ ಆದರ್ಶ. ಇಡೀ ಜಗತ್ತು ಇದನ್ನು ಗಟ್ಟಿಯಾಗಿ ಮತ್ತು ಸ್ಪಷ್ಟವಾಗಿ ಕೇಳಲಿ, ಭಾರತ ಈಗ ಜಾಗೃತವಾಗಿದೆ, ನಾವು ಗೆಲ್ಲುತ್ತೇವೆ'




ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ನಾಯಕರ ಜತೆ ಮನಮೋಹನ್ ಸಿಂಗ್ ....

ಸಮಾಚಾರ ಸಣ್ಣದಲ್ಲ

ಸ್ಕ್ರೂ ಡ್ರೈವರ್‌ನಿಂದ ಚುಚ್ಚಿದ ದುಷ್ಕರ್ಮಿಗಳು

ಗದಗ: ಜಗಳ ಬಿಡಿಸಲು ಬಂದ ಯುವಕನ ಕುತ್ತಿಗೆಗೆ ಸ್ಕ್ರೂ ಡ್ರೈವರ್ ಚುಚ್ಚಿ ದುಷ್ಕರ್ಮಿಗಳು ಪರಾರಿಯಾಗಿ ರುವ ಘಟನೆ ಗದಗ ನಗರದ ಜುಮ್ಮಾ ಮಸೀದಿ ಬಳಿ ಗುರುವಾರ ರಾತ್ರಿ ನಡೆದಿದೆ. ಘಟನೆಯಲ್ಲಿ ಅನಿಲ್ ಮುಳ್ಳಾಳ್ (27) ಸೇರಿದಂತೆ ಆರು ಯುವಕರಿಗೆ ಗಾಯವಾಗಿದೆ. ಸ್ಕ್ರೂ ಡ್ರೈವರ್ ನಿಂದ ಇರಿತಕ್ಕೊಳ ಗಾಗಿರುವ ಅನಿಲ್ ಎಂಬಾತನನ್ನು ಧಾರವಾಡ ಎಸ್‌ಡಿಎಂ ಆಸ್ಪತ್ರೆಗೆ ದಾಖಲಿಸಿ ಹೆಚ್ಚಿನ ಚಿಕಿತ್ಸೆ ನೀಡಲಾಗುತ್ತಿದೆ. ಇನ್ನುಳಿದ ಐವರಿಗೆ ಗದಗ ಜಿಮ್ಸ್ ಆಸ್ಪತ್ರೆಯಲ್ಲೇ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆ ಯಲ್ಲಿ ಅನಿಲ್, ಚೇತನ್ ಮುಳ್ಳಾಳ, ವಿನಾಯಕ್ ಮುಳ್ಳಾಳ, ಅಭಿಷೇಕ್ ಹರ್ಲಾಪುರ, ಕಿರಣ್ ಸಾಲಿಮಠ, ಶಾರುಖ್ ಮುಲ್ಲಾ ಎಂಬ ಯುವಕರಿಗೆ ಗಾಯಗಳಾಗಿವೆ. ಘಟನೆಗೆ ನಿಖರವಾಗಿ ಕಾರಣ ತಿಳಿದು ಬಂದಿಲ್ಲ. ವೈಯಕ್ತಿಕ ದ್ವೇಷದ ಹಿನ್ನೆಲೆ ಈ ಹಲ್ಲೆ ನಡೆದಿರಬಹುದು ಎನ್ನಲಾಗಿದೆ. ಅನಿಲ್ ಎನ್ನುವ ಯುವಕ ಶ್ರೀರಾಮ ಸೇನೆಯ ಸಕ್ರಿಯ ಕಾರ್ಯಕರ್ತನಾಗಿದ್ದು, ಈತನನ್ನೇ ಟಾರ್ಗೆಟ್ ಮಾಡಿ ಹಲ್ಲೆ ನಡೆದಿರುವ ಬಗ್ಗೆ ಕುಟುಂಬಸ್ಥರು ಆರೋಪ ವ್ಯಕ್ತಪಡಿಸಿದ್ದಾರೆ. ಗದಗ ಶಹರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಪೊಲೀಸರು ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ.

ಎಫ್‌ಎಸ್‌ಎಲ್ ಬಗ್ಗೆ ಸಂಶಯ: ಸಿ.ಟಿ.ರವಿ

ಚಿಕ್ಕಮಗಳೂರು: ಬೆಳಗಾವಿ ಅಧಿವೇಶನದ ವೇಳೆ ವಿಧಾನ ಪರಿಷತ್‌ನಲ್ಲಿ ನಡೆದ ಘಟನೆ ತನಿಖೆ ನಡೆಸುತ್ತಿರುವ ಸಿಐಡಿ ಮತ್ತು ಎಫ್‌ಎಸ್‌ಎಲ್ ವರದಿ ಮೇಲೂ ಕಾಣದ ಕೈಗಳು ಕೆಲಸ ಮಾಡುವ ಸಾಧ್ಯತೆ ಇದೆ ಎಂದು ಮೇಲ್ಮನೆ ಸದಸ್ಯ ಸಿ.ಟಿ.ರವಿ ಸಂಶಯ ವ್ಯಕ್ತಪಡಿಸಿದ್ದಾರೆ. ನನ್ನ ಮೇಲೆ ಪ್ರಕರಣ ದಾಖಲಿಸಿ ಬಂಧಿಸಲು ಒಬ್ಬ ಸಚಿವರು ಕಾರಣರಾಗಿದ್ದಾರೆ. ಹೀಗಿರುವಾಗ ಸಿಐಡಿ ನಿಷ್ಪಕ್ಷಪಾತ ತನಿಖೆ ಹೇಗೆ ನಡೆಸುತ್ತದೆ. ಹಾಗಾಗಿಯೇ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆಯಾಗಬೇಕು. ಇಲ್ಲವೇ ಸಿಬಿಐ ತನಿಖೆ ನಡೆಯಬೇಕು ಎಂದು ಅವರು ಶುಕ್ರವಾರ ಒತ್ತಾಯಿಸಿದರು.

ನಟ ನವೀನ್ ಪಡೀಲ್‌ಗೆ ವಿಶ್ವಪ್ರಭಾ ಪುರಸ್ಕಾರ

ಉಡುಪಿ: ತುಳು ರಂಗಭೂಮಿ ಮತ್ತು ಚಲನಚಿತ್ರ ನಟ ನವೀನ್ ಡಿ ಪಡೀಲ್ ಅವರು ಸಂಸ್ಕೃತಿ ವಿಶ್ವ ಪ್ರತಿಷ್ಠಾನದ ವಿಶ್ವಪ್ರಭಾ ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ. ವಿಶ್ವಪ್ರಭಾ ಪುರಸ್ಕಾರವನ್ನು ನಟ ನವೀನ್ ಡಿ. ಪಡೀಲ್‌ಗೆ ನೀಡಿ ಗೌರವಿಸಲಾಗು ವುದು. ಈ ಪುರಸ್ಕಾರ 1ಲಕ್ಷ ರೂ. ನಗದು ಎಂದು ವಿಶ್ವಪ್ರಭಾ ಪುರಸ್ಕಾರ ಸಮಿತಿ ಸಂಚಾಲಕ ಮರವಂತೆ ನಾಗರಾಜ ಹೆಬ್ಬಾರ್ ಹಾಗೂ ಸಂಸ್ಕೃತಿ ವಿಶ್ವ ಪ್ರತಿಷ್ಠಾನ ಸ್ಥಾಪಕ ವಿಶ್ವನಾಥ ಶೆಣೈ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಿಲಿಂಡರ್ ಸ್ಫೋಟ: ಸಾವಿನ ಸಂಖ್ಯೆ 4ಕ್ಕೇರಿಕೆ

ಹುಬ್ಬಳ್ಳಿ: ಗ್ಯಾಸ್ ಸಿಲಿಂಡರ್ ಸ್ಫೋಟ ಪ್ರಕರಣದಲ್ಲಿ ಮತ್ತೊರ್ವ ಅಯ್ಯಪ್ಪ ಮಾಲಾಧಾರಿ ಲಿಂಗರಾಜ ಬೀರನೂರ(19) ಎಂಬವರು ಮೃತಪಟ್ಟಿದ್ದು, ಸಾವಿನ ಸಂಖ್ಯೆ ನಾಲ್ಕಕ್ಕೆ ತಲುಪಿದೆ. ಕಳೆದ ಭಾನುವಾರ ರಾತ್ರಿ, ಗ್ಯಾಸ್ ಸೋರಿಕೆಯಾಗಿ ಸಿಲಿಂಡರ್ ಸ್ಫೋಟ ಗೊಂಡು 9 ಮಂದಿ ಮಾಲಾಧಾರಿಗಳು ಗಾಯಗೊಂಡಿದ್ದರು. ಶುಕ್ರವಾರ ಬೆಳಗ್ಗೆ ರಾಜು ಮೂಗೇರ ಎಂಬ ಮಾಲಾಧಾರಿ ಸಾವನ್ನಪ್ಪಿದ್ದಾರೆ. ಗುರುವಾರ ನಿಜನಿಂಗಪ್ಪ ಬೇಪೂರಿ ಹಾಗೂ ಸಂಜಯ ಸವದತ್ತಿ ಎಂಬಿಬ್ಬರು ಮಾಲಾಧಾರಿಗಳು ಸಾವನ್ನಪ್ಪಿದ್ದರು. ಗಾಯಗೊಂಡ ಐವರಿಗೆ ಕೆಎಂಸಿ ಆರ್‌ಐನಲ್ಲಿ ಚಿಕಿತ್ಸೆ ಮುಂದುವರೆದಿದೆ. ನಾಲ್ವರ ಆರೋಗ್ಯ ಪರಿಸ್ಥಿತಿ ಚಿಂತಾಜನಕವಾಗಿದೆ. ಒಬ್ಬ ಗಾಯಾಳು ಚೇತರಿಕೆ ಕಂಡಿದ್ದಾರೆ. ಉಸ್ತುವಾರಿ ಸಚಿವ ಸಂತೋಷ್ ಲಾಡ್ ಕಿಮ್ಸ್‌ಗೆ ಭೇಟಿ ನೀಡಿ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದ್ದರು.

...ದಿವ್ಯ ಭವ್ಯ ಹವ್ಯ ಲೋಕ ಅನಾವರಣ

← ಮೊದಲಪುಟದಿಂದ

ಅಡಿಕೆ ಸಂಸ್ಕೃತಿಯ ಸಮಗ್ರ ದರ್ಶನ: ಹವ್ಯಕರ ಜೀವನಾಧಾರವಾದ ಅಡಿಕೆ ಕೃಷಿಯ ಸಮಗ್ರ ಪ್ರದರ್ಶನವು ಕೃಷಿ ಜಗತ್ತಿನ ಪ್ರಪಂಚವನ್ನು ಸಮಗ್ರವಾಗಿ ಪ್ರದರ್ಶಿತಗೊಳಿಸಲಾಗಿತ್ತು. ವಿವಿಧ ರೀತಿಯ ಅಡಿಕೆ ಸಸಿಗಳು, ತೋಟದ ಕೆಲಸದ ಉಪಕರಣಗಳು, ಕೊನೆ ಕೊಯ್ಯುವ ಸಲಕರಣೆ ಗಳು, ಅಡಿಕೆ ಸುಲಿಯುವ ಯಂತ್ರಗಳು, ಅಳತೆಯ ಪಾರಂಪರಿಕ ಮಾನದಂಡ ಗಳು ಸೇರಿದಂತೆ ಪಾರಂಪರಿಕ ವಸ್ತುಗಳ ಪ್ರದರ್ಶನ ದಲ್ಲಿತ್ತು. ಹಳ್ಳಿಸೊಗಡಿನ ಆಲೆಮನೆ ಕಾರ್ಯ ಕ್ರಮದಲ್ಲಿ ಲಭ್ಯವಿತ್ತು. ಇತ್ತೀಚಿಗೆ ಮಲೆನಾಡು - ಕರಾವಳಿ ಭಾಗದಲ್ಲೇ ಆಲೆಮನೆಗಳು ಕಣ್ಮರೆಯಾಗಿದ್ದು, ಅರ ಮನೆ ಮೈದಾನದಲ್ಲಿ ಜೋಡಿ ಕೋಣಗಳ ಆಲೆ ಗಾಣದ ಪಾರಂಪರಿಕ ಆಲೆಮನೆ ಈ ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿದ್ದು, ಆಕರ್ಷಣೆಯ ಕೇಂದ್ರವಾಗಿತ್ತು.

ಎರಡು ಕೋಟಿ ರು. ವೆಚ್ಚದಲ್ಲಿ ಶಾಲಾ ಮಕ್ಕಳಿಗೆ ಬಟ್ಟೆ ವಿತರಣೆ

ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಜನಸೇವೆ | ವಿದ್ಯಾರ್ಥಿಗಳಿಗೆ ಬಣ್ಣದ ಉಡುಪುಗಳ ವಿತರಣೆ

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಎಲ್ಲಾ ಶಾಲಾ ವಿದ್ಯಾರ್ಥಿಗಳಿಗೆ ಉತ್ತಮ ದರ್ಜೆಯ ಬಣ್ಣದ ಉಡುಪುಗಳನ್ನು ನೀಡಲಾಗುತ್ತಿದ್ದು ಶಾಸಕ ಪ್ರದೀಪ್ ಈಶ್ವರ್ ಅವರು ಪ್ರಸಕ್ತ ಸಾಲಿನಲ್ಲಿ 2 ಕೋಟಿ ರು. ವೆಚ್ಚದಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಬಣ್ಣಬಣ್ಣದ ಉಡುಪುಗಳನ್ನು ನೀಡುತ್ತಿರುವುದು ವಿದ್ಯಾರ್ಥಿ ಗಳಲ್ಲಿ ಮತ್ತು ಪೋಷಕ ವರ್ಗದಲ್ಲಿ ಹರ್ಷ ತಂದಿದೆ.

ಪ್ರದೀಪ್ ಈಶ್ವರ್ ಶಾಸಕರಾಗಿ ಆಯ್ಕೆಗೊಂಡ ನಂತರ ತಾವು ಪ್ರತಿನಿಧಿಸುವ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಎಲ್ಲ ಶಾಲಾ ವಿದ್ಯಾರ್ಥಿಗಳಿಗೆ ಬಣ್ಣದ ಉಡುಪುಗಳನ್ನು ಪ್ರತಿವರ್ಷ ನೀಡುವುದಾಗಿ ಘೋಷಣೆ ಮಾಡಿದ್ದರು. ಈ ಯೋಜನೆಯ ಅಂಗವಾಗಿ ಎರಡನೇ ವರ್ಷ ಈಗ ಉಡುಪುಗಳನ್ನು ನೀಡುವ ಕಾರ್ಯ ಮುಂದುವರಿಯುತ್ತಿದೆ.

ಹಂತಹಂತವಾಗಿ ಭರವಸೆಗಳ ಈಡೇರಿಕೆ: ಅಲ್ಲದೆ ಎಸ್‌ಎಸ್ ಎಲ್‌ಸಿ ಮತ್ತು ನಂತರದ ಹಂತದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ತಲಾ ಒಂದು ಸಾವಿರ ರು. ನಗದು ಪ್ರೋತ್ಸಾಹವನ್ನು ಈಗಾಗಲೇ ನೀಡಿದ್ದಾರೆ. ಪ್ರತಿವರ್ಷ ಮಹಿಳೆಯರಿಗೆ ವರಮಹಾಲಕ್ಷ್ಮಿ ಹಬ್ಬದ ವೇಳೆ ಉತ್ತಮ ದರ್ಜೆಯ ಸೀರೆಗಳನ್ನು ನೀಡುತ್ತಿದ್ದು ಹಂತಹಂತವಾಗಿ ತಾವು ಚುನಾವಣಾ ಪೂರ್ವ ಮತ್ತು ಚುನಾವಣಾ ನಂತರ ಮತದಾರರಿಗೆ ನೀಡಿದ ಭರವಸೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾಗುತ್ತಿರುವುದು ಸಹ ಕ್ಷೇತ್ರದ ಜನತೆಯಲ್ಲಿ ಶಾಸಕರ ನಡೆ-ನುಡಿಯ ಬಗ್ಗೆ ವಿಶ್ವಾಸ ಮೂಡಿಸುತ್ತಿರುವ ಸಂಗತಿಯಾಗಿದೆ.

ಸೇವೆಗೆ ಸದಾ ಸಿದ್ಧ: ಕ್ಷೇತ್ರದಲ್ಲಿ ಕೈಗೊಂಡಿರುವ ಸೇವಾ ಕಾರ್ಯಗಳ ಬಗ್ಗೆ ಪ್ರತಿಕ್ರಿಯಿಸಿದ ಶಾಸಕ ಪ್ರದೀಪ ಈಶ್ವರ್, ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ತಮ್ಮದೇ ಸ್ವಂತ ಖರ್ಚಿನಿಂದ 10 ಆಂಬ್ಯುಲೆನ್ಸ್ ವಾಹನಗಳನ್ನು ವ್ಯವಸ್ಥೆಗೊಳಿ ಸಲಾಗಿದ್ದು, ಈ ಆಂಬ್ಯುಲೆನ್ಸ್‌ಗಳ ಸೇವೆಯನ್ನು ಹತ್ತಾರು ಸಾವಿರ ಸಂಖ್ಯೆಯಲ್ಲಿ ಕ್ಷೇತ್ರದ ಜನತೆ ಉಪಯೋಗಿ ಸಿಕೊಳ್ಳು ತ್ತಿದ್ದಾರೆ ಬಡವರು, ನಿರ್ಗತಿಕರು ಹಾಗೂ ಅಗತ್ಯ ಇರುವವರ ಸೇವೆಗೆ ತಾವು ಸದಾ ಸಿದ್ಧರಿರುವುದಾಗಿ ತಿಳಿಸಿದರು.

ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಶಾಸಕ ಪ್ರದೀಪ್ ಈಶ್ವರ್ ಪರವಾಗಿ ಶಾಲಾ ಮಕ್ಕಳಿಗೆ ಉಡುಪುಗಳನ್ನು ವಿತರಿಸಲಾಗುತ್ತಿದೆ.

ಮಾದಕವಸ್ತು ವಶ: ಇಬ್ಬರ ಸೆರೆ

ಹೊಸ ವರ್ಷಾಚರಣೆಗೆ ಸಂಗ್ರಹಿಸಿಟ್ಟಿದ್ದ ಆರೋಪಿಗಳು

ಬೀದರ್: ಹೊಸ ವರ್ಷಾಚರಣೆ ಸಂದರ್ಭದಲ್ಲಿ ಮಾರಾಟ ಮಾಡಿ, ಹೆಚ್ಚಿನ ಹಣ ಗಳಿಸಲು ಸಂಗ್ರಹಿಸಿ ಇಡಲಾಗಿದ್ದ ನಶೆ ಗುಳಿಗೆ, ಸಿರಪ್‌ಗಳನ್ನು ಬೀದರ್ ಪೊಲೀಸರು ಶುಕ್ರವಾರ ಜಪ್ತಿಮಾಡಿ, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ರಾಹುಲ್ ವಿಕಾಸ್ ಪಾಟೀಲ ಮತ್ತು ವಾಜೀದ್ ಬಂಧಿತರು. ಆರೋಪಿಗಳಿಂದ 1.29 ಲಕ್ಷ ರು. ಮೌಲ್ಯದ ಮಾದಕದ್ರವ್ಯದ ಬಾಟಲಿ ಮತ್ತು ಸ್ಟ್ರಿಪ್‌ಗಳನ್ನು ವಶಪಡಿಸಿ ಕೊಳ್ಳಲಾಗಿದೆ.

ಗುರುವಾರ ಹಾರೂಗೇರಿ-ಲಾಡಗೇರಿ ರಸ್ತೆಯಲ್ಲಿ ರಾಹುಲ್ ಎಂಬಾತ ಸಾರ್ವಜನಿಕರಿಗೆ ಮಾದಕ ದ್ರವ್ಯ ಮಾರಾಟ ಮಾಡುತ್ತಿದ್ದ ಮಾಹಿತಿಯ ಮೇರೆಗೆ ಗಾಂಧಿ ಗಂಜ್ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಹನುಮರೆಡ್ಡೆಪ್ಪ ಮತ್ತು ಸಿಬ್ಬಂದಿ ದಾಳಿ ನಡೆಸಿ, ಅಲ್ಲಿದ್ದ ನಶೆ ವಸ್ತುಗಳನ್ನು ಜಪ್ತಿ ಮಾಡಿ, ರಾಹುಲ್‌ನನ್ನು ವಶಕ್ಕೆ ತೆಗೆದುಕೊಂಡಿ ದ್ದಾರೆ. ಬಳಿಕ ಸಹಾಯಕ ಔಷಧ ನಿಯಂತ್ರಕರ ಕಚೇರಿಯ ಎಡಿಸಿ ಧನಂಜಯ ಅವರನ್ನು ಕರೆಸಿ, ತಪಾಸಣೆ ಮಾಡಿಸಲಾಗಿದೆ. ಅನುಮತಿ ಇಲ್ಲದೆ ದೊಡ್ಡ ಪ್ರಮಾಣದಲ್ಲಿ ನಾರ್ಕೋಟಿಕ್ ಅಂಶ ಇರುವ ಗುಳಿಗೆ, ಸಿರಪ್ ಜನರಿಗೆ ಮಾರಾಟ ಮಾಡುವಂತಿಲ್ಲ. ರಾಹುಲ್ ವಿಚಾರಣೆ ವೇಳೆ, ಹೊಸ ವರ್ಷಾಚರಣೆ ಸಂದರ್ಭದಲ್ಲಿ ಹೆಚ್ಚಿನ ಮೊತ್ತಕ್ಕೆ ಮಾರಾಟ ಮಾಡಲು ಸಂಗ್ರಹಿಸಿದ್ದಾಗಿ ಬಾಯಿ ಬಿಟ್ಟಿದ್ದಾನೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

ಮಾದಕ ವಸ್ತುಗಳ ಜಪ್ತಿ: ರಾಹುಲ್ ನೀಡಿದ ಮಾಹಿತಿ ಆಧರಿಸಿ ಮಾಂಗರವಾಡಿ ಕಾಲೋನಿಯ ಮನೆಯೊಂದರಲ್ಲಿ ನೆಲದಲ್ಲಿ ಅವಿತಿಟ್ಟಿದ್ದ ನಶೆ ವಸ್ತುಗಳನ್ನು ಜಪ್ತಿ ಮಾಡಿ, ವಾಜಿದ್ ಎಂಬಾತನನ್ನು ವಶಕ್ಕೆ ಪಡೆಯಲಾಗಿದೆ. ಇದೇ ವೇಳೆ, ಮಹಾರಾಷ್ಟ್ರದಿಂದ ಗಾಂಜಾ ಅಕ್ರಮ ಸಾಗಣೆ ಮಾಡುತ್ತಿದ್ದ ಇಬ್ಬರನ್ನು ವಶಕ್ಕೆ ತೆಗೆದುಕೊಂಡು, 5.20 ಲಕ್ಷ ರು. ಮೌಲ್ಯದ 5 ಕೆ.ಜಿ ಗಾಂಜಾ ಜಪ್ತಿಮಾಡಲಾಗಿದೆ.

ನಿರ್ಬಂಧ ಸಡಿಲಿಕೆ ಇಲ್ಲ: ಹೊಸವರ್ಷಾಚರಣೆ ಹಿನ್ನೆಲೆಯಲ್ಲಿ ನಿರ್ಬಂಧ ಸಡಿಲಿಕೆ ಇಲ್ಲ. ಸುಪ್ರೀಂ ಕೋರ್ಟ್‌ನ ಮಾರ್ಗಸೂಚಿಯಂತೆ ಎಲ್ಲರೂ ಹೊಸವರ್ಷ ಆಚರಿಸಬೇಕು ಎಂದು ಪ್ರದೀಪ್ ಗುಂಟಿ ಸ್ಪಷ್ಟವಾಗಿ ಹೇಳಿದರು.

ಬೆದರಿಕೆ ಹಿನ್ನೆಲೆ: ಭದ್ರತೆ ಕೋರಿ ಮೋದಿ, ಶಾಗೆ ಸ್ನೇಹಮಯಿ ಪತ್ರ

ಮೈಸೂರು: ಮುಡಾ ಹಗರಣ ಸಂಬಂಧ ದೂರು ನೀಡಿದ್ದ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ , ತಮ್ಮ ಕುಟುಂಬಕ್ಕೆ ಬೆದರಿಕೆ ಇರುವುದರಿಂದ ಭದ್ರತೆ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾಗೆ ಮನವಿ ಮಾಡಿದ್ದಾರೆ.

ಈ ಬಗ್ಗೆ ಮೋದಿ ಮತ್ತು ಶಾಗೆ ಪತ್ರ ಬರೆದಿರುವ ಕೃಷ್ಣ, ತಮಗೆ ಬೆದರಿಕೆ ಹಾಕಲಾಗುತ್ತಿದೆ. ಪೊಲೀಸರಿಗೆ ದೂರು ನೀಡಿದರೂ ಕ್ರಮ ಕೈಗೊಳ್ಳುತ್ತಿಲ್ಲ; ತಮ್ಮ ಕುಟುಂಬಕ್ಕೆ ಭದ್ರತೆ ನೀಡಲು ನಿರಾಕರಿಸಿದ್ದಾರೆ. ಹೀಗಾಗಿ ಕೇಂದ್ರದಿಂದ ಭದ್ರತೆ ಒದಗಿಸುವಂತೆ ಕೋರಿದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ 14 ನಿವೇಶನಗಳನ್ನು ಸಿಎಂ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ರಾಜಕೀಯ ಪ್ರಭಾವ ಬಳಸಿ ಹಂಚಿಕೆ ಮಾಡಲಾಗಿದೆ. ಮೊದಲಿಗೆ ಅಧಿಕಾರಿಗಳಿಗೆ ದೂರು ನೀಡಲು ಪ್ರಯತ್ನಿಸಿದರೂ ಅವರು ಕ್ರಮಕ್ಕೆ ಮುಂದಾಗಲಿಲ್ಲ.

ಹೀಗಾಗಿ ನಾನು ನ್ಯಾಯಾಲಯದ ಮೊರೆಹೋಗಿ ಖಾಸಗಿ ದೂರು ಸಲ್ಲಿಸಿದೆ. ನನ್ನ ದೂರು ಮತ್ತು ಪೂರಕ ದಾಖಲೆಗಳನ್ನು ಪರಿಶೀಲಿಸಿದ ನಂತರ ನ್ಯಾಯಾಲಯವು ಲೋಕಾಯುಕ್ತ ಅಧಿಕಾರಿಗಳ ತನಿಖೆಗೆ ಸೂಚಿಸಿತು. ಇದರ ನಂತರ, ಪ್ರಕರಣ ಸಂಬಂಧ ಎಫ್‌ಐಆರ್ ದಾಖಲಿಸಲಾಗಿದೆ. ಎಫ್‌ಐಆರ್‌ನಲ್ಲಿ ಅಸಿಎಂ ಸಿದ್ದರಾಮಯ್ಯ ಅವರನ್ನು ಮೊದಲ ಆರೋಪಿ ಎಂದು ಹೆಸರಿಸಲಾಗಿದೆ ಎಂದು ಸ್ನೇಹಮಯಿ ಕೃಷ್ಣ ಪತ್ರದಲ್ಲಿ ತಿಳಿಸಿದ್ದಾರೆ.

ಆನೆಮರಿಯನ್ನೇ ಬೇಟೆಯಾಡಿ ಕೊಂದ ಹುಲಿ

ಗುಂಡ್ಲುಪೇಟೆ: ಹುಲಿಯೊಂದು ಆನೆಮರಿಯೊಂದನ್ನು ಬೇಟೆಯಾಡಿ ಕೊಂದು ಹಾಕಿರುವ ಘಟನೆ ತಾಲೂಕಿನ ಬಂಡೀಪುರ ಅಭಯಾರಣ್ಯದ ಗೋಪಾಲಸ್ವಾಮಿ ಬೆಟ್ಟ ಅರಣ್ಯ ವಲಯ ವ್ಯಾಪ್ತಿಯ ಹಿರೀಕೆರೆ ಭಾಗದಲ್ಲಿ ನಡೆದಿದೆ.

ಆನೆಮರಿಗೆ ಸುಮಾರು ಎರಡು ತಿಂಗಳು ವಯಸ್ಸಾಗಿದೆ ಎಂದು ಅಂದಾಜಿಸಲಾಗಿದ್ದು, ಹುಲಿಯು ಕಳೆದ ಎರಡು ದಿನಗಳ ಹಿಂದೆ ಬೇಟೆಯಾಡಿ ಸ್ವಲ್ಪ ತಿಂದು ಹೋಗಿದೆ ಎನ್ನಲಾಗುತ್ತಿದೆ. ಅರಣ್ಯ ಇಲಾಖೆ ಸಿಬ್ಬಂದಿ ಗಸ್ತು ತಿರುಗುತ್ತಿದ್ದಾಗ ಆನೆಮರಿ ಮೃತದೇಹ ಕಂಡು ಬಂದಿದೆ. ನಂತರ ಮೇಲಾಧಿಕಾರಿಗಳ ಗಮನಕ್ಕೆ ತಂದಿದ್ದು, ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಆನೆಮರಿಯನ್ನು ಹುಲಿ ಬೇಟೆಯಾಡಿ ಸಾಯಿಸಿ ಸ್ವಲ್ಪ ತಿಂದಿದೆ. ಇಂತಹ ಘಟನೆಗಳು ಆಗಾಗ್ಗೆ ಬಂಡೀಪುರ ಅಭಯಾರಣ್ಯದಲ್ಲಿ ನಡೆಯುತ್ತಿದ್ದು, ಮರಿಯಾನೆಯು ಒಂಟಿಯಾಗಿರುವುದನ್ನು ಗಮನಿಸಿ ಹುಲಿ ಬೇಟೆಯಾಡಿದೆ. ಆನೆಯ ಕಳೆಬರವನ್ನು ನಿಯಮಾನುಸಾರ ಅರಣ್ಯದಲ್ಲೇ ಬಿಡಲಾಗಿದೆ ಎಂದು ಬಂಡೀಪುರ ಎಸಿಎಫ್ ನವೀನ್ ಕುಮಾರ್ ಮಾಹಿತಿ ನೀಡಿದ್ದಾರೆ.

ಹಾವೇರಿ: ಕಂಬಕ್ಕೆ ಕಟ್ಟಿ ಚಿತ್ರಹಿಂಸೆ, ವ್ಯಕ್ತಿ ಕೊಲೆ

ಹಾವೇರಿ: ಜಿಲ್ಲೆಯ ಹಾನಗಲ್ ತಾಲೂಕಿನ ಕೊಪ್ಪರಸಿಕೊಪ್ಪ ಗ್ರಾಮದಲ್ಲಿ ಪ್ರಕಾಶ ವಾಲೀಕಾರ (35) ಎಂಬುವವರನ್ನು ವಿದ್ಯುತ್ ಕಂಬಕ್ಕೆ ಕಟ್ಟಿ ಚಿತ್ರಹಿಂಸೆ ನೀಡಿ ಕೊಲೆ ಮಾಡಲಾಗಿದ್ದು, ಆರೋಪಿಗಳ ಪತ್ತೆಗಾಗಿ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಕೊಪ್ಪರಸಿಕೊಪ್ಪದ ನಿವಾಸಿ ಪ್ರಕಾಶ, ಕೃಷಿಕ. ಗ್ರಾಮದ ಮಹಿಳೆ ರೇಖಾ ಎಂಬುವವರ ಜೊತೆ ಸಲುಗೆ ಇಟ್ಟುಕೊಂಡಿದ್ದರೆಂಬ ಮಾಹಿತಿ ಇದೆ. ಮಹಿಳೆಯ ಪತಿ ಹಾಗೂ ಆತನ ಕಡೆಯವರು, ಪ್ರಕಾಶ್ ಅವರನ್ನು ಕೊಲೆ ಮಾಡಿರುವುದು ಸ್ಥಳೀಯರಿಂದ ಗೊತ್ತಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಕಾಶ್ ಹಾಗೂ ರೇಖಾ, ಬುಧವಾರ ಮಧ್ಯಾಹ್ನ ಮನೆಯೊಂದರಲ್ಲಿ ಒಟ್ಟಿಗೆ ಸೇರಿದ್ದರು. ಈ ಮಾಹಿತಿ ಗೊತ್ತಾಗುತ್ತಿದ್ದಂತೆ ಆರೋಪಿಗಳು, ಮನೆಗೆ ನುಗ್ಗಿದ್ದರು. ಪ್ರಕಾಶ್ ಮೇಲೆ ಹಲ್ಲೆ ಮಾಡಿ ವಿದ್ಯುತ್ ಕಂಬಕ್ಕೆ ಕಟ್ಟಿ ಚಿತ್ರಹಿಂಸೆ ನೀಡಿದ್ದರು. ಮರ್ಮಾಂಗವನ್ನು ಸುಡುತ್ತೇವೆ ಎಂದು ಕೂಗಾಡಿದ್ದ ಆರೋಪಿಗಳು, ಪ್ರಕಾಶ್ ಅವರ ಸುತ್ತಲೂ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದರು. ರೇಖಾ ಮೇಲೆಯೂ ಆರೋಪಿಗಳು ಹಲ್ಲೆ ಮಾಡಿದ್ದಾರೆ. ತೀವ್ರ ಗಾಯಗೊಂಡಿರುವ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ ಎಂದು ಹೇಳಿದರು

ಬೆಂಕಿಗೆ ಪ್ರಕಾಶ ಕೈ, ಕಾಲು ಗಂಭೀರ ಗಾಯ

ಮಾಹಿತಿ ತಿಳಿದ ಪೊಲೀಸರು ಗ್ರಾಮಕ್ಕೆ ಹೋಗಿ ದ್ದರು. ಅಷ್ಟರಲ್ಲಿಯೇ ಬೆಂಕಿಯ ಕೆನ್ನಾಲಗೆ ಪ್ರಕಾಶ ಅವರ ಕೈ ಕಾಲಿಗೆ ತಾಗಿತ್ತು. ಅವರನ್ನು ರಕ್ಷಿಸಿದ್ದ ಪೊಲೀಸರು, ಹಾನಗಲ್ ತಾಲೂಕು ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ. ಪ್ರಕಾಶ ಮೈಮೇಲೆ ಸುಟ್ಟ ಗಾಯಗಳಾಗಿದ್ದವು. ಚಿತ್ರ ಹಿಂಸೆ, ಹಲ್ಲೆಯಿಂದ ಮೃತಪಟ್ಟಿರುವುದಾಗಿ ವೈದ್ಯರು ಹೇಳುತ್ತಿದ್ದಾರೆ' ಎಂದು ಅಧಿಕಾರಿ ವಿವರಿಸಿದರು.

ಮೋದಿ ಕುರಿತ ಪುಸ್ತಕ ಬಿಡುಗಡೆ

ಧಾರವಾಡದಲ್ಲಿ ಕೇಂದ್ರ ಸಚಿವ ಜೋಶಿಯಿಂದ ಲೋಕಾರ್ಪಣೆ

ಪ್ರಧಾನಿ ನರೇಂದ್ರ ಮೋದಿ ಕುರಿತು ಡಾ. ಆರ್ ಬಾಲಸುಬ್ರಮಣ್ಯಂ ಬರೆದ ಕೃತಿಯನ್ನು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಧಾರವಾಡದಲ್ಲಿ ಶುಕ್ರವಾರ ಲೋಕಾರ್ಪಣೆ ಮಾಡಿದರು.

ಧಾರವಾಡ: ಪ್ರಧಾನಿ ನರೇಂದ್ರ ಮೋದಿ ಕುರಿತಾದ ಕೃತಿಯನ್ನು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಶುಕ್ರವಾರ ಬಿಡುಗಡೆ ಮಾಡಿದ್ದಾರೆ.

ಇಲ್ಲಿನ ಆಲೂರು ವೆಂಕಟರಾವ್ ಸಭಾಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ. ಆರ್ ಬಾಲಸುಬ್ರಮಣ್ಯಂ ರಚಿಸಿದ'ಪವರ್ ವಿಥಿನ್ ದ ಲೀಡರಶಿಪ್ ಲೆಗಸಿ ಆಫ್ ನರೇಂದ್ರ ಮೋದಿ; ನರೇಂದ್ರ ಮೋದಿ ನಾಯಕತ್ವ ಪರಂಪರೆ ಈ ಕೃತಿಯ ಅನಾವರಣ ಹಾಗೂ ಲೇಖಕರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಪ್ರಲ್ಹಾದ ಜೋಶಿ ಪಾಲ್ಗೊಂಡರು.

ಮೋದಿ ನಾಯಕತ್ವದ ಪಯಣದ ವಿವರ: ಈ ಸಂದರ್ಭದಲ್ಲಿ ಮಾತನಾಡಿದ ಪ್ರಲ್ಹಾದ ಜೋಶಿ, ಡಾ. ಆರ್. ಬಾಲಸುಬ್ರಮಣ್ಯಂ ಅವರು ಅಭಿವೃದ್ಧಿ ಪರ ಚಿಂತಕ ಮತ್ತು ಸಾರ್ವಜನಿಕ ನೀತಿ ತಜ್ಞರಾಗಿದ್ದು, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಮತ್ತು ಗ್ರಾಸ್‌ರೂಟ್ಸ್ ರಿಸರ್ಚ್ ಅಂಡ್ ಅಡ್ವಕಸಿ ಮೂವ್‌ಮೆಂಟ್‌ನ ಸ್ಥಾಪಕ ಮತ್ತು ಅಧ್ಯಕ್ಷರಾಗಿದ್ದಾರೆ. ಮಾನವ ಸಂಪನ್ಮೂಲ ಸಾಮರ್ಥ್ಯ ಅಭಿವೃದ್ಧಿ ಆಯೋಗದ ಸದಸ್ಯರೂ ಆಗಿರುವ ಈ ಕೃತಿಯ ಲೇಖಕರು ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದ ಪ್ರಯಾಣವನ್ನು ವಿಸ್ತಾರವಾಗಿ ಪ್ರಸ್ತುತ ಪಡಿಸಿದ್ದಾರೆ ಎಂದು ಪ್ರಶಂಸಿಸಿದರು.

ಪುಸ್ತಕವು ಪ್ರಧಾನಿ ಮೋದಿ ಅವರ ಐವತ್ತು ವರ್ಷಗಳ ಸಾರ್ವಜನಿಕ ಜೀವನದ ಬಗ್ಗೆ ಮತ್ತು ಅವರ ಉದ್ದೇಶದ ಬಗ್ಗೆ, ಅವರ ಕಠಿಣ ಪರಿಶ್ರಮ ಮತ್ತು ಸಂವಹನ ವಿಧಾನವು ಅವರನ್ನು ಪ್ರಧಾನಿ ಹುದ್ದೆಗೆ ಹೇಗೆ ಮುನ್ನಡೆಸಿತು ಎಂಬುದರ ಮೇಲೆ ಬೆಳಕು ಚೆಲ್ಲುತ್ತದೆ. ಈ ಪುಸ್ತಕ ಸಾರ್ವಜನಿಕ ಜೀವನ ನಡೆಸುವವರಿಗೆ ಪ್ರೇರಣೆ ಮತ್ತು ಮಾರ್ಗದರ್ಶನವಾಗಿದೆ ಎಂದರು. ಬೆಂಗಳೂರು ಚಾಣಕ್ಯ ವಿವಿಯ ಸ್ಕೂಲ್ ಆಫ್ ಲಾ ಡೀನ್ ಪ್ರೊ.ಡಾ.ಚೇತನ ಸಿಂಗಾಯಿ ಕೃತಿಯ ಪರಿಚಯ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಐಐಟಿ ನಿರ್ದೇಶಕ ಪ್ರೊ. ವೆಂಕಪ್ಪಯ್ಯ ದೇಸಾಯಿ, ವಹಿಸಿದ್ದರು. ಧಾರವಾಡ ನಿಸರ್ಗ ಸಂಶೋಧನಾ ಕೇಂದ್ರ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಕೇಂದ್ರದ ಸ್ಥಾಪಕ ಪಿ.ವಿ.ಹಿರೇಮಠ ಹಾಗೂ ಅನೇಕ ಗಣ್ಯರು ಭಾಗವಹಿಸಿದ್ದರು.

...ಜನಪರ ಯೋಜನೆಗಳಿಗೆ ಸ್ಫೂರ್ತಿ

← ಮೊದಲಪುಟದಿಂದ

ಲೈಸೆನ್ಸ್ ರಾಜ್‌ದಿಂದಾಗಿ ಉದ್ಯಮ ಕ್ಷೇತ್ರದಲ್ಲಿ ನಿರಾಶೆ ಆವರಿಸಿತ್ತು. ಜತೆಗೆ ಭ್ರಷ್ಟಾಚಾರ ತಾಂಡವವಾಡುತ್ತಿತ್ತು.

ಇಂತಹ ಪರಿಸ್ಥಿತಿಯಲ್ಲಿ ದೇಶದ ಹಣಕಾಸು ಸಚಿವರಾದ ಪ್ರಧಾನಮಂತ್ರಿಯವರು ಮೊದಲೆರಡು ವರ್ಷಗಳ ಅವಧಿಯಲ್ಲಿಯೇ ಭಾರತ ವನ್ನು ವಿಶ್ವದ ಬಲಾಢ್ಯ ದೇಶಗಳ ಸಾಲಲ್ಲಿ ತಂದು ನಿಲ್ಲಿಸಿದ್ದರು. ಮಂಕಾಗಿ ಕೂತಿದ್ದ ದೇಶದ ಆರ್ಥಿಕತೆ 1991ರ ಬಜೆಟ್‌ನಲ್ಲಿ ಅವರು ಘೋಷಿಸಿದ್ದ ಹೊಸ ಆರ್ಥಿಕ ನೀತಿ ಮತ್ತು ಅದನ್ನು ಅನುಷ್ಠಾನಗೊಳಿಸಿದ ರೀತಿಯಿಂದಾಗಿ ಜಿಗಿದು ಜಿಗಿದು ಓಡತೊಡಗಿತ್ತು.

ಹಣಕಾಸು ಸಚಿವರಾಗಿ ಅವರು ಕೈಗೊಂಡ ಆರ್ಥಿಕ ಸುಧಾರಣಾ ಕ್ರಮಗಳು ಅನೇಕ. ಬ್ಯಾಂಕುಗಳನ್ನು ಸುಧಾರಣೆಗೊಳಪಡಿಸಿದರು, ಬ್ಯಾಂಕ್ ಸಾಲದ ಬಡ್ಡಿದರವನ್ನು ಇಳಿಸಿದರು. ಸರಕಾರದ ಮಂಜೂರಾತಿ-ಅನುಮತಿ ಪಡೆಯುವ ಹಾದಿಯಲ್ಲಿದ್ದ ಕೆಂಪುಪಟ್ಟಿಯನ್ನು ಕಿತ್ತೆಸೆದರು, ಆಯ್ದ ಕ್ಷೇತ್ರಗಳಲ್ಲಿ ಖಾಸಗೀಕರಣಕ್ಕೆ ಬಾಗಿಲು ತೆರೆದರು, ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ಕಲ್ಪಿಸಿದರು. ದೇಶದ ಒಳಗಿನ ಆರ್ಥಿಕ ಚೇತರಿಕೆಯಿಂದಾಗಿ ವಿಶ್ವ ಬ್ಯಾಂಕ್ ಮಾತ್ರವಲ್ಲ ಬೇರೆ ದೇಶಗಳು ಕೂಡ ಸಾಲ ನೀಡಲು ಮುಂದಾದವು. ಉದ್ಯಮಗಳು ಬೆಳೆದು ಉದ್ಯೋಗ ಸೃಷ್ಟಿಯಾಗತೊಡಗಿತು. ಬಡತನದ ರೇಖೆಗಿಂತ ಕೆಳಗಿದ್ದ ದೇಶದ ಒಂದು ದೊಡ್ಡ ಜನವರ್ಗ ಮಧ್ಯಮ ವರ್ಗವಾಗಿ ಪರಿವರ್ತನೆಗೊಂಡಿದ್ದು ಇದೇ ಕಾಲದಲ್ಲಿ.

ಹಣಕಾಸು ಸಚಿವರ ರೀತಿಯಲ್ಲಿಯೇ ಡಾ.ಮನಮೋಹನ ಸಿಂಗ್ ಅವರು ಆಕಸ್ಮಿಕವಾಗಿ ಪ್ರಧಾನ ಮಂತ್ರಿಯಾದವರು. 2004ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಗೆಲುವಿನ ಹಾದಿಯಲ್ಲಿ ಮುನ್ನಡೆಸಿದ್ದ ಸೋನಿಯಾ ಗಾಂಧಿಯವರೇ ಪ್ರಧಾನ ಮಂತ್ರಿ ಆಗುತ್ತಾರೆ ಎಂದು ಇಡೀ ದೇಶ ಕಾಯುತ್ತಿರುವಾಗ, ಸೋನಿಯಾ ಗಾಂಧಿಯವರು ಮನೆ ಬಾಗಿಲಿಗೆ ಬಂದ ಪ್ರಧಾನಿ ಹುದ್ದೆಯನ್ನು ತ್ಯಾಗ ಮಾಡಿ ಆ ಸ್ಥಾನದಲ್ಲಿ ಡಾ.ಮನಮೋಹನ ಸಿಂಗ್ ಅವರನ್ನು ಕೂರಿಸಿದರು. ಇದಕ್ಕಾಗಿಯೇ ಅವರನ್ನು 'ಆ್ಯಕ್ಸಿಡೆಂಟಲ್ ಪ್ರಧಾನಿ' ಎಂದು ಕರೆಯಲಾಗುತ್ತಿತ್ತು. ಇದನ್ನು ಅವರೂ ಒಪ್ಪಿಕೊಂಡಿದ್ದರು.

ಇದರ ಜತೆಯಲ್ಲಿಯೇ ಕೆಲವರು ಅವರನ್ನು 'ರಬ್ಬರ್ ಸ್ಟಾಂಪ್ ಪ್ರಧಾನಿ', 'ದುರ್ಬಲ ಪ್ರಧಾನಿ', 'ಮೌನಿ ಪ್ರಧಾನಿ' ಎಂದೆಲ್ಲ ಟೀಕಿಸಿದ್ದೂ ಉಂಟು. ಆದರೆ ಸತ್ಯ ಸಂಗತಿಯೇನೆಂದರೆ ಮನಮೋಹನ ಸಿಂಗ್ ಮತ್ತು ಸೋನಿಯಾ ಗಾಂಧಿ ಅವರ ನಡುವೆ ಪರಸ್ಪರ ಅರ್ಥ ಮಾಡಿಕೊಂಡ ಅತ್ಯಂತ ಆಪ್ತ ಸಂಬಂಧ ಇತ್ತು. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಸೋನಿಯಾ ಗಾಂಧಿ ಅವರ ಸಹಕಾರ, ಬೆಂಬಲ ಇಲ್ಲದೆ ಹೋಗಿದ್ದರೆ ಮನಮೋಹನ ಸಿಂಗ್ ಅವರು ಇಂತಹ ಸಾಹಸಗಳನ್ನು ಮಾಡಲು ಸಾಧ್ಯವೇ ಇರುತ್ತಿರಲಿಲ್ಲ ಎನ್ನುವುದನ್ನು ಮರೆಯಬಾರದು.

ಮೈತ್ರಿ ಸರಕಾರದಲ್ಲಿದ್ದ ಮಿತ್ರ ಪಕ್ಷಗಳನ್ನು ಸಂಭಾಳಿಸಿಕೊಂಡು ಹೋಗುವ ಜವಾಬ್ದಾರಿಯನ್ನು ಸಂಪೂರ್ಣವಾಗಿ ವಹಿಸಿಕೊಂಡ ಸೋನಿಯಾ ಗಾಂಧಿಯವರು ಮನಮೋಹನ ಸಿಂಗ್ ಅವರು ಯಾವುದೇ ಒತ್ತಡ, ಕಿರಿಕಿರಿ ಇಲ್ಲದೆ ಆಡಳಿತ ನಡೆಸಿಕೊಂಡು ಹೋಗಲು ಅವಕಾಶ ಮಾಡಿಕೊಟ್ಟರು. ಪ್ರಧಾನಿಯಾಗಿ ಮನಮೋಹನ ಸಿಂಗ್ ಅವರು ಕಂಡ ಯಶಸ್ಸಿನಲ್ಲಿ ದೊಡ್ಡ ಪಾತ್ರ ಸೋನಿಯಾ ಗಾಂಧಿಯವರದ್ದೂ ಇದೆ. ಇದನ್ನು ಖುದ್ದು ಮನಮೋಹನ ಸಿಂಗ್ ಅವರೇ ಹಲವು ಬಾರಿ ಹೇಳಿಕೊಂಡಿದ್ದಾರೆ.

ಮನಮೋಹನ ಸಿಂಗ್ ಅವರು ಪ್ರಧಾನಿಯಾಗಿದ್ದ ಕಾಲದಲ್ಲಿ ಜಾರಿಗೆ ಬಂದಿರುವ ಆಹಾರದ ಹಕ್ಕು, ಶಿಕ್ಷಣದ ಹಕ್ಕು ಮತ್ತು ಮಾಹಿತಿ ಹಕ್ಕು ಹಾಗೂ ಉದ್ಯೋಗ ಖಾತರಿ ಯೋಜನೆಗಳು ಸೋನಿಯಾ ಗಾಂಧಿ ಅಧ್ಯಕ್ಷತೆಯ ರಾಷ್ಟ್ರೀಯ ಸಲಹಾ ಸಮಿತಿಯ ಚಿಂತನೆಯ ಕೂಸುಗಳು ಎನ್ನುವುದನ್ನು ಮರೆಯಬಾರದು.

ಹೊಸ ಆರ್ಥಿಕ ನೀತಿಯ ಮೂಲಕ ತೆರೆದುಕೊಂಡ ಉದಾರೀಕರಣ ಮತ್ತು ಜಾಗತೀಕರಣದ ಯುಗದ ಫಲಾನುಭವಿಗಳು ಉದ್ಯಮಿಗಳು ಮತ್ತು ಮೇಲ್ವರ್ಗಕ್ಕೆ ಸೇರಿದವರು ಎಂಬ ಅಭಿಪ್ರಾಯ ನಿಜವಲ್ಲ. ಡಾ. ಮನಮೋಹನ ಸಿಂಗ್ ಅವರು ಕೃಷಿ ಕ್ಷೇತ್ರದ ಸುಧಾರಣೆಗಾಗಿ ಹಲವಾರು ಪ್ರಯತ್ನವನ್ನು ನಡೆಸಿದ್ದರು. ಬೆಳೆಗಳಿಗೆ ಬೆಂಬಲ ಬೆಲೆ ನಿರ್ಧರಿಸಲು ವೈಜ್ಞಾನಿಕವಾದ ಮಾನದಂಡವನ್ನು ರೂಪಿಸಿದ್ದರು. 2008ರಲ್ಲಿ ದೇಶದ ಮೂರು ಕೋಟಿ ರೈತರಿಗೆ ಸಂಬಂಧಿಸಿದ 65,000 ಕೋಟಿ ಬ್ಯಾಂಕ್ ಸಾಲವನ್ನು ಮನ್ನಾ ಮಾಡಿದ ಡಾ.ಮನಮೋಹನ ಸಿಂಗ್ ಅವರು ದೇಶದ ಸಾವಿರಾರು ರೈತರು ಸಾಲದ ಭಾದೆಯಿಂದಾಗಿ ಆತ್ಮಹತ್ಯೆ ಮಾಡುವುದನ್ನು ತಪ್ಪಿಸಿದರು. ಅವರ ನಂತರ ಕೇಂದ್ರ ಸರಕಾರ ಇಲ್ಲಿಯವರೆಗೆ ಒಂದು ರುಪಾಯಿಯಷ್ಟು ರೈತರ ಬ್ಯಾಂಕ್ ಸಾಲವನ್ನು ಮನ್ನಾ ಮಾಡಿಲ್ಲ ಎನ್ನುವುದನ್ನು ಕೂಡ ನಾವು ತಿಳಿದುಕೊಳ್ಳಬೇಕಾಗುತ್ತದೆ.

ನಾನು ಮುಖ್ಯಮಂತ್ರಿಯಾಗಿದ್ದಾಗ ಡಾ.ಮನಮೋಹನ ಸಿಂಗ್ ಅವರು ಪ್ರಧಾನಿಯಾಗಿ ಇದ್ದದ್ದು ನನ್ನ ಭಾಗ್ಯ ಎಂದು ತಿಳಿದುಕೊಂಡಿದ್ದೇನೆ. ಆರ್ಥಿಕ ಕ್ಷೇತ್ರದ ಬಗ್ಗೆ ನನಗಿರುವ ಆಸಕ್ತಿ ಅವರ ಕಡೆ ನನ್ನನ್ನು ಸೆಳೆದಿತ್ತು. 2013ರಲ್ಲಿ ನಮ್ಮ ಸರಕಾರ ಜಾರಿಗೆ ತಂದಿದ್ದ ಅನ್ನಭಾಗ್ಯ, ಕ್ಷೀರಭಾಗ್ಯ, ಕೃಷಿಭಾಗ್ಯ, ಕ್ಷೀರಧಾರೆ ಮೊದಲಾದ ಯೋಜನೆಗಳ ಬಗ್ಗೆ ಅವರ ಅಭಿಪ್ರಾಯ ಪಡೆಯಲು ನಾನು ಉತ್ಸುಕನಾಗಿದ್ದೆ. ಅವರನ್ನು ಭೇಟಿಯಾದ ಸಂದರ್ಭಗಳಲ್ಲಿ ಈ ಯೋಜನೆಗಳ ವಿವರವನ್ನು ಅವರು ಕೇಳಿ ಪಡೆದಿದ್ದರು. 2017ರಲ್ಲಿ ಬೆಂಗಳೂರಿಗೆ ಬಂದಿದ್ದ ಡಾ.ಮನಮೋಹನ ಸಿಂಗ್ ಅವರು ಬಹಿರಂಗ ಸಭೆಯಲ್ಲಿ ನಮ್ಮ ಸರಕಾರದ ಸಾಧನೆಗಳನ್ನು ಗುರುತಿಸಿ ಶಹಬಾಸ್‌ಗಿರಿ ಕೊಟ್ಟಿದ್ದು ನನಗೆ ದೊಡ್ಡ ಪ್ರಶಸ್ತಿ ಸಿಕ್ಕಿದಷ್ಟು ಸಂತಸ ಮತ್ತು ಸಂತೃಪ್ತಿ ನೀಡಿತ್ತು. ಇದು ಇನ್ನಷ್ಟು ಜನಪರ ಯೋಜನೆಗಳನ್ನು ಜಾರಿಗೆ ತರಲು ಆತ್ಮವಿಶ್ವಾಸವನ್ನು ಹುಟ್ಟಿಸಿತ್ತು.

ಸಿಂಗ್ ಅವರು ಮಾತಿಗಿಂತ ಕೃತಿಗೆ ಹೆಚ್ಚು ಮಹತ್ವ ಕೊಟ್ಟವರು. ಸುಳ್ಳು-ಕಪಟತನಗಳಿಲ್ಲದ ಅವರ ಮಾತುಗಳು ಹೃದಯ ದಿಂದ ಬರುತ್ತಿತ್ತು. ಮಾತು ಕಡಿಮೆಯಾದರೂ ಹೇಳಲೇಬೇಕಾದ ವಿಷಯಗಳನ್ನು ವ್ಯಕ್ತಪಡಿಸಲು ಹಿಂಜರಿಯುತ್ತಿರಲಿಲ್ಲ.. ತಮ್ಮ ಹತ್ತು ವರ್ಷಗಳ ಪ್ರಧಾನಮಂತ್ರಿ ಹುದ್ದೆಯಲ್ಲಿ ಮನಮೋಹನ ಸಿಂಗ್ ಅವರು ನೂರಕ್ಕೂ ಹೆಚ್ಚು ಪತ್ರಿಕಾಗೋಷ್ಠಿಗಳನ್ನು ನಡೆಸಿರುವುದೇ ಇದಕ್ಕೆ ಸಾಕ್ಷಿ.

ಹೊಸಪೇಟೆ: ಬಾಣಂತಿ ಸಾವು

ಹೊಸಪೇಟೆ: ಇಲ್ಲಿನ ತಾಯಿ ಮತ್ತು ಮಗು ಆಸ್ಪತ್ರೆಯಲ್ಲಿ ಡಿ.20ರಂದು ಸಿಸೇರಿಯನ್ ಮೂಲಕ ಹೆಣ್ಣು ಮಗುವನ್ನು ಹೆತ್ತಿದ್ದ ಐಶ್ವರ್ಯಾ (20) ಎಂಬುವರು ಕೊಪ್ಪಳದ ಜಿಲ್ಲಾ ಆಸ್ಪತ್ರೆಯಲ್ಲಿ ಗುರುವಾರ ಮೃತಪಟ್ಟಿದ್ದಾರೆ.

ಸಂಡೂರಿನಲ್ಲಿ ವಾಸವಿದ್ದ ಐಶ್ವರ್ಯಾ ಅವರ ತವರುಮನೆ ಇಂಗಳಗಿಯಲ್ಲಿದೆ. ಹೀಗಾಗಿ ಎಂಸಿಎಚ್‌ನಲ್ಲಿ ಅವರಿಗೆ ಹೆರಿಗೆ ಆಗಿದೆ. ವಾಂತಿ, ಬೇಧಿ ಆಗಿದ್ದರಿಂದ ಅವರನ್ನು ಡಿ.24ರಂದು ಕೊಪ್ಪಳ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಗುರುವಾರ ಬೆಳಿಗ್ಗೆ ಅವರು ಮೃತಪಟ್ಟಿದ್ದಾರೆ.

ಸಾವಿಗೆ ಏನು ಕಾರಣ ಎಂಬುದನ್ನು ತಿಳಿಯಲಾಗುತ್ತಿದೆ ಎಂದು ವಿಜಯನಗರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಲ್. ಆರ್.ಶಂಕರ್ ನಾಯ್ಕ್ ತಿಳಿಸಿದ್ದಾರೆ.

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಗ್ರಾ.ಕು.ನೀ ಮತ್ತು ನೈರ್ಮಲ್ಯ ಇಲಾಖೆ, ನ್ಯಾಯಾಲಯದ ರಸ್ತೆ
ಚಾಮರಾಜನಗರ ವಿಭಾಗ, ಚಾಮರಾಜನಗರ,
Phone:Office & EE –08226–226054
E-mail: eerdwsd.chn2014@gmail.com

ಟೆಂಡರ್ ಪ್ರಕಟಣೆ ಸಂಖ್ಯೆ :10/2024–25, ದಿನಾಂಕ : 23.12.2024

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಚಾಮರಾಜನಗರ ವಿಭಾಗ, ಚಾಮರಾಜನಗರ ರವರಿಂದ 2024-25 SBM Scheme Construction Of 3 KLD FSTP For Bandalli Village in Hanur Taluk, Chamaragnagar District Estimated Cost :-89.16 Lakhs and Supply of Equipments to PWM Units under SBM Scheme (Call-3) Estimated Cost:- 29.00 Lakhs. ಲಕ್ಷ ಮಿತಿಯೊಳಗೆ ಇರುತ್ತದೆ., ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 3ನೇ ದರ್ಜೆ ಮತ್ತು ಮೇಲ್ಪಟ್ಟ, ಎಲ್ಲಾ ಇ–ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ 2.0 kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸುವ ದಿನಾಂಕ ಮತ್ತು ಸಮಯ. 24.12.2024 ಬೆಳಿಗ್ಗೆ 11.00 ನಂತರ, ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ 31.12.2024 ಸಂಜೆ 17.00, ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ, 01.01.2025, ಬೆಳಿಗ್ಗೆ 11.30 ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.

ಸಹಿ/–
ಕಾರ್ಯಪಾಲಕ ಇಂಜಿನಿಯರ್,
ಗ್ರಾ.ಕು.ನೀ & ನೈರ್ಮಲ್ಯ ಇಲಾಖೆ,
ಚಾಮರಾಜನಗರ ವಿಭಾಗ,
ಚಾಮರಾಜನಗರ,

ಸಂ:ವಾಸಾಸಂಇ:ಚಾನಗರ:507:2024–25

ವಿಶ್ವವಾಣಿ ಆರಾಮ
@vishwavaninews
ಬೆಂಗಳೂರು
ಶನಿವಾರ
28 | 12 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತಾ ವಿಹಾರ

ನುಡಿಯಲ್ಲಿ ಕೊಂಕುತನಬೇಡ

ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು, ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು, ನುಡಿದರೆ ಲಿಂಗಮೆಚ್ಚಿ ಹೌದೌದೆನಬೇಕು' ಎಂದು ಬಸವಣ್ಣನವರು ನುಡಿಯ ಬಗ್ಗೆ ಸೊಗಸಾಗಿ ತಿಳಿಸುತ್ತಾರೆ. ನುಡಿಯು ಕೇಳುಗರಿಗೆ ಅನುಕ್ಷಣ ಸಂತಸವನು ತರಬೇಕೆ ಹೊರತು ಕರ್ಕಶತೆಯನ್ನಲ್ಲ. ನುಡಿಯಲ್ಲಿ ವ್ಯಂಗ್ಯನುಡಿಯು ಇದೆ ಆದರೆ ಆ ನುಡಿಯು ತರವಲ್ಲ. ಹಾಗೆಯೆ ಇಂತಹ ನುಡಿಯಿಂದ ನಿಮ್ಮ ವ್ಯಕ್ತಿತ್ವಕ್ಕೆ ಕುಂದು ಬರಬಹುದು.

ಕೆಲವೊಬ್ಬರ ನುಡಿ ಹೀಗಿರುತ್ತದೆಂದರೆ ಅವರ ನುಡಿಯಿಂದಲೆ ಕಲಹಗಳು ಸೃಷ್ಟಿಯಾಗುತ್ತವೆ ನುಡಿಯಿಂದಲೆ ನಡೆಯನ್ನು ಅರಿಯಬೇಕು ಎಂಬ ಗಾದೆಯಿದೆ. ಹಲವರಿಗೆ ಇದು ರೂಢಿಯಾಗಿದ್ದು ಅವರ ನುಡಿ ವ್ಯಂಗ್ಯವಾಗಿರುತ್ತದೆ. ಒಬ್ಬ ವ್ಯಕ್ತಿಯಲ್ಲಿ ಅಸೂಯೆ ಭಾವ ಮೂಡಿದಾಗ ಅಥವಾ ನ್ಯೂನತೆಯನು ಕಂಡಾಗ ವ್ಯಂಗ್ಯ ನುಡಿಗಳು ಉದ್ಭವಿಸುತ್ತದೆ. ಕೊಂಕುನುಡಿಗಳಿಂದ ಏನೇನೋ ಆಗಬಹುದು, ಮನಸಿನಲಿ ಖಿನ್ನತೆ ಮೂಡಬಹುದು, ಸ್ನೇಹ ಒಡೆಯಬಹುದು, ಪ್ರೀತಿಯು ಮುರಿಯಬಹುದು, ಸಾವು ಕೂಡಾ ಸಂಭವಿಸಬಹುದು ನಾವಾಡುವ ಮಾತು ಖುಷಿ ಕೊಡಬೇಕೆ ಹೊರತು ದುಃಖವನ್ನಲ್ಲ. ಇರುವಾಗ ವ್ಯಂಗ್ಯನುಡಿಯಾಡುತ್ತ, ಪರರನ್ನು ಛೇಡಿಸುತ್ತ, ಜೀವನವನ್ನು ಕಳೆಯುವ ಮನುಜರೆ ಹೆಚ್ಚು ಇದು ದುರುಳತನವನ್ನು

ತೋರುತ್ತದೆ ಹೊರತು ಉದಾತ್ತತನವನ್ನಲ್ಲ.

ನುಡಿಯಲ್ಲಿ ವ್ಯಂಗ್ಯತನ ಪ್ರತಿಕ್ಷಣ ಮಾನಸಿಕ ಸ್ಥಿತಿಯನ್ನು ಕುಗ್ಗಿಸಿ ಅಧೋಮಟ್ಟಕ್ಕೆ ಒಯ್ಯುತ್ತದೆ. ಹೀಗಾದಾಗ ಆ ವಾತಾವರಣ ನಿತ್ಯವೂ ನರಕದಂತೆ ಕಾಣುತ್ತದೆ. ಉದಾಹರಣೆಗೆ ಬೆಸಗರಹಳ್ಳಿ ರಾಮಣ್ಣರು ಬರೆದ ಗಾಂಧಿ ಎಂಬ ಕಥೆಯಲ್ಲಿ ಗಾಂಧಿ ಎಂಬ ಹುಡುಗನು ನಗೆಪಾಟಲಿಗೆ ಈಡಾಗಿ ಸಾವನ್ನಪ್ಪುತ್ತಾನೆ ಕಾರಣ ವೈದ್ಯರಾದವರು ರೋಗಿಯನ್ನು ಹಾಗೂ ರೋಗಿಯ ರೋಗ ನೋಡಬೇಕೆ ಹೊರತು ಹೆಸರನ್ನಲ್ಲ. ಈ ಕಥೆಯಲ್ಲಿ ರೋಗಿಯು ಎಲ್ಲರ ಕೊಂಕುನುಡಿಗಳಿಗೆ ಬಲಿಯಾಗಿ ಸಾಯುವ ಹೃದಯವಿದ್ರಾವಕ ಘಟನೆಯಿದೆ.

ಮನಸ್ಸನ್ನು ಘಾಸಿಗೊಳಿಸುವ ಕೊಂಕುನುಡಿ ಆಡುವದರಿಂದ ವಿಷಮ ವಾತಾವರಣ ಸೃಷ್ಟಿಯಾಗುವುದೆ ಹೊರತು ಸುಖದ ವಾತಾವರಣವಂತೂ ಅಲ್ಲ. ಈ ಕೊಂಕುನುಡಿಯಿಂದ ಬರುವುದಾದರೂ ಏನು? ಆಸ್ತಿಯೆ? ಐಶ್ವರ್ಯವೆ? ಹಣವೇ? ಭೂಮಿಯೆ? ಏನು ಇಲ್ಲವೆಂದ ಪರರ ಮನನೋಯಿಸಿ ನರಕದಲಿ ತೊಳಲಿ ಬಳಲಿ ಕೊನೆಗೆ ಪಶ್ಚಾತ್ತಾಪದಿಂದ ನೊಂದುಕೊಂಡು ನಾನು ಹಾಗೆ ಮಾತನಾಡಬಾರದಿತ್ತು ಎಂದು ದುಃಖಿಸುವ ಬದಲು ಪ್ರೀತಿಯ ನುಡಿಯಾಡಿ ಮನವಗೆಲ್ಲುವ ಕಾರ್ಯವನ್ನು ಮಾಡೋಣ. ಕೊಂಕುನುಡಿಯಿಂದ ಮನುಷ್ಯ ದೊಡ್ಡವನಾಗುವುದಿಲ್ಲ ದಡ್ಡನಾಗುತ್ತಾನೆ ಎಂಬ ನುಡಿಯ ನೆನಪಿಸುತ್ತ ಇರುವಷ್ಟು ದಿನ ಹಿತನುಡಿಯ ಆಡುತ್ತ ಬದುಕೋಣ.

• ಶಂಕರಾನಂದ ಹೆಬ್ಬಾಳ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ನಮ್ಮ ಕುಟುಂಬದ ಉಳಿವು ನಮ್ಮ ಕೈಯಲ್ಲೇ!

• ಸಂತೋಷ್ ರಾವ್ ಪೆರ್ಮುಡ

ಮನುಷ್ಯರಲ್ಲಿ ಒಂದು ಕುಟುಂಬವು ರಕ್ತ ಸಂಬಂಧ, ಹೊಂದಾಣಿಕೆ ಅಥವಾ ಸಹವಾಸದಿಂದ ಒಟ್ಟಾಗಿ ವಾಸಿಸುತ್ತಿರುವ ಜನರ ಒಂದು ಗುಂಪು ಎನ್ನಬಹುದು. ಕುಟುಂಬವು ಸಮಾಜ ವ್ಯವಸ್ಥೆಯಲ್ಲಿ ಬಹಳ ಮುಖ್ಯ ವಾದ ಒಂದು ಅಂಗವಾಗಿದ್ದು, ಬಹಳ ಸಂದರ್ಭಗಳಲ್ಲಿ ಮಕ್ಕಳು ಜನರ ಜೊತೆಗೆ ಬೆರೆತು ಸಾಮಾಜಿಕವಾಗಿ ಸಮರ್ಥರಾಗಲು ಕುಟುಂಬವು ಒಂದು ಅಗತ್ಯ ವ್ಯವಸ್ಥೆ ಯಾಗಿ ನಿಲ್ಲುತ್ತದೆ. ಭಾರತದ ಇತಿಹಾಸ ಮತ್ತು ಇಲ್ಲಿನ ಸಂಸ್ಕೃತಿಯನ್ನು ವಿಮರ್ಷಿಸಿದಾಗ ಕುಟುಂಬ ವ್ಯವಸ್ಥೆಯನ್ನು ಅವಿಭಕ್ತ ಹಾಗೂ ವಿಭಕ್ತ ಕುಟುಂಬ ಎಂದು ವರ್ಗೀಕರಣ ಮಾಡಬಹುದು. ವಿದೇಶಿ ಸಂಸ್ಕೃತಿಯ ಅನುಕರಣೆಯ ಕಾರಣದಿಂದ (ಲಿವಿಂಗ್ ಟುಗೆದರ್ ವ್ಯವಸ್ಥೆಯ ಕಾರಣದಿಂದ) ಇತ್ತೀಚಿಗೆ ಏಕ ಪೋಷಕ (ಸಿಂಗಲ್ ಪೇರೆಂಟ್) ಕುಟುಂಬ ವ್ಯವಸ್ಥೆಯೂ ನಿರ್ಮಾಣ ಆಗುತ್ತಿದೆ.

ಚಲನಚಿತ್ರದಲ್ಲಿ ಕುಟುಂಬ

ಈ ಎಲ್ಲ ಕಾರಣದಿಂದ ಶೀಘ್ರದಲ್ಲೇ ಇಂತಹ ಕುಟುಂಬ ವ್ಯವಸ್ಥೆಯನ್ನು ಪೂರ್ತಿಯಾಗಿ ಕಳೆದುಕೊಂಡರೆ ಅತಿಶಯೋಕ್ತಿ ಆಗಲಾರದು. ಅಷ್ಟೇ ಅಲ್ಲದೆ ಬಹುತೇಕ ಜನರಿಗೆ ಕೂಡು ಕುಟುಂಬ ವ್ಯವಸ್ಥೆಯೂ ಹಿಡಿಸದೇ ಇರುವುದು ಮನುಕುಲದ ದೌರ್ಭಾಗ್ಯ. ಕುಟುಂಬಗಳು ಇದ್ದರೂ ಅವುಗಳು ಕೇವಲ ತೋರಿಕೆಗೆ ಮತ್ತು ಪ್ರತಿಷ್ಠೆಗೆ ಅಷ್ಟೇ ಎನ್ನುವಂತೆ ಇದೆ. ಮುಂದಿನ ದಿನಗಳಲ್ಲಿ ಕುಟುಂಬ ವ್ಯವಸ್ಥೆಗಳನ್ನು ಚಲನಚಿತ್ರಗಳಲ್ಲಿ ಮತ್ತು ಫೋಟೋಗಳಲ್ಲಷ್ಟೇ ನೋಡುವ ದಿನಗಳೂ ಬರಬಹುದು. ಹಲವಾರು ಕಾರಣಗಳಿಂದ ಯುವಜನ ಮದುವೆಗೆ ಮನಸ್ಸು ಮಾಡದೇ ಇದ್ದು, ವಯಸ್ಸು ಮೂವತ್ತೊಂದು ದಾಟಿದರೂ ಮದುವೆಯ ಬಗ್ಗೆ ಮನೆಯಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಕಳೆದ 30-40 ವರ್ಷಗಳಿಂದ ಸಂಸಾರವನ್ನು ನಿರ್ವಹಣೆ ಮಾಡಿದ ಕೆಲ ಹಿರಿಯರು ಕುಟುಂಬದ ಜಂಜಾಟಗಳಿಂದ ಬೇಸತ್ತು, ಈ ಕುಟುಂಬ ವ್ಯವಸ್ಥೆಯೇ ಸಾಕಪ್ಪಾ ಎಂದು ನೇರವಾಗಿ ಮಕ್ಕಳಿಗೆ ಹೇಳುತ್ತಿದ್ದಾರೆ.

ಸೋಲುತ್ತಿರುವ ಕುಟುಂಬಗಳು

ಆರ್ಥಿಕತೆಯ ಅವಸರ ಮತ್ತು ವ್ಯತ್ಯಾಸಗಳನ್ನು ಪರಸ್ಪರ ಇನ್ನೊಬ್ಬರಿಗೆ ಹೋಲಿಕೆ ಮಾಡಿಕೊಳ್ಳುವುದರಿಂದ ಕುಟುಂಬ ಸೋಲುತ್ತಿದೆ. ಮನುಷ್ಯತ್ವಕ್ಕೆ ಮೌಲ್ಯ ಕಡಿಮೆ ಆಗಿದ್ದು, ಒಬ್ಬರು ಇನ್ನೊಬ್ಬರನ್ನು ಕಂಡರೆ ಬೇಜಾರು ಆಗುತ್ತಿದ್ದಾರೆ. ಕೌಟುಂಬಿಕ ಸಮಸ್ಯೆಗಳನ್ನು ಸರಿಪಡಿಸಲು ಮಧ್ಯಸ್ಥಿಕೆ ವಹಿಸುವ ಮೌಲ್ಯಯುತ ಹಿರಿಯರು ಇಲ್ಲವಾಗಿದ್ದು, ಹಿರಿಯರ ಮಾತಿಗೆ ಮತ್ತು ಅನುಭವಕ್ಕೆ ಬೆಲೆ ಇಲ್ಲದಾಗಿದೆ. ಹೀಗಾಗಿ ಕಿರಿಯರು ಸ್ವೇಚ್ಛೆಯಿಂದ ಬದುಕುತ್ತಿದ್ದಾರೆ. ಕುಟುಂಬದ ನಿರ್ವಹಣೆಯೂ ಒಂದು ಕಲೆಯಾಗಿದ್ದು, ಆ ಕಲೆ ಎಲ್ಲರಲ್ಲೂ ಇಲ್ಲದೇ ಇರುವುದರಿಂದ ಕೂಡ ಕುಟುಂಬ ವ್ಯವಸ್ಥೆ ತಲೆಕೆಳಗಾಗಿದೆ.

ನಾನು ನಾನೇ!

ಮನುಷ್ಯನ ವರ್ತನೆಗೆ ಒಂದು ಮಿತಿ ಎನ್ನುವುದು ಇಲ್ಲದೇ ಇರುವುದರಿಂದ ಎಲ್ಲರೊಂದಿಗೂ ಒರಟಾಗಿ ಪ್ರವರ್ತಿಸುತ್ತಿದ್ದಾನೆ. ನಾನು, ನನ್ನ ಹೆಂಡತಿ ಅಥವಾ ಗಂಡ ಎನ್ನುವ ಸಿದ್ಧಾಂತವು ಹೋಗಿ, ನಾನೇ ನಾನು, ನಾನು ನಾನೇ ಎನ್ನುವ ಸಿದ್ಧಾಂತ ಈಗ ಇದೆ. ಕುಟುಂಬದ ಮಕ್ಕಳಿಗೆ ಮದುವೆ ಆಗುತ್ತಿದ್ದಂತೆ ಬೇರೆಯೇ ಮನೆ ಮಾಡುವುದು ಇಂದು ಪದ್ಧತಿ ಆಗಿಬಿಟ್ಟಿದೆ. ಮದುವೆಯಾದ ಮಗ ಮತ್ತು ಸೊಸೆಯನ್ನು ತಮ್ಮ ಮನೆಯಲ್ಲೇ ಇಟ್ಟುಕೊಳ್ಳಲು ಭಯಪಡುವ ಸನ್ನಿವೇಶ ಇದೆ. ನಂತರ ಜಗಳ ಆಗುವುದಕ್ಕಿಂತ ಈಗಲೇ ದೂರವಾಗುವುದು ಉತ್ತಮ ಎನ್ನುವ ಭಾವನೆ ಇದೆ. ಕುಟುಂಬದ ಮೌಲ್ಯಗಳು ಕಟ್ಟುಪಾಡುಗಳಿಗೆ ಹೆಚ್ಚಿನ ಮೌಲ್ಯಗಳು ಇಲ್ಲವಾಗಿದ್ದು, ಮುಂದಕ್ಕೆ ತಮಗೆ ಇಷ್ಟ ಬಂದಂತೆ ಬದುಕುವ ದಿನಗಳು ಬರಲಿವೆ.

> **ನಾನು, ನನ್ನ ಹೆಂಡತಿ ಅಥವಾ ಗಂಡ ಎನ್ನುವ ಸಿದ್ಧಾಂತವು ಹೋಗಿ, ನಾನೇ ನಾನು, ನಾನು ನಾನೇ ಎನ್ನುವ ಸಿದ್ಧಾಂತ ಈಗ ಇದೆ. ಕುಟುಂಬದ ಮಕ್ಕಳಿಗೆ ಮದುವೆ ಆಗುತ್ತಿದ್ದಂತೆ ಬೇರೆಯೇ ಮನೆ ಮಾಡುವುದು ಇಂದು ಪದ್ಧತಿ ಆಗಿಬಿಟ್ಟಿದೆ.**

ನೈಜ ಬಾಂಧವ್ಯ ಇಲ್ಲ

ಅಣ್ಣ ತಮ್ಮ, ಅಣ್ಣ ತಂಗಿ, ಅಕ್ಕ ತಮ್ಮ, ಅಕ್ಕ ತಂಗಿ ಮತ್ತು ಗಂಡ-ಹೆಂಡತಿ ಮಧ್ಯೆ ಬಲವಾದ ಸಂಬಂಧಗಳು ಇಲ್ಲದಾಗಿದೆ. ಇನ್ನೂ ಕೆಲವು ದಿನಗಳ ನಂತರ ಈ ಸಂಬಂಧಗಳು ಪೂರ್ತಿ ಇರುವ ಸಾಧ್ಯತೆ ಕಡಿಮೆ. ಡಿಜಿಟಲ್ ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಇರುವಂತಹ ಸಂಬಂಧ, ಬಾಂಧವ್ಯಗಳೇ ನೈಜ ಎನ್ನುವ ತಪ್ಪು ಕಲ್ಪನೆಯಲ್ಲಿ ಬದುಕುತ್ತಿರುವ ಕುಟುಂಬದ ಸದಸ್ಯರು, ಕುಟುಂಬದಲ್ಲಿ ಯಾರದ್ದಾದರೂ ಮರಣ ಆದರೆ ಅಲ್ಲಿಗೆ ಹೋಗಿ ಕುಟುಂಬದ ಸದಸ್ಯರ ಜತೆಗೆ ಇರುವುದು ಹಾಗಿರಲಿ, ಒಂದು ಆಕರ್ಷಣೆಯ ಮೆಸೇಜ್‌ನ್ನೂ ಹಾಕುವುದಿಲ್ಲ, ಕೇವಲ್ಕಐಕಎಂದು ಸಾಮಾಜಿಕ ಜಾಲತಾಣದಲ್ಲಿ ಹಾಕಿ ಸುಮ್ಮನೆ ಇರುತ್ತಾರೆ. ಅತ್ತ ಶವ ಸಾಗಿಸಲು 4 ಜನನೂ ಇರದಂತಹ ಪರಿಸ್ಥಿತಿ ಇದೆ.

ಮೌಲ್ಯ ಕಟ್ಟಿಕೊಡಬೇಕು!

ಆಧುನಿಕ ಜೀವನಕ್ಕೆ ಮನುಷ್ಯ ಹೊಂದಿಕೊಂಡಂತೆ ಕುಟುಂಬಗಳು ಸಣ್ಣದಾಗುತ್ತಾ ಇವೆ. ಬಾಲ್ಯದಲ್ಲಿ ಮಕ್ಕಳನ್ನು ಪ್ರೀತಿಯಿಂದ ನೋಡಿಕೊಳ್ಳುವ ತಂದೆ ತಾಯಿಯನ್ನು ವೃದ್ಧಾಪ್ಯದಲ್ಲಿ ಆಶ್ರಮಕ್ಕೆ ದೂಡುವ ಮಕ್ಕಳಿಗೆ ಕುಟುಂಬದ ಮಹತ್ವವನ್ನು ತಿಳಿಸಿಕೊಡಬೇಕು. ಮಕ್ಕಳಿಗೆ ಮಾನವೀಯತೆಯ ಪಾಠ ಹೇಳಿಕೊಟ್ಟು, ಸಮಾಜ ವ್ಯವಸ್ಥೆಯ ಮೇಲೆ ನಂಬಿಕೆ, ನೈತಿಕತೆ ಎಂಬ ಹಸಿರನ್ನು ಮಕ್ಕಳ ಹೃದಯದಲ್ಲಿ ಬಿತ್ತಬೇಕು. ಕುಟುಂಬಗಳಲ್ಲಿ ಛಿದ್ರ ಆಗುತ್ತಿರುವ ಕೌಟುಂಬಿಕ ಮೌಲ್ಯ, ಕಟ್ಟುಪಾಡುಗಳನ್ನು ಮತ್ತೆ ಒಟ್ಟುಗೂಡಿಸುವ ಜವಾಬ್ದಾರಿ ಕುಟುಂಬದ ಪ್ರತಿಯೊಬ್ಬ ಹಿರಿಯರ ಮೇಲಿದೆ. ಇಲ್ಲದೇ ಇದ್ದರೆ ನಮ್ಮ ಮಕ್ಕಳ ಭವಿಷ್ಯವನ್ನು ನಾವೇ ಹಾಳು ಮಾಡಿ ಭವ್ಯ ಭಾರತದ ಸಂಸ್ಕೃತಿಯನ್ನು ಅಳಿಸಿ ಹಾಕಿದಂತೆ ಆಗುತ್ತದೆ.

ಕುಟುಂಬ ವ್ಯವಸ್ಥೆ ಕುಸಿಯಲು ಕಾರಣಗಳು

- ಮನುಷ್ಯನ ಅತಿಯಾದ ಬುದ್ಧಿವಂತಿಕೆ ಮತ್ತು ಹಣದಿಂದ ಎಲ್ಲವನ್ನೂ ಪಡೆಯಬಲ್ಲೆ ಎಂಬ ಹುಸಿ ನಂಬಿಕೆ.
- ಕುಟುಂಬದ ಸದಸ್ಯರ ನಡುವೆ ನಡೆಯುವ ಸಣ್ಣಪುಟ್ಟ ತಪ್ಪುಗಳನ್ನೂ ಸಹಿಸುವ ಸಹನೆ ಇಲ್ಲದಿರುವುದು.
- ಕುಟುಂಬ ವ್ಯವಸ್ಥೆಯ ಒಳಗೆ ಎಲ್ಲರೂ (ಹಿರಿಯರು, ಕಿರಿಯರು) ಸಮಾನರು (ಎಲ್ಲರೂ ಸ್ವತಂತ್ರರು) ಎನ್ನುವ ವಿಚಿತ್ರ ಭಾವನೆ ಬೆಳೆಯುತ್ತಿರುವುದು.
- ದಿನದಲ್ಲಿ ಕನಿಷ್ಠ ಒಮ್ಮೆಯಾದರೂ ಕುಟುಂ ಬದ ಸರ್ವ ಸದಸ್ಯರು, ಮಕ್ಕಳು ಎಲ್ಲರೂ ಒಟ್ಟಿಗೆ ಕುಳಿತು ಮಾತನಾಡದೆ ಇರುವುದು.
- ಸದಾ ಮನೋರಂಜನೆಯಲ್ಲೇ ಮುಳುಗಿದ್ದು, ಸೆಲೆಬ್ರಿಟಿಗಳ ಜೀವನಶೈಲಿಯ ಬಗ್ಗೆಯೇ ಚರ್ಚಿಸುತ್ತಿರುವ ಸದಸ್ಯರು ಮನೆಯ ಸದ ಸ್ಯರು ಹೇಗಿದ್ದಾರೆ? ಏನು ಮಾಡುತ್ತಿದ್ದಾರೆ? ಎಂದು ತಿಳಿದುಕೊಳ್ಳದೆ ಇರುವ ದುಸ್ಥಿತಿ ಬಂದಿದೆ.
- ಸಣ್ಣಪುಟ್ಟ ವಿಚಾರಗಳಿಗೂ ಕುಟುಂಬದ ಸದ ಸ್ಯರ ಜೊತೆಗೆ ಜಗಳ ಮಾಡಿಕೊಂಡು ಆಪ್ತ ರನ್ನು ದೂರ ಮಾಡಿಕೊಳ್ಳುತ್ತಾ ಇರುವುದು.
- ಹೊರಗಿನ ಸದಸ್ಯರ ಕೆಟ್ಟ ಮತ್ತು ಆಕರ್ಷಕ ಮಾತುಗಳಿಂದ ಇಡೀ ಕುಟುಂಬವೇ ಒಡೆದುಹೋಗುತ್ತಿದೆ.
- ಆರ್ಥಿಕ ಸಮಸ್ಯೆಗಳ ಕಾರಣದಿಂದ ಮನೆಯ ಹಿರಿಯ ಸದಸ್ಯರು ದೃಢವಾಗಿ, ಬಲವಾಗಿ ಮತ್ತು ಸರಿಯಾಗಿ ಕುಟುಂಬ ನಿರ್ವಹಣೆ ಮಾಡದೆ ಇರುವುದು.
- ಮನೆಯಲ್ಲಿ ಗಂಡ ಹೆಂಡತಿ (ತಂದೆ-ತಾಯಿ) ಸಣ್ಣಪುಟ್ಟ ವಿಚಾರಗಳಿಗೂ ಜಗಳ ಮಾಡು ವುದರಿಂದ ಮನೆಯ ಸದಸ್ಯರಿಗೆ ಆತಂಕ ಉಂಟುಮಾಡಿದೆ.
- ಎಲ್ಲ ಕುಟುಂಬಗಳ ಸದಸ್ಯರ ನಡುವೆ ನಿತ್ಯ ನಡೆಯುವ ಜಗಳ ಮತ್ತು ಹೊಡೆದಾಟ ಗಳನ್ನು ನೋಡಿ ಕುಟುಂಬ ವೆಂದರೆ ಜಿಗುಪ್ಸೆ ಉಂಟಾಗಿರುವುದು.
- ಕುಟುಂಬದ ಸದಸ್ಯರ ನಡುವೆ ಅನ್ಯೋನ್ಯತೆ, ಸಹಬಾಳ್ವೆ, ಪ್ರೀತಿ ಪ್ರೇಮಗಳು ಕುಟುಂಬ ಗಳು ಕಂಡುಬರದೇ ಇರುವುದರಿಂದ ಕೌಟುಂಬಿಕ ವ್ಯವಸ್ಥೆಯ ಮೇಲೆ ನಂಬಿಕೆ ಇಲ್ಲವಾಗಿದೆ.

ನಿಜಾರ್ಥದಲ್ಲಿ ಅನಾಥ ರಕ್ಷಕ!

ಬೇಕಿದೆ ಸಹಾಯ

ಅಲಕ್ಷಿತ ಪ್ರಾಣಿಗಳ ಕುರಿತು ನಿರ್ಲಕ್ಷಿಸುವ ಜನರೇ ವಿಪುಲವಾಗಿರುವ ಇಂದಿನ ಕಾಲಮಾನದಲ್ಲಿ ನಿಸ್ಪೃಹ ಮನದಿಂದ ಪ್ರತಿಫಲಾಪೇಕ್ಷೆಯಿಲ್ಲದೇ ಸ್ವಂತ ಹಣ ವ್ಯಯಿಸಿ ಮೂಕಜೀವಿಗಳನ್ನು ಸಂರಕ್ಷಿಸುತ್ತಿರುವ ಸುಧೀಂದ್ರ ಐತಾಳರಿಗೆ ಈಗ ಆರ್ಥಿಕ ಸಂಕಷ್ಟವೂ ಎದುರಾಗಿದೆ; ಸ್ವಂತ ದುಡ್ಡಿನಿಂದ ಮೂಕ ಪ್ರಾಣಿಗಳನ್ನು ಸಾಕುತ್ತಿದ್ದಾರೆ. ಅವರ ಮೊಬೈಲ್ ನಂ. 9342144063. ಫೋನ್ ಪೇ ನಂ. 9964965868. ಸಾರ್ವಜನಿಕರು ಸಹಾಯ ಮಾಡಿದರೆ, ಅದನ್ನು ಕುಂಟ ಕುದುರೆಗೋ, ಅನಾಥ ಗಂಡು ಕರುವಿಗೋ ಆಹಾರಕ್ಕಾಗಿ ಉಪಯೋಗಿಸುತ್ತಾರಂತೆ.

• ಕೆ.ಶ್ರೀನಿವಾಸರಾವ್. ಹರಪನಹಳ್ಳಿ

ಕುಂದಾಪುರದಿಂದ ಉಡುಪಿಗೆ ಸಾಗುವ ದಾರಿಯಲ್ಲಿ ಸಿಗುವ ಸಾಲಿಗ್ರಾಮದಲ್ಲಿನ ಗುರು ನರಸಿಂಹ ದೇವಳದ ಪಕ್ಕದ ಸಂದಿಯಲ್ಲಿ ಹೋದರೆ ಪಕ್ಷಿಗಳ ಕಲರವ, ಬೌ ಬೌ, ಮಿಯಾಂವ್ ,ಅಂಬಾ... ಸ್ವರಗಳು ನಿಮ್ಮನ್ನು ಸ್ವಾಗತಿಸುತ್ತವೆ. ಕಬ್ಬಿಣದ ಬಾಗಿಲು ತೆರೆದು ಒಳಹೊದರೆ ಒಂದು ಮಿನಿ ಮೃಗಾಲಯವೇ ಎದುರಾಗುತ್ತದೆ. ಅಲ್ಲಿನ ಯಜಮಾನ ಉರಗ ತಜ್ಞ ಸುಧೀಂದ್ರ ಐತಾಳರು ತಮ್ಮ ಎಷ್ಟೇ ಕೆಲಸಗಳಿದ್ದರೂ ಓಡಿ ಬಂದು ಆದರದಿಂದ ಬರಮಾಡಿಕೊಂಡು ತಮ್ಮ ಒಡನಾಡಿ ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುವ ಪ್ರಾಣಿ ಪಕ್ಷಿಗಳನ್ನು ಉತ್ಸಾಹದಿಂದ ತೋರಿಸುತ್ತಾರೆ. ಇಲ್ಲಿನ ವಿಶೇಷವೆಂದರೆ ಶೇ.90 ಜೀವಿಗಳು, ಯಾವ್ಯಾವುದೋ ಸಂದರ್ಭದಲ್ಲಿ ಗಾಯಗೊಂಡು ಇವರ ಮಡಿಲು ಸೇರಿದವು! ಇವರು ಮೂಲತಃ ಗಿಡಮೂಲಿಕೆ ಔಷಧ ತಜ್ಞರು. ಹಾವು ಹಿಡಿಯುವ ಹವ್ಯಾಸ ಹೊಂದಿದ್ದ ಐತಾಳರು ಅಪಾರ ಪ್ರಾಣಿಪ್ರಿಯರು. ರಸ್ತೆಯಲ್ಲಿ ಗಾಯಗೊಂಡು ಗತಪ್ರಾಣರಾದ ಪ್ರಾಣಿಗಳನ್ನು ಎತ್ತಿ ತಂದು ಔಷಧೋಪಚಾರ ಮಾಡಿ ಗುಣಪಡಿಸಿ ಹೊತ್ತುಹೊತ್ತಿಗೆ ಆಹಾರ ನೀಡಿ ಸಲಹುತ್ತಿದ್ದಾರೆ. ಊರಿನವರು ತಮಗೆ ಬೇಡವಾದ ಬೆಕ್ಕಿನಮರಿ, ನಾಯಿಮರಿ, ಗಾಯಗೊಂಡ ಕೋಳಿ, ಹಕ್ಕಿಗಳು, ಹಂಸ, ಹಾವು, ಮಂಗ, ಕುದುರೆ, ಕುರಿ, ಮಲೆನಾಡ ಗಿಡ್ಡ ಕರುಗಳು ಹೀಗೆ ಎಲ್ಲವನ್ನೂ ತಂದು ಇವರಿಗೆ ಒಪ್ಪಿಸಿ ನಿರಾಳರಾಗುತ್ತಾರೆ. ಎಲ್ಲಿಯೇ ಹಾವು ಕಂಡರೂ ತಕ್ಷಣ ಫೋನಾಯಿಸುತ್ತಾರೆ.

ಕುಂಟು ಕುದುರೆ ಕರುಡು ನಾಯಿ

ಹಾಗಾಗಿ ಇವರ ಪ್ರಾಣಿ ಸಂರಕ್ಷಣಾಲಯದಲ್ಲಿ ನೂರಾರು ಬೆಕ್ಕು, ನಾಯಿ, ನೀರುಕಾಗೆ, ಅಂಗವಿಕಲ ಆಕಳುಗಳು, ಕುಂಟು ಕುದುರೆ, ಬಂಗಾಲಿ ಬೆಕ್ಕು, ಕುರಿಮರಿ, ವಿದ್ಯುತ್ ಪ್ರವಹಿಸಿ ಕೈಕಾಲುಗಳನ್ನು ಕಳೆದುಕೊಂಡ ಕೋತಿ, ಕಣ್ಣಿಗೆ ಗುಲಾಬಿ ಮುಳ್ಳು ಚುಚ್ಚಿಸಿಕೊಂಡು ಮನೆಯವರಿಂದ ಹೊರತಳ್ಳಿಸಿಕೊಂಡ ಜರ್ಮನ್ ಶೆಫರ್ಡ್ ನಾಯಿಮರಿ, ರಸ್ತೆಗಳಲ್ಲಿ ಗಾಯಗೊಂಡ ವಿಷದ ಹಾವುಗಳು ಎಲ್ಲವೂ ಗುಣಮುಖರಾಗಿ ಸಂತಸದಿಂದಿವೆ. ವಿಶೇಷವೆಂದರೆ ವಿಷಕಾರಿ ನಾಗರಹಾವು, ಕನ್ನಡಿಹಾವುಗಳ ವಿಷದ ಹಲ್ಲು ಕೀಳದೇ ಚಿಕಿತ್ಸೆ ನೀಡುತ್ತಿದ್ದಾರೆ. ಸಣ್ಣ ಡ್ರಂಗಳಲ್ಲಿ ಅವುಗಳನ್ನು ಇಟ್ಟು ವಾರಕ್ಕೊಂದು ಇಲಿ ಕೊಡುತ್ತಾರೆ. ಅದಕ್ಕಾಗಿ ಊರಿನ ಹಲವರು ತಮ್ಮ ಮನೆಗಳಲ್ಲಿ ಬೋನಿಟ್ಟು ಇಲಿ ತಂದುಕೊಡುತ್ತಾರೆ. ಗಾಯ ಮಾದ ನಂತರ ಆ ಹಾವುಗಳನ್ನು ಅರಣ್ಯಕ್ಕೆ ಬಿಡುತ್ತಾರೆ. ಇವರಲ್ಲಿಯ ಪ್ರಾಣಿ, ಪಕ್ಷಿಗಳನ್ನು ಯಾರಾದರೂ ಸಾಕಲು ಇಚ್ಛಿಸುವವರು ಉಚಿತವಾಗಿ ಕೊಡುತ್ತಾರೆ. ಇವರದು ಪ್ರಾಣಿಗಳ ಕುಟುಂಬ; ಜತೆಯಲ್ಲೇ, ಪತ್ನಿ, ಎರಡು ಗಂಡು ಮಕ್ಕಳು. ಹಿರಿಮಗ 13 ವರ್ಷದ ಧೀರಜ್ ಐತಾಳ್ 5 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು ವಿಷಪೂರಿತವಲ್ಲದ ಹಾವು, ಹೆಬ್ಬಾವುಗಳನ್ನು ತಂದೆಯ ಮಾರ್ಗದರ್ಶನದಲ್ಲಿ ಹಿಡಿಯುವುದನ್ನು ಕಲಿತಿದ್ದಾನೆ. ಒಟ್ಟಾರೆ ಇದುವರೆಗೆ 85 ಹೆಬ್ಬಾವುಗಳನ್ನು ಹಿಡಿದು, ಸುರಕ್ಷಿತ ತಾಣಕ್ಕೆ ಬಿಟ್ಟಿರುವ ಧೀರಜ್ ಐತಾಳರಿಗೆ ರಾಜ್ಯಸರ್ಕಾರ ಈ ಬಾರಿಯ ಶೌರ್ಯ ಪ್ರಶಸ್ತಿ ಕೊಟ್ಟು ಗೌರವಿಸಿದೆ.

ಕಾನೂನಿನ ಕುಣಿಕೆಯಲ್ಲಿ!

2017 ರಲ್ಲಿ ಅರಣ್ಯ ಇಲಾಖೆ, ಪ್ರಾಣಿ ದಯಾಸಂಘ ಒಗ್ಗೂಡಿ ಇವರ ಮೇಲೆ ಪ್ರಾಣಿಹಿಂಸೆ ಆರೋಪಿಸಿ ಒಟ್ಟು 13 ಕೇಸುಗಳನ್ನು ಜಡಿದಿದ್ದರಂತೆ. 18 ದಿನಗಳ ಸೆರೆವಾಸ, ಜಾಮೀನಿನ ಮೇಲೆ ಹೊರಬಂದವರು 13 ವರ್ಷಗಳ ಕಾಲ ಕಾನೂನು ಹೋರಾಟ ಮಾಡಿ,ಕೇಸು ಗೆದ್ದರಂತೆ! 'ನನ್ನ ಉಸಿರಿರುವವರೆಗೂ ಈ ರೀತಿಯ ಘಾಸಿಗೊಂಡ ಪ್ರಾಣಿಗಳ ಸೇವೆ ಮಾಡುತ್ತೇನೆ. ನನ್ನ ಮಗನೂ ಇದೇ ಹಾದಿಯಲ್ಲಿದ್ದಾನೆ' ಎಂದು ಹೆಮ್ಮೆಯಿಂದ ಹೇಳುವ ಐತಾಳರಿಗೆ ಇದೆಲ್ಲವನ್ನೂ ನಿಭಾಯಿಸಲು ಆರ್ಥಿಕವಾಗಿ ಕಷ್ಟವಾಗುತ್ತಿದೆ. ಅದಕ್ಕಾಗಿ ಬೇರೆಯವರ 14 ಎಕರೆ ಭೂಮಿ ಗೇಣಿ ತೆಗೆದುಕೊಂಡು ಬಿತ್ತಿ ಬೆಳೆಯುತ್ತಿದ್ದಾರೆ. ಅಷ್ಟಿಷ್ಟು ಸಿಗುವ ಹಸುವಿನ ಹಾಲು ಮಾರುತ್ತಾರೆ. ಬಾಗಿಲಿನಲ್ಲಿ ಒಂದು ಪೆಟ್ಟಿಗೆ ನೇತುಹಾಕಿ 'ಧನ ಸಹಾಯ ಮಾಡುವುದಿದ್ದರೆ ಮಾಡಿ' ಎಂದು ಬರೆಸಿದ್ದಾರೆ. ಯಾರನ್ನೂ ದೇಹಿ ಎಂದಿಲ್ಲ. ಬರುವ ವೀಕ್ಷಕರಲ್ಲಿ ಕೆಲವರು ಅದರಲ್ಲಿ ತಿಳಿದಷ್ಟು ಹಣ ಹಾಕಿ ಹೋಗುತ್ತಾರೆ. ಆದರೆ, ಇಂದಿಗೂ ಅವರೇ ಹೇಳುವಂತೆ ಅವರ ಬ್ಯಾಂಕ್ ಬ್ಯಾಲೆನ್ಸ್ ಜೀರೋ !

ಆತ್ಮದೊಂದಿಗೆ ಇರುವಂತೆ ವೇದಗಳನ್ನು ಪರಿವರ್ತಿಸು

ಒಮ್ಮೆ ಕೆಲವು ಮಿತ್ರರ ಗುಂಪು ಪ್ರವಾಸ ಹೊರಟಿತ್ತು ಮತ್ತು ಅದು ಒಂದು ದೊಡ್ಡ ನದಿಯನ್ನು ದಾಟಬೇಕಿತ್ತು. ಅವರೊಂದು ದೋಣಿಯನ್ನು ತಯಾರಿಸಿ ನದಿಯನ್ನು ದಾಟಿದರು. ಆ ದೋಣಿಯು ತಮಗೆ ಮುಂದೆ ಉಪಯೋಗಕ್ಕೆ ಬರಬಹುದೆಂದು ತಮ್ಮ ಪ್ರವಾಸದಕ್ಕೂ ಆ ಭಾರವಾದ ದೋಣಿಯನ್ನು ಒಯ್ಯಲು ನಿರ್ಧರಿಸಿದರು. ಇದರಿಂದಾಗಿ ಮುಂದೆ ಎಲ್ಲಿಯೂ ನದಿ ಇಲ್ಲದ್ದರಿಂದ ಅವರ ಪ್ರಯಾಣ ದಾರಿ ತಪ್ಪಿತು. ಇಲ್ಲಿ ನದಿಯು ನೋವಿನ ದ್ವಂದ್ವ ಮತ್ತು ದೋಣಿಯು ಈ ದ್ವಂದ್ವವನ್ನು ಪರಿಹರಿಸಲು ಒಂದು ಸಾಧನ.

ಅದರಂತೆಯೇ ನಿತ್ಯ ಜೀವನದಲ್ಲಿ ನಾವು ಎದುರಿಸಬಹುದಾದ ಅನೇಕ ನೋವಿನ ದ್ವಂದ್ವಗಳಿಂದ ನಮ್ಮನ್ನು ಮುಕ್ತ ಮಾಡಲು ಅನೇಕ ಉಪಕರಣಗಳು ಮತ್ತು ಕ್ರಿಯಾ ವಿಧಿಗಳಿವೆ. ಈ ತಾತ್ಕಾಲಿಕ ನೋವು ದ್ವಂದ್ವಗಳಿಂದ ಮುಕ್ತರಾಗಲು ಅನೇಕ ಕ್ರಿಯಾ ವಿಧಿಗಳನ್ನು ವೇದಗಳಲ್ಲಿ (ಜ್ಞಾನ) ವಿವರಿಸಲಾಗಿದೆ. ಅವುಗಳಲ್ಲಿ ಅನೇಕವು ಲಭ್ಯ ಇವೆ ಮತ್ತು ಇವತ್ತಿಗೂ ಅವುಗಳ ಅನುಷ್ಠಾನ ನಡೆಯುತ್ತಿದೆ. ಆರೋಗ್ಯ, ವ್ಯವಹಾರ,ಕೆಲಸ ಹಾಗೂ ಕೌಟುಂಬಿಕ ಕ್ಷೇತ್ರಗಳಲ್ಲಿ ನಾವು ಸಮಸ್ಯೆಗಳನ್ನು ಎದುರಿಸ ಬೇಕಾದಾಗ ಈ ಕ್ರಿಯಾ ವಿಧಿಗಳನ್ನು ಅನುಸರಿಸುವುದು ತಾರ್ಕಿಕವಾಗಿದೆ ಎಂದು ತೋರುತ್ತದೆ.



ಹಿರಿಯ ಐಎಎಸ್ ಅಧಿಕಾರಿ • ಕೆ.ಶಿವಪ್ರಸಾದ್

ವೇದಗಳ ಬಾಹ್ಯ ಅರ್ಥವನ್ನು ವಿವರಿಸಿ ಈ ಲೋಕ ಹಾಗೂ ಪರಲೋಕದಲ್ಲಿ (ಸ್ವರ್ಗ) ಸುಖದ ಭರವಸೆ ನೀಡುವ ಅವಿವೇಕಿ ಜನರ ಮಾತುಗಳಿಂದ ನಾವು ಮೋಸ ಹೋಗಬಾರದೆಂದು ಕೃಷ್ಣ ಅರ್ಜುನನಿಗೆ ಹೇಳುತ್ತಾನೆ. (2.42, 2.46) ನಾವು ಆತ್ಮಸ್ಥಿತವಾಗಲು ದ್ವಂದ್ವಾತೀತ ಹಾಗೂ ಗುಣಾತೀತ (ನಿರ್ಗುಣ) ಸ್ಥಿತಿಯನ್ನು ತಲುಪುವಂತೆ ಅವನು ಅರ್ಜುನನ್ನು ಪ್ರೇರೇಪಿಸುತ್ತಾನೆ.(2.45) ಒಬ್ಬನಿಗೆ ದೊಡ್ಡ ಸರೋವರವೇ ಸಿಕ್ಕಾಗ ಸಣ್ಣ ಕೊಳದ ಅವಶ್ಯಕತೆ ಇರುವುದಿಲ್ಲ. ಹಾಗೆಯೇ ಆತ ಸ್ಥಿತನಾದವನಿಗೆ ವೇದಗಳು ಸಣ್ಣ ಕೊಳದಂತೆ (2.46).

ನಮ್ಮ ಮುಂದುವರಿದ ಪ್ರಯಾಣದಲ್ಲಿ ದೋಣಿಯ ಭಾರದ ಋಣವನ್ನು ಹೊರದೆ ಇರುವಲ್ಲಿ ನಮ್ಮ ಜಾಣತನವಿದೆ. ಸುಖ ಮತ್ತು ಅಧಿಕಾರವನ್ನು ಪಡೆಯುವಲ್ಲಿ ನಮ್ಮ ಪ್ರಯತ್ನಗಳು ವ್ಯರ್ಥ ಎಂದು ತಿಳಿದ ನಂತರ ವೇದಾತೀತವಾಗುವಂತೆ ಕೃಷ್ಣ ತಿಳಿಸುತ್ತಾನೆ. ಪ್ರಾರಂಭದಲ್ಲಿಯೇ ಇಂದ್ರಿಯ ಗ್ರಹಿಕೆಯು ದ್ವಂದ್ವವನ್ನುಂಟು ಮಾಡುತ್ತದೆ ಹಾಗೂ ಅವು ಅನಿತ್ಯವಾದ್ದರಿಂದ ಅವನು ಸಹಿಸಿಕೊಳ್ಳ ಬೇಕೆಂದು ಕೃಷ್ಣ ಅರ್ಜುನನಿಗೆ ಹೇಳುತ್ತಾನೆ. ಅವುಗಳನ್ನು ಪರಿವರ್ತಿಸಿ ಈ ಅನಿತ್ಯಗಳಿಗೆ ಸಾಕ್ಷಿಯಾಗುವುದನ್ನು ಕಲಿಯಬೇಕೆಂದು ಒತ್ತಿ ಹೇಳುತ್ತಾನೆ. ಅಧಿಕೃತ ಸಂತೋಷವೇ ಇತರ ಸುಖಗಳ ಸಂಯೋಜನೆಗಿಂತ ಶ್ರೇಷ್ಠ ಎಂಬುದರ ಪರವಾಗಿ ಕೃಷ್ಣನಿದ್ದಾನೆ.

ಅಜ್ಜನ ಮುಖದಲ್ಲಿ ಮೂಡಿದ ಮುಗುಳುನಗೆ!

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಬಸ್ಸು ಕಾರವಾರದಿಂದ ಹುಬ್ಬಳ್ಳಿಗೆ ಬರುತ್ತಿತ್ತು. ಯಥಾ ರೀತಿ ಕಂಡಕ್ಟರ್ ಎಂಟ್ರಿ ಹಾಕಿಸಿಕೊಂಡು ರೈಟ್ ಹೇಳಲಾಗಿ ಬಸ್ಸು ಮುಂದೆ ಸಾಗಿತು. ಟಿಕೆಟ್ ಕೊಡುವಾಗ ತನ್ನದೇ ಸೀಟಿನ ಪಕ್ಕದ ಸೀಟಿನಲ್ಲಿ ಕುಳಿತಿದ್ದ ತುಂಬು ವಯಸ್ಸಿನ ಅಜ್ಜನೊಬ್ಬ ತನ್ನ ಹಿರಿಯ ನಾಗರಿಕರ ಗುರುತಿನ ಚೀಟಿ ತೋರಿಸಿ ಟಿಕೆಟು ಕೇಳಿದ. ಅಜ್ಜನಿಗೆ ಟಿಕೆಟ್ ಕೊಟ್ಟು ಇಪ್ಪತ್ತೊಂದು ರುಪಾಯಿ ಕೊಡಲು ಹೇಳಿದ. ಇಪ್ಪತ್ತು ರುಪಾಯಿ ಕಂಡಕ್ಟರ್ ಕೈಗಿತ್ತ ಅಜ್ಜ ಇನ್ನೊಂದು ರುಪಾಯಿ ಕೊಡುವುದಾಗಿ ಸನ್ನೆ ಮಾಡಿದ.

ಕೆಲಸ ಮುಗಿದು ಸೀಟಿನಲ್ಲಿ ಕುಳಿತಾಗ ಕಂಡಕ್ಟರ್ ಗಮನಿಸಿದ, ಅಜ್ಜ ತುಂಬ ವಿಚಲಿತನಾದಂತಿದ್ದ ಗಡಿಬಿಡಿಯಾಗಿ ಏನನ್ನೋ ಹುಡುಕುತ್ತಿದ್ದ. ತನ್ನ ಜೇಬು, ಎಲೆ ಸಂಚಿ, ಜೊತೆಗೆ ತಂದ ಕೈಚೀಲ ಹೀಗೆ ಎಲ್ಲ ಕಡೆ ತಡಕಾಡುತ್ತ ಅಮೂಲ್ಯ ವಸ್ತುವೊಂದನ್ನು ಕಳೆದುಕೊಂಡವನಂತೆ ಚಡಪಡಿಸುತ್ತಿದ್ದ. ಅವನು ತಡೆಯಲಾಗದೆ, 'ಅಜ್ಜಾರ ರೊಕ್ಕಾ ರುಪಾಯಿ, ಏನರ ವಸ್ತು ಕಳಕೊಂಡಿರೇನು? ಇಷ್ಟ್ಯಾಕ ಗಾಬರಿಯಾಗೀರಿ?' ಅಂತ ಕೇಳಿದ. 'ಇಲ್ರಿ, ನಿಮಗ ಒಂದ್ರುಪಾಯಿ ಕೊಡೂದಿತ್ತಲ್ಲ, ಅದನ್ನ ಹುಡಕಾಕತ್ತೀನಿ ಎಲ್ಲೆಲ್ಲೀ ಸಿಗನವಲ್ತು' ಅಂತಂದು ಹುಡುಕುವಿಕೆಯಲ್ಲಿ ಮುಳುಗಿದ. ಕಂಡಕ್ಟರ್‌ಗೆ ನಗಬೇಕೋ ಅಳಬೇಕೋ ತಿಳಿಯದಂತಾಗಿ 'ಅಲ್ಲ ಅಜ್ಜಾರ, ಬರೀ ಒಂದ್ರುಪಾಯಿನ್ನ ಈ ನಮೂನಿ ಗಾಬರಿ ಆಗಿ ಹುಡುಕಾಕತ್ತಿರೆಲಾ. ಸಿಗದಿದ್ರ ಇರಲಿ ಬಿಡ್ರಿ, ಯಾಕಷ್ಟು ಒದ್ದಾಡ್ತಿರಿ' ಅಂದ.

ಅದಕ್ಕವನು 'ಸಾಹೇಬರ, ನಿಮ್ಮ ಸರಕಾರದವರು ಆಗಲೇ ನನಗ ರುಪಾಯಿದಾಗ ನಾಕಾಣೆ ಭಾಗ ಸವಲತ್ತು ಮಾಡಿ ಕೊಟ್ಟಾರ, ಅಂಥಾದರಾಗ ನಿಮಗ ಕೊಡೂ ರೊಕ್ಕದಾಗನೂ ನಾನು ಉಳಿಸಿಕೊಂಡರ ಅದು ಸುಲಿಗಿ ಆದಂಗ ಆಗ್ತದ ರೀ' ಅಂತಂದ. ಕಂಡಕ್ಟರ್‌ಗೆ ಈಗ ನಿಜಕ್ಕೂ ನಗೆ ಬಂತು. 'ಅಲ್ಲ ಅಜ್ಜ, ಸುಲಿಗಿ ಆಗಾಕ ನೀವೇನು ನನಗ ಸಾವಿರಾರು ರುಪಾಯಿ ಟೊಪಗಿ ಹಾಕಾಕತ್ತಿರೇನು. ಒಂದೇ ಒಂದು ರುಪಾಯಿ. ಅದೂ ನಿಮಗ ಸಿಗಲಾರದ್ದಕ್ಕ ಉಳಿಸಿಕೊಂಡೀರಿ'. ನಕ್ಕು ನುಡಿದ.

'ವಿಷಯ ಒಂದು ರುಪಾಯಿ, ಸಾವಿರ ರುಪಾಯಿದಲ್ಲರಿ. ನ್ಯಾಯದ ವಿಷಯ ಐತಿ ಇದು. ಈ ರೊಕ್ಕಾ ನಂದೂ ಅಲ್ಲ ನಿಮ್ಮದೂ ಅಲ್ಲ, ನಿಮ್ಮ ಡಿಪಾರ್ಮೆಂಟಿಂದು. ನೀವು ಹೋಗಿ ಕಟ್ಟಬೇಕಂದ್ರ ಕೈಯಿಂದ ಕಟ್ಟಬೇಕು, ಇದು ಅನ್ಯಾಯ ಅಲ್ಲನ್ರಿ?' ಅವನಿಗೇ ಮರು ಪ್ರಶ್ನೆ ಎಸೆದ. ಆತು 'ನಿಮಗ ಕೊಡಬೇಕು ಅಂತನಿಸಿದರ ಆ ಒಂದು ರುಪಾಯಿ ಹೋಗ್ಲಿ, ಯಾವುವು ಇದ್ದವು ಕೊಡ್ರಿ, ನಾನ ಒಂದ್ರುಪಾಯಿ ಮುರಕೊಂಡು ಚಿಲ್ಲರ ಕೊಡ್ತೀನಿ' ಅಂದ. 'ಇಲ್ಲರಿ ಸಾಹೇಬ್ರ,, ಬ್ಯಾರೇ ರೊಕ್ಕಾ ಇಲ್ಲ ನನ್ನ ಹಂತೇಕ. ಒಂದೀಸು ಗುಳಿಗಿ ತಗೊಂಡು ಉಳದ ಚಿಲ್ಲರದಾಗ ಮೊಮ್ಮಕ್ಕಳಿಗೆ ಚಾಕಲೇಟ್ ತಗೊಂಡು ಬರೊಬ್ಬರಿ ಇಪ್ಪತ್ತೊಂದು ರುಪಾಯಿ ಇಟಗೊಂಡು ಬಸ್ ಹತ್ತಿದ್ಯಾ' ಅಂತ ಅನ್ನುವುದರೊಳಗೆ ಅವನ ಕೈ ಕಂಪಿಸತೊಡಗಿದ್ದವು, ಕಂಡಕ್ಟರಿಗೆ ಈಗ ನಿಜಕ್ಕೂ ದಿಗಿಲಾಯಿತು.

'ಹೋಗ್ಲಿ ಬಿಡ್ರಿ ಅಜ್ಜಾರ, ಮತ್ತೊಮ್ಮೆ ಬಂದಾಗ ಈ ಒಂದ್ರುಪಾಯಿನೂ ಸೇರಿಸಿ ಕೊಟ್ಟು ನಿರಾಳ ಆಗೂವಂತ್ರಿ' ಅಂತ ಸಮಾಧಾನಿಸಲು ಯತ್ನಿಸಿದ.

'ಇಲ್ರಿ, ಇದ ನನ್ನ ಕೊನೆಯ ಪ್ರಯಾಣ, ಮತ್ತೊಮ್ಮೆ ನಾ ಸಿಗೂದಿಲ್ಲ!' ಅಂತ ಅಜ್ಜ ಉಸುರಿದನಷ್ಟೆ . ಕಣ್ಣಂಚಲಿ ಚುಳ್ಳನೆ ನೀರು ಜಿನುಗಿತು, ಇವನಿಗೂ ಗಂಟಲು ಬಿಗಿದಂತಾಯಿತು. ಕ್ಷಣಗಳ ನಂತರ ಸಾವರಿಸಿಕೊಂಡು 'ಛೇ! ಹಂಗ್ಯಾಕ ಅಂತೀರಿ ಬಿಡ್ರಿ ಅಜ್ಜ. ಇನ್ನೂ ಇಪ್ಪತ್ತು ವರ್ಷ ನನ್ನ ಬಸ್ಸಿನ್ಯಾಗನ ಓಡಾಡ್ತೀರಿ ನೋಡ್ರೆಲಾ' ಅಂತ ಅವನ್ನನ್ನೇ ರಮಿಸಿಕೊಳ್ಳುತ್ತಿದ್ದೇನೇನೋ ಎನಿಸುವಂತೆ. ಮರು ಮಾತಾಡದ ಅಜ್ಜ ಕಡು ವಿಷಾದದ ನಗೆಯೊಂದನ್ನು ಚೆಲ್ಲಿದ. ಅವನ ತಡಕಾಟ ನಡೆದೇ ಇತ್ತು. ಕೆಲ ಸಮಯ ಕಳೆಯಿತು, ಅಜ್ಜನ ಮುಖದ ಗೆರೆಗಳು ರೊಯ್ಯನೇ ನಕಾಶೆ ಬದಲಿಸಿದವು. ಕೈ ಹೊರಗೆಳೆದುಕೊಂಡವನೇ 'ತೊಗೋರಿ ಸಾಹೇಬ್ರ' ಅಂತಂದು ಸಿಕ್ಕ ಆ ಒಂದು ರುಪಾಯಿಯನ್ನು ಅವನ ಕೈಗಿತ್ತವನೇ ಋಣಮುಕ್ತನಾದವನಂತೆ ಸಂಭ್ರಮಿಸುತ್ತ ಕೈಮುಗಿದ. ಹಿಂದೆಯೇ ದೇವರ ಮುಗುಳುನಗೆ ಆ ಕಂಡಕ್ಟರ್‌ಗಷ್ಟೇ ಎಂಬಂತೆ ತಾಗಿ ಎದೆ ನೇವರಿಸಿತು. ಇಂತಹ ಮಹಾನುಭಾವರಿಂದಲೇ ಇಂದಿಗೂ ಭೂಮಿಯ ಮೇಲೆ ಮಳೆ ಬೆಳೆ ಆಗುತ್ತಿರುವುದು.

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಪದಬಂಧ

• ಸಿ. ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಒಳಗೆ/ಹೊರಗೆ ಹೋಗಲು ಇರುವ ದ್ವಾರ (3)
2. ಎಚ್ಚರವೇಕೋ ಜಾತಿಯ ನಡುವೆ ಬಂದಿದೆ (3)
5. ಸಾಗುವಾನಿ ಮರ ಎರಡಕ್ಷರದಲ್ಲಿ (2)
6. ಪುಳಕವು ಆ ಕಡೆಯಿಂದ ಬಂದಿದೆ (3)
8. ಪಾಲಿಗೆ ಬಂದದ್ದು ರೂಪಾಯಿಯ ನಾಲ್ಕನೆಯ ಒಂದು ಭಾಗ (3)
10. ಎರಡಕ್ಷರದ ಎಳ್ಳು (2)
11. ಶಿವನ ಧನುಸ್ಸಿನ ಹೆಸರು (3)
12. ಸರದ ಮಧ್ಯೆ ಸಿಲುಕಿದ ಸಲುಗೆ (3)
13. ಎಲ್ಲೆಡೆ ಹರಡುವಿಕೆ (3)
15. ಹಾನಿ ಅಥವಾ ಕೇಡು (3)
17. ಅಮ್ಮ-ಮಗುವಿನ ನಡುವೆ ಕೊಂಡಿಯಾಗಿರುವ ಹೊಕ್ಕುಳು (2)
18. ಕರು ತಿಂದ ತೆನೆ (3)
19. ಪ್ರಾಣಿಗಳನ್ನು ಕತ್ತರಿಸುವವನು (3)
21. ಚಳಿಗಾಲಕ್ಕೆ ಮತ್ತೊಂದು ಹೆಸರು (2)
22. ವಿಶೇಷವಾಗಿ ಸಿಕ್ಕಿದ ಗೌರವ (3)
23. ಮತ್ತೊಂದು ಕಾಡನ್ನು ಕಟ್ಟಿಕೊಂಡಿರುವ ಬದುಕು (3)

ಮೇಲಿನಿಂದಕೆಳಕ್ಕೆ

1. ಉರು ಹೊಡೆಯುವುದು (4)
2. ಇದು ವಿಶ್ವಕ್ಕೆ ಸಂಬಂಧಿಸಿದ ವಿಷಯ (4)
3. ಬರುವಾಗ ಕಂಡ ಮರ (2)
4. ನಮ್ರವಾಗಿರುವ ಬಡವ (2)
7. ಚರ್ಚೆಯಿಂದ ಉಂಟಾದ ಕಲಹ (3)
9. ಬರೆಯುವವನಿಗೆ ಮತ್ತೊಂದು ಹೆಸರು (4)
12. ನೆರವಾಗುವವನು (4)
14. ಜೋಡಿಯಾದ ಕುದುರೆಗಳನ್ನು ಕಟ್ಟಿ ಮಾಡಿದ ಗಾಡಿ(3)
15. ಹೆಮ್ಮೆಯೂ ಆಗಬಲ್ಲ ಅಹಂಕಾರ (4)
16. ಮಾರನೆಯ ದಿವಸ (4)
19. ತಿಳಿ ಎನುತ್ತಾ ಬಂದ ವೀರ (2)
20. ಬೇಡವೆಂದು ಬಿಸಾಡುವ ವಸ್ತು (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಆಡಂಬರ 4. ಸಂಕುಚಿತ 6. ವಿಧಾತ 8. ಸಾರ 9. ಗೆರೆ 12. ಹಿಮಮಣಿ 13. ಏಕಾಗ್ರತೆ 15. ಹಾಸ್ಯ 16. ಅರ 17. ಕಾಯಕ 19. ಹುಳಿಹಿಂಡು 20. ಪಿಸುಗುಟ್ಟು

ಮೇಲಿನಿಂದ ಕೆಳಕ್ಕೆ: 2. ಡಂಗುರ 3. ರವಿ 4. ಸಂತ 5. ಚಿಗರೆ 7. ಧಾವಂತ 8. ಸಾಪ್ತಾಹಿಕ 9. ಗೆಣೆಕಾರ 10. ಸಾಮರಸ್ಯ 11. ಕತೆಗಾರ 14. ಸಮಯ 15. ಹಾವಳಿ 16. ಅರಗು 17. ಕಾಡು 18. ಕಪಿ

ಸಮಾಚಾರ ಸಣ್ಣದಲ್ಲ

ಅಯ್ಯಪ್ಪಸ್ವಾಮಿ ಮಂಡಲ ಪೂಜೆ ಮೆರವಣಿಗೆ

ಹೊಸಪೇಟೆ: ತಾಲೂಕಿನ ಕಮಲಾಪುರದಲ್ಲಿ ಅಯ್ಯಪ್ಪಸ್ವಾಮಿ ಮಂಡಲ ಪೂಜೆ ನಿಮಿತ್ತ ಮೆರವಣಿಗೆ ನಡೆಯಿತು. ಅಯ್ಯಪ್ಪಸ್ವಾಮಿ ದೇಗುಲದಿಂದ ಆರಂಭವಾದ ಮೇರವಣಿಗೆ ಹಿರೆಕೇರಿ, ತಿಮ್ಮನಾಥಕೇರಿ, ಮನ್ಮಥಕೇರಿ, ಚೌಡಿಕೇರಿ, ಕೃಷ್ಣ ದೇವರಾಯ ವೃತ್ತ, ಊರಮ್ಮಗುಡಿ ಬಯಲು, ಗೋನಾಳ್ ಕೇರಿ, ವಾಲ್ಮೀಕಿ ವೃತ್ತ, ಎಚ್ ಪಿ.ಸಿ ರಸ್ತೆಯ ಮರೆಮ್ಮ ದೇಗುಲ ಮಾರ್ಗವಾಗಿ ಪುನಃ ಅಯ್ಯಪ್ಪ ಸ್ವಾಮಿ ದೇಗುಲದ ವರೆಗೆ ಮೆರವಣಿಗೆ ನಡೆಯಿತು. ಮಂಡಲ ಪೂಜೆ ನಿಮಿತ್ತ ದೇಗುಲದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆದವು. ಗುರುಸ್ವಾಮಿಗಳಾದ ಶ್ರೀನಿವಾಸ್, ಆದಿಶೇಷ, ಗಣೇಶ್, ಭದ್ರಸ್ವಾಮಿ, ಬಳೆಗಾರ್ ಶ್ರೀನಿವಾಸ್ ಇದ್ದರು.

ಸಹಾಯಕರ ಹುದ್ದೆ ಅರ್ಜಿ ಸಲ್ಲಿಕೆಗೆ ಅವಕಾಶ

ಹೊಸಪೇಟೆ: ಜಿಲ್ಲೆಯ ವಿವಿಧ ತಾಲೂಕಿನಲ್ಲಿ ಖಾಲಿ ಇದ್ದ ಅಂಗನವಾಡಿ ಕಾರ್ಯಕರ್ತೆ ಮತ್ತು ಅಂಗನವಾಡಿ ಸಹಾಯಕರ ಹುದ್ದೆಗಳಿಗೆ ಸಲ್ಲಿಸಿದ್ದ ಅಪೂರ್ಣಗೊಂಡ ಅರ್ಜಿಗಳನ್ನು ಮರು ಸಲ್ಲಿಸಲು ಅವಕಾಶ ನೀಡಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಎಸ್.ಶ್ವೇತಾ ತಿಳಿಸಿದ್ದಾರೆ. ಶಿಶು ಅಭಿವೃದ್ಧಯೋಜನೆ ವ್ಯಾಪ್ತಿಯ ಅಂಗನವಾಡಿ ಕಾರ್ಯಕರ್ತೆ ಹಾಗೂ ಅಂಗನವಾಡಿ ಸಹಾಯಕಿಯರು ಜಿಲ್ಲೆಯ ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಕೂಡ್ಲಿಗಿ, ಹರಪನಹಳ್ಳಿ, ಕೊಟ್ಟೂರು ತಾಲೂಕಿನಲ್ಲಿ ಈಗಾಗಲೇ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದು, ಅರ್ಜಿ ಸಲ್ಲಿಸುವ ವೇಳೆಯಲ್ಲಿ ಕೆಲವು ತಾಂತ್ರಿಕ ಸಮಸ್ಯೆಯಿಂದಾಗಿ ಬಹುತೇಕರ ಅರ್ಜಿಗಳಲ್ಲಿ ಭಾವಚಿತ್ರ, ಸಹಿ ಮತ್ತು ದಾಖಲೆಗಳ ಮಾಹಿತಿ ಸಲ್ಲಿಸುವಲ್ಲಿ ಅಪೂರ್ಣಗೊಂಡಿವೆ. ವೆಬ್‌ಸೈಟ್ https://karnemakaone.kar.nic.in/abcd/ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಜಿಲ್ಲೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗಳಿಗೆ ಸಂಪರ್ಕಿಸಬೇಕಾಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರೊಬೆಷನರ್ ಹುದ್ದೆಗೆ ಮರು ಪರೀಕ್ಷೆ ನಾಳೆ

ಹೊಸಪೇಟೆ: ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಸುವ ಗೆಜೆಟೆಡ್ ಪ್ರೊಬೆಷನರ್ ಗ್ರೂಪ್‌ನ 'ಎ' ಮತ್ತು 'ಬಿ' ವೃಂದದ ಹುದ್ದೆಗಳ ಪೂರ್ವಭಾವಿ ಮರು ಪರೀಕ್ಷೆ ಡಿ.29 ರಂದು ನಡೆಯಲಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ. ಹೊಸಪೇಟೆ ಹಾಗೂ ಹಗರಿಬೊಮ್ಮನಹಳ್ಳಿಯಲ್ಲಿ ನಡೆಯಲಿರುವ ಒಟ್ಟು 23 ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲು ಸಿದ್ಧತೆ ಮಾಡಲಾಗಿದೆ. ಡಿ.29 ರಂದು ಪತ್ರಿಕೆ-1 ಬೆಳಿಗ್ಗೆ 10 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಮತ್ತು ಪತ್ರಿಕೆ-2 ಮಧ್ಯಾಹ್ನ 2 ಗಂಟೆಯಿಂದ 4 ಗಂಟೆಯವರೆಗೆ ಪರೀಕ್ಷೆಗಳು ನಡೆಯಲಿವೆ. ಪರೀಕ್ಷಾ ಅವ್ಯವಹಾರಗಳನ್ನು ತಡೆಗಟ್ಟಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತ-ಮುತ್ತಲಿನ 200 ಮೀಟರ್ ಆವರಣವನ್ನು ನಿರ್ಬಂಧಿತ ಪ್ರದೇಶ ಎಂದು ಘೋಷಿಸಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಪರೀಕ್ಷಾ ಕೇಂದ್ರದ ಸುತ್ತಮುತ್ತಲಿನ ಜೆರಾಕ್ಸ್ ಮತ್ತು ಕಂಪ್ಯೂಟರ್, ಸೈಬರ್ ಅಂಗಡಿಗಳನ್ನು ಮುಚ್ಚಲು ಆದೇಶ ಹೊರಡಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಜಿ ಪ್ರಧಾನಿ ನಿಧನ: ಹೊಲಗೇರಿ ಶ್ರದ್ಧಾಂಜಲಿ

ಮುದಗಲ್: ದೇಶದ ಆರ್ಥಿಕ ತಜ್ಞ ಹಾಗೂ ಮಾಜಿ ಪ್ರಧಾನಿ ಮನಮೋಹನ ಸಿಂಗ ಅವರು ನಿಧನ ಹೊಂದಿದ ಹಿನ್ನೆಲೆಯಲ್ಲಿ ಅವರಿಗೆ ಮಾಜಿ ಶಾಸಕ ಹಾಗೂ ಕೆಪಿಸಿಸಿ ರಾಜ್ಯ ಉಪಾಧ್ಯಕ್ಷ ಡಿ.ಎಸ್. ಹೂಲಗೇರಿ ರವರ ನಿವಾಸದಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಮಾಜಿ ಪ್ರಧಾನಿ ಭಾವಚಿತ್ರಕ್ಕೆ ಕಾಂಗ್ರೆಸ್ ಪಕ್ಷದ ಯುವ ಮುಖಂಡ ಖದೀರ ಪಾನವಾಲೆ ಹೂ ಮಾಲೆ ಹಾಕಿ ಪೂಜೆ ಸಲ್ಲಿಸಿ, ಒಂದು ನಿಮಿಷ ಮೌನಚರಣೆ ಮಾಡುವ ಮೂಲಕ ಆತ್ಮಕ್ಕೆ ಶಾಂತಿಸಿಗಲಿ ಎಂದು ಕೋರಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ನ್ಯಾಮತ್ ಖಾದ್ರಿ, ಯುವ ಘಟಕದ ಅಧ್ಯಕ್ಷ ಹುಸೇನಪಾಶಾ, ರಘುವೀರ ಚಲುವಾದಿ, ಅಬ್ದುಲ್ ಖದೀರ, ಉದಯ ರಜಪೂತ, ಗಂಗಾಧರ ಯಾದವ, ಅಮರಯ್ಯ ಬ್ಯಾಲಿಹಾಳ, ಬಸವರಾಜ ಹಿರೇಮನಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ವಿ+ ಸೋಮವಾರ

ವ್ಯಾಪಾರ-ವಾಣಿಜ್ಯೋದ್ಯಮಿಗಳು ಸಹಕಾರದಿಂದ ಬಾಲಕಾರ್ಮಿಕ ಸಮಸ್ಯೆಗೆ ಪರಿಹಾರ

ಶಿಕ್ಷಣದಿಂದಲೇ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸಂಕಲ್ಪ

ಬಳ್ಳಾರಿ: ಕಾರ್ಮಿಕ ಇಲಾಖೆ ಮತ್ತು ವ್ಯಾಪಾರ - ವಾಣಿಜ್ಯೋದ್ಯಮಿಗಳು ಪರಸ್ಪರ ಸಹಕಾರದಿಂದ ಇದ್ದಲ್ಲಿ ಮಾತ್ರ ಬಾಲಕಾರ್ಮಿಕ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಲು ಸಾಧ್ಯ ಎಂದು ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಯಶವಂತರಾಜ್ ನಾಗಿರೆಡ್ಡಿ ತಿಳಿಸಿದ್ದಾರೆ.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯಲ್ಲಿ ನಡೆದ ಕಾರ್ಮಿಕ ಇಲಾಖೆ, ವ್ಯಾಪಾರಿ - ವಾಣಿಜ್ಯೋದ್ಯಮಿಗಳ ಸೌಹಾರ್ದ ಸಭೆಯನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ, ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿ, ಬಾಲಕಾರ್ಮಿಕ ಪದ್ಧತಿ ದೊಡ್ಡ ಪಿಡುಗಾಗಿದೆ. ಶಿಕ್ಷಣದ ಮೂಲಕವೇ ಈ ಸಮಸ್ಯೆಗೆ ಪರಿಹಾರ ಸಾಧ್ಯ. ಕಾರಣ ಅಧಿಕಾರಿಗಳು ಮತ್ತು ವ್ಯಾಪಾರಿಗಳು - ಉದ್ಯಮಿಗಳು ಪರಸ್ಪರ ಮಾನವೀಯತೆಯ ಆಧಾರದಲ್ಲಿ ಸಮಸ್ಯೆಗೆ ಪರಿಹಾರಗಳನ್ನು ಕಂಡುಹಿಡಿಯಬೇಕು ಎಂದು ಮನವಿ ಮಾಡಿದರು.

ಹಿರಿಯ ಸಿವಿಲ್ ನ್ಯಾಯಾಧೀಶ, ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ರಾಜೇಶ್ ಹೊಸಮನಿ ಅವರು, ಮುಖ್ಯ ಅತಿಥಿಗಳಾಗಿ ಸಭೆಯನ್ನು ಉದ್ಘಾಟಿಸಿ, ದೇಶದಲ್ಲಿ 1 ಕೋಟಿ, ವಿಶ್ವದಲ್ಲಿ 21 ಕೋಟಿ ಬಾಲಕಾರ್ಮಿಕರಿದ್ದು, ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಪ್ರತಿಯೊಬ್ಬರೂ ಬದ್ಧರಾಗಬೇಕು. ಈ ಸಮಸ್ಯೆಯನ್ನು ಪರಿಹರಿಸಲು ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ಕಾರ್ಮಿಕ ಅಧಿಕಾರ ಸಿದ್ದಪ್ಪ ಖೈನೂರ್ ಮಾತನಾಡಿ, ಕಾರ್ಮಿಕ ಇಲಾಖೆಯು 24 ಕಾಯಿದೆಗಳನ್ನು ಜಾರಿ ಮಾಡುತ್ತಿದ್ದು, ಒಂದಿಲ್ಲ ಒಂದು ಕಾಯಿದೆ ವ್ಯಾಪ್ತಿಯಲ್ಲಿ ವ್ಯಾಪಾರಿಗಳು - ಉದ್ಯಮಿಗಳು ಗುರುತಿಸಿಕೊಳ್ಳುತ್ತಾರೆ.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯಲ್ಲಿ ಕಾರ್ಮಿಕ ಇಲಾಖೆ, ವ್ಯಾಪಾರಿ - ವಾಣಿಜ್ಯೋದ್ಯಮಿಗಳ ಸೌಹಾರ್ದ ಸಭೆಯಲ್ಲಿ ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಯಶವಂತರಾಜ್ ನಾಗಿರೆಡ್ಡಿ ಪಾಲ್ಗೊಂಡಿದ್ದರು.

ಬಾಲಕಾರ್ಮಿಕ ಪದ್ಧತಿಯನ್ನು ನಿವಾರಣೆ ಮಾಡಲು ವ್ಯಾಪಾರಿಗಳು ಮತ್ತು ಉದ್ಯಮಿಗಳು ಸಹಕಾರ ನೀಡಬೇಕು ಎಂದು ತಿಳಿಸಿದರು.

ಬಾಲಕಾರ್ಮಿಕ ನಿಯಂತ್ರಣ ಯೋಜನಾ ಅಧಿಕಾರಿ ಮೌನೇಶ್ ಅವರು, ಮಕ್ಕಳ ಹಕ್ಕುಗಳನ್ನು ಜಾರಿ ಮಾಡುವಲ್ಲಿ ಶಿಕ್ಷಣಕ್ಕೆ ಪ್ರಥಮ ಆದ್ಯತೆ ನೀಡಲಾಗುತ್ತದೆ. ಮಕ್ಕಳನ್ನು ಸಾಕಲಾಗದ ಪೋಷಕರು - ಪಾಲಕರು ಆ ಮಾಹಿತಿಯನ್ನು ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲ್ಯುಸಿ)ಗೆ ಸಲ್ಲಿಸಿದಲ್ಲಿ ಜಿಲ್ಲಾಡಳಿತ ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದೆ ಎಂದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಜಂಟಿ ಕಾರ್ಯದರ್ಶಿ ಡಾ. ಮರ್ಚೆಡ್ ಮಲ್ಲಿಕಾರ್ಜುನಗೌಡ, ವಿ. ರಾಮಚಂದ್ರ, ಹೋಟಲ್ ಮಾಲೀಕರ ಸಂಘದ ಪೋಲಾ ವಿಕ್ರಮ, ವ್ಯಾಪಾರಿಗಳ ಪರವಾಗಿ ಜೆ. ರಾಜೇಶ್, ಲಕ್ಷ್ಮೀನಾರಾಯಣ, ಎಸ್.ಎಂ.ವೇಣುಗೋಪಾಲ್ ಇನ್ನಿತರರು ಕಾರ್ಮಿಕರ ಇಲಾಖೆ ಮತ್ತು ಕಾಯಿದೆಗಳ ಕುರಿತು ಪ್ರಶ್ನೆಗಳನ್ನು ಕೇಳಿ, ಉತ್ತರಗಳನ್ನು ಪಡೆದರು.

> ಪ್ರತಿ ಮೂರು ಅಥವಾ ಆರು ತಿಂಗಳಿಗೆ ಒಮ್ಮೆ ಇಲಾಖೆಯ ಮಾಹಿತಿಯನ್ನು - ಹೊಸ ವಿಚಾರಗಳನ್ನು ವ್ಯಾಪಾರಿಗಳು - ಉದ್ಯಮಿಗಳಿಗೆ ತಿಳಿಸುವ ಕೆಲಸ ಆಗಬೇಕು. ಇಲ್ಲವಾದಲ್ಲಿ ಸಮಸ್ಯೆಯ ಪರಿಹಾರಕ್ಕೆ ಬದಲಾಗಿ, ಸಮಸ್ಯೆ ಮತ್ತಷ್ಟು ದೊಡ್ಡದಾಗಿ ಸಜೀವವಾಗಿರಲಿದೆ. ಕಾರಣ ಕಾರ್ಮಿಕ ಇಲಾಖೆಯು ಕಾಲ ಕಾಲಕ್ಕೆ ಸಭೆ ನಡೆಸಬೇಕು.
> -ಯಶವಂತರಾಜ್ ನಾಗಿರೆಡ್ಡಿ, ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಕೆ.ಸಿ.ಸುರೇಶಬಾಬು ಅವರು ವಂದನಾರ್ಪಣೆ ಸಲ್ಲಿಸಿದರು. ವಿವಿಧ ಸಂಘಟನೆಗಳ ಪದಾಧಿಕಾರಿಗಳ - ಸದಸ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಅಯ್ಯಪ್ಪ ಮಂಡಲ ಅಷ್ಟಾಭಿಷೇಕ

ಹೊಸಪೇಟೆ: ನಗರದ ನೆಹರೂ ಕಾಲೋನಿಯ ಶ್ರೀ ಅಯ್ಯಪ್ಪ ಸ್ವಾಮಿ ದೇವಾಲಯದಲ್ಲಿ ಮಂಡಲ ಪೂಜಾ ವಿಶೇಷ ಕಾರ್ಯಕ್ರಮ ಅತ್ಯಂತ ಶ್ರದ್ಧಾ-ಭಕ್ತಿಯಿಂದ ನೆರವೇರಿದವು.

ಮಂಡಲ ಪೂಜಾ ವಿಶೇಷ ಕಾರ್ಯಕ್ರಮದ ಪ್ರಯುಕ್ತ ದೇಗುಲದ ಶ್ರೀ ಅಯ್ಯಪ್ಪ ಸ್ವಾಮಿ ಮೂರ್ತಿಗೆ ಕಳಾಶಾಭಿಷೇಕ, ಅಷ್ಟಾಭಿಷೇಕ, ವಿಶೇಷ ಅಲಂಕಾರ ಗೈದು ಪೂಜೆಯನ್ನು ನೆರವೇರಿಸಲಾಯಿತು.

ಪ್ರಧಾನ ಅರ್ಚಕ ಶಂಕರನ್ ಎನ್. ನಂಬೂದರಿ ಅವರು ವಿಶೇಷ ಪೂಜೆವನ್ನು ನೆರವೇರಿಸಿದರು. ಅಯ್ಯಪ್ಪ ಮಾಲಾಧಾರಿಗಳು ಸೇರಿದಂತೆ ಸಹಸ್ರಾರು ಭಕ್ತರು, ಬೆಳಗ್ಗೆಯಿಂದ ಅಯ್ಯಪ್ಪ ದೇವಸ್ಥಾನಕ್ಕೆ ಆಗಮಿಸಿ, ದೇವರ ದರ್ಶನ ಪಡೆದರು. ಹೂ-ಹಣ್ಣು, ಕಾಣಿಕೆ ಸಲ್ಲಿಸಿ ಭಕ್ತಿ ಮೆರೆದರು.

ನಗರದ ಪಟೇಲ್ ನಗರದಲ್ಲಿರುವ ಶ್ರೀವೇಣುಗೋಪಾಲ ಸ್ವಾಮಿ ದೇವಸ್ಥಾನದಿಂದ ಆರಂಭವಾದ ಮೆರವಣಿಗೆ ಪುನೀತ್ ರಾಜಕುಮಾರ್ ವೃತ್ತ, ಮದಕರಿನಾಯಕ ವೃತ್ತ, ವಾಲ್ಮೀಕಿ ವೃತ್ತ ಸೇರಿದಂತೆ ಪ್ರಮುಖ ರಸ್ತೆಗಳ ಮೂಲಕ ದೇವಸ್ಥಾನದಲ್ಲಿ ಸಂಪನ್ನಗೊಂಡಿತ್ತು.

ರಾತ್ರಿ ಅಯ್ಯಪ್ಪ ಸ್ವಾಮಿಗೆ ಮಹಾಮಂಗಳಾರತಿ, ಭಸ್ಮಾಭಿಷೇಕ ಗೈದು ವಿಶೇಷ ಪೂಜೆ ಸಲ್ಲಿಸಿ, ಹರಿವಾರಸಾನಂ ಗೀತೆ ಹಾಡಿದರು. ದೇವಸ್ಥಾನ ಟ್ರಸ್ಟ್ ಸದಸ್ಯರಾದ ಭೂಪಾಲ್ ಪ್ರಲ್ಹಾದ್, ಡಿ.ವೆಂಕಟೇಶ್, ಮಾಲಾತೇಶ್, ಪ್ರಮುಖರಾದ ಸಂತೋಷ್, ರಾಮಸ್ವಾಮಿ, ಮಂಜುನಾಥ, ರಾಘವೇಂದ್ರ, ಜಗನ್ ಹಾಗೂ ಆನಂದ್ ಇದ್ದರು.

> **ಭವ್ಯ ಮೆರವಣಿಗೆ**
> ಮಂಡಲ ಪೂಜಾ ವಿಶೇಷ ಕಾರ್ಯಕ್ರಮದ ಪ್ರಯುಕ್ತ ಅಯ್ಯಪ್ಪ ಸ್ವಾಮಿಯ ಮೂರ್ತಿಯ ನಗರದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ ನಡೆಯಿತು. ದಾರಿಯುದಕ್ಕೂ ಅಯ್ಯಪ್ಪ ಮಾಲಾಧಾರಿಗಳು, ಭಕ್ತರು ಅಯ್ಯಪ್ಪ ಸ್ವಾಮಿ ಭಜನೆ ಗೀತೆಗಳನ್ನು ಹಾಡಿ ಹೆಜ್ಜೆ ಹಾಕಿದರು.

ನಗರದ ನೆಹರೂ ಕಾಲೋನಿಯ ಶ್ರೀ ಅಯ್ಯಪ್ಪ ಸ್ವಾಮಿ ದೇವಾಲಯದಲ್ಲಿ ಮಂಡಲ ಪೂಜಾ ವಿಶೇಷ ಕಾರ್ಯಕ್ರಮವನ್ನು ಶ್ರದ್ಧಾ-ಭಕ್ತಿಯಿಂದ ನೆರವೇರಿಸಿದರು.

ಮಾಜಿ ಪ್ರಧಾನಿ ನಿಧನಕ್ಕೆ ಸಂತಾಪ

ಕುಷ್ಟಗಿ: ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ನಿಧನದ ಹಿನ್ನೆಲೆ, ನಗರದಲ್ಲಿನ ಮಾಜಿ ಶಾಸಕ ಅಮರೇಗೌಡ ಪಾಟೀಲ್ ಮನೆಯಲ್ಲಿ ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಶ್ರದ್ಧಾಂಜಲಿ ಸಭೆ ಶುಕ್ರವಾರ ಆಚರಿಸಿದರು.

ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಶ್ಯಾಮರಾವ ಕುಲಕರ್ಣಿ ಮಾತನಾಡಿ, ದೇಶ ಕಂಡ ಮಹಾನ್ ನಾಯಕ ಡಾ. ಮನಮೋಹನ ಸಿಂಗ್ ಅಗಲಿಕೆಯಿಂದ ದೇಶಕ್ಕೆ ತುಂಬಲಾಗದ ನಷ್ಟ ಉಂಟಾಗಿದೆ. ಬಡತನದಲ್ಲೇ ಹುಟ್ಟಿ ಬೆಳೆದರೂ, ಮಹಾನ್ ಆರ್ಥಿಕ ತಜ್ಞರಾಗಿ, ದೇಶದ ಪ್ರಧಾನ ಮಂತ್ರಿಯಾಗಿ 10 ವರ್ಷ ಕಾರ್ಯ ನಿರ್ವಹಿಸಿದರು. ಮನಹೋಹನ ಸಿಂಗ್ ಅವರ ಮಾರ್ಗದರ್ಶನ ಇನ್ನೂ ದೇಶಕ್ಕೆ ಬೇಕಿತ್ತು ಎಂದರು.

ಹನುಮೇಶ ಗುಮಗೇರಿ, ಶೌಕತ್ ಕಾಯಿಗಡ್ಡಿ, ಬಸವರಾಜ ಗದ್ದಿ, ಬಸವರಾಜ ಹೊರಪ್ಯಾಟಿ, ವೀರುಪಾಕ್ಷಿ ಮಡಿವಾಳರ, ಮಂಜು ಟೆಂಗುಂಟಿ, ಕಾಶಿಮಸಾಬ ಕಾಯಗಡ್ಡಿ, ವಕ್ತಾರ ಇಮಾಮಸಾಬ ಗರಡಿಮನಿ, ಶೇಖರಯ್ಯ ಸರಗಣಚಾರ ಇದ್ದರು.

ಮಾಜಿ ಶಾಸಕ ಅಮರೇಗೌಡ ಪಾಟೀಲ್ ಅವರ ಮನೆಯಲ್ಲಿನ ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ನಿಧನದಕ್ಕೆ ಶ್ರದ್ಧಾಂಜಲಿ ಸಭೆ ನಡೆಯಿತು.

ಆರ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ ಬಂಧನಕ್ಕೆ ಕೆಆರ್‌ಎಸ್ ಒತ್ತಾಯ

ರಾಯಚೂರು: ಆರ್‌ಡಿಸಿಸಿ ಬ್ಯಾಂಕ್ ಅವ್ಯವಹಾರದ ಬಗ್ಗೆ ತನಿಖೆ ನಡಿಸಿ, ಅಧ್ಯಕ್ಷ ವಿಶ್ವನಾಥ ಪಾಟೀಲ್ ಹಾಗೂ ಸಿಇಒ, ಐಎಸ್ ಗಿರಡ್ಡಿಯನ್ನ ಬಂಧಿಸಬೇಕು. ಇಲ್ಲದಿದ್ದರೆ ಜನವರಿ 10 ರಂದು ಬ್ಯಾಂಕ್ ಮುಂದೆ ಅನಿರ್ದಿಷ್ಟಾವಧಿ ಧರಣಿ ನಡೆಸುವುದಾಗಿ ಕರ್ನಾಟಕ ರೈತ ಸಂಘ (ಕೆ.ಆರ್.ಎಸ್) ಜಿಲ್ಲಾಧ್ಯಕ್ಷ ಮಲ್ಲಯ್ಯ, ಕಟ್ಟಿಮನಿ ಎಚ್ಚರಿಕೆ ನೀಡಿದರು.

ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಸ್ಕಿ ತಾಲೂಕಿನ ತೋರಣದಿನ್ನಿ ಕೃಷಿ ಸಹಕಾರ ವ್ಯವಸಾಯ ಸಂಘದ ಚುನಾವಣೆಯಲ್ಲಿ ವಿಶ್ವನಾಥ ಪಾಟೀಲ್ ಮತ್ತು ತಂಡ ಚುನಾವಣಾ ಅಕ್ರಮವೆಸಗಿ ಅವಿರೋಧವಾಗಿ ಆಯ್ಕೆದ್ದಾರೆ. ಇದನ್ನು ಕರ್ನಾಟಕ ರೈತ ಸಂಘ ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸುತ್ತದೆ ಎಂದರು.

ವಿಶ್ವನಾಥ ಪಾಟೀಲ್ ನಿರ್ದೇಶಕ ಮಂಡಳಿಯ ಅಧ್ಯಕ್ಷನಿಗೆ ಆರ್‌ಡಿಸಿಸಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ನೇಮಕ ಮಾಡಿಕೊಳ್ಳುವ ಅಧಿಕಾರವಿಲ್ಲದಿದ್ದರೂ, ತನ್ನ ಕುಲಸ್ತ ಆಪ್ತ ಹಾಗೂ ನಿವೃತ್ತ ಅಧಿಕಾರಿ ಐ.ಎಸ್.ಗಿರೆಡ್ಡಿ ಇವರನ್ನು 9 ತಿಂಗಳ ಅವಧಿಗೆ ನೇಮಕ ಮಾಡಿರುತ್ತಾನೆ.

ತೋರಣದಿನ್ನಿ ವ್ಯವಸಾಯ ಸಹಕಾರ ಸಂಘಕ್ಕಾಗಿ ಸಂಘದ ಹಣಕೊಟ್ಟು ಖರೀದಿಸಿದ ಆಸ್ತಿಯನ್ನು ವಿಶ್ವನಾಥ ಪಾಟೀಲ್ ತನ್ನ ಹೆಸರಲ್ಲಿ ನೋಂದಣಿ ಮಾಡಿಸಿಕೊಂಡು ತನ್ನ ಸ್ವಂತ ಆಸ್ತಿಯನ್ನಾಗಿ ವರ್ಗಾವಣೆ ಮಾಡಿಸಿಕೊಂಡಿರುತ್ತಾನೆ.

ಐ.ಎಸ್.ಗಿರೆಡ್ಡಿ ಅವಧಿಯಲ್ಲಾದ ಎಲ್ಲಾ ಆದೇಶಗಳನ್ನು ಬ್ಯಾಂಕಿನ ವಹಿವಾಟುಗಳನ್ನು ತನಿಖೆಗೊಳಪಡಿಸಬೇಕು ಮತ್ತು ನಾಲ್ಕು ಪೊಲೀಸ್ ಪ್ರಕರಣ ದಾಖಲಾದ ಹಿನ್ನೆಲೆಯಲ್ಲಿ ವಿಶ್ವನಾಥ ಪಾಟೀಲ್ ಐಎಸ್ ಗಿರೆಡ್ಡಿ ಹಾಗೂ ಇತರೆ ಆರೋಪಿಗಳನ್ನು ಕೂಡಲೇ ಬಂಧಿಸಬೇಕು. ನಮ್ಮ ಬೇಡಿಕೆಗೆ ಸ್ಪಂದಿಸದೆ ಹೋದಲ್ಲಿ ಜನವರಿ 10 ರಿಂದ ಆರ್ಡಿಸಿಸಿ ಬ್ಯಾಂಕ್ ನ ಮುಂದೆ ರೈತರ ಅನಿರ್ದಿಷ್ಟ ಧರಣಿ ಆರಂಭಿಸಲಾಗುವುದೆಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗಿರಿಲಿಂಗಸ್ವಾಮಿ, ರಾಮಕೃಷ್ಣ, ಮುಬಾರಕ ಮತ್ತು ಸಂತೋಷ ಹಿರೇದಿನ್ನಿ ಉಪಸ್ಥಿತರಿದ್ದರು.

> ಈ ಒಂಬತ್ತು ತಿಂಗಳ ಅವಧಿಯಲ್ಲಿ ಐ.ಎಸ್ ಗಿರೆಡ್ಡಿ ಹಾಗೂ ವಿಶ್ವನಾಥ್ ಪಾಟೀಲ್ ಸೇರಿ 100 ಕೋಟಿಗೂ ಹೆಚ್ಚು ಅವ್ಯವಹಾರ ನಡೆಸಿದ್ದಾರೆ. ಬ್ಯಾಂಕಿನ ಅಧಿಕಾರಿಗಳ ಮೇಲೆ ಕಾನೂನು ಬಾಹಿರ ಕ್ರಮ ಜರುಗಿಸಿ ಅವರಿಂದ ಹತ್ತಾರು ಲಕ್ಷ ಲೂಟಿ ವಸೂಲಿ ಮಾಡಿರುತ್ತಾರೆ. ಸಹಕಾರ ಇಲಾಖೆಯೂ ರಾಯಚೂರು ಆರ್‌ಡಿಸಿಸಿ ಸಿಇಒ ಹುದ್ದೆಯನ್ನು ಖಾಲಿ ಎಂದು ತೋರಿಸಿದರೆ, ವಿಶ್ವನಾಥ ರೆಡ್ಡಿ ಅಕ್ರಮವಾಗಿ ಐ.ಎಸ್.ರೆಡ್ಡಿಯನ್ನು ನೇಮಕ ಮಾಡಿ ಗುರುತರ ಅಪರಾಧವೆಸಗಿದ್ದು, ಇದರಿಂದ ಸಂಸ್ಥೆಗೆ ಬಾರಿ ನಷ್ಟವಾಗಿದೆ.
> -ಮಲ್ಲಯ್ಯ ಕಟ್ಟಿಮನಿ, ಜಿಲ್ಲಾಧ್ಯಕ್ಷ

ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರೈತ ಸಂಘ (ಕೆ.ಆರ್.ಎಸ್) ಜಿಲ್ಲಾಧ್ಯಕ್ಷ ಮಲ್ಲಯ್ಯ ಕಟ್ಟಿಮನಿ ಮಾತನಾಡಿದರು.

ಅಕ್ರಮ ಮರಳು ಸಂಗ್ರಹ: ಕಣ್ಮುಚ್ಚಿ ಕುಳಿತ ಅಧಿಕಾರಿಗಳು

ರಾಯಚೂರು: ದೇವದುರ್ಗ ತಾಲೂಕಿನ ಕರ್ಕಿ ಹಳ್ಳಿ ಗ್ರಾಮದಲ್ಲಿ ಸುಮಾರು 15 ಕೋಟಿ ಮೌಲ್ಯದ ಅಕ್ರಮ ಮರಳು ದಾಸ್ತಾನು ಮಾಡಲಾಗಿದ್ದು, ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಿರಿಯ ಅಧಿಕಾರಿ ಮತ್ತು ಹಟ್ಟಿ ಚಿನ್ನದ ಗಣಿ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಪ್ರಕರಣದ ಬಗ್ಗೆ ತನಿಖೆ ನಡೆಸುವಂತೆ ಸಾಮಾಜಿಕ ಕಾರ್ಯಕರ್ತ ಬಸವರಾಜ ನಾಯಕ ಮಸ್ಕಿ ಒತ್ತಾಯಿಸಿದರು.

ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಅಕ್ರಮ ಮರಳು ಸಂಗ್ರಹದ ಬಗ್ಗೆ ಸಾಕ್ಷ್ಯ ಚಿತ್ರಗಳೊಂದಿಗೆ ದೂರು ನೀಡಲಾಗಿದೆ. ಲೋಕಾಯುಕ್ತಕ್ಕೆ ದೂರು ಕೊಡುವುದರ ಜತೆಗೆ ನ್ಯಾಯಾಲಯದ ಮೊರೆ ಹೋಗುವುದಾಗಿಯೂ ಅವರು ಎಚ್ಚರಿಕೆ ನೀಡಿದರು.

ಕರ್ಕಿಹಳ್ಳಿಯಲ್ಲಿ ಯಾವುದೇ ಅಕ್ರಮ ಮರಳು ಸಂಗ್ರಹವಾಗಿಲ್ಲ ಎಂದು ಹೇಳಿದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು, ಕಳೆದ ಎರಡ್ಮೂರು ದಿನಗಳ ಹಿಂದೆ ಜಮೀನು ಮಾಲೀಕನ ಮೇಲೆ ದೂರು ದಾಖಲಿಸಿಕೊಂಡು ಕೇವಲ 60 ಲಕ್ಷ ರು. ಮೌಲ್ಯದ ಮರಳು ಸಂಗ್ರಹದ ಬಗ್ಗೆ ದೂರು ದಾಖಲಿಸಿದ್ದಾರೆ. ಆದರೆ 15 ಕೋಟಿ ರೂಪಾಯಿ ಮರಳು ಸಂಗ್ರಹವಿದ್ದು, ಇಷ್ಟೊಂದು ಮರಳು ಸಂಗ್ರಹವಾಗಿದ್ದರೂ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಮತ್ತು ಪೊಲೀಸರು ಏನು ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು.

ವಿನೋದ ಕುಮಾರ ಎನ್ನುವ ವ್ಯಕ್ತಿಯ ಮೇಲೆ ಪ್ರಕರಣ ದಾಖಲಿಸಲಾಗಿದ್ದು, ಇವರು ಇ ಸ್ಟ್ಯಾಂಪ್ ಮೂಲಕ ಒಪ್ಪಂದ ಮಾಡಿಕೊಂಡಿದ್ದಾರೆ. ಈ ಒಪ್ಪಂದದಲ್ಲಿ ಎರಡನೇ ವ್ಯಕ್ತಿ ಶ್ರೀನಿವಾಸ ಎಂದು ನಮೂದಿಸಲಾಗಿದೆ. ಗಣಿ ಕಂಪನಿ ಹೆಸರು ಯಾಕಿಲ್ಲ, ಕಂಪನಿ ಬದಲಿ ಹೆಸರಿರುವ ವ್ಯಕ್ತಿಯೇ ಅಕ್ರಮ ಮರಳು ದಂಧೆ ನಡೆಸಿರಬಹುದು ಎಂಬ ಸಂಶಯ ವ್ಯಕ್ತವಾಗುತ್ತಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಶರಣಗೌಡ, ಮಂಜುನಾಥ ಹೇರುಂಡಿ, ಆಂಜನೇಯ ಉಪಸ್ಥಿತರಿದ್ದರು.

ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಾಮಾಜಿಕ ಕಾರ್ಯಕರ್ತ ಬಸವರಾಜ ನಾಯಕ ಮಸ್ಕಿ ಮಾತನಾಡಿದರು.

> ಹಟ್ಟಿ ಚಿನ್ನದ ಗಣಿ ಕಂಪನಿಯ ಅಧಿಕಾರಿಗಳು ಕರ್ಕಿಹಳ್ಳಿ ಹೊರತುಪಡಿಸಿ, ಉಳಿದ ಜಮೀನನಲ್ಲಿರುವ ಮರಳು ತಮ್ಮದಲ್ಲವೆಂದು ಸ್ಪಷ್ಟ ಪಡಿಸಿದ್ದಾರೆ. ಕೃಷ್ಣಾ ನದಿ ತೀರದಲ್ಲಿ ಸುಮಾರು 15 ಕೋಟಿ ರು. ಮೌಲ್ಯದ ಅಕ್ರಮ ಮರಳು ಸಂಗ್ರಹವಿದ್ದರೂ, ಗಣಿ ಮತ್ತುಭೂ ವಿಜ್ಞಾನ ಇಲಾಖೆ ಹಿರಿಯ ಅಧಿಕಾರಿ ಪುಷ್ಪಲತಾ ಕಣ್ಣು ಮುಚ್ಚಿ ಕುಳಿತಿರುವುದು ಅನುಮಾನಕ್ಕೆ ಕಾರಣವಾಗಿದೆ.
> -ಬಸವರಾಜ ನಾಯಕ ಮಸ್ಕಿ, ಸಾಮಾಜಿಕ ಕಾರ್ಯಕರ್ತ

ತೊಗರಿ ಖರೀದಿ ಕೇಂದ್ರ ತೆರೆಯಲು ಪ್ರತಿಭಟನೆ

ಕುಷ್ಟಗಿ: ಹೆಚ್ಚಿನ ಪ್ರಮಾಣದಲ್ಲಿ ತೊಗರಿ ಮಾರುಕಟ್ಟೆಗೆ ಬರುತ್ತಿದಂತೆಯೇ ವರ್ತಕರು ತೊಗರಿ ದರ ಇಳಿಕೆ ಮಾಡಿದ್ದು, ಕೂಡಲೇ ಸರಕಾರ ತೊಗರಿ ಖರೀದಿ ಕೇಂದ್ರ ಆರಂಭಿಸಬೇಕು ಎಂದು ಆಗ್ರಹಿಸಿ ಡಿ.29 ರಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಕುಷ್ಟಗಿ ಎಪಿಎಂಸಿ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಸಂಘಟನೆ ರಾಜ್ಯ ಪ್ರಧಾನ ಕಾರ್ಯದರ್ಶಿ ನಜೀರಸಾಬ ಮೂಲಿಮನಿ ತಿಳಿಸಿದ್ದಾರೆ. ಈ ಬಗ್ಗೆ ಪ್ರಕಟಣೆ ನೀಡಿ ಕುಷ್ಟಗಿ ತಾಲೂಕಿನಾದ್ಯಂತ ರೈತರು ತೊಗರಿ ಬೆಳೆದಿದ್ದು, ಈಗಾಗಲೇ ಕಟಾವು ಪ್ರಾರಂಭವಾಗಿದೆ. ಆದರೆ, ತೊಗರಿ ಬೆಳೆ ತಿಂಗಳ ಹಿಂದೆ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಲ್‌ಗೆ 10,500 ರು.ಗೆ ಖರೀದಿ ಮಾಡಲಾಗುತ್ತಿತು. ಈಗ ಏಕಾಏಕಿ ಖರೀದಾರರು ಪ್ರತಿ ಕ್ವಿಂಟಾಲ್‌ಗೆ 6 ದಿಂದ 7 ಸಾವಿರಗೆ ಇಳಿಕೆ ಮಾಡಿದ್ದಾರೆ. ಇದರಿಂದ ರೈತರಿಗೆ ಸಂಕಷ್ಟ ಎದುರಾಗಿದೆ. ಕಡಿಮೆದರದಲ್ಲಿ ಖರೀದಿಸುವ ವ್ಯಾಪಾರಿಗಳ ನಡೆ ಖಂಡನೀಯ. ಹಾಗಾಗಿ ಸರಕಾರ ಬೆಂಬಲ ಬೆಲೆಗೆ ತೊಗರಿ ಖರೀದಿ ಕೇಂದ್ರ ಆರಂಭಿಸುವಂತೆ ಒತ್ತಾಯಿಸಿ ಎಪಿಎಂಸಿ ಕಚೇರಿ ಆವರಣದಲ್ಲಿ ಬೆ.11ಕ್ಕೆ ಬೃಹತ್ ಪ್ರತಿಭಟನೆ ನಡೆಸಲಾಗುತ್ತದೆ ಎಂದು ತಿಳಿಸಿದ್ದಾರೆ.

ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಕೇಲೇಜು ವಿದ್ಯಾರ್ಥಿ, ವಿದೇಶದಲ್ಲಿ ಅಧ್ಯಯನ ಮಾಡಿ, ಪುಣೆಯ ಸಿಎಸ್‌ಐಆರ್-ನ್ಯಾಷನಲ್ ಕೆಮಿಕಲ್ ಲ್ಯಾಬೋರೇಟರಿಯ ಹಿರಿಯ ವಿಜ್ಞಾನಿಯಾಗಿ ಕೆಲಸ ನಿರ್ವಹಣೆ ಮಾಡುತ್ತಿರುವ ಹಿನ್ನೆಲೆ ಸೈಯದ್ ಗುಲಾಮ್ ದಸ್ತಗೀರನ್ನು ಅವರ ಹೈಸ್ಕೂಲ್ ಸಹಪಾಠಿಗಳು ಆತ್ಮೀಯವಾಗಿ ಸನ್ಮಾನಿಸಿದರು. ಶ್ರೀಕಾಂತ ತಿಕೋಟಿಕರ್, ಅನಿಲ್ ನಾಲ್ವಾಡ, ಉಮೇಶ ಕುರುಡೇಕರ್, ಮಲ್ಲಿಕಾರ್ಜುನ ಪಾಟೀಲ್ ಇದ್ದರು.

{ ಡಿ.ಕೆ ಶಿವಕುಮಾರ್ } ಉಪಮುಖ್ಯಮಂತ್ರಿ

ಗಾಂಧಿಯವರ ಇತಿಹಾಸವನ್ನು ಮೆಲುಕು ಹಾಕಲು ಇಡೀ ದೇಶದ ಮೂಲೆ ಮೂಲೆಗಳಿಂದ ನಾಯಕರು ಬೆಳಗಾವಿಗೆ ಬಂದಿದ್ದರು. ನಮ್ಮ ಮುಂದಿನ ಪೀಳಿಗೆಗೆ ಗಾಂಧಿ ಅವರ ಆದರ್ಶಗಳನ್ನು ತಲುಪಿಸುವ ಕೆಲಸಕ್ಕೆ ನಾವು ಮುಂದಾಗಿದ್ದೆವು. ಆದರೆ ವಿಧಿಯಾಟ ಬೇರೆಯಾಗಿತ್ತು.

ಪ್ರಾಂತ್ಯ ರೈತ ಸಂಘದಿಂದ ರೈತ ಜಾಗೃತಿ ಜಾಥಾ

ಸಂಡೂರು: ಅರಣ್ಯ ಕಾಯಿದೆ ಅಡಿ ಹಕ್ಕು ಪತ್ರ ಪಡೆಯಲು ಸಾಗುವಳಿದಾರರು ಸೂಕ್ತ ದಾಖಲೆಗಳೊಂದಿಗೆ ಅರ್ಜಿಗಳನ್ನು ಪುನರ್ ಪರಿಶೀಲಿಸಲು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಕುರಿತು ಕರ್ನಾಟಕ ಪ್ರಾಂತ ರೈತ ಸಂಘ ತಾಲೂಕು ಸಮಿತಿಯಿಂದ ರೈತ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿತ್ತು. ಭಾರತ ಕಮ್ಯೂನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಜೆ.ಎಂ.ಚನ್ನಬಸಯ್ಯ ಮಾತನಾಡಿ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಮಟ್ಟದ ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪರಂಪರೆ ಅರಣ್ಯ ವಾಸಿಗಳ ಅರಣ್ಯ ಹಕ್ಕುಗಳ ಮಾನ್ಯ ಮಾಡುವ ಸಮಿತಿಯಿಂದ ಸಾಗುವಳಿದಾರರಾದ ಬಡ ರೈತರಿಗೆ 15 ವರ್ಷ ಕಳೆದರೂ ಭೂಮಿ ಹಕ್ಕು ಪತ್ರ ನೀಡಿರುವುದಿಲ್ಲ. ಬಗರ ಹುಕುಂ ಸಾಗುವಳಿದಾರರು ನಮೂನೆ 53,57ರ ಅಡಿಯಲ್ಲಿ ಸಂಡೂರು ತಾಲೂಕಿನಲ್ಲಿ ಹತ್ತು ಸಾವಿರಕ್ಕೂ ಅಧಿಕ ಅರ್ಜಿ ಸಲ್ಲಿಸಲಾಗಿದೆ. ಸಾಗುವಳಿ ಭೂಮಿಯನ್ನು ರಾಳಗುಡ್ಡ, ಕರಾಪು, ಗೋಮಾಳ, ಹಳ್ಳ ಇತ್ಯಾದಿ ಹೆಸರಿನಲ್ಲಿ ರೈತರಿಗೆ ಭೂಮಿ ನೀಡುವದರಿಂದ ವಂಚಿಸಲಾಗುತ್ತಿದೆ ಎಂದು ಆರೋಪಿಸಿದರು. ತಾಲೂಕ ಅಧ್ಯಕ್ಷ ಪಂಪನಗೌಡ ಕುರೆಕುಪ್ಪ, ಕಾರ್ಯದರ್ಶಿ ಖಲಂ ದರ ಬಾಷಾ, ಕಾಲೂಬ, ಕೃಷ್ಣಪ್ಪ, ಹಂಪಮ್ಮ ಇತರರಿದ್ದರು. ಜಾಥಾ ಕೃಷ್ಣ ನಗರದಿಂದ ಮುರಾರಿಪುರ, ತಾರನಗರ, ನಾಗಲಾಪುರ, ಬನ್ನಿಹಟ್ಟಿ, ಲಿಂಗದಹಳ್ಳಿ, ಉಬ್ಬಲಗಂಡಿ, ರಾಜಪುರ, ವಿಠಲಾಪುರ ಗ್ರಾಮ ಪಂಚಾಯಿತಿ ಹಳ್ಳಿಗಳಲ್ಲಿ ಜಾಗೃತ ಪ್ರಚಾರ ಸಭೆ ನಡೆಸಿತು.

ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಡಿ.31ಕ್ಕೆ ಮುಷ್ಕರ

ಬಳ್ಳಾರಿ: ಬಾಕಿ ವೇತನ ಪಾವತಿಸಬೇಕು, ವೇತನ ಪರಿಷ್ಕರಣೆ, ನಿವೃತ್ತ ನೌಕರರಿಗೆ ಹಣ ಬಿಡುಗಡೆ ಮಾಡಬೇಕು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯದಲ್ಲಿ ಸಾರಿಗೆ ಸಂಸ್ಥೆಗಳ ಬಸ್ ಓಡಾಟವನ್ನು ಡಿ.31ರಿಂದ ಬಂದ್ ಆಗಲಿದೆ ಎಂದು ರಾಜ್ಯ ರಸ್ತೆ ಸಾರಿಗೆ ನಡುವೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಮುಖಂಡ ಆದಿಮೂರ್ತಿ ಹೇಳಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗ್ಯಾರಂಟಿ ಯೋಜನೆಗಳಿಂದ ಸಾರಿಗೆ ಸಂಸ್ಥೆಗೆ ಶೇ.25ರಷ್ಟು ಆದಾಯ ಹೆಚ್ಚಿದೆ. ಯೋಜನೆಯ ಹಣವನ್ನು ಸರಕಾರ ಸಂಪೂರ್ಣ ಕೊಟ್ಟಿಲ್ಲ. ಕೊಟ್ಟರೆ ನೌಕರರ ಬೇಡಿಕೆ ಈಡೇರಿಸಲು, ಹೊಸ ಬಸ್ ಖರೀದಿಸಬಹುದು ಎಂದರು. ಸಚಿವ ದಿನೇಶ್ ಗುಂಡೂರಾವ್, ಸಂತೋಷ್ ಲಾಡ್ ಅವರು ಬೆಳಗಾವಿ ಚಲೋ ಸಂದರ್ಭದಲ್ಲಿ ಸರಕಾರದ ಪರವಾಗಿ ಸ್ವೀಕರಿಸಿ ಸಾರಿಗೆ ನೌಕರರ ಬೇಡಿಕೆಗಳ ಬಗ್ಗೆ ಮುಖ್ಯ ಮಂತ್ರಿಗಳ ಜತೆ ಚರ್ಚಿಸಿ ಬಗೆಹರಿಸಲು ಪ್ರಯತ್ನಿಸುವುದಾಗಿ ಹೇಳಿದ್ದರು. ಸಾರಿಗೆ ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸದಿದ್ದರೆ ಡಿ.31 ರಂದು ಮುಷ್ಕರ ನಡೆಸುವುದು ಅನಿವಾರ್ಯವಾಗಿದೆ ಎಂದರು. ವೇತನ ಹೆಚ್ಚಳ 38 ತಿಂಗಳ ಬಾಕಿ ಉಳಿಯಲು ಸರಕಾರ ಹಾಗೂ ಆಡಳಿತ ವರ್ಗದ ವಿಳಂಬ ಧೋರಣೆಯೇ ಕಾರಣವಾಗಿದ್ದು, ಸಾರಿಗೆ ನೌಕರರು ಯಾವುದೇ ರೀತಿಯಿಂದಲೂ ಹೊಣೆಗಾರರಲ್ಲ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಆದಿಮೂರ್ತಿ, ಹನುಮಂತಪ್ಪ, ಗಾದಲಿಂಗಪ್ಪ, ಶಿವಕುಮಾರ್, ಚೆನ್ನಪ್ಪ, ಬಸವರಾಜ್ ಇದ್ದರು.

ಸ್ವರ್ಣ ಜಯಂತಿ ಇಂದಿನಿಂದ ಫೆ.6ವರೆಗೆ

ಬಳ್ಳಾರಿ: ಸೇಡಂನ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಕಲ್ಬುರ್ಗಿಯ ಭಾರತ ವಿಕಾಸ ಸಂಗಮ ಮತ್ತು ವಿಕಾಸ ಅಕಾಡೆಮಿ ಪ್ರತಿ 3 ವರ್ಷಕ್ಕೆ ನಡೆಸುತ್ತಿರುವ ಭಾರತೀಯ ಸಂಸ್ಕೃತಿ ಉತ್ಸವ ಮತ್ತು ಕೊತ್ತಲ ಸ್ವರ್ಣ ಜಯಂತಿ ಜ.28 ರಿಂದ ಫೆ.6 ವರೆಗೆ ಕಲ್ಬುರ್ಗಿ- ಸೇಡಂ ರಾಜ್ಯ ಹೆದ್ದಾರಿಯ ಬೀರನಹಳ್ಳಿ ಕ್ರಾಸ್‌ನಲ್ಲಿ ಪ್ರಕೃತಿ ನಗರದಲ್ಲಿ ಹಮ್ಮಿಕೊಂಡಿರುವುದಾಗಿ ಮಾಜಿ ಸಂಸದ ಮತ್ತು ಉತ್ಸವದ ಸಂಯೋಜಕ ಬಸವರಾಜ್ ಪಾಟೀಲ್ ಸೇಡಂ ಹೇಳಿದರು. ನಗರದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನೆಲ, ಜಲ, ಪ್ರಕೃತಿ ರಕ್ಷಣೆಯ ಉದ್ದೇಶದಿಂದ ವಿಕಾಸ ಅಕಾಡೆಮಿ ಕಾರ್ಯನಿರ್ವಹಿಸುತ್ತಿದೆ. ಅಕಾಡೆಮಿಯಿಂದ ಏಳನೇ ಭಾರತೀಯ ಸಂಸ್ಕೃತಿ ಉತ್ಸವ ಹಮ್ಮಿಕೊಂಡಿದೆ. ಇಲ್ಲಿ ಕೃಷಿ, ಜ್ಞಾನ ವಿಜ್ಞಾನ, ದೃಶ್ಯಕಲಾ, ಆರೋಗ್ಯ, ಕಾಯಕ, ಸೇವಾ, ಮಕ್ಕಳ, ಸ್ವದೇಶಿ ಉದ್ಯಮ, ಉದ್ಯಮ, ಸಂಸ್ಕೃತಿ ಲೋಕ ಅನಾವರಣಗೊಳ್ಳಲಿದೆ ಎಂದರು. ದೇಶ ವಿದೇಶದ ಗಣ್ಯರು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ. ರಾಷ್ಟ್ರಪತಿ ರಮಾನಾಥ ಕೋವಿಂದ, ಅಮೆರಿಕದ ಅಲ್ ಗೋರ್, ಮಾರಿಷಸ್ ಶಿಕ್ಷಣ ಕಾರ್ಯದರ್ಶಿ ಯುಧೀಷ್ಟರ್ ಮನ್ ಭೋಭೋದ್ ಆಗಮಿಸಲಿದ್ದಾರೆ ಎಂದರು. ಅನನ್ಯ ಭಟ್, ಗಂಗಾವತಿ ಪ್ರಾಣೇಶ್, ಪ್ರಭಾತ್ ಕಲಾವಿದರು ಸೇರಿದಂತೆ 5 ಸಾವಿರ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ನಡೆಯಲಿದೆ. ಸುದ್ದಿಗೋಷ್ಠಿಯಲ್ಲಿ ಗಣಿ ಉದ್ಯಮಿ ಬಿ.ಕೆ.ನಾಗನಗೌಡ, ಮಾಜಿ ಮೇಯರ್ ಪಾರ್ವತಿ ಇಂದುಶೇಖರ್, ಅಡವಿಸ್ವಾಮಿ, ವೆಂಕಟೇಶ್ ಬಡಿಗೇರ್ ಇದ್ದರು.

ಹಲವಡೆ ವಿದ್ಯುತ್ ವ್ಯತ್ಯಯ ಇಂದು

ಬಳ್ಳಾರಿ: ಗ್ರಾಮೀಣ ಜೆಸ್ಕಾಂ ವ್ಯಾಪ್ತಿಯ 110/11ಕೆ.ವಿ ಸೋಮಸಮುದ್ರ ಉಪ-ಕೇಂದ್ರದ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಮತ್ತು ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ 110/11ಕೆ.ವಿ ಸೋಮಸಮುದ್ರ ವಿದ್ಯುತ್ ಉಪ-ಕೇಂದ್ರ ಮತ್ತು 33/11ಕೆ.ವಿ ಗುಡದೂರು ವಿದ್ಯುತ್ ಉಪಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ 11ಕೆ.ವಿ ಮಾರ್ಗಗಳಲ್ಲಿ ಡಿ.28 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು: ಎಫ್-1 ಎನ್‌ಜೆವೈ ಬಾಲಾಜಿ ನಗರ ಕ್ಯಾಂಪ್ ಮಾರ್ಗದ ಕರ್ಲಗುಂದಿ, ಕೋಳೂರು, ಮದಿರೆ, ಕೊಳಗಲ್ಲು, ಭಾಗ್ಯನಗರ ಕ್ಯಾಂಪ್, ಮಲ್ಲಾರೆಡ್ಡಿ ಕ್ಯಾಂಪ್, ಕೃಷಿ ಪ್ರದೇಶಗಳು. ಎಫ್-11 ಶ್ರೀಧರಗಡ್ಡೆ ಎನ್.ಜೆ.ವೈ ಫೀಡರ್ ಮಾರ್ಗದ ಸೋಮಸಮುದ್ರ, ವಕ್ರಾಣಿ ಕ್ಯಾಂಪ್, ಭಾಗ್ಯನಗರ ಕ್ಯಾಂಪ್, ಮಲ್ಲಾರೆಡ್ಡಿ ಕ್ಯಾಂಪ್ ಗ್ರಾಮಗಳು. ಎಫ್-5 ಡಾಕ್ಟರ್ ಕ್ಯಾಂಪ್ ಮಾರ್ಗದ ಶ್ರೀಧರಗಡ್ಡೆ, ಗುಡಾರ್ ನಗರ. ಎಫ್-1 ಡಿ.ಕಗ್ಗಲ್ ಐಪಿ ಮಾರ್ಗದ ಡಿ.ಕಗ್ಗಲ್ ಕೃಷಿ ಪ್ರದೇಶಗಳು. ಹಂದಿಹಾಳ್ ಕೃಷಿ ಪ್ರದೇಶಗಳು. ಎಫ್-3 ಹಂದಿಹಾಳ್ ಐಪಿ ಮಾರ್ಗದ ಹಂದಿಹಾಳ್, ಗುಡುದೂರು ಗ್ರಾಮ. ಎಫ್-5 ಚಾನಾಳ್ ಐಪಿ ಮಾರ್ಗದ ಚಾನಾಳ್ ಕೃಷಿ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಎಂದು ಜೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಮೋಹನ್‌ಬಾಬು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಸಚಿನ್‌ಗೆ ಎಂಸಿಸಿ ಕ್ಲಬ್ ಗೌರವ

ಮೆಲ್ಬರ್ನ್: ಟೀಮ್ ಇಂಡಿಯಾದ ದಿಗ್ಗಜ ಆಟಗಾರ ಸಚಿನ್ ತೆಂಡೂಲ್ಕರ್ ಅವರು ಪ್ರತಿಷ್ಠಿತ ಮೆಲ್ಬರ್ನ್ ಕ್ಲಬ್‌ನ ಗೌರವ ಸದಸ್ಯತ್ವವನ್ನು ಸ್ವೀಕರಿಸಿದ್ದಾರೆ. ಈ

ವಿಚಾರವನ್ನು ಮೆಲ್ಬರ್ನ್ ಕ್ರಿಕೆಟ್ ಕ್ಲಬ್(ಎಂಸಿಸಿ) ತನ್ನ ಅಧಿಕೃತ ಪ್ರಕಟನೆಯಲ್ಲಿ ತಿಳಿಸಿದೆ. 1838ರಲ್ಲಿ ಸ್ಥಾಪನೆಗೊಂಡ ಎಂಸಿಸಿ ಆಸ್ಟ್ರೇಲಿಯಾದ ಅತ್ಯಂತ ಹಳೆಯ ಕ್ಲಬ್ ಆಗಿದೆ. ಕ್ರಿಕೆಟ್‌ಗೆ ನೀಡಿರುವ ಅದ್ಭುತ ಕೊಡುಗೆಯನ್ನು ಪರಿಗಣಿಸಿ ಕ್ಲಬ್‌ನ ಗೌರವಾನ್ವಿತ ಸದಸ್ಯರಾಗುವಂತೆ ಕಳುಹಿಸಿದ್ದ ಆಹ್ವಾನವನ್ನು ಭಾರತದ ಮಾಜಿ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಒಪ್ಪಿಕೊಂಡಿದ್ದಾರೆ ಎಂದು ಘೋಷಿಸಲು ಎಂಸಿಸಿ ಹರ್ಷ ವ್ಯಕ್ತಪಡಿಸಿದೆ. 2012ರಲ್ಲಿ ಆಸ್ಟ್ರೇಲಿಯಾದ ಅತ್ಯುನ್ನತ ಪ್ರಶಸ್ತಿಯಾದ 'ಆರ್ಡರ್ ಆಫ್ ಆಸ್ಟ್ರೇಲಿಯಾ'ಗೌರವವನ್ನು ಸಚಿನ್ ಅವರಿಗೆ ನೀಡಲಾಗಿತ್ತು. ಎಂಸಿಜಿಯಲ್ಲಿ ಅತ್ಯಧಿಕ ರನ್ ಗಳಿಸಿರುವ ಭಾರತೀಯ ದಾಖಲೆ ಸಚಿನ್ ಹೆಸರಿನಲ್ಲಿದೆ. ಈ ಮೈದಾನದಲ್ಲಿ 5 ಟೆಸ್ಟ್ ಪಂದ್ಯಗಳನ್ನು ಆಡಿರುವ ಸಚಿನ್, 44.90ರ ಸರಾಸರಿ, 58.69 ಸ್ಟ್ರೈಕ್ ರೇಟ್‌ನಲ್ಲಿ 449 ರನ್ ಗಳಿಸಿದ್ದಾರೆ.

ರನೌಟ್ ಬಗ್ಗೆ ವಾಗ್ವಾದ

ಹೊಸದಿಲ್ಲಿ: ಯಶಸ್ವಿ ಜೈಸ್ವಾಲ್ ಮತ್ತು ವಿರಾಟ್ ಕೊಹ್ಲಿ ನಡುವಣ ಮೂರನೇ ವಿಕೆಟ್‌ಗೆ ಜತೆಯಾಟ ಮುರಿಯಲು ಕಾರಣವಾದ ರನೌಟ್ ಸಂಬಂಧ ಭಾರತದ ಮಾಜಿ ಕ್ರಿಕೆಟಿಗರಾದ ಸಂಜಯ್ ಮಂಜ್ರೇಕರ್ ಮತ್ತು ಇರ್ಫಾನ್ ಪಠಾಣ್ ತೀವ್ರ ವಾಗ್ವಾದದಲ್ಲಿ ತೊಡಗಿದ ದೃಶ್ಯ ಸ್ಟಾರ್ ಸ್ಪೋರ್ಟ್ಸ್‌ನ ಶೋನಲ್ಲಿ ನೇರ ಪ್ರಸಾರ ಕಂಡಿದೆ. ಜೈಸ್ವಾಲ್ ಮತ್ತು ಕೊಹ್ಲಿ ನಡುವೆ ಸಂವಹನ ಕೊರತೆ ಯಶಸ್ವಿ ಜೈಸ್ವಾಲ್ ಅವರ ರನ್ ಔಟ್ ಗೆ ಕಾರಣವಾಯಿತು. ಜೈಸ್ವಾಲ್ ಅವರ ಕರೆಗೆ ಕೊಹ್ಲಿ ಸ್ಪಂದಿಸಬೇಕಿತ್ತು ಮತ್ತು ಸಿಂಗಲ್ಸ್ ತೆಗೆದುಕೊಳ್ಳಬೇಕಿತ್ತು ಎಂದು ಮಾಂಜ್ರೇಕರ್ ಅಭಿಪ್ರಾಯಪಟ್ಟರು. ಆದರೆ ಅದನ್ನು ಇರ್ಫಾನ್ ಪಠಾಣ್ ಇದನ್ನು ಒಪ್ಪಲಿಲ್ಲ. ಜೈಸ್ವಾಲ್ ಹೊಡೆದ ಹೊಡೆತವು ಸಾಕಷ್ಟು ಕಠಿಣವಾಗಿರುವುದರಿಂದ ಕೊಹ್ಲಿ ಕೂಡ ಸ್ಟ್ರೈಕರ್‌ನ ಕೊನೆಯಲ್ಲಿ ರನ್ ಔಟ್ ಆಗುವ ಅಪಾಯದಲ್ಲಿದ್ದರು ಎಂದು ಪಠಾಣ್ ಹೇಳಿದರು. ಆಗ ಸಿಟ್ಟಿಗೆದ್ದ ಮಾಂಜ್ರೇಕರ್, ಇರ್ಫಾನ್ ಪಠಾಣ್ ಅವರ ಹೊಸ ವ್ಯಾಖ್ಯಾನವನ್ನು ಅದು ಓಟವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಕೋಚಿಂಗ್ ಕೈಪಿಡಿಗೆ ಸೇರಿಸಬೇಕು ಎಂದು ಖಂಡಾತುಂಡವಾಗಿ ಹೇಳಿದರು.

ಕೊಹ್ಲಿ ಆಟ ಕೆಡಿಸಿದ ಪ್ರೇಕ್ಷಕರು: ಮೆಲ್ಬೋರ್ನ್: ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿಯಲ್ಲಿ ಆಸ್ಟ್ರೇಲಿಯಾದ ಯುವ ಬ್ಯಾಟರ್ ಸ್ಯಾಮ್ ಕೊನ್‌ಸ್ಟಸ್ ಅವರೊಂದಿಗೆ ವಾಗ್ವಾದ ನಡೆಸಿ ದಂಡನೆಗೆ ಒಳಗಾಗಿರುವ ಟೀಮ್ ಇಂಡಿಯಾದ ಆಟಗಾರ ವಿರಾಟ್ ಕೊಹ್ಲಿಗೆ ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ಮತ್ತೆ ಕಹಿ ಅನುಭವ ಎದುರಾಗಿದೆ.

ಸ್ಮಿತ್ ಶತಕ, 474 ರನ್ ಪೇರಿಸಿದ ಆಸ್ಟ್ರೇಲಿಯಾ, ಭಾರತಕ್ಕೆ ಮತ್ತೆ ಫಾಲೋ ಆನ್ ಭೀತಿ!

ಬಾಕ್ಸಿಂಗ್ ಡೇ ಟೆಸ್ಟ್‌ನಲ್ಲೂ ಭಾರತ ಪರೇಡ್

ಮೆಲ್ಬೋರ್ನ್: ಇಲ್ಲಿ ನಡೆಯುತ್ತಿರುವ 4ನೇ ಟೆಸ್ಟ್ ನಲ್ಲಿ ಟೀಂ ಇಂಡಿಯಾ ಮತ್ತೆ ಸಂಕಷ್ಟಕ್ಕೀಡಾಗಿದೆ. ಎರಡನೇ ದಿನದಾಟದ ಅಂತ್ಯಕ್ಕೆ ಭಾರತ 310 ರನ್‌ಗಳ ಹಿನ್ನಡೆಯಲ್ಲಿದೆ. ಮೊದಲ ಇನಿಂಗ್ಸ್ ನಲ್ಲಿ ಟೀಂ ಇಂಡಿಯಾ 5 ವಿಕೆಟ್ ನಷ್ಟಕ್ಕೆ 164 ರನ್ ಗಳಿಸಿದೆ. ರಿಷಬ್ ಪಂತ್ (6) ಮತ್ತು ರವೀಂದ್ರ ಜಡೇಜಾ (4) ಕ್ರೀಸ್‌ನಲ್ಲಿದ್ದಾರೆ. ನಾಳೆ ಪಂದ್ಯದ 3ನೇ ದಿನವಾಗಿದ್ದು, ಭಾರತ ಫಾಲೋ ಆನ್ ತಪ್ಪಿಸಿಕೊಳ್ಳಬೇಕಾದರೆ ಇನ್ನೂ 111 ರನ್ ಪೇರಿಸಬೇಕಿದೆ.

ಆಸ್ಟ್ರೇಲಿಯಾ ಬೃಹತ್ ಮೊತ್ತ: ಮೊದಲ ದಿನ 6 ವಿಕೆಟ್‌ಗೆ 311 ರನ್ ಗಳಿಸಿದ್ದ ಆಸೀಸ್, ಎರಡನೇ ದಿನ ಆ ಮೊತ್ತವನ್ನು 474 ರನ್‌ಗಳಿಗೆ ಏರಿಸಿ ಆಲೌಟ್ ಆಯಿತು. ಆಸ್ಟ್ರೇಲಿಯದ ಸ್ಟಾರ್ ಬ್ಯಾಟ್ಸ್‌ಮನ್ ಸ್ಟೀವ್ ಸ್ಮಿತ್ ಅವರ ಶತಕ ಎರಡನೇ ದಿನದಾಟದ ವಿಶೇಷವಾಗಿತ್ತು. ಸ್ಮಿತ್ 197 ಎಸೆತಗಳಲ್ಲಿ 13 ಬೌಂಡರಿ, 3 ಸಿಕ್ಸರ್‌ಗಳೊಂದಿಗೆ 140 ರನ್ ಗಳಿಸಿದರು. ನಾಯಕ ಪ್ಯಾಟ್ ಕಮ್ಮಿನ್ಸ್ (49) ಸ್ಮಿತ್‌ಗೆ ಅತ್ಯುತ್ತಮ ಬೆಂಬಲ ನೀಡಿದರು. ಒಂದು ಕಡೆ ಸ್ಟೀವನ್ ಸ್ಮಿತ್, ಇನ್ನೊಂದು ತುದಿಯಲ್ಲಿ ಪ್ಯಾಟ್ ಕಮ್ಮಿನ್ಸ್ ಸಿಡಿಲಬ್ಬರದ ಬ್ಯಾಟಿಂಗ್ ಮೂಲಕ 2ನೇ ದಿನದ ಮೊದಲ ಸೆಷನ್‌ನಲ್ಲಿ ಟೀಮ್ ಇಂಡಿಯಾ ಬೌಲರ್‌ಗಳನ್ನು ಕಾಡಿದರು. ಕೊನೆಯಲ್ಲಿ ಸ್ಟಾರ್ಕ್ 15, ಲಿಯಾನ್ 13 ರನ್ ಗಳಿಸಿದರು.

4 ವಿಕೆಟ್ ಪಡೆದ ಬುಮ್ರಾ: ಆಸೀಸ್ ಪರ ಲಾಬುಶೇನ್ 72, ಉಸ್ಮಾನ್ ಖವಾಜಾ 57, ಸ್ಯಾಮ್ ಕಾನ್ಸ್ಟಾಸ್ 60 ಹಾಗೂ ಪ್ಯಾಟ್ ಕಮಿನ್ಸ್ 49 ರನ್ ಗಳಿಸಿದರು. ಭಾರತದ ಪರ ಜಸ್‌ಪ್ರಿತ್ ಬುಮ್ರಾ 99ಕ್ಕೆ 4 ವಿಕೆಟ್ ಪಡೆದರೆ, ಜಡೇಜ 78ಕ್ಕೆ 3 ವಿಕೆಟ್, ಆಕಾಶ್ ದೀಪ್ 2 ಹಾಗೂ ವಾಷಿಂಗ್ಟನ್ ಸುಂದರ್ ಒಂದು ವಿಕೆಟ್ ಪಡೆದರು.

475 ರನ್‌ಗಳ ಬೃಹತ್ ಮೊತ್ತವನ್ನು ಬೆನ್ನತ್ತಿದ ಭಾರತ ತಂಡ ಉತ್ತಮ ಆರಂಭ ಪಡೆಯಲಿಲ್ಲ. ಆರಂಭಿಕನಾಗಿ ಬಡ್ತಿ ಪಡೆದು ಬಂದ ನಾಯಕ ರೋಹಿತ್ ಶರ್ಮಾ 3 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. 3ನೇ ಕ್ರಮಾಂಕಕ್ಕೆ ಹಿಂಬಡ್ತಿ ಪಡೆದು ಬಂದ ರಾಹುಲ್ 24 ರನ್ ಗಳಿಸಿ ಔಟಾದರು. ಆದರೆ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ (82 ರನ್) ಕೊಹ್ಲಿ ಜೊತೆಗೂಡಿ ಶತಕದ ಜೊತೆಯಾಟ ನೀಡಿದರು. 118 ಎಸೆತಗಳಲ್ಲಿ 11 ಬೌಂಡರಿ, 1 ಸಿಕ್ಸರ್ ಸಹಿತ 82 ರನ್ ಗಳಿಸಿ ಉತ್ತಮವಾಗಿ ಆಡುತ್ತಿದ್ದ ಜೈಸ್ವಾಲ್ ರನ್ ಔಟ್ ಆದರು. ಇದಾದ 2 ಓವರ್‌ಗಳಲ್ಲಿ ವಿರಾಟ್ ಕೊಹ್ಲಿ (36) ಹಾಗೂ ಆಕಾಶ್ ದೀಪ್ (0) ಕೂಡ ಪೆವಿಲಿಯನ್‌ಗೆ ಮರಳಿದರು. ಇದರೊಂದಿಗೆ ಟೀಮ್ ಇಂಡಿಯಾ ಕೇವಲ 4 ಓವರ್‌ಗಳ ಅಂತರದಲ್ಲಿ ಐದು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೀಡಾಯಿತು.

ಪ್ರಸ್ತುತ ಭಾರತ 164 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿದೆ. 310 ರನ್‌ಗಳ ಭಾರೀ ಹಿನ್ನಡೆಯಲ್ಲಿರುವ ಟೀಮ್ ಇಂಡಿಯಾ 3ನೇ ದಿನ ಫಾಲೋ ಆನ್ ತಪ್ಪಿಸಿಕೊಳ್ಳಲು ಇನ್ನೂ 111 ರನ್ ಗಳಿಸಬೇಕಿದೆ. ಒಂದು ವೇಳೆ ಭಾರತ ನಾಳೆ 275 ರನ್ ಗಳಿಸಲು ವಿಫಲವಾದರೆ ಆಸ್ಟ್ರೇಲಿಯಾ ಫಾಲೋ ಆನ್ ಹೇರುವ ಸಾಧ್ಯತೆ ಇದೆ.

ಡಾ.ಸಿಂಗ್‌ಗೆ ಗೌರವ

ಮೆಲ್ಬರ್ನ್: ಗುರುವಾರ ನಿಧನರಾದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಗೌರವಾರ್ಥ ಶುಕ್ರವಾರ ಭಾರತೀಯ ಆಟಗಾರರು ಕಪ್ಪು ಪಟ್ಟಿಯನ್ನು ಧರಿಸಿ ಮೈದಾನಕ್ಕಿಳಿದು ಗೌರವ ಸೂಚಿಸಿದರು.

ಮೆಲ್ಬೋರ್ನ್‌ನಲ್ಲೂ ಸ್ಮಿತ್ ದಾಖಲೆ

167 ಎಸೆತಗಳಲ್ಲಿ ಶತಕ ಪೂರೈಸಿದ ಸ್ಮಿತ್ ಒಟ್ಟಾರೆ 197 ಎಸೆತಗಳಲ್ಲಿ 13 ಬೌಂಡರಿ, 3 ಸಿಕ್ಸರ್‌ಗಳ ಸಹಿತ 140 ರನ್ ಗಳಿಸಿ ಆಕಾಶ್ ದೀಪ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ಈ ಶತಕದ ಮೂಲಕ ಭಾರತದ ವಿರುದ್ಧ ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಶತಕ ಸಿಡಿಸಿದ ದಾಖಲೆಗೆ ಪಾತ್ರರಾದರು.

ಆಸ್ಟ್ರೇಲಿಯಾದ ಈ ದಿಗ್ಗಜ ಬ್ಯಾಟ್ಸ್‌ಮನ್ ಮೆಲ್ಬೋರ್ನ್ ಟೆಸ್ಟ್‌ನ ಮೊದಲ ಇನ್ನಿಂಗ್ಸ್‌ನಲ್ಲಿ ಅಮೋಘ ಶತಕ ಬಾರಿಸಿದ್ದರು. ಬ್ರಿಸ್ಬೇನ್ ನಲ್ಲಿ ಶತಕ ಸಿಡಿಸಿದ ಸ್ಮಿತ್ ಮೆಲ್ಬೋರ್ನ್ ನಲ್ಲೂ ತಮ್ಮ ಅತ್ಯುತ್ತಮ ಫಾರ್ಮ್ ಮುಂದುವರಿಸಿದ್ದಾರೆ. ಇದು ಸ್ಮಿತ್ ವೃತ್ತಿ ಜೀವನದ 34ನೇ ಶತಕ. ಈ ಸರಣಿಯಲ್ಲಿ ಅವರ 2ನೇ ಶತಕವಾಗಿದೆ.

ಸ್ಟೀವ್ ಸ್ಮಿತ್ ತಮ್ಮ 34ನೇ ಟೆಸ್ಟ್ ಶತಕದ ಮೂಲಕ ಕೇನ್ ವಿಲಿಯಮ್ಸನ್ ಮತ್ತು ಅಲಸ್ಟೈರ್ ಕುಕ್ ಅವರನ್ನು ಹಿಂದಿಕ್ಕಿ ಅತಿ ಹೆಚ್ಚು ಟೆಸ್ಟ್ ಶತಕಗಳನ್ನು ಸಿಡಿಸಿದ ಪಟ್ಟಿಯಲ್ಲಿ 7ನೇ ಸ್ಥಾನಕ್ಕೇರಿದ್ದಾರೆ.

ದೀಪ್ತಿ ಶರ್ಮಾ ಆಲ್‌ರೌಂಡ್ ಶೋ, 3-0 ಅಂತರದಲ್ಲಿ ವಿಂಡೀಸ್ ವೈಟ್‌ವಾಶ್

ಕ್ಲೀನ್ ಸ್ವೀಪ್ ಸಾಧಿಸಿದ ಟೀಮ್ ಇಂಡಿಯಾ ಕ್ವೀನ್ಸ್

ವಡೋದರ: ಭಾರತ ಮಹಿಳಾ ಕ್ರಿಕೆಟ್ ತವರು ನೆಲದಲ್ಲಿ ತನ್ನ ಅದ್ಭುತ ಪ್ರದರ್ಶನವನ್ನು ಮುಂದುವರಿಸಿದೆ. ಈಗಾಗಲೇ ವೆಸ್ಟ್ ಇಂಡೀಸ್ ವಿರುದ್ಧದ ಟಿ-20 ಸರಣಿಯನ್ನು ಗೆದ್ದಿರುವ ಭಾರತ, ಇದೀಗ ಮೂರು ಪಂದ್ಯಗಳ ಏಕದಿನ ಸರಣಿಯನ್ನು ಕ್ಲೀನ್ ಸ್ವೀಪ್ ಮಾಡಿದೆ. ಶುಕ್ರವಾರ ನಡೆದ ಅಂತಿಮ ಏಕದಿನ ಪಂದ್ಯದಲ್ಲಿ ಟೀಮ್ ಇಂಡಿಯಾ ಐದು ವಿಕೆಟ್‌ಗಳ ಜಯ ಸಾಧಿಸಿದೆ. ದೀಪ್ತಿ ಶರ್ಮಾ (48 ಎಸೆತಗಳಲ್ಲಿ 3 ಬೌಂಡರಿ, ಸಿಕ್ಸರ್ ಸಹಿತ ಔಟಾಗದೆ 39 ಹಾಗೂ 31ಕ್ಕೆ 6) ಆಲ್ ರೌಂಡ್ ಪ್ರದರ್ಶನ ನೀಡಿ ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ವೆಸ್ಟ್ ಇಂಡೀಸ್ 28.2 ಓವರ್‌ಗಳಲ್ಲಿ 162 ರನ್ ಗಳಿಗೆ ಕುಸಿಯಿತು. ಈ ಮೊತ್ತವನ್ನು ಭಾರತ 28.2 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು ಗುರಿ ತಲುಪಿ ಸರಣಿಯನ್ನು 3-0ಯಲ್ಲಿ ಗೆದ್ದುಕೊಂಡಿತು.

ರೇಣುಕಾ- ದೀಪ್ತಿ ಶರ್ಮಾ ಬೌಲಿಂಗ್ ದಾಳಿಗೆ ತತ್ತರಿಸಿದ ವಿಂಡೀಸ್: ವೆಸ್ಟ್ ಇಂಡೀಸ್ ತಂಡದಲ್ಲಿ ಚಿನ್ನೆಲ್ಲೆ ಹೆನ್ರಿ, 72 ಎಸೆತಗಳಲ್ಲಿ 5 ಬೌಂಡರಿ, 3 ಸಿಕ್ಸರ್ ಸಹಿತ 61 ರನ್ ಗಳಿಸಿ ಮಿಂಚಿದರು, ಕ್ಯಾಂಪ್ ಬೆಲ್ 62 ಎಸೆತಗಳಲ್ಲಿ 7 ಬೌಂಡರಿ ಸಹಿತ 46 ರನ್ ಹಾಗೂ ಆಲಿಯಾ ಅಲೆನೆ 21 ರನ್‌ಗಳಿಸಿದರು. ಇವರಿಬ್ಬರು ಬಿಟ್ಟು ಉಳಿದ ಯಾವುದೇ ಯಾವುದೇ ಬ್ಯಾಟರ್‌ಗಳು ಎರಡಂಕಿ ಮೊತ್ತ ದಾಟಲಿಲ್ಲ.

ಸುಲಭವಾಗಿ ಗುರಿ ಬೆನ್ನಟ್ಟಿದ ಭಾರತ ಬಳಿಕ ಗುರಿ ಬೆನ್ನತ್ತಿದ ಭಾರತ 28.2 ಓವರ್‌ಗಳಲ್ಲಿ 5 ವಿಕೆಟ್‌ಗೆ 167 ರನ್ ಗಳಿಸಿತು. ಕಳೆದ ಪಂದ್ಯದಲ್ಲಿ ಮಿಂಚಿದ್ದ ಅಗ್ರ-3 ಬ್ಯಾಟರ್‌ಗಳಾದ ಸ್ಮೃತಿ ಮಂಧಾನ (4), ಪ್ರತೀಕಾ ರಾವಲ್ (18), ಹರ್ಲೀನ್ ಡಿಯೋಲ್ (1) ಇಂದು ವಿಫಲರಾದರು. ಆದರೆ ಬ್ಯಾಟಿಂಗ್‌ನಲ್ಲೂ ಮಿಂಚಿದ ದೀಪ್ತಿ ಶರ್ಮಾ 48 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಸಹಿತ ಅಜೇಯ 39, ರಿಚಾ ಘೋಷ್ 11 ಎಸೆತಗಳಲ್ಲಿ 1 ಬೌಂಡರಿ, 3 ಸಿಕ್ಸರ್ ಗಳೊಂದಿಗೆ ಅಜೇಯ 23 ರನ್ ಗಳಿಸಿ ತಂಡವನ್ನು ಗೆಲುವಿನ ಗಡಿ ದಾಟಿಸಿದರು. ರೋಡ್ರಿಗಸ್ 29, ಹರ್ಮನ್ ಪ್ರೀತ್ ಕೌರ್ 32 ರನ್ ಗಳಿಸಿದರು.

ಭಾರತ ಸರಣಿಯ ಮೊದಲ ಟಿ2 ಪಂದ್ಯವನ್ನು 60 ರನ್‌ಗಳಿಂದ ಗೆದ್ದರೆ, 2ನೇ ಟಿ20ಯಲ್ಲಿ 9 ವಿಕೆಟ್‌ಗಳಿಂದ ಸೋಲು ಕಂಡಿತ್ತು. ಆದರೆ 3ನೇ ಟಿ20 ಯಲ್ಲಿ 60 ರನ್ ಗಳಿಂದ ಗೆದ್ದ 2-1ರಲ್ಲಿ ಸರಣಿ ವಶಪಡಿಸಿಕೊಂಡಿತ್ತು.

ಇನ್ನು ಏಕದಿನ ಸರಣಿಯಲ್ಲಿ ಮೊದಲ ಪಂದ್ಯವನ್ನು 211 ರನ್‌ಗಳಿಂದ ಗೆದ್ದರೆ, ಎರಡನೇ ಏಕದಿನ ಪಂದ್ಯವನ್ನು 115 ರನ್ ಗಳಿಂದ ಜಯ ಸಾಧಿಸಿತ್ತು. ದೀಪ್ತಿ ಶರ್ಮಾ ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದರೆ, 30 ಪಂದ್ಯಗಳಿಂದ 10 ವಿಕೆಟ್ ಪಡೆದ ರೇಣುಕಾ ಸಿಂಗ್ ಸರಣಿ ಶ್ರೇಷ್ಠ ಪ್ರಶಸ್ತಿ ತಮ್ಮದಾಗಿಸಿ ಕೊಂಡರು. ದೀಪ್ತಿ ಶರ್ಮಾ ಕೂಡ 9 ವಿಕೆಟ್ ಪಡೆದಿದ್ದರು.

ವಿಶ್ವ ರ್‍ಯಾಪಿಡ್ ಚೆಸ್: 5ನೇ ಸ್ಥಾನದಲ್ಲಿ ಅರ್ಜುನ್

ನ್ಯೂಯಾರ್ಕ್: ಭಾರತದ ಗ್ರಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ, ವಿಶ್ವ ರ್‍ಯಾಪಿಡ್ ಚೆಸ್ ಚಾಂಪಿಯನ್‌ಶಿಪ್‌ನ ಮೊದಲ ದಿನವಾದ ಗುರುವಾರ ನಾಲ್ಕು ಗೆಲುವು, ಒಂದು ಸೋಲು ಕಂಡು ಜಂಟಿ ಐದನೇ ಸ್ಥಾನ ಗಳಿಸಿದ್ದಾರೆ.

ಹಾಲಿ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ (ನಾರ್ವೆ) ಅವರಿಗೂ ಮೊದಲ ದಿನ ಕಾದಿತ್ತು. ಅವರು ಕೇವಲ ಒಂದು ಜಯವನ್ನಷ್ಟೇ ಗಳಿಸಿದರು. ಇತರ ನಾಲ್ಕರಲ್ಲಿ ಮೂರು ಡ್ರಾ ಸಾಧಿಸಿ ಒಂದು ಸೋಲು (ರಷ್ಯದ ಡೆನಿಸ್ ಲಾಝುವಿಕ್ ಎದುರು) ಎದುರಾಯಿತು.

ಪುರುಷರ ವಿಭಾಗದಲ್ಲಿ ಇನ್ನೂ ಎಂಟು ಸುತ್ತಿನ ಆಟಗಳು ಉಳಿದಿವೆ. ಅರ್ಮೇನಿಯಾದ ಶಾಂತ್ ಸರ್ಗಸ್ಯಾನ್, ಅಮೆರಿಕದ ಲೇನಿಯರ್ ಡೊಮಿಂಗೆಝ್ ಪೆರೆಝ್, ಡೇನಿಯಲ್ ನರೊಡಿಟ್ಸ್ಕಿ ಮತ್ತು ರಷ್ಯಾದ ಮುರ್ಝಿನ್ ವೊಲೊದರ್ ತಲಾ 4.5 ಪಾಯಿಂಟ್ ಗಳಿಸಿ ಪ್ರೊಗ್ರೆಸಿವ್ ಮೇಲೆ ಮೊದಲ ನಾಲ್ಕು ಸ್ಥಾನದಲ್ಲಿದ್ದಾರೆ. ಅರ್ಜುನ್ ಮತ್ತು ಸಾಧ್ಯಾನಿ ತಲಾ ನಾಲ್ಕು ಪಾಯಿಂಟ್ಸ್ ಗಳಿಸಿ ನಂತರದ ಸ್ಥಾನದಲ್ಲಿದ್ದಾರೆ. ಉಜ್ಬೇಕ್ ಆಟಗಾರ ಜಾಮೊಕಿ, ಸಿಂದರೋವ್ ಏಳನೇ ಸ್ಥಾನದಲ್ಲಿದಾರೆ. ವಿ.ಪ್ರಣವ್ (3.5), ಪ್ರಜ್ಞಾನಂದ (3), ಅರವಿಂದ ಚಿದಂಬರಂ (2), ಕಾರ್ತಿಕ್ ವೆಂಕಟರಮಣನ್, ಸಂದೀಪನ್ ಚಂದಾ (1.5) ಕಣದಲ್ಲಿರುವ ಇತರ ಭಾರತೀಯ ಆಟಗಾರರು.

ಮಹಿಳಾ ವಿಭಾಗದಲ್ಲಿ ಸ್ಥಳೀಯ ತಾರೆ ಅಲೈಸ್ ಲೀ ನಾಲ್ಕು ಸುತ್ತುಗಳಲ್ಲಿ ನಾಲ್ಕೂ ಗೆದ್ದು ಮುನ್ನಡೆ ಸಾಧಿಸಿದ್ದಾರೆ.

ಹರ್‍ಯಾಣ ಸ್ಟೀಲರ್ಸ್ ಫೈನಲ್‌ಗೆ!

ಪುಣೆ: ಹರ್‍ಯಾಣ ಸ್ಟೀಲರ್ಸ್ ತಮ್ಮ ಭರ್ಜರಿ ಆಟದಿಂದ ಯುಪಿ ಯೋಧಾಸ್ ತಂಡವನ್ನು ಮಣಿಸಿ ಪ್ರೊ ಕಬ್ಬಡ್ಡಿ 11 ನೇ ಸರಣಿಯಲ್ಲಿ ಫೈನಲ್‌ಗೆ ಏರಿದ್ದಾರೆ. ಈ ಪಂದ್ಯದಲ್ಲಿ 28-25 ಅಂಕಗಳನ್ನು ತಂಡಗಳು ಪಡೆದವು.

ನಗರದ ಶಿವ್ ಛತ್ರಪತಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ನಡೆದ ಸೆಮಿಫೈನಲ್ ಪಂದ್ಯವೂ ಅತ್ಯಂತ ರೋಚಕತೆಯಿಂದ ಕೂಡಿತ್ತು. ಹರ್‍ಯಾಣ ಸ್ಟೀಲರ್ಸ್ ಮತ್ತು ಯುಪಿ ಯುದ್ಧಾಸ್ ನಡುವಿನ ಆಟ ನೋಡುಗರ ಕಣ್ಮನ ಸೆಳೆಯುವಂತಿತ್ತು. ಈ ಪಂದ್ಯದಲ್ಲಿ ಹರ್‍ಯಾಣ ಸ್ಟೀಲರ್ಸ್ ತಂಡ 28 ಅಂಕಗಳನ್ನು ಪಡೆದರೆ, ತಂಡದ ಆಟಗಾರರಾದ ಶಿವಂ ಪಟಾರೆ, ವಿನಯ್, ರಾಹುಲ್ ಮತ್ತು ಮಹ್ಮದ್ರೇಜಾ ಸಾಡ್ಲುಯಿ ಪಂದ್ಯದ ಗೆಲುವಿಗೆ ಹೋರಾಡಿದರು.

ಟಾಪ್ ಆಟಗಾರರು

ಹರ್‍ಯಾಣ ಸ್ಟೀಲರ್ಸ್
ಬೆಸ್ಟ್ ರೈಡರ್: ಶಿವಮ್ ಪಟಾರೆ (7 ಪಾಯಿಂಟ್)
ಬೆಸ್ಟ್ ಡಿಫೆಂಡರ್: ರಾಹುಲ್ (5 ಟ್ಯಾಕಲ್ ಪಾಯಿಂಟ್)
ಯುಪಿ ಯೋಧಾಸ್
ಬೆಸ್ಟ್ ರೈಡರ್: ಗಗನ್ ಗೌಡ (10 ಪಾಯಿಂಟ್)
ಬೆಸ್ಟ್ ಡಿಫೆಂಡರ್: ಹಿತೇಶ್ (5 ಪಾಯಿಂಟ್)

ಬಿಲ್ಲ ರಂಗ ಭಾಷಾ ಕಿಚ್ಚ ಭರ್ಜರಿ ತಯಾರಿ

ಮಾಸ್ ಆಗಿ ಬಂದ ಮ್ಯಾಕ್ಸ್ ನೋಡಿ ಎಲ್ಲರೂ ಫಿದಾ ಆಗಿದ್ದಾರೆ. ಎರಡೂವರೆ ವರ್ಷಗಳ ಬಳಿಕ ಕಿಚ್ಚನನ್ನು ತೆರೆಯಲ್ಲಿ ಕಣ್ತುಂಬಿಕೊಂಡು ಸಿನಿಪ್ರಿಯರು ಖುಷಿಯಾಗಿದ್ದಾರೆ. ಮ್ಯಾಕ್ಸ್ ಬಾಕ್ಸ್ ಆಫೀಸ್‌ನಲ್ಲಿಯೂ ಭರ್ಜರಿ ಕಲೆಕ್ಷನ್ ಮಾಡಿದೆ. ಮೂರೇ ದಿನದಲ್ಲಿ ಮೂವತ್ತು ಕೋಟಿಗೂ ಹೆಚ್ಚು ಗಳಿಕೆ ಕಂಡಿದೆ. ಮ್ಯಾಕ್ಸ್ ಸಕ್ಸಸ್ ಆಗಿದ್ದೇ ತಡ ಸುದೀಪ್ ಅವರ ಮುಂದಿನ ಸಿನಿಮಾ ಯಾವುದು ಎಂಬ ಕುತೂಹಲ ಎಲ್ಲರಲ್ಲಿಯೂ ಇದೆ. ಸದ್ಯ ಕಿಚ್ಚ ಸುದೀಪ್ ಬಿಲ್ಲ ರಂಗ ಭಾಷಾ ಚಿತ್ರದಲ್ಲಿ ನಟಿಸಲು ಸಿದ್ಧತೆ ನಡೆಸಿದ್ದಾರೆ. ಬಿಲ್ಲ ರಂಗ ಭಾಷಾ, ನಿರ್ದೇಶಕ ಅನೂಪ್ ಭಂಡಾರಿಯ ಕನಸಿನ ಕೂಸಾಗಿದೆ. ವಿಕ್ರಾಂತ್ ರೋಣ ಸಿನಿಮಾದ ಸಂದರ್ಭದಲ್ಲಿಯೇ ಚಿತ್ರದ ಕಥೆ ಹೆಣೆದಿದ್ದ ಅನೂಪ್ ಚಿತ್ರೀಕರಣಕ್ಕೆ ಸಿದ್ಧತೆ ನಡೆಸಿದ್ದರು. ಅಂತು ಈಗ ಸಿನಿಮಾ ಸೆಟ್ಟೇರಿದ್ದು ಇನ್ನೇನು ಚಿತ್ರೀಕರಣವೂ ಆರಂಭವಾಗಲಿದೆ.

ಈ ಚಿತ್ರದಲ್ಲಿ ಕಿಚ್ಚ ಸುದೀಪ್ ಮೂರು ವಿಭಿನ್ನ ಶೇಡ್‌ನಲ್ಲಿ ಮಿಂಚಲಿದ್ದಾರೆ. ಇದಕ್ಕಾಗಿ ಸಾಕಷ್ಟು ತಯಾರಿಯನ್ನು ನಡೆಸಿದ್ದಾರೆ. ಜಿಮ್‌ನಲ್ಲಿ ಗಂಟೆಗಟ್ಟಲೇ ವರ್ಕ್‌ಔಟ್ ಮಾಡಿ ಪಾತ್ರಕ್ಕೆ ತಕ್ಕಂತೆ ತಯಾರಿ ಮಾಡಿಕೊಂಡಿದ್ದಾರೆ. ಹೊಸ ವರ್ಷದಲ್ಲಿ ಚಿತ್ರೀಕರಣವೂ ಆರಂಭವಾಗಲಿದೆ. ಬಿಲ್ಲ ರಂಗ ಭಾಷಾ ಆ್ಯಕ್ಷನ್ ಪ್ಯಾಕ್ಡ್ ಸಿನಿಮಾವಾಗಿದ್ದು ಮ್ಯಾಕ್ಸ್‌ಗಿಂತ ಮ್ಯಾಕ್ಸಿಮಮ್ ಆ್ಯಕ್ಷನ್ ನಿರೀಕ್ಷೆ ಮಾಡಬಹುದಾಗಿದೆ. ಫ್ಯಾಂಟಸಿ ಸ್ಟೋರಿಯೂ ಸಿನಿಮಾದಲ್ಲಿರಲಿದೆ. ಇದು ಹೈಬಜೆಟ್ ಸಿನಿಮಾವಾಗಿದ್ದು ಪ್ಯಾನ್ ಇಂಡಿಯಾ ಸಿನಿಮಾವಾಗಿ ನಿರ್ಮಾಣವಾಗಲಿದೆ.

ನಿರ್ದೇಶನದತ್ತ ಕಿಚ್ಚ

ಸುದೀಪ್ ಅದ್ಭುತ ನಟ ಮಾತ್ರವಲ್ಲ ನಿರ್ದೇಶನದಲ್ಲಿಯೂ ಸೈ ಎನಿಸಿಕೊಂಡಿದ್ದಾರೆ. ಈ ಹಿಂದೆ ಮೈ ಆಟೋಗ್ರಾಫ್, ಕೆಂಪೇಗೌಡ ಮಾಣಿಕ್ಯದಂತಹ ಸೂಪರ್ ಹಿಟ್ ಸಿನಿಮಾಗಳನ್ನು ನಿರ್ದೇಶಿಸಿದ್ದಾರೆ. ಸುದೀಪ್, ಒಂಬತ್ತು ವರ್ಷಗಳ ಬಳಿಕ ಮತ್ತೆ ನಿರ್ದೇಶನದತ್ತ ಒಲವು ತಾಳಿದ್ದು, ಕೆಕೆ ಎಂಬ ಚಿತ್ರವನ್ನು ನಿರ್ದೇಶನ ಮಾಡಲು ಅಣಿಯಾಗಿದ್ದಾರೆ. ಈ ಚಿತ್ರವನ್ನು ಕೆಆರ್‌ಜಿ ಸ್ಟುಡಿಯೋಸ್ ನಿರ್ಮಾಣ ಮಾಡಲಿದೆ. ಕೆಕೆ ಚಿತ್ರ ಆ್ಯಕ್ಷನ್, ಥ್ರಿಲ್ಲರ್ ಕಥೆಯನ್ನು ಒಳಗೊಂಡಿದೆ.

ವಿಟಾಕೀಸ್

ಈ ಸಿನಿಮಾದ ಬಳಿಕ ಸುದೀಪ್ ತಮಿಳಿನ ಖ್ಯಾತ ನಟ, ನಿರ್ದೇಶಕ ಚೇರನ್ ನಿರ್ದೇಶಿಸಲಿರುವ ಹೊಸ ಸಿನಿಮಾದಲ್ಲಿ ನಟಿಸಲಿದ್ದಾರೆ. ಈ ಚಿತ್ರಕ್ಕೂ ಈಗಾಗಲೇ ತಯಾರಿಯೂ ಜೋರಾಗಿದೆ. ಚೇರನ್ ಬ್ಯೂಟಿಫುಲ್ ಲವ್ ಸ್ಟೋರಿಯ ಜತೆಗೆ ಸಸ್ಪೆನ್ಸ್ ಕಥೆ ಹೆಣೆದಿದ್ದಾರೆ. ಮುಂದಿನ ವರ್ಷ ಈ ಚಿತ್ರ ಸೆಟ್ಟೇರುವ ನಿರೀಕ್ಷೆಯಿದ್ದು, ಈ ಚಿತ್ರದಲ್ಲಿ ಕಿಚ್ಚನಿಗೆ ಜತೆಯಾಗಿ ಕೆಜಿಎಫ್ ಬೆಡಗಿ ಶ್ರೀನಿಧಿ ಶೆಟ್ಟಿ ನಟಿಸಲಿದ್ದಾರೆ. ಉಳಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿರಲಿದೆ. ಇನ್ನು ಮುಂದೆ ಹೆಚ್ಚು ದಿನ ಕಾಯಿಸುವುದಿಲ್ಲ. ಒಂದೂವರೆ ವರ್ಷಕ್ಕೆ ಒಂದಾದರು ಸಿನಿಮಾ ನೀಡುತ್ತೇನೆ ಎಂದು ಸುದೀಪ್ ಹೇಳಿದ್ದಾರೆ.

ಸರ್‌ಪ್ರೈಸ್ ನೀಡಿದ ಗಣೇಶ್

ಕೃಷ್ಣಂ ಪ್ರಣಯ ಸಖಿ ಚಿತ್ರದ ಯಶಸ್ಸಿನ ಖುಷಿಯಲ್ಲಿರುವ ನಟ ಗಣೇಶ್ ಹೊಸ ಚಿತ್ರದಲ್ಲಿ ನಟಿಸಲು ಸಿದ್ಧವಾಗಿದ್ದಾರೆ. ಸದ್ಯ ಅವರ ಮುಂದಿನ ಸಿನಿಮಾ ಘೋಷಣೆಯಾಗಿದೆ. ತೆಲುಗಿನ ಖ್ಯಾತ ಚಿತ್ರ ನಿರ್ಮಾಣ ಸಂಸ್ಥೆ ಪೀಪಲ್ ಮೀಡಿಯಾ ಫ್ಯಾಕ್ಟರಿ ಜತೆಗೆ ಗೋಲ್ಡನ್ ಸ್ಟಾರ್ ಗಣೇಶ್ ಕೈ ಜೋಡಿಸಿದ್ದಾರೆ. ಪಿಎಂಎಫ್ 49 ಶೀರ್ಷಿಕೆಯಲ್ಲಿ ಸಿನಿಮಾ ಸೆಟ್ಟೇರಲಿದೆ. ತೆಲುಗಿನಲ್ಲಿ ಕಾರ್ತಿಕೇಯ 2, ವೆಂಕಿ ಮಾಮಾ, ಓ ಬೇಬಿ, ಧಮಾಕಾ ಮತ್ತು ನ್ಯೂ-ಸೆನ್ಸ್‌ನಂತಹ ಬ್ಲಾಕ್‌ಬಸ್ಟರ್ ಹಿಟ್ ಚಿತ್ರಗಳನ್ನು ನಿರ್ಮಿಸಿರುವ ಪೀಪಲ್ ಮೀಡಿಯಾ ಫ್ಯಾಕ್ಟರಿ ಸಂಸ್ಥೆ ತೆಲುಗಿನಲ್ಲಿ ಹಲವು ಹಿಟ್ ಚಿತ್ರಗಳನ್ನು ನಿರ್ಮಿಸಿದೆ. ಇದೀಗ ಪಿಎಂಎಫ್49 ಮೂಲಕ ಸ್ಯಾಂಡಲ್‌ವುಡ್‌ನಲ್ಲಿಯೂ ಅದ್ದೂರಿ ಚಿತ್ರ ನಿರ್ಮಾಣಕ್ಕೆ ಸಿದ್ಧವಾಗಿದೆ. ಖ್ಯಾತ ನೃತ್ಯ ನಿರ್ದೇಶಕರಾಗಿ ಗುರುತಿಸಿಕೊಂಡಿರುವ ಧನಂಜಯ್ ಗಣೇಶ್ ಅಭಿನಯದ ಹೊಸ ಚಿತ್ರವನ್ನು ನಿರ್ದೇಶನ ಮಾಡಲಿದ್ದಾರೆ. ಆ ಮೂಲಕ ನಿರ್ದೇಶಕರಾಗಿ ಗುರುತಿಸಿಕೊಳ್ಳಲಿದ್ದಾರೆ. ಟಿ.ಜಿ.ವಿಶ್ವ ಪ್ರಸಾದ್ ನಿರ್ಮಾಣದಲ್ಲಿ ಈ ಸಿನಿಮಾ ಮೂಡಿಬರಲಿದ್ದು, ಅದ್ದೂರಿಯಾಗಿಯೇ ಸಿನಿಮಾ ಸೆಟ್ಟೇರಲಿದೆ. ಗಣೇಶ್ ಸಿನಿಮಾಗಳು ಎಂದ ಮೇಲೆ ಅಲ್ಲಿ ಲವ್ ಸ್ಟೋರಿ ಜತೆಗೆ ಸೆಂಟಿಮೆಂಟ್ ಕಥೆಯೂ ಇರಬೇಕು. ಅಂತೆಯೇ ಈ ಚಿತ್ರದಲ್ಲಿಯೂ ಮನಸೂರೆಗೊಳ್ಳುವ ಪ್ರೇಮಕಥೆ ಇರಲಿದೆ. ಹೊಸ ವರ್ಷದಿಂದ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ.

ಬೇಸಿಗೆಯಲ್ಲಿ ಪಾಠಶಾಲಾ

ಈ ಹಿಂದೆ ಗ್ಯಾಪಲ್ಲೊಂದು ಸಿನಿಮಾ, ಓಮಿನಿ ಚಿತ್ರಗಳನ್ನು ನಿರ್ದೇಶಿಸಿದ್ದ ಹೆದ್ದೂರ್ ಮಂಜುನಾಥ್ ಶೆಟ್ಟಿ ಈಗ ಪಾಠಶಾಲಾ ಚಿತ್ರವನ್ನು ನಿರ್ದೇಶಿಸಿದ್ದಾರೆ. ಸದ್ಯ ಈ ಚಿತ್ರದ ಟೀಸರ್ ರಿಲೀಸ್ ಆಗಿದೆ. ಸಿಹಿಕಹಿ ಚಂದ್ರು ಹಾಗೂ ಸಿಹಿಕಹಿ ಗೀತಾ ಚಿತ್ರದ ಟೀಸರ್ ಅನಾವರಣ ಮಾಡಿ ಪಾಠಶಾಲಾ ಚಿತ್ರತಂಡಕ್ಕೆ ಶುಭ ಕೋರಿದರು. ಎಂಬತ್ತು ತೊಂಬತ್ತರ ಕಾಲಘಟ್ಟದಲ್ಲಿ ಶಿಕ್ಷಕರ ಹಾಗೂ ಮಕ್ಕಳ ನಡುವೆ ಇದ್ದ ಸಂಬಂಧದ ಸುತ್ತ ಚಿತ್ರದ ಕಥೆ ಸಾಗಲಿದೆ. ಮಲೆನಾಡಿನ ಸುಂದರ ತಾಣದಲ್ಲಿ ಸ್ಟೋರಿ ಸಾಗಲಿದೆ. ಬಾಲಾಜಿ ಮನೋಹರ್, ಸುಧಾಕರ್ ಬನ್ನಂಜೆ, ಕಿರಣ್ ನಾಯಕ್, ನಟನ ಪ್ರಶಾಂತ್ ಮುಂತಾದವರು ಚಿತ್ರದಲ್ಲಿ ಅಭಿನಯಿಸಿದ್ದಾರೆ. ಅಲ್ಲದೆ ನಲವತ್ತಕ್ಕೂ ಹೆಚ್ಚು ಮಕ್ಕಳು ಈ ಚಿತ್ರದಲ್ಲಿ ನಟಿಸಿದ್ದಾರೆ. ಪಾಠಶಾಲಾ ಚಿತ್ರಕ್ಕೆ ಓದು ಅಥವಾ ಓಡೋಗು ಎಂಬ ಅಡಿಬರಹವಿದೆ. ಶೂಟಿಂಗ್ ಮುಗಿಸಿರುವ ಪಾಠಶಾಲಾ ಡಬ್ಬಿಂಗ್‌ನಲ್ಲಿ ಬ್ಯುಸಿಯಾಗಿದೆ.

ಕಿರುತೆರೆಯಲ್ಲಿ ಸುಧಾಕರ್ ಬನ್ನಂಜೆ, ಸಿಹಿಕಹಿ ಚಂದ್ರು ನನ್ನ ಗುರುಗಳು. ರವಿಚಂದ್ರನ್ ಅವರು ಸೇರಿದಂತೆ ಅನೇಕ ನಿರ್ದೇಶಕರ ಬಳಿ ಸಹಾಯಕ ನಿರ್ದೇಶಕನಾಗಿ ಕಾರ್ಯ ನಿರ್ವಹಿಸಿದ್ದೇನೆ. ಪಾರ್ವತಿ ಪರಮೇಶ್ವರ ಧಾರಾವಾಹಿಯಲ್ಲಿ ತುತ್ತೂರಿ ಪಾತ್ರದಲ್ಲಿ ನಟಿಸಿದ್ದೆ, ಈ ಪಾತ್ರ ನನಗೆ ಪ್ರಸಿದ್ಧಿ ತಂದುಕೊಟ್ಟಿತು. ಈಗ ಎಂಎಸ್ ಸ್ಕೇರ್ ಲಾಂಛನದಲ್ಲಿ ನಾನು ಹಾಗೂ ನನ್ನ ಪತ್ನಿ ಪ್ರೀತಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದೇವೆ. ತೀರ್ಥಹಳ್ಳಿ ತಾಲ್ಲೂಕಿನಲ್ಲೇ ಬಹುತೇಕ ಚಿತ್ರೀಕರಣ ನಡೆಸಿದ್ದೇವೆ ಎಂದು ನಿರ್ದೇಶಕ ಹೆದ್ದೂರು ಮಂಜುನಾಥ್ ಹೇಳಿದರು. ಈ ಬಾರಿಯ ಬೇಸಿಗೆ ರಜೆಯಲ್ಲಿ ಪಾಠಶಾಲಾ ತೆರೆಗೆ ಬರಲಿದೆ.